# SOCIAL SCIENCE I
# ಸಮಾಜವಿಜ್ಞಾನ I

## STANDARD X
## ತರಗತಿ X

ಭಾಗ 1
PART -1

ಕೇರಳ ಸರಕಾರ
ಶಿಕ್ಷಣ ಇಲಾಖೆ

ರಾಜ್ಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಸಮಿತಿ (SCERT), ಕೇರಳ
2019

## ರಾಷ್ಟ್ರಗೀತೆ

ಜನಗಣಮನ ಅಧಿನಾಯಕ ಜಯ ಹೇ
ಭಾರತ ಭಾಗ್ಯವಿಧಾತಾ,
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ,
ವಿಂಧ್ಯಹಿಮಾಚಲ ಯಮುನಾ ಗಂಗಾ,
ಉಚ್ಛಲ ಜಲಧಿತರಂಗ,
ತವಶುಭ ನಾಮೇ ಜಾಗೇ,
ತವಶುಭ ಆಶಿಶ ಮಾಗೇ,
ಗಾಹೇ ತವ ಜಯ ಗಾಥಾ
ಜನಗಣಮಂಗಲದಾಯಕ ಜಯ ಹೇ
ಭಾರತ ಭಾಗ್ಯ ವಿಧಾತಾ,
ಜಯಹೇ, ಜಯಹೇ, ಜಯಹೇ,
ಜಯ ಜಯ ಜಯ ಜಯಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ, ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ಹೆತ್ತವರನ್ನು ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

ಪ್ರೀತಿಯ ಮಕ್ಕಳೇ,

ಸಮಾಜವಿಜ್ಞಾನ ಕಲಿಕೆಯು ಸಮಾಜದ ಕುರಿತಾದ ಸಮಗ್ರವಾದ ಅಧ್ಯಯನವಾಗಿದೆ. ಮಾನವ ರಾಶಿಯ ಮಹತ್ತರವಾದ ಪ್ರಗತಿಯ ಕುರಿತು ಇದರಲ್ಲಿ ಚರ್ಚಿಸಲಾಗುತ್ತದೆ. ಸಮಾಜವಿಜ್ಞಾನ ಕಲಿಕೆಯು ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಹಾಗೂ ಪರಿಸರಕ್ಕೆ ಸೂಕ್ತವಾದ ದೃಷ್ಟಿಕೋನದ ಮೂಲಕ ವಾಸ್ತವಿಕತೆಗಳನ್ನು ವಿಶ್ಲೇಷಿಸುವ ಹಾಗೂ ಮಾನವನ ಬಹುಮುಖ ಪ್ರಗತಿಯ ಚಿತ್ರಣವನ್ನು ಒದಗಿಸುವಂತಿರಬೇಕು.

ವರ್ತಮಾನಕಾಲವು ಭೂತಕಾಲದೊಂದಿಗೆ ನಡೆಸುವ ನಿರಂತರ ಸಂವಾದ ಫಲವಾಗಿದೆ ಚರಿತ್ರೆ. ಅದು ಭೂತಕಾಲವನ್ನು ಪ್ರತಿನಿಧಿಸುವುದರೊಂದಿಗೆ, ವರ್ತಮಾನಕಾಲದ ಮೇಲೆ ಬೆಳಕು ಚೆಲ್ಲುವುದು. ಜತೆಯಲ್ಲಿ ಭವಿಷ್ಯದ ಕುರಿತಾದ ತಿಳುವಳಿಕೆಯನ್ನು ನೀಡುವುದು. ರಾಜ್ಯಶಾಸ್ತ್ರ ಮತ್ತು ಸಮಾಜಶಾಸ್ತ್ರ ಸಮಕಾಲೀನ ಜೀವನದ ಮೇಲೆ ಬೆಳಕು ಚೆಲ್ಲುವುದರೊಂದಿಗೆ ಪೌರ ಪ್ರಜ್ಞೆ ಮತ್ತು ಸಾಮಾಜಿಕ ಬದ್ಧತೆಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು. ಚರಿತ್ರೆ ಮತ್ತು ರಾಜ್ಯಶಾಸ್ತ್ರಗಳು ವ್ಯತ್ಯಸ್ತ ವಿಜ್ಞಾನ ಶಾಖೆಗಳಾದರೂ ಇವುಗಳ ನಡುವೆ ಅನೇಕ ಸಮಾನತೆಗಳಿವೆ.

ಮಾನವ ಸಹೋದರತೆ, ಸಾರ್ವಲೌಕಿಕ ದೃಷ್ಟಿಕೋನ, ಜಾತ್ಯತೀತತೆ, ಪ್ರಜಾಪ್ರಭುತ್ವ ಪ್ರಜ್ಞೆಗಳನ್ನು ಬೆಳೆಸಲು ಹಾಗೂ ಮೌಲ್ಯಪ್ರಜ್ಞೆಯನ್ನು ಹೊಂದಿದ ಒಂದು ಸಮಾಜವನ್ನು ಸೃಷ್ಟಿಸಲು ಸವಾಜವಿಜ್ಞಾನ ಕಲಿಕೆಯು ಅನಿವಾರ್ಯವಾಗಿದೆಯೆಂಬ ದೃಷ್ಟಿಕೋನವನ್ನಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ತಯಾರಿಸಲಾಗಿದೆ. ಚರಿತ್ರೆ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ ಎಂಬೀ ವಿಷಯಗಳನ್ನು ಸೇರಿಸಿಕೊಡು ಸರಳ ಹಾಗೂ ಆಕರ್ಷಣೀಯವಾಗಿ ಈ ಪಠ್ಯಪುಸ್ತಕವು ನಿಮ್ಮೆಡೆಗೆ ತಲುಪುತ್ತದೆ.

**ಸಮಗ್ರ** ಎನ್ನುವ ತಂತ್ರಜ್ಞಾನ ಆಧಾರಿತ ವಿದ್ಯಾರ್ಥಿ ಪೋರ್ಟಲ್ ಮತ್ತು ಕ್ಯೂ.ಆರ್. ಕೋಡುಗಳು ತರಗತಿ ಚಟುವಟಿಕೆಗಳನ್ನು ಮತ್ತಷ್ಟು ಅನಾಯಾಸಕರವಾಗಿಯೂ ರಸವತ್ತಾಗಿಯೂ ಮಾರ್ಪಡಿಸಲಿದೆ. ರಾಷ್ಟ್ರೀಯ ಉದ್ಯೋಗ ನೈಪುಣ್ಯ ಚೌಕಟ್ಟು (ಎನ್.ಎಸ್.ಕ್ಯು.ಎಫ್) ಮತ್ತು ಐ.ಸಿ.ಟಿ. ಸಾಧ್ಯತೆಗಳನ್ನು ಈ ಪಾಠಪುಸ್ತಕದಲ್ಲಿ ಪರಿಗಣಿಸಲಾಗಿದೆ.

ವಾಸ್ತವಿಕತೆಗಳನ್ನು ಸೃಜನಾತ್ಮಕವಾಗಿ ಹಾಗೂ ವಿಮರ್ಶಾತ್ಮಕವಾಗಿ ಮೌಲ್ಯನಿರ್ಣಯ ಮಾಡಲು ಸಮಾಜವಿಜ್ಞಾನ ಪಠ್ಯಪುಸ್ತಕ ಮತ್ತು ಕಲಿಕಾ ಚಟುವಟಿಕೆಗಳು ಸಹಾಯಕವಾಗಬಹುದು. ಸಮಾಜವಿಜ್ಞಾನ ಕಲಿಕೆಯನ್ನು ರಸವತ್ತಾದ ಅನುಭವವಾಗಿ ಬದಲಾಯಿಸಲು ಇದು ನಿಮಗೆ ಪ್ರಚೋದನಕಾರಿಯೂ ಮುಂದಿನ ಜೀವನಕ್ಕೆ ಮಾರ್ಗದರ್ಶಿಯೂ ಆಗಬಹುದು.

ಪ್ರೀತಿಪೂರ್ವಕ,

**ಡಾ. ಜೆ. ಪ್ರಸಾದ್**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ.

**State Council of Educational Research and Training (SCERT)**
Poojappura, Thiruvananthapuram 695 012, Kerala
*Website* : www.scertkerala.gov.in
*e-mail* : scertkerala@gmail.com
Phone : 0471 - 2341883, Fax : 0471 - 2341869
First Edition: 2019
Typesetting and Layout : SCERT; Printed at : KBPS, Kakkanad, Kochi-30
© Department of General Education, Government of Kerala

# ಅನುಕ್ರಮಣಿಕೆ


| | | |
|---|---|---|
| 01. | ಜಗತ್ತನ್ನು ಪರಿವರ್ತಿಸಿದ ಕ್ರಾಂತಿಗಳು | 09 - 28 |
| 02. | ಇಪ್ಪತ್ತನೇ ಶತಮಾನದ ಜಗತ್ತು | 29 - 50 |
| 03. | ಸಾರ್ವಜನಿಕ ಆಡಳಿತ | 51 - 64 |
| 04. | ಬ್ರಿಟಿಷರ ಶೋಷಣೆ ಹಾಗೂ ಪ್ರತಿಭಟನೆಗಳು | 64 - 82 |
| 05. | ಸಂಸ್ಕೃತಿ ಹಾಗೂ ರಾಷ್ಟ್ರೀಯತೆ | 83 - 98 |
| 06. | ಹೋರಾಟ ಮತ್ತು ಸ್ವಾತಂತ್ರ್ಯ | 99 - 114 |

## ಈ ಪುಸ್ತಕದಲ್ಲಿ ಕಲಿಕೆಯ ಸೌಲಭ್ಯಕ್ಕಾಗಿ ಕೆಲವು ಚಿಹ್ನೆಗಳನ್ನು ಬಳಸಲಾಗಿದೆ.


ಹೆಚ್ಚಿನ ಓದಿಗಾಗಿ - ಮೌಲ್ಯಮಾಪನಕ್ಕೆ ಒಳಪಡಿಸಬೇಕಾಗಿಲ್ಲ.


ಕಲಿಕೆಯ ಪ್ರಗತಿಯನ್ನು ನಿರ್ಣಯಿಸುವುದಕ್ಕಿರುವ ಪ್ರಶ್ನೆಗಳು


ಚಟುವಟಿಕೆಗಳು


ಮೌಲ್ಯನಿರ್ಣಯ ಮಾಡುವ


ಮುಂದುವರಿದ ಚಟುವಟಿಕೆಗಳು


ಐ.ಸಿ.ಟಿ. ಸಾಧ್ಯತೆಗಳು

## ಪಾಠಪುಸ್ತಕದ ಕುರಿತು

ಹತ್ತನೇ ತರಗತಿಯ ಸಮಾಜವಿಜ್ಞಾನ ಪಾಠಪುಸ್ತಕದ ಒಂದನೇ ಭಾಗವು ಚರಿತ್ರೆ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ ಎಂಬೀ ವಿಷಯಗಳಲ್ಲಾಗಿ ಒಟ್ಟು ಹನ್ನೊಂದು ಅಧ್ಯಾಯಗಳನ್ನು ಒಳಗೊಂಡಿದೆ. ಏಳು ಅಧ್ಯಾಯಗಳಲ್ಲಿ ಚರಿತ್ರೆ ಪಾಠಭಾಗವನ್ನು ಕೊಡಲಾಗಿದೆ. ಆರಂಭದ ಎರಡು ಅಧ್ಯಾಯಗಳು ಜಾಗತಿಕ ಚರಿತ್ರೆಗೆ ಸಂಬಂಧಪಟ್ಟಿರುವುದು ಮತ್ತು ಅನಂತರದ ನಾಲ್ಕು ಅಧ್ಯಾಯಗಳು ಆಧುನಿಕ ಭಾರತದ ಚರಿತ್ರೆಗೆ ಸಂಬಂಧಿಸಿರುವುದು ಆಗಿದೆ. ಒಂದು ಅಧ್ಯಾಯವು ಆಧುನಿಕ ಕೇರಳದ ಚರಿತ್ರೆಗೆ ಸಂಬಂಧಿಸಿರುವುದಾಗಿದೆ. ಚರಿತ್ರೆಯ ಮೂಲಗಳನ್ನು ಸಾಧ್ಯವಿರುವಷ್ಟು ಉಪಯೋಗಿಸಿ ವಿಷಯಾಧಾರಿತವಾಗಿ (Thematic) ಮಂಡನೆಗಿರುವ ಸಾಧ್ಯತೆಗಳನ್ನು ಪರಿಗಣಿಸಿಕೊಂಡು ಪಾಠಭಾಗಗಳನ್ನು ರೂಪಿಸಲಾಗಿದೆ. ಏಳನೇ ತರಗತಿಯ ಚರಿತ್ರೆಯ ಪಾಠಭಾಗಗಳ ವಿಸ್ತೃತ ರೂಪವನ್ನು ಹತ್ತನೇ ತರಗತಿಯಲ್ಲಿ ಒಳಪಡಿಸಲಾಗಿದೆ. ಹಿಂದಿನ ತರಗತಿಗಳ ಪಾಠಭಾಗದಲ್ಲಿರುವ ವಿಷಯ ವಲಯಗಳ ಮುಂದುವರಿಕೆ ಹಾಗೂ ಪ್ರಗತಿಯನ್ನು ದೃಢಪಡಿಸುವ ರೀತಿಯಲ್ಲಿ ಪಾಠಭಾಗಗಳನ್ನು ಕ್ರಮೀಕರಿಸಲಾಗಿದೆ. ಏಳನೇ ತರಗತಿಯಲ್ಲಿ ಕಾಲಗಣನೆಗೆ ಅನುಸಾರವಾಗಿ ವ್ಯಕ್ತಿಗಳಿಗೆ, ಚಳುವಳಿಗಳಿಗೆ, ವಾಸ್ತವಿಕತೆಗಳಿಗೆ ಪ್ರಾಧಾನ್ಯವನ್ನು ನೀಡುವ ಸಮೀಪನವನ್ನು ಸ್ವೀಕರಿಸಲಾಗಿತ್ತು. ಆದರೆ ಹತ್ತನೇ ತರಗತಿಯಲ್ಲಿ ಚರಿತ್ರೆಯ ವಾಸ್ತವಿಕತೆಗಳಿಗಿಂತಲೂ ಮಿಗಿಲಾಗಿ ಆಶಯಗಳ ವಿಶ್ಲೇಷಣೆಗೆ ಹೆಚ್ಚಿನ ಆದ್ಯತೆ ನೀಡಿ ಚರಿತ್ರೆಯ ಪ್ರಕ್ರಿಯೆಗಳನ್ನು ಪರಿಚಯಿಸಲು ಪ್ರಯತ್ನಿಸಲಾಗಿದೆ.

ಆಧುನಿಕ ಮಾನವನ ಜೀವನಕ್ಕೆ ಅಗತ್ಯವಾದ ಅನಿವಾರ್ಯ ಆಶಯಗಳಾದ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಜಾತ್ಯತೀತತೆ, ರಾಷ್ಟ್ರೀಯತೆ ಇತ್ಯಾದಿ ರೂಪುಗೊಂಡಿರುವುದು ಬೇರೆ ಬೇರೆ ಭೂಖಂಡಗಳಲ್ಲಿ ನಡೆದ ಸ್ವಾತಂತ್ರ್ಯ ಹೋರಾಟಗಳ ಮತ್ತು ಕ್ರಾಂತಿಗಳ ಮೂಲಕವಾಗಿದೆ. 'ಜಗತ್ತನ್ನು ಪರಿವರ್ತಿಸಿದ ಕ್ರಾಂತಿಗಳು' ಎಂಬ ಮೊದಲ ಅಧ್ಯಾಯವು ಇಂತಹ ಆಧುನಿಕ ಆಶಯಗಳ ಕ್ರಮಾನುಗತವಾದ ಬೆಳವಣಿಗೆ ಮತ್ತು ವಿಕಾಸವನ್ನು ಪರಿಚಯಿಸುವ ಹಾಗೂ ವಿಶ್ಲೇಷಿಸುವ ಉದ್ದೇಶವನ್ನು ಹೊಂದಿದೆ. 'ಇಪ್ಪತ್ತನೆಯ ಶತಮಾನದ ಜಗತ್ತು' ಎಂಬ ಅಧ್ಯಾಯದಲ್ಲಿ ಇಪ್ಪತ್ತನೇ ಶತಮಾನದಲ್ಲಿ ನಡೆದ ಪ್ರಧಾನ ಘಟನೆಗಳನ್ನು ಹಾಗೂ ಅವುಗಳ ಪರಿಣಾಮಗಳನ್ನು ಚರ್ಚಿಸಲಾಗಿದೆ. ಘಟನೆಗಳ ವಿವರಣೆಗಿಂತಲೂ ಹೆಚ್ಚಿನ ಮಹತ್ವವನ್ನು ಪರಿಣಾಮಗಳಿಗೆ ನೀಡಲಾಗಿದೆ. ಯುದ್ಧವು ಆರಂಭವಾಗುವುದು ಮಾನವನ ಮನಸ್ಸಿನಲ್ಲಾಗಿದೆ. ಆದುದರಿಂದ ಪ್ರತಿಭಟನಾ ಸಾಮರ್ಥ್ಯವನ್ನು ಕಟ್ಟಿ ಬೆಳೆಸಬೇಕಾದುದು ಮಾನವನ ಮನಸ್ಸಿನಲ್ಲಾಗಿದೆಯೆಂಬ ದೃಷ್ಟಿಕೋನವು ಈ ಅಧ್ಯಾಯದ ಪ್ರಧಾನ ಆಶಯವಾಗಿದೆ. ಅನಂತರ ಮುಂದಿನ ಅಧ್ಯಾಯದಲ್ಲಿ ಆಧುನಿಕ ಭಾರತದ ಚರಿತ್ರೆಯನ್ನು ಚರ್ಚಿಸಲಾಗಿದೆ.

ಬ್ರಿಟಿಷರ ಸಾಮ್ರಾಜ್ಯಶಾಹಿ ಶೋಷಣೆ ಮತ್ತು ಅದರ ಪ್ರತಿಕ್ರಿಯೆಯೆಂಬ ನೆಲೆಯಲ್ಲಿ ಬೆಳೆದು ಬಂದ ಭಾರತದ ರಾಷ್ಟ್ರೀಯತೆಯು ಆಧುನಿಕ ಭಾರತದ ಚರಿತ್ರೆಯನ್ನು ರೂಪಿಸಿತು.

ಬ್ರಿಟಿಷರ ಶೋಷಣೆಯು ಭಾರತದ ವಿಭಿನ್ನ ಜನವಿಭಾಗಗಳನ್ನು ಸಾಮ್ರಾಜ್ಯಶಾಹಿ ವಿರುದ್ಧ ಮನೋಭಾವದೆಡೆಗೆ ಮತ್ತು ರಾಷ್ಟ್ರೀಯತೆಯೆಡೆಗೆ ಹೇಗೆ ಸಾಗಿಸಿತೆಂಬುದನ್ನು 'ಬ್ರಿಟಿಷರ ಶೋಷಣೆ ಹಾಗೂ ಪ್ರತಿಭಟನೆಗಳು' ಎಂಬ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ರಾಷ್ಟ್ರೀಯತೆಯು ಭಾರತದ ಸಾಂಸ್ಕೃತಿಕ ವಲಯದಲ್ಲಿ ಯಾವೆಲ್ಲ ಬದಲಾವಣೆಯನ್ನುಂಟುಮಾಡಿತೆಂಬುದನ್ನು 'ಸಂಸ್ಕೃತಿ ಹಾಗೂ ರಾಷ್ಟ್ರೀಯತೆ' ಎಂಬ ಅಧ್ಯಾಯವು ಸ್ಪಷ್ಟಪಡಿಸುತ್ತದೆ. ಭಾರತದ ವಿದ್ಯಾಸಂಪನ್ನರ ಹಾಗೂ ಉನ್ನತ ವರ್ಗದವರ ಮಧ್ಯೆ ಮಾತ್ರ ಹುದುಗಿಕೊಂಡಿದ್ದ ರಾಷ್ಟ್ರೀಯ ಚಳುವಳಿಯು ಜನಪರ ಸ್ವಭಾವವನ್ನು ಹೇಗೆ ಪಡೆಯಿತೆಂಬುದನ್ನು 'ಹೋರಾಟ ಮತ್ತು ಸ್ವಾತಂತ್ರ್ಯ' ಎಂಬ ಅಧ್ಯಾಯದಲ್ಲಿ ವಿವರಿಸಲಾಗಿದೆ.

'ಸ್ವಾತಂತ್ರ್ಯಾನಂತರದ ಭಾರತ' ಎಂಬ ಅಧ್ಯಾಯವು ಸ್ವಾತಂತ್ರ್ಯಾನಂತರ ಭಾರತವು ಎದುರಿಸಿದ ಸಮಸ್ಯೆಗಳನ್ನೂ ಪ್ರಗತಿಯ ಕಡೆಗಿನ ಭಾರತದ ಪ್ರಯಾಣವನ್ನೂ ಸ್ಪಷ್ಟಪಡಿಸುತ್ತದೆ.

'ಕೇರಳ ಆಧುನಿಕತೆಯೆಡೆಗೆ' ಎಂಬ ಅಧ್ಯಾಯವು ಆಧುನಿಕತೆಯೆಡೆಗೆ ಕೇರಳದ ಪ್ರಯಾಣದ ವಿವಿಧ ಹಂತಗಳನ್ನು ವಿವರಿಸುತ್ತದೆ.

ರಾಜ್ಯಶಾಸ್ತ್ರದ ಭಾಗವಾಗಿ 'ಸಾರ್ವಜನಿಕ ಆಡಳಿತ' ಎಂಬ ಅಧ್ಯಾಯದಲ್ಲಿ ಭಾರತದ ಸಾರ್ವಜನಿಕ ಆಡಳಿತ ವ್ಯವಸ್ಥೆಯ ಆವಶ್ಯಕತೆ, ವಿಶೇಷತೆಗಳು, ರಚನೆ, ಆಡಳಿತ ನವೀಕರಣದ ಪ್ರಯತ್ನಗಳನ್ನು ಸ್ಪಷ್ಟಪಡಿಸಲಾಗಿದೆ.

'ರಾಷ್ಟ್ರ ಹಾಗೂ ರಾಜ್ಯಶಾಸ್ತ್ರ' ವೆಂಬ ಪಾಠಭಾಗದಲ್ಲಿ ರಾಷ್ಟ್ರದ ರೂಪೀಕರಣ, ಘಟಕಗಳು, ಜವಾಬ್ದಾರಿಗಳು, ಪೌರ ಮತ್ತು ರಾಷ್ಟ್ರಗಳೊಳಗಿನ ಸಂಬಂಧ, ರಾಜ್ಯಶಾಸ್ತ್ರ ಕಲಿಕೆಯ ಅನಿವಾರ್ಯತೆ ಇತ್ಯಾದಿಗಳನ್ನು ವಿವರಿಸಲಾಗಿದೆ.

ಒಂದು ಪ್ರಜಾಪ್ರಭುತ್ವ ಸಮಾಜದಲ್ಲಿ ಪೌರಪ್ರಜ್ಞೆಯ ಪ್ರಾಧಾನ್ಯ ಮತ್ತು ಔಚಿತ್ಯ ಏನೆಂಬುದನ್ನು 'ಪೌರಪ್ರಜ್ಞೆ' ಎಂಬ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

'ಸಮಾಜಶಾಸ್ತ್ರ ಕಲಿಕೆಗೊಂದು ಮುನ್ನುಡಿ' ಎಂಬ ಅಧ್ಯಾಯದಲ್ಲಿ ಸಮಾಜಶಾಸ್ತ್ರವೆಂಬ ಕಲಿಕಾವಲಯದ ಪ್ರಾಧಾನ್ಯ ಮತ್ತು ಸಮಾಜಶಾಸ್ತ್ರದ ಕಲಿಕಾ ವಿಧಾನಗಳ ಕುರಿತು ವಿವರಿಸಲಾಗಿದೆ.

ಜ್ಞಾನ ನಿರ್ಮಾಣ ಪ್ರಕ್ರಿಯೆಗೆ ಸಹಾಯಕವಾಗುವ ರೀತಿಯಲ್ಲಿ ವಿಷಯ ವಲಯಗಳನ್ನು, ಕಲಿಕಾ ಚಟುವಟಿಕೆಗಳನ್ನು, ಪ್ರತಿಫಲನ ಪ್ರಶ್ನೆಗಳನ್ನು, ಸ್ವಮೌಲ್ಯನಿರ್ಣಯಕ್ಕಿರುವ ಪ್ರಶ್ನೆಗಳನ್ನು, ಮುಂದುವರಿದ ಚಟುವಟಿಕೆಗಳನ್ನು ಎಲ್ಲ ಅಧ್ಯಾಯಗಳಲ್ಲೂ ಕೊಡಲಾಗಿದೆ. ಪಾಠಪುಸ್ತಕದಲ್ಲಿರುವ ಸಾಧ್ಯತೆಗಳನ್ನು ವಿಪುಲಗೊಳಿಸಿ ಜ್ಞಾನ ನಿರ್ಮಾಣವನ್ನು ಫಲಪ್ರದವಾಗಿ ಮತ್ತು ಚಟುವಟಿಕೆಯಾಧಾರಿತವಾಗಿ ಮುನ್ನಡೆಸಲು ಪ್ರಯತ್ನಿಸುವಿರಲ್ಲವೇ.

ಅಧ್ಯಾಯ

01



# ಜಗತ್ತನ್ನು ಪರಿವರ್ತಿಸಿದ ಕ್ರಾಂತಿಗಳು




ಕುಮಾರನಾಶಾನ್
ಸ್ಮಾರಕ-ಕಾಯಿಕ್ಕರ

ಚಿತ್ರದಲ್ಲಿರುವ ಫಲಕದಲ್ಲಿ ದಾಖಲಿಸಿರುವುದು ಕುಮಾರನಾಶಾನ್‌ರವರ 'ಒರು ಉದ್ಬೋಧನಂ' ಎಂಬ ಕವಿತೆಯಿಂದ ಆಯ್ದ ಸಾಲುಗಳಾಗಿವೆ. ಮಾನವನ ಬದುಕಿನಲ್ಲಿ ಸ್ವಾತಂತ್ರ್ಯಕ್ಕೆ ಎಷ್ಟೊಂದು ಮಹತ್ವವಿದೆಯೆಂಬುದನ್ನು ಈ ಸಾಲುಗಳು ನೆನಪಿಸುತ್ತವೆ. ನಾವೆಲ್ಲರೂ ನಿತ್ಯ ಜೀವನದಲ್ಲಿ ಯಾವೆಲ್ಲ ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದೇವೆ? ಎಲ್ಲ ಕಡೆಗಳಲ್ಲಿ ಎಲ್ಲರಿಗೂ ಹೀಗೆ ಸ್ವಾತಂತ್ರ್ಯ ಲಭಿಸಿದೆಯೇ.? ಹಲವು ದೇಶಗಳಲ್ಲಿ ಜನಸಾಮಾನ್ಯರಿಗೆ ನಾವು ಇಂದು ಅನುಭವಿಸುತ್ತಿರುವಂತಹ ಸ್ವಾತಂತ್ರ್ಯವು ಹಿಂದೆ ಲಭಿಸಿರಲಿಲ್ಲ. ಸ್ವಾತಂತ್ರ್ಯ ನಿಷೇಧಿಸಲ್ಪಟ್ಟ ಜನರಿಗೆ ಅದನ್ನು ಗಳಿಸಲು ಹೋರಾಟದ ಮಾರ್ಗಗಳನ್ನು ಸ್ವೀಕರಿಸಬೇಕಾಯಿತು. ಕೆಲವರು ಶಾಂತಿಯ ಮಾರ್ಗವನ್ನು ಸ್ವೀಕರಿಸಿದಾಗ ಇನ್ನು ಕೆಲವರು ಸಶಸ್ತ್ರ ಹೋರಾಟದ ಮಾರ್ಗವನ್ನು ಸ್ವೀಕರಿಸಿದರು. ಇಂತಹ ಪ್ರತಿಯೊಂದು ಹೋರಾಟಗಳು ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ನಿಷೇಧಿಸುತ್ತಿದ್ದಂತಹ ವ್ಯವಸ್ಥೆಯನ್ನು ಬದಲಾಯಿಸಿ ನೂತನವಾದ ವ್ಯವಸ್ಥೆಯನ್ನು ಸ್ಥಾಪಿಸಲು ಪ್ರಯತ್ನಿಸಿತು. ಆದಕಾರಣ ಇವುಗಳು ಕ್ರಾಂತಿಗಳೆಂದು ತಿಳಿಯಲ್ಪಟ್ಟವು.

ನವೋತ್ಥಾನವು ಆರಂಭಕಾಲದ ಕ್ರಾಂತಿಗಳಿಗೆ ಪ್ರೇರಣೆಯಾಯಿತು. ನವೋತ್ಥಾನದ (Renaissance) ಕುರಿತು ಹಿಂದಿನ ತರಗತಿಗಳಲ್ಲಿ ಚರ್ಚಿಸಿರುವುದನ್ನು ನೆನೆಪಿಸುವಿರಲ್ಲವೇ. ನವೋತ್ಥಾನವು ಮಾನವನ ಚಿಂತನೆಯಲ್ಲೂ ದೃಷ್ಟಿಕೋನದಲ್ಲೂ ಜೀವನದಲ್ಲೂ ಗಮನಾರ್ಹವಾದ ಬದಲಾವಣೆಗಳನ್ನುಂಟುಮಾಡಿತು. ಅವುಗಳು ಯಾವುವೆಂದು ಪರಿಶೀಲಿಸುವ.

- ಮಾನವೀಯತೆ
- ವೈಜ್ಞಾನಿಕ ಪ್ರಜ್ಞೆ
- 

**ಜ್ಞಾನೋದಯ**

ಯುರೋಪಿನಲ್ಲಿ ವೈಜ್ಞಾನಿಕ ರಂಗದಲ್ಲಿ ಉಂಟಾದ ನೂತನ ಸಂಶೋಧನೆಗಳು ಜ್ಞಾನೋದಯವೆಂಬ ಬೌದ್ಧಿಕ ಮತ್ತು ಸಾಂಸ್ಕೃತಿಕ ಚಳುವಳಿಗೆ ರೂಪುನೀಡಿದುವು. ಉಚಿತಾನುಚಿತ ಚಿಂತನೆಗೆ ಪ್ರಾಧಾನ್ಯವನ್ನು ನೀಡಿದ ಜ್ಞಾನೋದಯ ಕಾಲದ ಚಿಂತಕರು ಸಮಾಜವು ನಿರಂತರವಾಗಿ ಪ್ರಗತಿಯ ಕಡೆಗೆ ಸಾಗುತ್ತದೆಯೆಂದು ಅಭಿಪ್ರಾಯಪಟ್ಟರು.


ವಿವೇಚನಾರಹಿತವಾದ ವಿಶ್ವಾಸಗಳನ್ನು ಮತ್ತು ಸಂಪ್ರದಾಯಗಳನ್ನು ಪ್ರಶ್ನಿಸಲು ಈ ಹೊಸ ದೃಷ್ಟಿಕೋನಗಳು ಮಾನವನನ್ನು ಪ್ರೇರೇಪಿಸಿತು. ನವೋತ್ಥಾನದ ಫಲವಾಗಿ ವೈಜ್ಞಾನಿಕ ರಂಗದಲ್ಲಿ ಉಂಟಾದ ಪ್ರಗತಿಯು ಹದಿನೆಂಟನೇ ಶತಮಾನದಲ್ಲಿ ಯುರೋಪಿನಲ್ಲಿ ಜ್ಞಾನೋದಯಕ್ಕೆ (Enlightment) ರೂಪು ನೀಡಿತು. ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸಮಾನತೆ, ರಾಷ್ಟ್ರೀಯತೆ ಮುಂತಾದ ಆಶಯಗಳನ್ನು ಜ್ಞಾನೋದಯ ಚಿಂತಕರು ಪ್ರಚಾರಮಾಡಿದರು. ಆ ಕಾಲದಲ್ಲಿ ಜಾರಿಯಲ್ಲಿದ್ದ ಏಕಾಧಿಪತ್ಯ ಸಂಪ್ರದಾಯಗಳನ್ನು ಎದುರಿಸಲು ಜಗತ್ತಿನ ವಿವಿಧ ಭಾಗದಲ್ಲಿರುವ ಜನರಿಗೆ ಇದು ಪ್ರಚೋದನೆಯಾಯಿತು. ಇಂತಹ ಪ್ರತಿಭಟನೆಗಳು ಅನೇಕ ದೇಶಗಳಲ್ಲಿ ಜನಪರ ಕ್ರಾಂತಿಗಳಾಗಿ ಬದಲಾದುವು. ಅಂತಹ ಕೆಲವು ಕ್ರಾಂತಿಗಳನ್ನು ಹಾಗೂ ಅವುಗಳ ಪರಿಣಾಮಗಳನ್ನು ಚರ್ಚಿಸೋಣ.

**ಪ್ರಾತಿನಿಧ್ಯವಿಲ್ಲದೆ ತೆರಿಗೆಯಿಲ್ಲ**

## ಅಮೇರಿಕಾದ ಸ್ವಾತಂತ್ರ್ಯ ಹೋರಾಟ

ಇದು 18ನೇ ಶತಮಾನದ ಮಧ್ಯದಲ್ಲಿ ಉತ್ತರ ಅಮೇರಿಕಾದ ವಿವಿಧ ಭಾಗಗಳಲ್ಲಿ ಮಾರ್ದನಿಸಿದ ಘೋಷಣಾ ವಾಕ್ಯವಾಗಿತ್ತು. ಜೇಮ್ಸ್ ಓಟಿಸ್ ರೂಪುನೀಡಿದ ಈ ಘೋಷಣಾ ವಾಕ್ಯದ ಮೂಲಕ ಜನರು ಯಾವ ಯಾವ ಬೇಡಿಕೆಗಳನ್ನು ಮುಂದಿಟ್ಟರು?

- ಆಡಳಿತದಲ್ಲಿ ಸಹಭಾಗಿತ್ವ
- 
- 




ಅಮೇರಿಕಾದ 13 ವಸಾಹತುಗಳು

ಪ್ರಬಲವಾದ ಒಂದು ಹೋರಾಟದ ಅಂಗವಾಗಿ ಅಮೇರಿಕಾದ ಜನರು ಈ ಘೋಷಣೆಯನ್ನು ಮೊಳಗಿಸಿದರು. ಇದಕ್ಕೆ ಕಾರಣವಾದ ಸನ್ನಿವೇಶಗಳಾವುವೆಂದು ಪರಿಶೀಲಿಸೋಣ.

ಹದಿನಾರನೇ ಶತಮಾನದ ಆರಂಭದಲ್ಲೇ ಯುರೋಪಿನಿಂದ ಉತ್ತರ ಅಮೇರಿಕಾಕ್ಕೆ ಜನರು ವಲಸೆ ಹೋಗಲು ಆರಂಭಿಸಿದರು. (ಸಂಪನ್ಮೂಲಗಳನ್ನು ವಶಪಡಿಸುವುದು ವಲಸೆಯ ಪ್ರಧಾನ ಉದ್ದೇಶವಾಗಿತ್ತು.) 18ನೇ ಶತಮಾನಕ್ಕಾಗುವಾಗ ಇಂಗ್ಲೆಂಡ್ ಉತ್ತರ ಅಮೇರಿಕಾದ ಪೂರ್ವ ತೀರಗಳಲ್ಲಿ ಹದಿಮೂರು ವಸಾಹತುಗಳನ್ನು ಸ್ಥಾಪಿಸಿತು. ಅವುಗಳನ್ನು ಭೂಪಟದಿಂದ ಕಂಡುಹಿಡಿಯುವ.

ಭೂಪಟವನ್ನು ನಿರೀಕ್ಷಿಸಿ ಉತ್ತರ ಅಮೇರಿಕಾದ ಹದಿಮೂರು ಇಂಗ್ಲೀಷ್ ವಸಾಹತುಗಳನ್ನು ಪಟ್ಟಿ ಮಾಡಿರಿ.



### ಅಮೇರಿಕಾಕ್ಕೆ ನಡೆದ ವಲಸೆ

1492ರಲ್ಲಿ ಸ್ಪೈನಿನ ನಾವಿಕನಾಗಿ ಉತ್ತರ ಅಮೇರಿಕಾವನ್ನು ತಲುಪಿದ ಕ್ರಿಸ್ಟೋಫರ್ ಕೊಲಂಬಸನು ಅಲ್ಲಿಯ ಮೂಲನಿವಾಸಿಗಳನ್ನು ಭಾರತೀಯರೆಂದು ಕರೆದನು. ಅವರು ಭಾರತೀಯರಾಗಿರಬಹುದೆಂದು ಊಹಿಸಿ ಹೀಗೆ ಕರೆದನು. ಅನಂತರದ ಕಾಲದಲ್ಲಿ ಇವರನ್ನು 'ರೆಡ್ ಇಂಡಿಯನ್'ರೆಂದು ಕರೆಯಲಾಯಿತು. ಇಂಗ್ಲೆಂಡಿನ ರಾಜನ ಧಾರ್ಮಿಕ ಶೋಷಣೆಗೆ ಗುರಿಯಾಗಿದ್ದ ಜನರು ಹದಿನೇಳನೇ ಶತಮಾನದಲ್ಲಿ 'ಮೇಫ್ಲವರ್' ಎಂಬ ಹಡಗಿನಲ್ಲಿ ಅಮೇರಿಕಾದ ತೀರವನ್ನು ತಲುಪಿದರು. ಹೀಗೆ ಅಲ್ಲಿಗೆ ತಲುಪಿದ ಒಂದು ವಿಭಾಗದ ಇಂಗ್ಲೀಷರು ಅಲ್ಲಿ ಮೊತ್ತಮೊದಲ ಬಾರಿಗೆ ವಸಾಹತುಗಳನ್ನು ಸ್ಥಾಪಿಸಿದರು. ಇವರನ್ನು ಯಾತ್ರಾರ್ಥಿಪಿತರೆಂದು (Piligrim Fathers) ಕರೆಯುತ್ತಾರೆ. ಯುರೋಪಿಯನ್ನರ ವಲಸೆಯು ವ್ಯಾಪಕವಾದಾಗ ರೆಡ್‌ಇಂಡಿಯನ್ನರನ್ನು ಒಳನಾಡಿಗೆ ಹೊಡೆದೋಡಿಸಲಾಯಿತು. ಅವರ ಭೂಮಿಯನ್ನೂ ಕುರಿಗಳನ್ನೂ ಯುರೋಪಿಯನ್ನರು ವಶಪಡಿಸಿಕೊಂಡರು.

ಅವರ ಕೈಗಾರಿಕೆಗಳಿಗೆ ಅಗತ್ಯವಾದ ಕಚ್ಚಾವಸ್ತುಗಳನ್ನು ಸಂಗ್ರಹಿಸಲಿರುವ ಕೇಂದ್ರವಾಗಿ ಹಾಗೂ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವುದಕ್ಕಿರುವ ಮಾರುಕಟ್ಟೆಗಳಾಗಿ ಇಂಗ್ಲೀಷರು ಈ ವಸಾಹತುಗಳನ್ನು ಬಳಸಿಕೊಂಡರು. ಮಾತೃದೇಶವಾದ ಇಂಗ್ಲೆಂಡಿನ ಸಹಾಯದೊಂದಿಗೆ ವ್ಯಾಪಾರಿಗಳು ಜಾರಿಗೊಳಿಸಿದ ಈ ಧೋರಣೆಯನ್ನು 'ಮರ್ಕಂಡಲಿಸಂ' ಎನ್ನುತ್ತಾರೆ. ಮರ್ಕಂಡಲಿಸಮಿನ ಅಂಗವಾಗಿ ಅನೇಕ ಕಾನೂನುಗಳನ್ನು ಇಂಗ್ಲೀಷರು ವಸಾಹತುಗಳಲ್ಲಿ ಜಾರಿಗೊಳಿಸಿದರು. ಅವುಗಳಲ್ಲಿ ಕೆಲವೊಂದನ್ನು ಪರಿಚಯಿಸೋಣ.

### ಮರ್ಕಂಡಲಿಸ್ಟ್ ಕಾನೂನುಗಳು

- ವಸಾಹತುಗಳಿಂದ ಅಥವಾ ವಸಾಹತುಗಳಿಗೆ ವಸ್ತುಗಳನ್ನು ಸಾಗಿಸಲು ಬ್ರಿಟನಿನ ಹಡಗುಗಳನ್ನು ಅಥವಾ ವಸಾಹತುಗಳಲ್ಲಿ ನಿರ್ಮಿಸಿದ ಹಡಗುಗಳನ್ನು ಮಾತ್ರವೇ ಉಪಯೋಗಿಸಬೇಕಿತ್ತು.
- ವಸಾಹತುಗಳಲ್ಲಿ ಉತ್ಪಾದಿಸಿದ ಸಕ್ಕರೆ, ಉಣ್ಣೆ, ಹತ್ತಿ, ಹೊಗೆಸೊಪ್ಪು ಇತ್ಯಾದಿಗಳನ್ನು ಇಂಗ್ಲೆಂಡಿಗೆ ಮಾತ್ರವೇ ರಫ್ತು ಮಾಡಬೇಕಿತ್ತು.
- ವಸಾಹತುಗಳ ಕಾನೂನುಪರವಾದ ಹಕ್ಕು ಪತ್ರಗಳು, ವಾರ್ತಾಪತ್ರಿಕೆಗಳು, ಕಿರುಲೇಖನಗಳು, ಪರವಾನಿಗೆಗಳು (ಲೈಸೆನ್ಸ್) ಮುಂತಾದುವುಗಳಿಗೆಲ್ಲ ಇಂಗ್ಲೆಂಡಿನ ರೆವೆನ್ಯೂ ಸ್ಟೇಂಪ್‌ಗಳನ್ನು ಅಂಟಿಸಬೇಕಿತ್ತು.
- ವಸಾಹತುಗಳಲ್ಲಿ ಇರಿಸಿಕೊಂಡಿದ್ದ ಇಂಗ್ಲೀಷರ ಸೈನ್ಯಕ್ಕೆ ಅಗತ್ಯವಾದ ವಾಸಸ್ಥಳ ಮತ್ತು ಸೌಕರ್ಯಗಳನ್ನು ವಸಾಹತುಗಳು ಒದಗಿಸಬೇಕಾಗಿತ್ತು.
- ವಸಾಹತುಗಳಿಗೆ ಆಮದು ಮಾಡುತ್ತಿದ್ದ ಚಾಹುಡಿ, ಗಾಜು, ಕಾಗದ ಎಂಬಿವುಗಳಿಗೆ ಆಮದು ಸುಂಕವನ್ನು ನೀಡಬೇಕಿತ್ತು.



### ಬೋಸ್ಟನ್ ಟೀಪಾರ್ಟಿ

ಬ್ರಿಟನಿನ ಸರಕಾರವು ಚಾಹುಡಿಯ ಮೇಲೆ ಅಧಿಕ ತೆರಿಗೆಯನ್ನು ಹೇರಿತು. ಇದಕ್ಕೆ ವಿರುದ್ಧವಾಗಿ ಅಮೇರಿಕಾದಲ್ಲಿ ಪ್ರಬಲವಾದ ಪ್ರತಿಭಟನೆಗಳುಂಟಾದುವು. 1773 ಡಿಸೆಂಬರ್ 16ರಂದು ರಾತ್ರಿ 'ರೆಡ್ ಇಂಡಿಯನ್'ರ ವೇಷವನ್ನು ಧರಿಸಿ ಬಂದ ಬೋಸ್ಟನ್‌ನ ಒಂದು ವಿಭಾಗದ ಜನರು ಬೋಸ್ಟನ್ ಬಂದರಿನಲ್ಲಿ ಲಂಗರು ಹಾಕಿದ್ದ ಇಂಗ್ಲಿಷರ ಹಡಗನ್ನು ಏರಿ ಅದರಲ್ಲಿದ್ದ 342 ಚಾಹುಡಿಯ ಪೆಟ್ಟಿಗೆಗಳನ್ನು ಸಮುದ್ರಕ್ಕೆ ತಳ್ಳಿಹಾಕಿದರು. ಈ ಘಟನೆಯನ್ನು ಬೋಸ್ಟನ್ ಟೀಪಾರ್ಟಿ ಎಂದು ಕರೆಯುತ್ತಾರೆ.

K6A5FQ



"ಮರ್ಕಂಡಲಿಸ್ಟ್ ಕಾನೂನುಗಳ ತೀರ್ಮಾನಗಳು ಅಮೇರಿಕಾದ ವಸಾಹತು ನಿವಾಸಿಗಳನ್ನು ಮಾತೃದೇಶಕ್ಕೆ ವಿರುದ್ಧವಾಗಿ ಹೋರಾಡುವಂತೆ ಪ್ರೇರೇಪಿಸಿತು." ಈ ಹೇಳಿಕೆಯನ್ನು ಸಮರ್ಥಿಸಿರಿ.

ಇಂಗ್ಲಿಷರ ಶೋಷಣೆಯಿಂದ ಕೂಡಿದ ಕಾನೂನುಗಳಿಗೆದುರಾಗಿ ಹೋರಾಡಲು ಕೆಲವು ಚಿಂತಕರ ಆಶಯಗಳು ವಸಾಹತುಗಳ ಜನರಿಗೆ ಪ್ರಚೋದನೆಯನ್ನು ನೀಡಿದುವು. ಕೆಲವು ಚಿಂತಕರನ್ನೂ ಅವರ ಆಶಯಗಳನ್ನು ಪರಿಚಯಿಸೋಣ.

**ಜೋನ್‌ಲೋಕ್**


ಮಾನವನಿಗೆ ಕೆಲವು ಮೂಲಭೂತ ಹಕ್ಕುಗಳಿವೆ. ಅವುಗಳನ್ನು ನಿಷೇಧಿಸಲು ಯಾವುದೇ ಸರಕಾರಕ್ಕೂ ಹಕ್ಕಿಲ್ಲ.

**ಥೋಮಸ್ ಪೈನ್**

ಯಾವುದಾದರೂ ವಿದೇಶಿಯರಿಗೆ (ಇಂಗ್ಲೆಂಡ್) ಈ ಭೂಖಂಡವನ್ನು (ಉತ್ತರ ಅಮೇರಿಕಾ) ದೀರ್ಘಕಾಲದವರೆಗೆ ತಮ್ಮ ಹತೋಟಿಯಲ್ಲಿ ಇರಿಸಬೇಕೆಂಬ ಬಯಕೆಯಿದ್ದರೆ ಅದು ಸಮಂಜಸವಲ್ಲ.

## ಭೂಖಂಡದವರೆಲ್ಲರೂ ಒಂದಾಗುತ್ತಿದ್ದಾರೆ.

ಮಾತೃ ರಾಷ್ಟ್ರವಾದ ಇಂಗ್ಲೆಂಡಿನ ಧೋರಣೆ ಮತ್ತು ಕಾನೂನುಗಳಿಗೆದುರಾಗಿ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲು ಜೋರ್ಜಿಯಾವನ್ನು ಬಿಟ್ಟು ಉಳಿದೆಲ್ಲಾ ವಸಾಹತುಗಳ ಪ್ರತಿನಿಧಿಗಳು 1774 ರಲ್ಲಿ ಫಿಲಡೆಲ್ಫಿಯಾದಲ್ಲಿ ಸಭೆ ಸೇರಿದರು. ಇದನ್ನು ಪ್ರಥಮ ಕೋಂಟಿನೆಂಟಲ್ ಕಾಂಗ್ರೆಸ್ ಎಂದು ಕರೆಯುತ್ತಾರೆ. ಅನಂತರ ಕೈಗಾರಿಕೆ ಮತ್ತು ವ್ಯಾಪಾರಕ್ಕೆ ಏರ್ಪಡಿಸಿದ ನಿಯಂತ್ರಣಗಳನ್ನು ತೆಗೆದುಹಾಕಬೇಕು ಹಾಗೂ ತಮಗೆ ಅಂಗೀಕಾರವಿಲ್ಲದೆ ತೆರಿಗೆಯನ್ನು ಹೊರಿಸಬಾರದೆಂಬ ಬೇಡಿಕೆಯನ್ನು ಮುಂದಿಟ್ಟು ವಸಾಹತುಗಳ ಜನರು ಇಂಗ್ಲೆಂಡಿನ ರಾಜನಿಗೆ ಮನವಿಯನ್ನು ಸಲ್ಲಿಸಿದರು. ಆದರೆ ರಾಜನು ಜನರನ್ನು ದಮನಿಸಲು ಸೈನ್ಯವನ್ನು ಕಳುಹಿಸಿದನು. ಇದು ಇಂಗ್ಲೆಂಡು ಮತ್ತು ವಸಾಹತುಗಳ ಮಧ್ಯೆ ಯುದ್ಧಕ್ಕೆ ಕಾರಣವಾಯಿತು. 1775ರಲ್ಲಿ ಫಿಲಡೆಲ್ಫಿಯಾದಲ್ಲಿ ಸಭೆ ಸೇರಿದ ಎರಡನೇ ಕೋಂಟಿನೆಂಟಲ್ ಕಾಂಗ್ರೆಸ್ ಜೋರ್ಜ್ ವಾಷಿಂಗ್ಟನ್‌ರನ್ನು ಕೋಂಟಿನೆಂಟಲ್




ಕೋಂಟಿನೆಂಟಲ್ ಕಾಂಗ್ರೆಸ್



ಜೋರ್ಜ್ ವಾಷಿಂಗ್ಟನ್

ಸೈನ್ಯದ ನಾಯಕನನ್ನಾಗಿ ಆಯ್ಕೆಮಾಡಿತು. ಈ ಸಂದರ್ಭದಲ್ಲಿ ಥೋಮಸ್ ಪೈನ್ ತನ್ನ 'ಕೋಮನ್‌ಸೆನ್ಸ್' ಎಂಬ ಕಿರುಲೇಖನದ ಮೂಲಕ ಇಂಗ್ಲೆಂಡಿನ ಆಧಿಪತ್ಯದಿಂದ ಮುಕ್ತಿಪಡೆಯುವುದು ಅಮೇರಿಕಾಕ್ಕೆ ಸಂಬಂಧಿಸಿದಂತೆ ಔಚಿತ್ಯ ಪೂರ್ಣ ನಿರ್ಧಾರವೆಂದು ಘೋಷಿಸಿದನು. 1776 ಜುಲೈ 4ರಂದು ಅಮೇರಿಕಾದ ಕೋಂಟಿನೆಂಟಲ್ ಕಾಂಗ್ರೆಸ್ ಜಗತ್ಪ್ರಸಿದ್ಧವಾದ 'ಸ್ವಾತಂತ್ರ್ಯ ಘೋಷಣೆ' ಯನ್ನು ಹೊರಡಿಸಿತು. ಥೋಮಸ್ ಜೆಫರ್‌ಸನ್ ಮತ್ತು ಬೆಂಜಮಿನ್ ಫ್ರಾಂಕ್ಲಿನ್ ತಯಾರಿಸಿದ 'ಸ್ವಾತಂತ್ರ್ಯ ಘೋಷಣೆ'ಯ ಒಂದು ಭಾಗವನ್ನು ಇಲ್ಲಿ ಕೊಡಲಾಗಿದೆ.



IN CONGRESS, JULY 4, 1776.

A DECLARATION

BY THE REPRESENTATIVES OF THE

UNITED STATES OF AMERICA,

IN GENERAL CONGRESS ASSEMBLED.

"ಎಲ್ಲ ಮಾನವರೂ ಸಮಾನರು. ಅವರನ್ನೆಲ್ಲ ಸಮಾನತೆಯಿಂದ ಸೃಷ್ಟಿಸಲಾಗಿದೆ. ಅವರ ಸೃಷ್ಟಿಕರ್ತನು ಎಲ್ಲರಿಗೂ ಪ್ರಧಾನವಾದ ಕೆಲವು ಹಕ್ಕುಗಳನ್ನೂ ನೀಡಿದ್ದಾನೆ. ಜೀವದ ಹಕ್ಕು, ಸ್ವಾತಂತ್ರ್ಯ ದ ಹಕ್ಕು, ಆರೋಗ್ಯ ಸಂರಕ್ಷಣೆ ಎಂಬವುಗಳಿರುವ ಹಕ್ಕುಗಳು ಅದರಲ್ಲಿ ಒಳಗೊಂಡಿವೆ. ಈ ಹಕ್ಕುಗಳನ್ನು ಗಳಿಸಲು ಜನರ ಅಂಗೀಕಾರ ದೊರೆತ ಸರಕಾರಗಳು ರೂಪುಗೊಳ್ಳಬೇಕು. ಯಾವುದಾದರೊಂದು ಆಡಳಿತವು ಈ ಉದ್ದೇಶಗಳನ್ನು ನಾಶಮಾಡುವ ರೀತಿಯ ಕಡೆಗೆ ಸಾಗುತ್ತಿದ್ದರೆ ಅದನ್ನು ಬದಲಾಯಿಸುವ ಅಥವಾ ನಾಶಮಾಡುವ ಹಕ್ಕು ಜನರಿಗಿದೆ"

JOHN HANCOCK, PRESIDENT.

ATTEST.
CHARLES THOMSON, SECRETARY.

ಅಮೇರಿಕಾದ ಸ್ವಾತಂತ್ರ್ಯ ಘೋಷಣೆ

ಮಾನವನ ಸ್ವಾತಂತ್ರ್ಯ ಹಕ್ಕುಗಳಿಗೆ ಸಂಬಂಧಿಸಿದ ಯಾವೆಲ್ಲ ವಿಚಾರಗಳನ್ನು ಈ ಘೋಷಣೆಯಿಂದ ಕಂಡುಕೊಳ್ಳಬಹುದು?

- ಎಲ್ಲ ಮಾನವರು ಸಮಾನರಾಗಿದ್ದಾರೆ.
- ಎಲ್ಲರಿಗೂ ಹಕ್ಕುಗಳಿವೆ.
- 
- 

ಸ್ವಾತಂತ್ರ್ಯ ಘೋಷಣೆಯೊಂದಿಗೆ ಇಂಗ್ಲೆಂಡು ಮತ್ತು ಅಮೇರಿಕಾದ ವಸಾಹತುಗಳ ಮಧ್ಯೆ ಆರಂಭವಾದ ಯುದ್ಧವು 1781ರಲ್ಲಿ ಕೊನೆಗೊಂಡಿತು. 1783ರ ಪ್ಯಾರಿಸ್ ಒಪ್ಪಂದದ ಪ್ರಕಾರ ಇಂಗ್ಲೆಂಡು ಹದಿಮೂರು ವಸಾಹತುಗಳ ಸ್ವಾತಂತ್ರ್ಯವನ್ನು ಅಂಗೀಕರಿಸಿತು. ತರುವಾಯ ಫಿಲಡೆಲ್ಫಿಯಾದಲ್ಲಿ ಸಭೆ ಸೇರಿದ ಸಂವಿಧಾನ ರಚನಾ ಸಭೆಯು 'ಜೇಮ್ಸ್ ಮಾಡಿಸ್'ನ ನೇತೃತ್ವದಲ್ಲಿ ಅಮೇರಿಕಾಕ್ಕೆ ಸಂವಿಧಾನವನ್ನು ರಚಿಸಿತು. ನೂತನ ಸಂವಿಧಾನದ ಪ್ರಕಾರ ರೂಪಿಸಲಾದ ಅಮೇರಿಕಾದ ಸಂಯುಕ್ತ ಪ್ರಾಂತ್ಯಗಳ ಪ್ರಥಮ ಅಧ್ಯಕ್ಷರಾಗಿ ಜೋರ್ಜ್ ವಾಷಿಂಗ್ಟನ್ ಆಯ್ಕೆಯಾದರು.

**ಅಮೇರಿಕಾದ ಸಂಯುಕ್ತ ಪ್ರಾಂತ್ಯಗಳ ರೂಪೀಕರಣದೆಡೆಗೆ ಸಾಗಿಸಿದ ವಿವಿಧ ಘಟನೆಗಳನ್ನು ಸೇರಿಸಿಕೊಂಡು ಒಂದು ಫ್ಲೋಚಾರ್ಟನ್ನು ತಯಾರಿಸಿರಿ.**



ಅಮೇರಿಕಾದಲ್ಲಿ ಜಾರಿಯಲ್ಲಿದ್ದ ಆಡಳಿತಕ್ರಮವನ್ನು ಪರಿವರ್ತನೆಗೊಳಿಸಿದ ಕಾರಣ ಅಮೇರಿಕಾದ ಸ್ವಾತಂತ್ರ್ಯ ಹೋರಾಟವನ್ನು ಅಮೇರಿಕಾದ ಕ್ರಾಂತಿ ಎಂದು ಕರೆಯುತ್ತಾರೆ. ಅನಂತರದ ಜಾಗತಿಕ ಚರಿತ್ರೆಯಲ್ಲಿ ಇದು ಗಮನಾರ್ಹವಾದ ಪ್ರಭಾವವನ್ನು ಬೀರಿತು. ಅವು ಯಾವುವೆಂದು ನೋಡೋಣ.

ಅಮೇರಿಕಾದ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ಘಟನೆಗಳನ್ನು ಸೇರಿಸಿಕೊಂಡು ಒಂದು ಡಿಜಿಟಲ್ ಕಾಲರೇಖೆಯನ್ನು ತಯಾರಿಸಿರಿ.



- ಅನಂತರದ ಸ್ವಾತಂತ್ರ್ಯ ಹೋರಾಟಗಳಿಗೆ ಮತ್ತು ಕ್ರಾಂತಿಗಳಿಗೆ ಪ್ರಚೋದನೆ ಮತ್ತು ದಿಕ್ಸೂಚಿಯಾಯಿತು.
- ಗಣರಾಜ್ಯ ಆಡಳಿತ ಕ್ರಮ ಎಂಬ ಆಶಯವನ್ನು ಪರಿಚಯಿಸಿತು.
- ಪ್ರಥಮ ಲಿಖಿತ ಸಂವಿಧಾನವು ಅಸ್ತಿತ್ವಕ್ಕೆ ಬಂತು.
- ರಾಜ್ಯಗಳಿಗೆ ಸ್ವಾತಂತ್ರ್ಯ ಮತ್ತು ಅಧಿಕಾರವನ್ನು ನೀಡುವ ಫೆಡರಲ್ ರಾಷ್ಟ್ರ(ಸಂಯುಕ್ತ ಸರಕಾರ) ಎಂಬ ಆಶಯವನ್ನು ಜಗತ್ತಿಗೆ ನೀಡಿತು.



**ಅಮೇರಿಕಾದ ಸ್ವಾತಂತ್ರ್ಯಹೋರಾಟವು ಮುಂದಿರಿಸಿದ ಯಾವೆಲ್ಲ ಆಶಯಗಳನ್ನು ಭಾರತದ ಸಂವಿಧಾನದಲ್ಲಿ ಕಾಣಲು ಸಾಧ್ಯ? ಅನ್ವೇಷಿಸಿ ಟಿಪ್ಪಣಿ ತಯಾರಿಸಿರಿ.**

## ಫ್ರೆಂಚ್ ಕ್ರಾಂತಿ

ನನ್ನ ಅನಂತರ ಪ್ರಳಯ
ಹದಿನೈದನೇ ಲೂಯಿ

ನಾನೇ ರಾಷ್ಟ್ರ
ರಾಜನ ಅಧಿಕಾರಗಳು ದೈವದತ್ತವಾದುದಾಗಿವೆ. ಆದಕಾರಣ ರಾಜನನ್ನು ಪ್ರಶ್ನಿಸಲು ದೇವರಿಗೆ ಮಾತ್ರವೇ ಅಧಿಕಾರವಿರುವುದು.
ಹದಿನಾಲ್ಕನೇ ಲೂಯಿ



ವರ್ಸಾಯಿ ಅರಮನೆ

ನಿಮಗೆ ರೊಟ್ಟಿ ಇಲ್ಲದಿದ್ದರೇನು? ಕೇಕ್ ತಿನ್ನಬಾರದೇ?
ಮೇರಿ ಅಂಟೊಯಿನೆಟ್


K6J1HD

ಇದು ಹದಿನೇಳು ಹದಿನೆಂಟನೇ ಶತಮಾನಗಳಲ್ಲಿ ಫ್ರಾನ್ಸ್‌ನ ಆಡಳಿತವನ್ನು ನಿಯಂತ್ರಿಸುತ್ತಿದ್ದವರ ಕೆಲವು ಹೇಳಿಕೆಗಳು ಹಾಗೂ ಅವರ ಅಧಿಕಾರ ಕೇಂದ್ರವಾದ ವರ್ಸಾಯಿ ಅರಮನೆಯಾಗಿದೆ. ಈ ಹೇಳಿಕೆಗಳಿಂದ ಆ ಕಾಲದಲ್ಲಿ ಫ್ರಾನ್ಸ್‌ನಲ್ಲಿದ್ದ ಆಡಳಿತದ ಕುರಿತು ಯಾವೆಲ್ಲ ಮಾಹಿತಿಗಳನ್ನು ಕಂಡುಹಿಡಿಯಬಹುದು?

- ಏಕಾಧಿಪತ್ಯ ಆಡಳಿತಕ್ರಮವು ಜಾರಿಯಲ್ಲಿತ್ತು.
- ಆಡಳಿತಾಧಿಕಾರಿಗಳು ದುಂದುವೆಚ್ಚಗಾರರಾಗಿದ್ದರು.
- 

ಇಂತಹ ಆಡಳಿತ ಕ್ರಮ ಅಸ್ತಿತ್ವದಲ್ಲಿರುವ ದೇಶಗಳಲ್ಲಿ ಜನರ ಸ್ಥಿತಿ ಹೇಗಿರಬಹುದು? ಕೆಳಗೆ ನೀಡಿರುವ ಸಾಲುಗಳು ಅದನ್ನು ಬೊಟ್ಟು ಮಾಡಿ ತೋರಿಸುತ್ತವೆ. 'ಫ್ರಾನ್ಸ್‌ನಲ್ಲಿ ಹತ್ತರಲ್ಲಿ ಒಂಭತ್ತು ಮಂದಿ ಹಸಿವಿನಿಂದ ಮರಣ ಹೊಂದಿದಾಗ ಹತ್ತನೇಯವನು ಅಜೀರ್ಣದಿಂದ ಮರಣಹೊಂದಿದನು'

ಫ್ರಾನ್ಸ್‌ನಲ್ಲಿ ಬಹುಸಂಖ್ಯಾತರಾದ ಜನರ ಸ್ಥಿತಿಯು ಶೋಚನೀಯವಾಗಿತ್ತು. ಆಡಳಿತಾಧಿಕಾರಿಗಳನ್ನೊಳಗೊಂಡ ಅಲ್ಪಸಂಖ್ಯಾತರು ಆಡಂಬರ ಹಾಗೂ ದುಂದುವೆಚ್ಚಗಾರರಾಗಿದ್ದರೆಂದು ಇದರಿಂದ ತಿಳಿದುಕೊಳ್ಳಬಹುದು. ಫ್ರಾನ್ಸ್‌ನಲ್ಲಿ ಜಾರಿಯಲ್ಲಿದ್ದ ಸಾಮಾಜಿಕ - ಆರ್ಥಿಕ ಅಸಮಾನತೆಗಳು ಈ ಸ್ಥಿತಿಗೆ ಪ್ರಧಾನ ಕಾರಣವಾಗಿದ್ದುವು. ಮೂರು ಎಸ್ಟೇಟುಗಳಾಗಿ ವಿಭಜಿಸಲ್ಪಟ್ಟ ಫ್ರೆಂಚ್ ಸಮಾಜದ ಕುರಿತು ಹೆಚ್ಚಿನ ಮಾಹಿತಿಗಳನ್ನು ಕೆಳಗೆ ನೀಡಲಾಗಿದೆ.






ಚಾರ್ಟನ್ನು ವಿಶ್ಲೇಷಿಸಿ ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಹಿಡಿಯಿರಿ.

- ಫ್ರಾನ್ಸ್‌ನಲ್ಲಿ ಉನ್ನತ ಸಾಮಾಜಿಕ ಪದವಿ, ಹಕ್ಕುಗಳು ಮತ್ತು ಆಡಂಬರದ ಜೀವನವನ್ನು ಸಾಗಿಸುತ್ತಿದ್ದ ವಿಭಾಗಗಳು ಯಾವುವು?
- ಅತ್ಯಂತ ಹೆಚ್ಚು ಜನರನ್ನೊಳಗೊಂಡ ಎಸ್ಟೇಟ್ ಯಾವುದು?
- ಜನರನ್ನು ಶೋಷಣೆ ಮಾಡಿ ಸಂಪತ್ತನ್ನು ಯಾವ ವಿಭಾಗವು ವಶಪಡಿಸಿಕೊಂಡಿತ್ತು?
- ಈ ಕ್ರಮವು ಬದಲಾಗಬೇಕೆಂದು ಬಯಸುವ ವಿಭಾಗ ಯಾವುದಾಗಿರಬಹುದು? ಯಾಕೆ?

## ಆಶಯಗಳು ಪ್ರಚೋದನೆಯನ್ನೀಯುತ್ತಿವೆ.

ಫ್ರಾನ್ಸ್‌ನಲ್ಲಿದ್ದ ಅಸಮಾನತೆ ಮತ್ತು ಶೋಷಣೆಗಳ ಕುರಿತು ಜನರಲ್ಲಿ ಜಾಗೃತಿಯನ್ನುಂಟುಮಾಡುವುದರಲ್ಲಿ ಆ ಕಾಲದ ಚಿಂತಕರು ಮತ್ತು ಅವರ ಚಿಂತನೆಗಳು ಪ್ರಧಾನ ಪಾತ್ರವಹಿಸುತ್ತವೆ. ಈ ಚಿಂತಕರು, ಅವರ ಆಶಯಗಳು ಹಾಗೂ ಕೊಡುಗೆಗಳನ್ನು ಪರಿಚಯಿಸಿಕೊಳ್ಳೋಣ.

**ವಾಲ್ಟೇರ್**



- ಪುರೋಹಿತರು ಮಾಡುವ ಶೋಷಣೆಯನ್ನು ಅಪಹಾಸ್ಯ ಮಾಡಿದನು.
- ಉಚಿತಾನುಚಿತ ಚಿಂತನೆ, ಸಮಾನತೆ, ಮಾನವೀಯತೆಗಳನ್ನು ಪ್ರೋತ್ಸಾಹಿಸಿದನು.



**ರೂಸ್ಸೋ**

- ಸ್ವತಂತ್ರರಾಗಿ ಜನಿಸುವ ಮನುಷ್ಯರು ಎಲ್ಲೆಡೆಯಲ್ಲಿಯೂ ಸಂಕೋಲೆಗಳಿಂದ ಬಂಧಿತರಾಗಿದ್ದಾರೆ' ಎಂಬ ಘೋಷಣೆಯ ಮೂಲಕ ಸ್ವಾತಂತ್ರ್ಯದ ಪ್ರಾಧಾನ್ಯವನ್ನು ಸ್ಪಷ್ಟಪಡಿಸಿದನು.
- ಜನರು ಪರಮಾಧಿಕಾರಿಗಳಾಗಿದ್ದಾರೆಂದು ಘೋಷಿಸಿದನು.


**ಮೊಂಟೆಸ್ಕ್ಯೂ**

- ಪ್ರಜಾಪ್ರಭುತ್ವ ಮತ್ತು ರಿಪಬ್ಲಿಕನ್ ಆಡಳಿತೆಯನ್ನು ಪ್ರೋತ್ಸಾಹಿಸಿದನು.
- ಸರಕಾರದ ಜವಾಬ್ದಾರಿಗಳನ್ನು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಎಂಬೀ ಮೂರು ವಿಭಾಗಗಳಾಗಿ ವರ್ಗೀಕರಿಸಬೇಕು ಎಂದು ವಾದಿಸಿದನು.



## ಮೂರನೇ ಎಸ್ಟೇಟ್ ಮುನ್ನಡೆಯುತ್ತದೆ

ಫ್ರಾನ್ಸಿನ ಬೂರ್ಬನ್ ರಾಜರು, ಪುರೋಹಿತರು, ಪ್ರಭುಗಳು ಮಾಡುತ್ತಿದ್ದ ಆಡಂಬರದ ಜೀವನ, ದುಂದುವೆಚ್ಚ, ಯುದ್ಧಗಳು ಹಾಗೂ ನಿರಂತರವಾದ ಬರಗಾಲ ಮತ್ತು ಕೃಷಿನಾಶವು ಫ್ರಾನ್ಸಿನ ಆರ್ಥಿಕಸ್ಥಿತಿಯನ್ನು ಶೋಚನೀಯಗೊಳಿಸಿತು. ಅಮೇರಿಕಾದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಫ್ರಾನ್ಸಿನ ಆಡಳಿತಾಧಿಕಾರಿಗಳು ವಸಾಹತುಗಳಿಗೆ ಆರ್ಥಿಕ ಹಾಗೂ ಸೈನಿಕ ಸಹಾಯಗಳನ್ನು ನೀಡಿದುದು ಫ್ರಾನ್ಸಿನ ಆರ್ಥಿಕ ಬಿಕ್ಕಟ್ಟನ್ನು ಇನ್ನಷ್ಟು ತೀವ್ರಗೊಳಿಸಿತು. ಜನರ ಮೇಲೆ ಹೊಸ ತೆರಿಗೆಗಳನ್ನು ಹೊರಿಸುವುದಕ್ಕಾಗಿ 1789ರಲ್ಲಿ ಚಕ್ರವರ್ತಿಯಾದ ಹದಿನಾರನೇ ಲೂಯಿಯು ಫ್ರಾನ್ಸಿನ ಪಾರ್ಲಿಮೆಂಟಾದ 'ಸ್ಟೇಟ್ಸ್ ಜನರಲ್'ನ ಸಭೆ ಕರೆದನು. ಫ್ರೆಂಚ್ ಸಮಾಜದಂತೆಯೇ ಸ್ಟೇಟ್ಸ್ ಜನರಲ್‌ನಲ್ಲಿಯೂ ಮೂರು ಎಸ್ಟೇಟ್‌ಗಳಿದ್ದುವು. ಪ್ರತಿಯೊಂದು ಎಸ್ಟೇಟಿಗೂ ಒಂದೊಂದು ಮತ ಸಾಕೆಂದೂ ಪ್ರತಿಯೊಬ್ಬ ಸದಸ್ಯನಿಗೂ ಒಂದೊಂದು ಮತ ಬೇಡವೆಂದೂ ಮೊದಲ ಎರಡು ಎಸ್ಟೇಟುಗಳು ವಾದಿಸಿದುವು. ಆದರೆ 'ಕೋಮನ್ಸ್' ಎಂದು ಕರೆಯಲಾಗುತ್ತಿದ್ದ ರಾಜನನ್ನು ಬೆಂಬಲಿಸುವ ಮೂರನೇ ಎಸ್ಟೇಟಿನವರು ಮೂರೂ ಎಸ್ಟೇಟುಗಳ ಪ್ರತಿಯೊಬ್ಬ ಸದಸ್ಯನಿಗೂ ಒಂದೊಂದು ಮತ ಎಂಬ ಆಧಾರದಲ್ಲಿ ಮತದಾನದ ಹಕ್ಕನ್ನು ನೀಡಬೇಕೆಂಬ ಬೇಡಿಕೆಯನ್ನು ಮುಂದಿಟ್ಟರು.



ಸ್ಟೇಟ್ಸ್ ಜನರಲ್

ಮತದಾನದ ಹಕ್ಕಿನ ಕುರಿತಾದ ಭಿನ್ನಾಭಿಪ್ರಾಯಗಳು ಮುಂದುವರಿಯುತ್ತಿರುವಾಗಲೇ ಮೂರನೇ ಎಸ್ಟೇಟಿನ ಸದಸ್ಯರು ನಾವೇ ಫ್ರಾನ್ಸಿನ 'ರಾಷ್ಟ್ರೀಯ ಅಸೆಂಬ್ಲಿ' ಎಂದು ಘೋಷಿಸಿದರು. ಅವರು ಅಲ್ಲೇ ಸಮೀಪದಲ್ಲಿರುವ ಟೆನ್ನಿಸ್ ಆಟದ ಅಂಗಣದಲ್ಲಿ ಸಭೆ ಸೇರಿದರು. ಫ್ರಾನ್ಸಿಗಾಗಿ

ಪಟ್ಟಿಯಲ್ಲಿ ಕೊಟ್ಟಿರುವ ಪ್ರತಿಯೊಂದು ಎಸ್ಟೇಟಿನ ಸದಸ್ಯರ ಸಂಖ್ಯೆಯನ್ನು ಪರಿಶೀಲಿಸಿರಿ. ಮತದಾನಕ್ಕೆ ಸಂಬಂಧಿಸಿ ಮೂರು ಎಸ್ಟೇಟುಗಳ ಬೇಡಿಕೆ ಮತ್ತು ಸದಸ್ಯರ ಸಂಖ್ಯೆಯನ್ನು ಹೋಲಿಸಿ ಅವುಗಳೊಳಗಿನ ಸಂಬಂಧವನ್ನು ಗುರುತಿಸಿರಿ.

| ಸ್ಟೇಟ್ಸ್ ಜನರಲ್ | |
|---|---|
| ಒಂದನೇ ಎಸ್ಟೇಟ್ | 285 |
| ಎರಡನೇ ಎಸ್ಟೇಟ್ | 308 |
| ಮೂರನೇ ಎಸ್ಟೇಟ್ | 621 |

ನೂತನವಾದ ಒಂದು ಸಂವಿಧಾನವನ್ನು ರಚಿಸಿದ ಬಳಿಕ ಮಾತ್ರವೇ ನಾವು ಇಲ್ಲಿಂದ ತೆರಳುವುದೆಂದು ಅವರು ಪ್ರತಿಜ್ಞೆ ಮಾಡಿದರು. ಇದನ್ನು 'ಟೆನ್ನಿಸ್ ಅಂಗಣ ಪ್ರತಿಜ್ಞೆ' (The tennis court Oath) ಎಂದು ಕರೆಯುತ್ತಾರೆ. ಅನಂತರದ ಘಟನೆಗಳನ್ನು ಕೆಳಗೆ ಕೊಟ್ಟಿರುವ ಚಾರ್ಟಿನ ಸಹಾಯದಿಂದ ಚರ್ಚಿಸಿರಿ.

**1789 ಜುಲೈ 14** ಸ್ವಾತಂತ್ರ್ಯ, ಸಮಾನತೆ, ಸಹೋದರತೆ (Liberty, Equality & Fraternity) ಎಂಬ ಘೋಷಣೆಯನ್ನು ಮೊಳಗಿಸಿಕೊಂಡು ಕ್ರಾಂತಿಕಾರಿಗಳು ಬೂರ್ಬನ್ ಆಡಳಿತದ ಪ್ರತೀಕವಾಗಿದ್ದ ಬಾಸ್ಟಿಲ್ ಸೆರೆಮನೆಯನ್ನು ಕೆಡವಿದರು. ಈ ಘಟನೆಯನ್ನು ಫ್ರೆಂಚ್ ಕ್ರಾಂತಿಯ ಆರಂಭವಾಗಿ ಪರಿಗಣಿಸುತ್ತಾರೆ.

↓

**1789 ಆಗಸ್ಟ್ 12** ರಾಷ್ಟ್ರೀಯ ಅಸೆಂಬ್ಲಿಯು ಮಾನವ ಹಕ್ಕುಗಳ ಘೋಷಣೆಯನ್ನು ಅಂಗೀಕರಿಸಿತು.

↓

**1789 ಅಕ್ಟೋಬರ್** ಪ್ಯಾರಿಸ್ ನಗರದ ಸಾವಿರಾರು ಮಂದಿ ಮಹಿಳೆಯರು 'ಆಹಾರ ಬೇಕು' ಎಂಬ ಘೋಷಣೆಯನ್ನು ಮೊಳಗಿಸುತ್ತಾ ವರ್ಸಾಯಿ ಅರಮನೆಗೆ ಜಾಥಾ ನಡೆಸಿದರು.

↓

**1792 ಸೆಪ್ಟಂಬರ್** ನೂತನವಾಗಿ ರೂಪುಗೊಂಡ ಫ್ರಾನ್ಸಿನ ಸಂವಿಧಾನಕ್ಕೆ ಅನುಸಾರವಾಗಿ ಚುನಾಯಿತವಾದ ರಾಷ್ಟ್ರೀಯ ಸಭೆಯು ಫ್ರಾನ್ಸನ್ನು ಒಂದು ಗಣರಾಜ್ಯವಾಗಿ ಘೋಷಿಸಿತು.

## ಭೀಕರ ಆಡಳಿತ (Reign of Terror)


1793 ಜುಲೈಯಲ್ಲಿ ಫ್ರಾನ್ಸಿನಲ್ಲಿ ಆಂತರಿಕ ವಿಚಾರಗಳನ್ನು ನಿಯಂತ್ರಿಸುವುದಕ್ಕಾಗಿ ರೋಬಿಸ್ಪಿಯರಿನ ನೇತೃತ್ವದಲ್ಲಿ ಒಂದು ಸಾರ್ವಜನಿಕ ಸುರಕ್ಷಾ ಕಮಿಟಿಯನ್ನು ರೂಪಿಸಲಾಯಿತು. ಮಿರಾಬೋ, ಡಾನ್‌ಟನ್ ಮುಂತಾದವರು ಇದರ ಸದಸ್ಯರಾಗಿದ್ದರು. ತಮ್ಮ ಶತ್ರುಗಳೆಂದು ತೋಚಿದವರನ್ನು ಅವರು ಗಿಲ್ಲಟಿನ್ ಎಂಬ ಯಂತ್ರವನ್ನುಪಯೋಗಿಸಿ ನಿಷ್ಕರುಣೆಯಿಂದ ಕೊಂದರು. ಅನೇಕ ಪ್ರಭುಗಳು, ಪುರೋಹಿತರು ಇದಕ್ಕೆ ಬಲಿಯಾದರು. ಗಿಲ್ಲಟಿನ್‌ಗೆ ಬಲಿಯಾದವರಲ್ಲಿ ಹದಿನಾರನೇ ಲೂಯಿ ಹಾಗೂ ಆತನ ಮಡದಿ ಮೇರಿ ಅಂಟೊಯಿನಟ್‌ಳೂ ಒಳಗೊಂಡಿದ್ದರು. ಕೊನೆಯಲ್ಲಿ ರೋಬಿಸ್ಪಿಯರ್ ಕೂಡಾ ಗಿಲ್ಲಟಿನ್‌ಗೇ ಬಲಿಯಾದನು. 1794 ಜುಲೈ ವರೆಗೆ ಮುಂದುವರಿದ ಈ ಆಡಳಿತವನ್ನು ಭೀಕರ ಆಡಳಿತವೆಂದು ಕರೆಯುತ್ತಾರೆ.



ಗಿಲ್ಲಟಿನ್

ಫ್ರಾನ್ಸಿನ ಕ್ರಾಂತಿಯ ವಿವಿಧ ಘಟನೆಗಳನ್ನು ವಿಶ್ಲೇಷಿಸಿ ಸ್ವಾತಂತ್ರ್ಯ, ಸಮಾನತೆ, ಸಹೋದರತೆ ಎಂಬೀ ಗುರಿಯನ್ನು ತಲುಪಲು ಎಷ್ಟರಮಟ್ಟಿಗೆ ಸಾಧ್ಯವಾಗಿದೆಯೆಂದು ಅವಲೋಕಿಸಿರಿ.

## ಫ್ರಾನ್ಸಿನಿಂದ ಇತರೆಡೆಗಳಿಗೆ




*"ಫ್ರಾನ್ಸ್ ಸೀನುವಾಗ ಯುರೋಪಿನಾದ್ಯಂತ ಶೀತ ಹರಡುವುದು"*

ಫ್ರೆಂಚ್ ಕ್ರಾಂತಿಯ ಪ್ರಭಾವದ ಕುರಿತು ಆಸ್ಟ್ರಿಯಾದ ಆಡಳಿತಾಧಿಕಾರಿಯಾದ ಮೆಟರ್ನಿಕ್ ಹೇಳಿದ ಅಭಿಪ್ರಾಯವಾಗಿದೆ. ಅವರು ಹೀಗೆ ಅಭಿಪ್ರಾಯಪಡಲು ಕಾರಣವೇನು? ಫ್ರೆಂಚ್ ಕ್ರಾಂತಿಯ ಪ್ರಭಾವವನ್ನು ವಿಶದೀಕರಿಸುವ ಚಿತ್ರವನ್ನು ಗಮನಿಸಿರಿ.

### ಫ್ರಾನ್ಸಿನ ಕ್ರಾಂತಿ ಮತ್ತು ಭಾರತ

ಜಗತ್ತಿನಾದ್ಯಂತ ಪ್ರಭಾವ ಬೀರಿದ ಫ್ರೆಂಚ್ ಕ್ರಾಂತಿಯು ಮೈಸೂರಿನ ಆಡಳಿತಾಧಿಕಾರಿಯಾಗಿದ್ದ ಟಿಪ್ಪುಸುಲ್ತಾನನ ಮೇಲೂ ಪ್ರಭಾವ ಬೀರಿತು. ಫ್ರೆಂಚರೊಂದಿಗೆ ಒಪ್ಪಂದ ಮಾಡಿಕೊಂಡು ಬ್ರಿಟಿಷರೊಂದಿಗೆ ಹೋರಾಡುವುದು ಟಿಪ್ಪುವಿನ ತಂತ್ರವಾಗಿತ್ತು. ಪೌರ ಟಿಪ್ಪು (Citizen Tippu)ಎಂಬ ಪದವಿಯನ್ನು ಸ್ವೀಕರಿಸಿದ ಅವನು ಫ್ರೆಂಚ್ ಕ್ರಾಂತಿಯ ನೆನಪಿಗಾಗಿ ರಾಜಧಾನಿಯಾದ ಶ್ರೀರಂಗಪಟ್ಟಣದಲ್ಲಿ ಸ್ವಾತಂತ್ರ್ಯವೃಕ್ಷ (Tree of Liberty) ವನ್ನು ನೆಟ್ಟನು ಹಾಗೂ ಫ್ರೆಂಚ್ ಕ್ಲಬ್ಬಾದ ಜಾಕೋಬಿನ್‌ನಲ್ಲಿ ಸದಸ್ಯನಾದನು.




*ಮಾನವ ಹಕ್ಕುಗಳ ಘೋಷಣೆ*

**ಫ್ರಾನ್ಸಿನ ರಾಷ್ಟ್ರೀಯ ಅಸೆಂಬ್ಲಿಯು ಅಂಗೀಕರಿಸಿದ ಮಾನವ ಹಕ್ಕು ಘೋಷಣೆಯ ಕೆಲವು ವಿಷಯಗಳನ್ನು ಕೆಳಗೆ ನೀಡಲಾಗಿದೆ. ಇದನ್ನು ಓದಿ ಫ್ರೆಂಚ್ ಕ್ರಾಂತಿಯ ಉದ್ದೇಶಗಳು ಮತ್ತು ಘೋಷಣೆಗಳು ಎಷ್ಟರಮಟ್ಟಿಗೆ ಇದರಲ್ಲಿ ಪ್ರತಿಫಲಿಸುತ್ತವೆ ಎಂಬುದರ ಕುರಿತು ಚರ್ಚಿಸಿರಿ.**

ಫ್ರೆಂಚ್ ಕ್ರಾಂತಿಯ ಗುರಿಗಳು ಮತ್ತು ಪರಿಣಾಮಗಳನ್ನು ವಿಶ್ಲೇಷಿಸಿರಿ.



## ಫ್ರೆಂಚ್ ಕ್ರಾಂತಿ ಮತ್ತು ನೆಪೋಲಿಯನ್

ಮಹತ್ತರವಾದ ಗುರಿಗಳನ್ನಿಟ್ಟುಕೊಂಡು ಕ್ರಾಂತಿ ನಡೆಸಿದ ಫ್ರೆಂಚ್ ಜನತೆಯು ಸ್ವಲ್ಪ ಕಾಲ ನೆಪೋಲಿಯನ್ ಬೋನಾಪಾರ್ಟೆಯ ಏಕಾಧಿಪತ್ಯ ಆಡಳಿತಕ್ಕೆ ಒಳಗಾಗಬೇಕಾಯಿತು. ಫ್ರೆಂಚ್ ಕ್ರಾಂತಿಯ ನಂತರ ಬ್ರಿಟನಿನ ನೇತೃತ್ವದಲ್ಲಿ ಫ್ರಾನ್ಸಿಗೆದುರಾಗಿ ರಚಿಸಿದ ಯುರೋಪಿಯನ್ ಶಕ್ತಿಗಳನ್ನು ಎದುರಿಸಿ ವಿಜಯ ಹೊಂದಲು ಪ್ರಧಾನ ಪಾತ್ರವಹಿಸಿದ ನೆಪೋಲಿಯನ್ 1799ರಲ್ಲಿ ಫ್ರಾನ್ಸಿನ ಅಧಿಕಾರವನ್ನು ವಶಪಡಿಸಿಕೊಂಡನು. ಒಬ್ಬ ಸರ್ವಾಧಿಕಾರಿಯಾಗಿದ್ದರೂ ಹಲವಾರು ಸುಧಾರಣೆಗಳನ್ನು ಅವನು ಜಾರಿಗೆ ತಂದನು. ಫ್ರೆಂಚ್ ಕ್ರಾಂತಿ ಮುಂದಿರಿಸಿದ ಕೆಲವು ಆಶಯಗಳು ಮತ್ತು ಗುರಿಗಳು ಈ ಸುಧಾರಣೆಗಳಿಗೆ ಪ್ರಚೋದನೆ ನೀಡಿದುವು. ಅವು ಯಾವುವೆಂದು ನೋಡೋಣ.

### ರುಸೋ ಮತ್ತು ಮಾನವ ಹಕ್ಕುಗಳ ಘೋಷಣೆ



ಫ್ರಾನ್ಸಿನ ಚಿಂತಕನಾದ ರುಸ್ಸೋವಿನ ಆಶಯಗಳು ರಾಷ್ಟ್ರೀಯ ಅಸೆಂಬ್ಲಿಯು ಜಾರಿಗೊಳಿಸಿದ ಮಾನವ ಹಕ್ಕುಗಳ ಘೋಷಣೆಯಲ್ಲಿ ಪ್ರತಿಫಲಿಸಿದೆ. ಸೋಶಿಯಲ್ ಕೋನ್ಟ್ರಾಕ್ಟ್ (Social Contract) ಎಂಬುದು ಅವರ ಪ್ರಸಿದ್ಧ ಗ್ರಂಥವಾಗಿದೆ. ಆಡಳಿತ ಒಕ್ಕೂಟವು ಆಳುವವರ ಮತ್ತು ಆಳಿಸಿಕೊಳ್ಳುವವರ ನಡುವಿನ ಸಾಮಾಜಿಕ ಒಪ್ಪಂದ ವಾಗಿದೆಯೆಂಬುದು ಅವರ ಅಭಿಪ್ರಾಯ.

- ಕೃಷಿಕರಿಗೆ ಕೃಷಿ ಭೂಮಿಯ ಹಕ್ಕು ನೀಡಲಾಯಿತು.
- ಸಾರ್ವಜನಿಕ ಸಾಲವನ್ನು ಇಲ್ಲದಂತೆ ಮಾಡಲು ಸಿಂಕಿಂಗ್ ಫೆಂಡ್ ಎಂಬ ಹೆಸರಿನಲ್ಲಿ ಒಂದು ಪ್ರತ್ಯೇಕ ಫಂಡನ್ನು ರೂಪೀಕರಿಸಲಾಯಿತು.
- ಸಾರಿಗೆ ಸೌಕರ್ಯವನ್ನು ಒದಗಿಸಲು ಹಲವಾರು ರಸ್ತೆಗಳನ್ನು ನಿರ್ಮಿಸಲಾಯಿತು.



ನೆಪೋಲಿಯನ್

- ಧರ್ಮಗುರು(ಪುರೋಹಿತರು)ಗಳ ಮೇಲೆ ನಿಯಂತ್ರಣ ಹೇರಲಾಯಿತು.
- ಹಣಕಾಸು ವ್ಯವಸ್ಥೆಯನ್ನು ನಿಯಂತ್ರಿಸಲು ಬೇಂಕ್ ಓಫ್ ಫ್ರಾನ್ಸ್‌ನ್ನು ಸ್ಥಾಪಿಸಲಾಯಿತು.
- ಅಸ್ತಿತ್ವದಲ್ಲಿದ್ದ ಕಾನೂನುಗಳನ್ನು ಕ್ರೋಡೀಕರಿಸಿ ಒಂದು ಕಾನೂನು ಸಂಹಿತೆಯನ್ನು ರೂಪೀಕರಿಸಲಾಯಿತು.

ನೆಪೋಲಿಯನ್ನನ ಕಾಲದಲ್ಲಿ ಫ್ರಾನ್ಸಿನಲ್ಲಿ ರಾಷ್ಟ್ರೀಯ ಭಾವನೆಗಳು ನೆಲೆನಿಂತವು. ಯುರೋಪಿನ ದೇಶಗಳನ್ನು ಒಂದರ ಹಿಂದೆ ಇನ್ನೊಂದರಂತೆ ಆಕ್ರಮಿಸಿ ನೆಪೋಲಿಯನ್‌ನ ಸುಧಾರಣೆಗಳು ಯುರೋಪಿನೆಲ್ಲೆಡೆ ವ್ಯಾಪಿಸುತ್ತವೆ ಎಂಬ ಭಯವು ಇತರ ಯುರೋಪಿಯನ್ ರಾಷ್ಟ್ರಗಳಿಗೆ ಉಂಟಾಯಿತು. ಇಂಗ್ಲೆಂಡಿನ ನೇತೃತ್ವದಲ್ಲಿ ಯುರೋಪಿನ ದೇಶಗಳು ಒಟ್ಟುಗೂಡಿದವು. ಅವರು ಭಯಗೊಂಡುದು ನೆಪೋಲಿಯನಿಗೆ ಅಲ್ಲ, ಬದಲಾಗಿ ಫ್ರೆಂಚ್ ಕ್ರಾಂತಿಯ ಆಶಯಗಳಿಗಾಗಿತ್ತು. 1815ರಲ್ಲಿ ನಡೆದ ವಾಟರ್ಲೂ ಕದನದಲ್ಲಿ ಯುರೋಪಿಯನ್ ಮೈತ್ರಿ ಕೂಟವು ನಡೆಸಿದ ಆಕ್ರಮಣದಲ್ಲಿ ನೆಪೋಲಿಯನ್ ಸೋತು ಅಧಿಕಾರವನ್ನು ಕಳೆದುಕೊಂಡನು.



ನೆಪೋಲಿಯನ್ನನ ಸುಧಾರಣೆಗಳು ಮತ್ತು ನೀತಿಗಳನ್ನು ಪರಿಶೀಲಿಸಿ ಫ್ರೆಂಚ್ ಕ್ರಾಂತಿಯ ಯಾವೆಲ್ಲ ಆಶಯಗಳು ಇದರಲ್ಲಿ ಪ್ರತಿಫಲಿಸುತ್ತವೆ ಎಂದು ಕಂಡುಹಿಡಿದು ಒಂದು ಪಟ್ಟಿ ತಯಾರಿಸಿರಿ.

| ಫ್ರೆಂಚ್ ಕ್ರಾಂತಿಯ ಆಶಯಗಳು | ನೆಪೋಲಿಯನ್‌ನ ಸುಧಾರಣೆಗಳು ಮತ್ತು ನೀತಿಗಳು |
|---|---|
| ♦ ಮಧ್ಯಮವರ್ಗದ ಬೆಳವಣಿಗೆ | ♦ |
| ♦ ಫ್ಯೂಡಲಿಸಂ ಅಂತ್ಯ | ♦ |
| ♦ ರಾಷ್ಟ್ರೀಯತೆ | ♦ |

# ಲ್ಯಾಟಿನ್ ಅಮೇರಿಕಾದ ಕ್ರಾಂತಿಗಳು

"ಇದಾಗಿತ್ತು ಮನೆ. ಅದು ಸ್ಥಳ. ಜೋಳದ ತೆನೆಗಳು ಎತ್ತರಕ್ಕೆ ಬೆಳೆದು ನಿಂತದ್ದು ಇಲ್ಲೇ. ಇಲ್ಲೆ ಅವುಗಳು ಕೆಂಪಾದ ಹಿಮಪಾತದಂತೆ ಮತ್ತೆ ಮತ್ತೆ ಕುಸಿದು ಬಿದ್ದದ್ದು. ಚಮರಿ ಮೃಗದಿಂದ ಚಿನ್ನದ ನಾಣ್ಯಗಳು ಸೃಷ್ಟಿಸಲ್ಪಟ್ಟದ್ದು ಇಲ್ಲೇ ಆಗಿದೆ. ಕಾಮಿನಿಯರಿಗೂ ಸ್ಮಶಾನಗಳಿಗೂ ಸಾಮ್ರಾಟನಿಗೂ ತಾಯಂದಿರಿಗೂ ಪ್ರಾರ್ಥನೆಗಳಿಗೂ ಹೋರಾಟಗಾರರಿಗೂ ಬಟ್ಟೆಹೊಲಿಸಲು. ಮಾಚ್ಚುಪಿಕ್ಚ್ಯು, ನೀನು ಗುಂಡಿತೋಡಿ ಮುಚ್ಚಿರುವ ಗುಲಾಮನನ್ನು ನನಗೆ ನೀಡು"

ಮಾಚ್ಚುಪಿಕ್ಕೂವಿನ ಹಿರಿಮೆ – ಪಾಬ್ಲೋ ನೆರುದ

ದಕ್ಷಿಣ ಅಮೇರಿಕಾದ ಪ್ರಾಚೀನ ನಾಗರಿಕತೆಗಳ ಕೇಂದ್ರವಾದ ಮಾಚ್ಚುಪಿಕ್ಕೂವಿನಲ್ಲಿ ಕಂಡ ದೃಶ್ಯಗಳನ್ನು ಲೇಟಿನ್ ಅಮೇರಿಕಾದ ಕವಿ ಪಾಬ್ಲೊ ನೆರುದ ವಿವರಿಸುತ್ತಾನೆ. ಸ್ಪೈನಿನ ವಸಾಹತಾಗಿದ್ದ ಈ ಪ್ರದೇಶದ ಜನಜೀವನವನ್ನು ವಸಾಹತುಶಾಹಿ ಆಡಳಿತವು ಹೇಗೆ ಬಾಧಿಸಿರಬಹುದೆಂಬುದನ್ನು ಇಲ್ಲಿ ಸೂಚಿಸಲಾಗಿದೆ. ಈ ಮಾಹಿತಿಗಳಿಂದ ಯಾವೆಲ್ಲ ವಿಷಯಗಳನ್ನು ತಿಳಿಯಬಹುದು.

- ಸಂಪತ್ತಿನ ಸಮೃದ್ಧಿ
- ಜೋಳದ ಕೃಷಿಯಿತ್ತು
- ಕುರಿಗಳನ್ನು ಸಾಕುತ್ತಿದ್ದರು
- ವ್ಯಾಪಾರದ ಮೂಲಕ ಸಂಪತ್ತುಗಳಿಸಿದರು


ಮಾಚ್ಚುಪಿಕ್ಕೂ– ಪೆರು

ಲೇಟಿನ್ ಅಮೇರಿಕಾದ ಜನರ ಸಂಪತ್ತನ್ನು ಲೂಟಿ ಮಾಡಿದ ಯುರೋಪಿಯನ್ನರು ಅವರ ನಾಗರಿಕತೆಯನ್ನು ನಾಶಗೊಳಿಸಿದರು. ಹೆಚ್ಚಿನ ಲೇಟಿನ್ ಅಮೇರಿಕಾ ದೇಶಗಳ ಇಂದಿನ ಔದ್ಯೋಗಿಕ ಭಾಷೆ ಸ್ಪಾನಿಷ್. ಒಂದು ಯುರೋಪಿಯನ್ ಭಾಷೆ ಲೇಟಿನ್ ಅಮೇರಿಕಾದಲ್ಲಿ ಇಷ್ಟು ಪ್ರಸಿದ್ಧವಾಗಲು ಕಾರಣವೇನು?

ಲೇಟಿನ್ ಅಮೇರಿಕಾವನ್ನು ವಸಾಹತನ್ನಾಗಿ ಮಾಡಿದ ಸ್ಪಾನಿಷರು ಮತ್ತು ಪೋರ್ಚುಗೀಸರು ಅವರ ಭಾಷೆ, ಮತ ಮತ್ತು ಆಚಾರ ವಿಚಾರಗಳನ್ನು ಅವರ ಮೇಲೆ ಹೇರಿದರು. ಸ್ಪೈನಿನ ಮಾದರಿಯಲ್ಲೇ ದೇವಾಲಯ

ಹಾಗೂ ಮನೆಗಳನ್ನು ನಿರ್ಮಿಸಿದರು. ಸ್ಪಾನಿಷ್ ರೀತಿಯಲ್ಲಿ ಶಿಕ್ಷಣ ನೀಡಲು ಅನೇಕ ವಿದ್ಯಾಲಯಗಳನ್ನು ಸ್ಥಾಪಿಸಿದರು. ಕೃಷಿ ಬೆಳೆಗಳನ್ನೂ ಕೃಷಿ ವಿಧಾನಗಳನ್ನೂ ಅಲ್ಲಿ ಜಾರಿಗೊಳಿಸಿದರು. ಯುರೋಪಿಯನ್ನರ ಹಲವಾರು ರೋಗಗಳು ಲೇಟಿನ್ ಅಮೇರಿಕಾದ ಜನರಲ್ಲಿ ಹರಡಿದವು. ವಸಾಹತಿನ ಜನರೊಂದಿಗೆ ಎಲ್ಲಾ ರಂಗಗಳಲ್ಲಿ ವಂಶಶ್ರೇಷ್ಠತೆಯನ್ನು ಎತ್ತಿ ಹಿಡಿದರು. ಲೇಟಿನ್ ಅಮೇರಿಕಾದ ಜನತೆಯ ಸಂಪತ್ತನ್ನು ಕೊಳ್ಳೆಹೊಡೆದವರು ಕಾಲನಿವಾಸಿಗಳನ್ನು ಗುಲಾಮರಂತೆ ದುಡಿಸಿದರು. ಜೋಸೇಡಿ ಸಾನ್ ಮಾರ್ಟಿನ್, ಫ್ರಾನ್ಸಿಸ್‌ಕೋ ಮಿರಾಡಾ, ಸೈಮನ್ ಬೊಲಿವರ್ ಮೊದಲಾದವರ ನೇತೃತ್ವದಲ್ಲಿ ನಡೆದ ಹೋರಾಟದ ಮೂಲಕ ಲ್ಯಾಟಿನ್ ಅಮೇರಿಕಾದ ದೇಶಗಳು ಸ್ವತಂತ್ರಗೊಳ್ಳತೊಡಗಿದವು.

## ರಷ್ಯಾ ಕ್ರಾಂತಿ

> *ನಾವು ಕಾರ್ಮಿಕರು ಮಕ್ಕಳ ಆಟದ ಸಾಮಗ್ರಿಗಳಿಂದ ತೊಡಗಿ ಬೃಹತ್ ಯಂತ್ರಗಳನ್ನು ನಿರ್ಮಿಸುವುದು ನಮ್ಮ ಸ್ವಂತ ಶ್ರಮದಿಂದಾಗಿದೆ. ಆದರೆ ಈ ಸಂದರ್ಭದಲ್ಲಿ ನಾವು ನಮ್ಮ ಸ್ವಾಭಿಮಾನಕ್ಕಾಗಿ ಹೋರಾಡುವ ಹಕ್ಕು ಕೂಡ ನಿಷೇಧಿಸಲ್ಪಟ್ಟವರಾಗಿದ್ದೇವೆ. ನಮ್ಮನ್ನು ಎಲ್ಲರೂ ಅವರವರ ಸ್ವ-ಹಿತ ಕಾಪಾಡಲು ಬಳಸುತ್ತಾರೆ. ಕಾಲ ಕಳೆದಂತೆ ಎಲ್ಲಾ ಅಧಿಕಾರಗಳು ನಮ್ಮ ಕೈ ಸೇರಬೇಕೆಂದು ನಾವು ಬಯಸುತ್ತೇವೆ. ನಮ್ಮ ಘೋಷಣೆಗಳು ಸರಳವಾಗಿವೆ. ಖಾಸಗಿ ಸೊತ್ತು ಇಲ್ಲದಾಗಲಿ! ಎಲ್ಲಾ ಉತ್ಪಾದನ ಘಟಕಗಳೂ ಜನರದ್ದಾಗಲಿ! ಪರಿಶ್ರಮ ಎಲ್ಲರ ಜವಾಬ್ದಾರಿ! ನಾವು ಅಶಾಂತಿ ಸೃಷ್ಟಿಸುವವರಲ್ಲವೆಂಬುದು ನಿಮಗೆ ಈಗ ಅರ್ಥವಾಗಿರಬಹುದು... ನಾವು ಕ್ರಾಂತಿಕಾರಿಗಳು. ಒಂದು ವರ್ಗದ ಜನ ಆಜ್ಞೆ ನೀಡಲು ಮತ್ತು ಇನ್ನೊಂದು ವರ್ಗದ ಜನ ಕೆಲಸಮಾಡಲು ಎಂಬ ಪರಿಸ್ಥಿತಿ ಇರುವಷ್ಟು ಕಾಲ ನಾವು ಕ್ರಾಂತಿಕಾರಿಗಳಾಗಿ ಮುಂದುವರಿಯುವೆವು.*
>
> *ಅಮ್ಮ – ಮಾಕ್ಸಿಂ ಗೋರ್ಕಿ*

ಇವು ಮಾಕ್ಸಿಂ ಗೋರ್ಕಿ ಎಂಬ ಪ್ರಸಿದ್ಧ ರಷ್ಯನ್ ಸಾಹಿತಿಯ, 'ಅಮ್ಮ' ಎಂಬ ಕಥಾಪಾತ್ರದ ಮಾತುಗಳಾಗಿವೆ. ಇಪ್ಪತ್ತನೇ ಶತಮಾನದ ಆರಂಭಕಾಲದ ರಷ್ಯಾದ ಸ್ಥಿತಿಗತಿಗಳು ಇದರಲ್ಲಿ ಪ್ರತಿಫಲಿಸಿದೆ. ಆ ಕಾಲದಲ್ಲಿ ರಷ್ಯಾದ ಕಾರ್ಮಿಕರು ಹಾಗೂ ಕೃಷಿಕರು ಅನುಭವಿಸುತ್ತಿದ್ದ ಕಷ್ಟಗಳು ಮತ್ತು ಅವರ ಗುರಿಗಳನ್ನು ಇಲ್ಲಿ ಕಾಣಬಹುದು. ಆ ಕಾಲದ ರಷ್ಯಾದ ಸಮಾಜದ ಕುರಿತು ಯಾವೆಲ್ಲಾ ವಿಷಯಗಳನ್ನೂ ಇದರಿಂದ ತಿಳಿದುಕೊಳ್ಳಬಹುದು?

- ಖಾಸಗಿ ಸೊತ್ತು ಸಂಪ್ರದಾಯವನ್ನು ಕೊನೆಗಾಣಿಸಬೇಕು.
- ಎಲ್ಲರೂ ದುಡಿಯಬೇಕು.
- 

ಈ ರೀತಿಯ ಬೇಡಿಕೆಗಳನ್ನಿಡಲು ಅವರನ್ನು ಪ್ರೇರೇಪಿಸಿದ ಘಟಕಗಳು ಯಾವುವು?

- ರಷ್ಯಾವನ್ನು ಆಳಿದ ಝಾರ್ ಚಕ್ರವರ್ತಿಗಳ ಸರ್ವಾಧಿಕಾರದಿಂದಾಗಿ ಕೃಷಿಕರು ಮತ್ತು ಕಾರ್ಖಾನೆಯ ಕಾರ್ಮಿಕರು ಕಷ್ಟದ ಜೀವನವನ್ನು ನಡೆಸುತ್ತಿದ್ದರು.
- ರಷ್ಯಾದಲ್ಲಿ ಕೃಷಿರಂಗದಲ್ಲುಂಟಾದ ಉತ್ಪಾದನೆಯ ಕುಸಿತವು ಕೃಷಿಕರ ಆದಾಯವನ್ನು ಬಾಧಿಸಿತು. ಇದಲ್ಲದೆ ಕಷ್ಟಗಳನ್ನು ಅನುಭವಿಸುತ್ತಿದ್ದ ಅವರು ಹೆಚ್ಚಿನ ತೆರಿಗೆಯನ್ನು ಕಟ್ಟಬೇಕಿತ್ತು.

### ಬ್ಯಾಟಲ್‌ಶಿಪ್ ಪೊಟ್ಟಂಕೀನ್

ಇದು ರಷ್ಯಾದ ಚಲನಚಿತ್ರ ನಿರ್ಮಾಪಕನಾದ ಸರ್ಗಿ ಐಸನ್‌ಸ್ಟೀನ್ ನಿರ್ಮಿಸಿದ ಪ್ರಸಿದ್ಧ ಚಲನಚಿತ್ರವಾಗಿದೆ. ಝಾರ್ ಚಕ್ರವರ್ತಿಗಳ ಆಡಳಿತ ಕಾಲದ ಒಂದು ನಿಜವಾದ ಘಟನೆಯನ್ನು ಆಧರಿಸಿ ಈ ಚಲನಚಿತ್ರವು ರೂಪುಗೊಂಡಿದೆ. ಇದು ಕಪ್ಪು ಸಮುದ್ರದಲ್ಲಿ ರಷ್ಯಾದ ಯುದ್ಧ ಹಡಗನ್ನು ಪೊಟ್ಟಂಕೀನ್‌ನ ಅಸಂತೃಪ್ತ ನಾವಿಕರು ನಡೆಸಿದ ಒಂದು ದಂಗೆಯನ್ನು ರಾಜಕೀಯ ಕ್ರಾಂತಿಯಾಗಿ ಚಿತ್ರಿಸಿದ ಚಲನಚಿತ್ರವಾಗಿದೆ. ಜೋನ್‌ರೀಡ್‌ನ "ಲೋಕವನ್ನು ನಡುಗಿಸಿದ ಹತ್ತು ದಿನಗಳು" ಎಂಬ ಪುಸ್ತಕದ ಕಥೆಯನ್ನು ಆಧರಿಸಿ ಸೆರ್ಗಿ ಐಸನ್‌ಸ್ಟಿನ್ ಈ ಚಲನಚಿತ್ರವನ್ನು ನಿರ್ಮಿಸಿದ್ದಾನೆ.


- ಧಾರಾಳ ಪ್ರಾಕೃತಿಕ ಸಂಪತ್ತು ಲಭ್ಯವಿದ್ದರೂ ಕೈಗಾರಿಕೆಗಳಲ್ಲಿನ ಉತ್ಪಾದನೆಯು ನಗಣ್ಯವಾಗಿತ್ತು. ಇರುವ ಕೈಗಾರಿಕೆಗಳನ್ನು ವಿದೇಶೀಯರು ನಿಯಂತ್ರಿಸುತ್ತಿದ್ದರು.


ರಷ್ಯಾದ ಝಾರ್ ಚಕ್ರವರ್ತಿಗಳ ಸ್ವೇಚ್ಛಾಧಿಪತ್ಯ ಆಡಳಿತವು ರಷ್ಯಾದ ಕ್ರಾಂತಿಗೆ ಕಾರಣವಾಯಿತು. ಚರ್ಚಿಸಿರಿ.


ಮ್ಯಾಕ್ಸಿಂ ಗೋರ್ಕಿ, ಲಿಯೋ ಟಾಲ್‌ಸ್ಟಾಯ್, ಇವಾನ್ ತುರ್ಗನೇವ್, ಆಂಟನ್ ಚೆಕೋವ್ ಮೊದಲಾದ ಸಾಹಿತಿಗಳು ತಮ್ಮ ಕೃತಿಗಳಲ್ಲಿ ಕೃಷಿಕರ ಮತ್ತು ಕಾರ್ಮಿಕರ ಕಷ್ಟದ ಜೀವನದ ಕುರಿತು ಬರೆದರು. ಕಾರ್ಲ್ ಮಾರ್ಕ್ಸ್, ಫ್ರೆಡರಿಕ್ ಏಂಜಲ್ಸ್ ಬರೆದ ಮಾರ್ಕ್ಸಿಸ್ಟ್ ಸಿದ್ಧಾಂತಗಳು ಕಾರ್ಮಿಕರನ್ನು ಕ್ರಾಂತಿಗೆ ಪ್ರೇರೇಪಿಸಿದುವು. ಮಾಲಕರು ನಿಯಂತ್ರಿಸುವ ಉತ್ಪಾದನ ವ್ಯವಸ್ಥೆಯ ಬದಲು ಕಾರ್ಮಿಕರ ನೇತೃತ್ವದ ಒಂದು ವ್ಯವಸ್ಥೆಯನ್ನು ಸ್ಥಾಪಿಸಲು ಅವರು ಉದ್ದೇಶಿಸಿದರು.

ಕಾರ್ಮಿಕರು ಅನುಭವಿಸುತ್ತಿದ್ದ ಕಷ್ಟಗಳಿಗೆ ಪರಿಹಾರವನ್ನು ಕಂಡುಹುಡುಕಲು ಕಾರ್ಮಿಕ ಸಂಘಗಳನ್ನು ರೂಪಿಸಿದರು. ಮಾರ್ಕ್ಸಿಸ್ಟ್ ಆಶಯಗಳನ್ನೊಳಗೊಂಡ 'ಸೋಷಿಯಲ್ ಡೆಮೋಕ್ರೆಟಿಕ್ ವರ್ಕರ್ಸ್ ಪಾರ್ಟಿ'ಯು ರೂಪುಗೊಂಡಿತು. ಮುಂದೆ ಈ ಪಕ್ಷವು ಮೆನ್ಶೆವಿಕ್ (ಅಲ್ಪಸಂಖ್ಯಾತ) ಮತ್ತು ಬೊಲ್ಶೆವಿಕ್ (ಬಹುಸಂಖ್ಯಾತ) ಎಂದು ಎರಡಾಗಿ ವಿಭಾಗಿಸಲ್ಪಟ್ಟಿತು. ಲೆನಿನ್, ಟ್ರೋಟ್‌ಸ್ಕಿ ಮೊದಲಾದವರು 'ಬೊಲ್ಶೆವಿಕ್' ಪಕ್ಷದ ನೇತೃತ್ವ ವಹಿಸಿದರೆ ಅಲೆಕ್ಸಾಂಡರ್ ಕರೆನ್ಸ್ಕಿಯು 'ಮೆನ್ಶೆವಿಕ್' ಪಕ್ಷದ ನೇತೃತ್ವವನ್ನು ವಹಿಸಿದರು.


ಮ್ಯಾಕ್ಸಿಂ ಗೋರ್ಕಿ


ಲಿಯೋ ಟಾಲ್‌ಸ್ಟಾಯ್


ಕಾರ್ಲ್ ಮಾರ್ಕ್ಸ್


ಫ್ರೆಡರಿಕ್ ಏಂಜಲ್ಸ್

1905ರ ರಷ್ಯಾ-ಜಪಾನ್ ಯುದ್ಧದಲ್ಲಿ ರಷ್ಯಾದ ಪರಾಜಯವು ಪರಿಸ್ಥಿತಿಯನ್ನು ಹದಗೆಡಿಸಿತು. ರಾಜಕೀಯ ಹಕ್ಕುಗಳು ಮತ್ತು ಆರ್ಥಿಕ ಸುಧಾರಣೆಗಳನ್ನು ಆಗ್ರಹಿಸಿ ಕಾರ್ಮಿಕರು ಪೆಟ್ರೋಗ್ರೇಡ್ ಎಂಬ ಪಟ್ಟಣದಲ್ಲಿ 1905 ಜನವರಿ 9ರಂದು ರ್‍ಯಾಲಿ ನಡೆಸಿದರು. ಸೈನ್ಯವು ಇದರ ಮೇಲೆ ಗೋಲಿಬಾರು ನಡೆಸಿತು. ನೂರಾರು ಕಾರ್ಮಿಕರು ಹತರಾದರು. ಈ ಘಟನೆಯನ್ನು 'ರಕ್ತಸಿಕ್ತ ರವಿವಾರ' (Bloody Sunday) ಎಂದು ಕರೆಯುತ್ತಾರೆ. ನಂತರದ ದಿನಗಳಲ್ಲಿ ಹೋರಾಟ ನಡೆಸಲು ಕಾರ್ಮಿಕ ಸಂಘಗಳು ರಷ್ಯಾದಾದ್ಯಂತ ರೂಪಿಸಲ್ಪಟ್ಟವು. ಈ ಸಂಘಗಳನ್ನು ಸೋವಿಯಟ್‌ಗಳೆನ್ನುತ್ತಾರೆ. ಹೋರಾಟವು ತೀವ್ರ ಸ್ವರೂಪ ಪಡೆದಾಗ ರಷ್ಯಾದ ಪಾರ್ಲಿಮೆಂಟಾದ

'ಡ್ಯೂಮಾ'ವನ್ನು ರೂಪೀಕರಿಸಲು ಚಕ್ರವರ್ತಿಯು ನಿರ್ಬಂಧಿತನಾದನು. 1914ರಲ್ಲಿ ಒಂದನೇ ಜಾಗತಿಕ ಯುದ್ಧವು ಪ್ರಾರಂಭವಾದಾಗ ಪಾರ್ಲಿಮೆಂಟಾದ ಡ್ಯೂಮಾವು ನೀಡಿದ ಸಲಹೆಯನ್ನು ತಿರಸ್ಕರಿಸಿ ಚಕ್ರವರ್ತಿಯಾದ ಎರಡನೇ ನಿಕೋಲಸ್ ಯುದ್ಧದಲ್ಲಿ ಪಾಲ್ಗೊಳ್ಳಲು ತೀರ್ಮಾನಿಸಿದನು. ಈ ಯುದ್ಧದಲ್ಲಿ ಅನೇಕ ಸೈನಿಕರು ಹತರಾದರು. 1917ರಲ್ಲಿ ರಷ್ಯಾದಲ್ಲಿ ಆಹಾರದ ಅಭಾವ ಉಂಟಾಯಿತು. ಮಾರ್ಚ್ 8ರಂದು ರಷ್ಯಾದ ಲಕ್ಷಗಟ್ಟಲೆ ಮಹಿಳೆಯರು ಒಟ್ಟುಗೂಡಿ ಆಹಾರಕ್ಕಾಗಿ ರಸ್ತೆಗಿಳಿದರು. ಪೆಟ್ರೋಗ್ರೇಡ್‌ನಲ್ಲಿ ಕಾರ್ಮಿಕರು ಪ್ರತಿಭಟನೆ ನಡೆಸಿದರು. ಆರಂಭದ ದಿನಗಳಲ್ಲಿ ಸೈನಿಕರು ಇವರನ್ನು ಎದುರಿಸಿದರೂ ನಂತರ ಅವರೂ ಪ್ರತಿಭಟನೆಗಳಲ್ಲಿ ಪಾಲ್ಗೊಂಡರು. ಒಂದನೇ ಜಾಗತಿಕ ಯುದ್ಧದಲ್ಲಿ ಅವರು ಅನುಭವಿಸಿದ ಕಷ್ಟಗಳು ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವಂತೆ ಅವರನ್ನು ಪ್ರೇರೇಪಿಸಿತು. ಕಾರ್ಮಿಕರು ಪೆಟ್ರೋಗ್ರೇಡ್ ನಗರವನ್ನು ವಶಪಡಿಸಿಕೊಂಡರು. ಇದರಿಂದಾಗಿ ಎರಡನೇ ನಿಕೋಲಸ್ ಅಧಿಕಾರವನ್ನು ತ್ಯಜಿಸಿದನು. ರಷ್ಯಾದಲ್ಲಿ ಮೆನ್ಶೆವಿಕ್ ನೇತಾರನಾದ ಅಲೆಕ್ಸಾಂಡರ್ ಕರೆನ್ಸ್ಕಿಯ ನೇತೃತ್ವದಲ್ಲಿ ಒಂದು ತಾತ್ಕಾಲಿಕ ಸರಕಾರವು ರೂಪುಗೊಂಡಿತು. ಇದನ್ನು 'ಫೆಬ್ರವರಿ ಕ್ರಾಂತಿ' ಎಂದು ಕರೆಯುತ್ತಾರೆ. (ರಷ್ಯನ್ ಕ್ಯಾಲೆಂಡರ್ ಅಂತಾರಾಷ್ಟ್ರೀಯ ಕ್ಯಾಲೆಂಡರಿಗಿಂತ ಒಂದು ತಿಂಗಳು ಹಿಂದೆ ಇದ್ದುದರಿಂದ ಮಾರ್ಚ್‌ನಲ್ಲಿ ನಡೆದ ಕ್ರಾಂತಿಯನ್ನು ಫೆಬ್ರವರಿ ಕ್ರಾಂತಿ ಎಂದು ಕರೆದರು).

**ಮಾರ್ಕ್ಸಿಸಂ**

ಮಾರ್ಕ್ಸಿಸಂ ಎಂಬುದು ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡರಿಕ್ ಏಂಜಲ್ಸ್ ಒಟ್ಟು ಸೇರಿ ರೂಪಿಸಿದ ಆಶಯ ಸಂಹಿತೆಯಾಗಿದೆ. ಒಂದು ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಉತ್ಪಾದನ ರೀತಿಯು ಆ ಸಮಾಜದ ಬದಲಾವಣೆಗೆ ಆಧಾರ ಎನ್ನುವುದು ಇದರ ಆಶಯವಾಗಿದೆ. ಉತ್ಪಾದನೆಯ ಮೂಲಾಧಾರ ಕಾರ್ಮಿಕರಾಗಿದ್ದಾರೆ. ಆದುದರಿಂದ ಕಾರ್ಮಿಕ ವರ್ಗದ ಸರ್ವಾಧಿಪತ್ಯಕ್ಕಾಗಿ ಕಾರ್ಯ ನಿರ್ವಹಿಸಬೇಕೆಂದು ಅವರು ಆಹ್ವಾನವನ್ನಿತ್ತರು.

ಅಂತಾರಾಷ್ಟ್ರೀಯ ಮತ್ತು ರಷ್ಯನ್ ಕ್ಯಾಲಂಡರ್ ಒಳಗೊಂಡತೆ ಒಂದು ಪ್ರಸೆಂಟೇಷನ್ ತಯಾರಿಸಿರಿ.



**ರಷ್ಯಾದಲ್ಲಿ ಒಂದು ತಾತ್ಕಾಲಿಕ ಸರಕಾರವು ರೂಪುಗೊಳ್ಳಲು ಕಾರಣವಾದ ಸನ್ನಿವೇಶಗಳು ಯಾವುವು? ಅವಲೋಕಿಸಿರಿ.**




ಲೆನಿನ್

ತಾತ್ಕಾಲಿಕ ಸರಕಾರವನ್ನು ರಷ್ಯಾದ ಸೋವಿಯಟ್‌ಗಳಲ್ಲಿನ ಒಂದು ವಿಭಾಗವು ವಿರೋಧಿಸಿತು. ಇದೇ ಸಮಯದಲ್ಲಿ ಸ್ವಿಜರ್ಲೇಂಡಿನಲ್ಲಿದ್ದ ವ್ಲಾಡಿಮಿರ್ ಲೆನಿನ್ ಎಂಬ ನೇತಾರನು ರಷ್ಯಾಕ್ಕೆ ಮರಳಿ ಬಂದು ತಾತ್ಕಾಲಿಕ ಸರಕಾರವನ್ನು ಕಟುವಾಗಿ ವಿರೋಧಿಸಿದನು. ಕ್ರಾಂತಿಯು ತನ್ನ ಗುರಿಯನ್ನು ತಲುಪಬೇಕಿದ್ದರೆ ಎಲ್ಲಾ ಸೋವಿಯಟ್‌ಗಳಿಗೂ ಅಧಿಕಾರವನ್ನು ಹಸ್ತಾಂತರಿಸಬೇಕೆಂದು ಅವನು ಒತ್ತಾಯಪಡಿಸಿದನು. ಬೋಲ್ಶೆವಿಕರು ಮತ್ತು ಸೋವಿಯಟ್‌ಗಳು ಲೆನಿನ್‌ನ ಬೇಡಿಕೆಗಳನ್ನು ಬೆಂಬಲಿಸಿದರು. ಶತಮಾನಗಳಷ್ಟು ಹಿಂದಿನ ಆರ್ಥಿಕ ಹಿಂದುಳಿಯುವಿಕೆ ಮತ್ತು ಜನರೊಳಗಿನ ಅಸಮಾನತೆಯನ್ನು ಹೋಗಲಾಡಿಸಲು ಒಂದು ಕಾರ್ಮಿಕರ ಸರಕಾರದಿಂದ ಮಾತ್ರವೇ ಸಾಧ್ಯವೆಂಬುದನ್ನು ಬೋಲ್ಶೆವಿಕರು ಪ್ರಚಾರಮಾಡಿದರು. ಇದಕ್ಕಾಗಿ ಅವರು ಮುಂದಿಟ್ಟ ಬೇಡಿಕೆಗಳು:

K6SHJ1

- ಒಂದನೆಯ ಜಾಗತಿಕ ಯುದ್ಧದಿಂದ ರಷ್ಯಾ ಹಿಂದಕ್ಕೆ ಸರಿಯಬೇಕು.
- ಪ್ರಭುಗಳಿಂದ ಭೂಮಿಯನ್ನು ವಶಪಡಿಸಿ ಕೃಷಿಕರಿಗೆ ನೀಡಬೇಕು.
- ಕೈಗಾರಿಕೆಗಳನ್ನು ಸಾರ್ವಜನಿಕ ಸೊತ್ತೆಂದು ಘೋಷಿಸಬೇಕು.

1917ರಲ್ಲಿ ಬೊಲ್ಶೆವಿಕರು ತಾತ್ಕಾಲಿಕ ಸರಕಾರದ ವಿರುದ್ಧ ಸಶಸ್ತ್ರ ಹೋರಾಟವನ್ನು ಆರಂಭಿಸಿದರು. ಕರೆನ್ಸ್ಕಿಯ ಪಲಾಯನದೊಂದಿಗೆ ರಷ್ಯಾವು ಬೊಲ್ಶೆವಿಕರ ನಿಯಂತ್ರಣಕ್ಕೊಳಪಟ್ಟಿತು. ಬೊಲ್ಶೆವಿಕರಿಗೆ ಅಧಿಕಾರ ಲಭಿಸಿದ ಈ ಘಟನೆಯನ್ನು ಒಕ್ಟೋಬರ್ ಕ್ರಾಂತಿ ಎಂದು ಕರೆಯುತ್ತಾರೆ. (ರಷ್ಯಾದ ಕ್ಯಾಲೆಂಡರ್‌ನ ಪ್ರಕಾರ). ಅನಂತರ ಸೋವಿಯಟ್‌ಗಳು ಒಟ್ಟು ಸೇರಿ ಲೆನಿನ್ ಅಧ್ಯಕ್ಷನಾಗಿರುವ ಒಂದು ಕ್ಯಾಬಿನೆಟ್‌ಗೆ ರೂಪುನೀಡಿದರು. ರಷ್ಯಾದ ಕ್ರಾಂತಿಯ ಪರಿಣಾಮಗಳನ್ನು ಪರಿಶೀಲಿಸುವ.

*ರಷ್ಯಾ ಕ್ರಾಂತಿಯ ಪ್ರಧಾನ ಘಟನೆಗಳ ಟೈಮ್‌ಲೈನನ್ನು ಪೋಸ್ಟರ್ ರೂಪದಲ್ಲಿ ತಯಾರಿಸಿ ಮಂಡಿಸಿರಿ.*



- ಒಂದನೆಯ ಜಾಗತಿಕ ಯುದ್ಧದಿಂದ ಹಿಂದೆ ಸರಿಯಿತು.
- ಪ್ರಭುಗಳ ನಿಯಂತ್ರಣದಲ್ಲಿರುವ ಭೂಮಿಯನ್ನು ಕೃಷಿಕರಿಗೆ ಹಂಚಿದರು.
- ಸಾರ್ವಜನಿಕ ಕ್ಷೇತ್ರಕ್ಕೆ ಪ್ರಾಧಾನ್ಯ ನೀಡಿತು.
- ಕೇಂದ್ರೀಕೃತ ಯೋಜನಾ ವ್ಯವಸ್ಥೆಯನ್ನು ಜಾರಿಗೊಳಿಸಿದರು.
- ಆರ್ಥಿಕ - ವೈಜ್ಞಾನಿಕ - ತಾಂತ್ರಿಕ ಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸಿತು.
- 1924ರಲ್ಲಿ ಹೊಸ ಸಂವಿಧಾನವು ಅಸ್ತಿತ್ವಕ್ಕೆ ಬಂತು.
- ಸೋವಿಯಟ್‌ಗಳನ್ನು ಒಟ್ಟು ಸೇರಿಸಿ ಸೋವಿಯತ್ ಯೂನಿಯನ್ (USSR) ರೂಪಿಸಲ್ಪಟ್ಟಿತು.

ಜಗತ್ತಿನ ವಿವಿಧ ಭಾಗಗಳಲ್ಲಿ ಸಮಾಜವಾದಿ ಆಶಯಗಳು ವ್ಯಾಪಿಸಲು ರಷ್ಯಾದ ಕ್ರಾಂತಿಯು ಕಾರಣವಾಯಿತು.



*ರಷ್ಯಾದಲ್ಲಿ ಒಂದು ಕಾರ್ಮಿಕ ವರ್ಗದ ಸರಕಾರವನ್ನು ರೂಪೀಕರಿಸಲು ಒಕ್ಟೋಬರ್ ಕ್ರಾಂತಿಯು ವಹಿಸಿದ ಪಾತ್ರದ ಕುರಿತು ಚರ್ಚಿಸಿರಿ.*

## ಚೀನಾದ ಕ್ರಾಂತಿ

**ವಿದೇಶೀ ಆಡಳಿತ ಮತ್ತು ರಾಜಾಡಳಿತಗಳಿಗೆ ವಿರುದ್ಧವಾಗಿ ನಡೆದ ಕ್ರಾಂತಿಗಳಿಗೆ 20ನೇ ಶತಮಾನದಲ್ಲಿ ಚೀನಾವು ಸಾಕ್ಷಿಯಾಯಿತು. ಜಗತ್ತಿನ ಇತರ ಭಾಗಗಳಲ್ಲಿ ಜಾರಿಗೊಳಿಸಿದುದಕ್ಕಿಂತ ಭಿನ್ನವಾದ ಎರಡು ಧೋರಣೆಗಳನ್ನು ಯುರೋಪಿಯಾದ ರಾಷ್ಟ್ರಗಳು ಮತ್ತು ಅಮೇರಿಕಾವನ್ನೊಳಗೊಂಡ ವಸಾಹತು ಶಕ್ತಿಗಳು ಚೀನಾದಲ್ಲಿ ಸ್ವೀಕರಿಸಿದವು. ಅವು ಅಫೀಮು ವ್ಯಾಪಾರ ಮತ್ತು ತೆರೆದ ಬಾಗಿಲ ಧೋರಣೆಗಳಾಗಿದ್ದವು. ಅವುಗಳೇನೆಂದು ನೋಡೋಣ.**

**ಅಫೀಮು ವ್ಯಾಪಾರ**

ಚೀನಾದ ವಸ್ತುಗಳಾದ ರೇಶ್ಮೆ, ಚಾ, ಮಣ್ಣಿನ ಪಾತ್ರೆ ಮೊದಲಾದುವುಗಳು ಯುರೋಪಿನಲ್ಲಿ ಜನಪ್ರಿಯವಾಗಿದ್ದವು. ಇವುಗಳ ರಫ್ತಿನಿಂದ ಚೀನಾವು ಅತ್ಯಧಿಕ ಲಾಭಗಳಿಸುತ್ತಿತ್ತು. ಆದರೆ ಚೀನಾವು ಹೆಚ್ಚಿನ ವಸ್ತುಗಳನ್ನು ಆಮದು ಮಾಡದಿರುವುದರಿಂದ ಯುರೋಪಿನ ವ್ಯಾಪಾರಿಗಳು ನಷ್ಟವನ್ನು ಅನುಭವಿಸಿದರು. ಇದಕ್ಕೆ ಪರಿಹಾರವೆಂಬಂತೆ ಬ್ರಿಟಿಷ್ ವ್ಯಾಪಾರಿಗಳು ಚೀನಾಕ್ಕೆ ಮಾದಕ ದ್ರವ್ಯವಾದ ಅಫೀಮನ್ನು ಆಮದು ಮಾಡಿದರು. ಇದು ಚೀನಾದ ವ್ಯಾಪಾರವನ್ನು ಮತ್ತು ಇದರ ಉಪಯೋಗವು ಅಲ್ಲಿನ ಜನರ ಬೌದ್ಧಿಕ ಮಟ್ಟವನ್ನು ಪ್ರತಿಕೂಲವಾಗಿ ಬಾಧಿಸಿತು. ಇದರಿಂದಾಗಿ ಆರ್ಥಿಕವಾಗಿಯೂ ಬೌದ್ಧಿಕವಾಗಿಯೂ ಚೀನಾದ ಜನರು ಯುರೋಪಿಯನ್ನರ ದಾಸರಾದರು.

**ತೆರೆದ ಬಾಗಿಲ ಧೋರಣೆ**

19ನೇ ಶತಮಾನದ ಕೊನೆಯ ಭಾಗದಲ್ಲಿ ಯುರೋಪಿನ ಅನೇಕ ದೇಶಗಳು ಚೀನಾದಲ್ಲಿ ವ್ಯಾಪಾರದ ಅನುಕೂಲತೆಯನ್ನು ಗಳಿಸಿಕೊಂಡರು. ಆದರೆ ಈ ಕಾಲದಲ್ಲಿ ಚೀನಾವನ್ನು ಗಮನಿಸಲು ಸಾಧ್ಯವಾಗದ ಅಮೇರಿಕಾಕ್ಕೆ ಇಲ್ಲಿ ವ್ಯಾಪಾರದ ಅವಕಾಶಗಳು ಲಭಿಸಲಿಲ್ಲ. ಅನಂತರ ಅಮೇರಿಕದ ಸ್ಟೇಟ್ ಸೆಕ್ರೆಟರಿ ಜೋನ್ ಹೇಯ್ ಘೋಷಿಸಿದ ಧೋರಣೆಯೇ 'ತೆರೆದ ಬಾಗಿಲ ಧೋರಣೆ'ಯಾಗಿದೆ. ಇದರಂತೆ ಚೀನಾದ ಮಾರುಕಟ್ಟೆಗಳಲ್ಲಿ ವ್ಯಾಪಾರ ಮಾಡುವ ಹಕ್ಕು ಮತ್ತು ಅವಕಾಶಗಳು ಎಲ್ಲ ದೇಶಗಳಿಗೂ ಇವೆ ಎಂಬುವುದನ್ನು ಅಮೇರಿಕಾ ವಾದಿಸಿತು. ಇದರಂತೆ ಚೀನಾವು ಹಲವು ದೇಶಗಳ ವ್ಯಾಪಾರ ಕೇಂದ್ರವಾಗಿ ವಿಭಾಗಿಸಲ್ಪಟ್ಟಿತು. ಅಮೇರಿಕಾಕ್ಕೆ ಚೀನಾದಲ್ಲಿ ವ್ಯಾಪಾರ ಮಾಡುವ ಅವಕಾಶಗಳನ್ನು ಹೊಂದುವುದು ಈ ಧೋರಣೆಯ ಮುಖ್ಯ ಉದ್ದೇಶವಾಗಿತ್ತು.

ಸಾಮ್ರಾಜ್ಯಶಾಹೀ ಶಕ್ತಿಗಳು ಚೀನಾದಲ್ಲಿ ಜಾರಿಗೆ ತಂದ ಧೋರಣೆಗಳನ್ನು ಇತರ ವಸಾಹತುಗಳಲ್ಲಿ ಜಾರಿಗೆ ತಂದ ಧೋರಣೆಗಳೊಂದಿಗೆ ಹೋಲಿಸಿರಿ.



ಚೀನಾವನ್ನು ಆಳಿದ ಮಾಂಚು ವಂಶವು ವಿದೇಶಿ ಶಕ್ತಿಗಳಿಗೆ ಅನುಕೂಲಕರವಾದ ಧೋರಣೆಯನ್ನು ಹೊಂದಿತ್ತು. ಇದಕ್ಕೆದುರಾಗಿ ಚೀನಾದಲ್ಲಿ 1900ರಲ್ಲಿ ಕೆಲವು ರಹಸ್ಯ ಸಂಘಗಳು ದಂಗೆ ಎದ್ದವು. ಬೋಕ್ಸರ್‌ಗಳ ಮುಷ್ಠಿಯು ಅವರ ಆಯುಧವಾಗಿತ್ತು. ಈ ಕಾರಣದಿಂದ ಇದನ್ನು 'ಬೋಕ್ಸರ್ ದಂಗೆ' ಅಥವಾ ಮುಷ್ಠಿ ಯುದ್ಧ ಎಂದು ಕರೆಯುತ್ತಾರೆ. ಹೋರಾಟಗಳಲ್ಲಿ ಪರಾಜಯ ಅನುಭವಿಸಿದರೂ ನಂತರದ ಹೋರಾಟಗಳಿಗೆ ಇದು ಪ್ರೇರಣೆಯಾಯಿತು.

1911ರಲ್ಲಿ ಡಾ. ಸನ್‌ಯಾತ್‌ಸೇನ್‌ರ ನೇತೃತ್ವದಲ್ಲಿ ಮಾಂಚು ರಾಜವಂಶಕ್ಕೆದುರಾಗಿ ಹೋರಾಟ ನಡೆಯಿತು. ಈ ಹೋರಾಟವು ಚೀನಾದಲ್ಲಿ ರಾಜಾಡಳಿತಕ್ಕೆ ಅಂತ್ಯ ಹಾಡಿತು. ನಂತರ ದಕ್ಷಿಣ ಚೀನಾದಲ್ಲಿ ಡಾ. ಸನ್‌ಯಾತ್‌ಸೇನ್‌ರ ನೇತೃತ್ವದಲ್ಲಿ ಒಂದು ಕುಮಿಂಗ್‌ತಾಂಗ್ ಪಕ್ಷವು ರಿಪಬ್ಲಿಕನ್ ಆಡಳಿತವನ್ನು ಸ್ಥಾಪಿಸಿತು. ಡಾ. ಸನ್‌ಯಾತ್‌ಸೇನ್ ರಾಷ್ಟ್ರೀಯತೆ, ಪ್ರಜಾಪ್ರಭುತ್ವ, ಸಮಾಜವಾದ ಎಂಬೀ ಮೂರು ಆಶಯಗಳಿಗೆ ಪ್ರಾಧಾನ್ಯ ನೀಡಿದನು.

K72SKN

**ಡಾ. ಸನ್‌ಯಾತ್‌ಸೇನನ ಧೋರಣೆಗಳು**



*ಡಾ. ಸನ್‌ಯಾತ್‌ಸೇನ್*

**ರಾಷ್ಟ್ರೀಯತೆ** – ಮಂಚೂರಿಯ ಪ್ರದೇಶದವರಾದ ಮಾಂಚು ರಾಜವಂಶದವರನ್ನು ಮತ್ತು ಸಾಮ್ರಾಜ್ಯಶಾಹಿಗಳನ್ನು ಅಧಿಕಾರದಿಂದ ಹೊರಗೆ ಹಾಕುವುದು.

**ಪ್ರಜಾಪ್ರಭುತ್ವ** – ಪ್ರಜಾಪ್ರಭುತ್ವ ಆಡಳಿತವನ್ನು ಸ್ಥಾಪಿಸುವುದು.

**ಸಮಾಜವಾದ** – ಬಂಡವಾಳ ಶಾಹಿತ್ವದ ನಿಯಂತ್ರಣ ಮತ್ತು ಭೂಮಿಯನ್ನು ಎಲ್ಲರಿಗೂ ಸಮಾನವಾಗಿ ಹಂಚುವುದು.

ಪಾಶ್ಚಾತ್ಯ ರಾಷ್ಟ್ರಗಳೊಂದಿಗೆ ಸಮಾನತೆಯ ಅಗತ್ಯವನ್ನು ಮನಗಂಡ ಡಾ. ಸನ್‌ಯಾತ್ ಸೇನ್ ಚೀನಾದೊಂದಿಗೆ ವಿದೇಶೀಯರು ಅನ್ಯಾಯವಾಗಿ ಮಾಡಿಕೊಂಡ ಒಪ್ಪಂದವನ್ನು ರದ್ದುಗೊಳಿಸಲು ತೀರ್ಮಾನಿಸಿದನು. ಕೃಷಿಕರು ಮತ್ತು ಉದ್ಯಮಿಗಳ ಪ್ರಗತಿಗಾಗಿ ಕುಮಿಂಗ್‌ತಾಂಗ್ ರಿಪಬ್ಲಿಕ್ ಪಕ್ಷವು ಹಲವು ನಿರ್ಧಾರಗಳನ್ನು ಕೈಗೊಂಡಿತು. ವಿವಿಧ ರಂಗಗಳಲ್ಲಿ ಇದಕ್ಕಾಗಿ ರಷ್ಯಾದ ಸಹಾಯ ಲಭಿಸುವುದರೊಂದಿಗೆ ಚೀನಾದ ಕಮ್ಯೂನಿಸ್ಟ್ ಪಾರ್ಟಿಯು ಸ್ಥಾಪಿಸಲ್ಪಟ್ಟಿತು. ಆರಂಭದಲ್ಲಿ ಕುಮಿಂಗ್‌ತಾಂಗ್ ಮತ್ತು ಕಮ್ಯೂನಿಸ್ಟರು ಪರಸ್ಪರ ಸಹಕಾರದೊಂದಿಗೆ ಮುಂದೆ ಸಾಗಿದರು. ಆದರೆ ಡಾ.ಸನ್‌ಯಾತ್‌ಸೇನ್‌ರ ಮರಣಾನಂತರ ಅಧಿಕಾರಕ್ಕೆ ಬಂದ ಚಿಯಾಂಗ್ ಕೈಶೇಕ್‌ನ ಆಡಳಿತದ ಕಾಲದಲ್ಲಿ ಈ ಸಹಕಾರವು ಕೊನೆಗೊಂಡಿತು.



ವಿದೇಶೀ ಆಡಳಿತೆ ಮತ್ತು ರಾಜಾಧಿಪತ್ಯದಿಂದ ವಿಮೋಚನೆಯನ್ನು ಪಡೆಯಲು 1911 ರಲ್ಲಿ ಚೀನಾದ ಕ್ರಾಂತಿಗೆ ಸಾಧ್ಯವಾಯಿತು. ಹೇಳಿಕೆಯನ್ನು ಸಮರ್ಥಿಸಿರಿ.

## ರಿಪಬ್ಲಿಕ್ ಜನಪ್ರಿಯಗೊಳ್ಳುತ್ತಿದೆ

ಚಿಯಾಂಗ್ ಕೈಶೇಕ್‌ನು ಚೀನಾದಲ್ಲಿ ಏಕಾಧಿಪತ್ಯವನ್ನು ಪ್ರಾರಂಭಿಸಿದನು. ಕಮ್ಯೂನಿಸ್ಟರೊಂದಿಗಿನ ಸಹಕಾರವನ್ನು ತ್ಯಜಿಸಿದ ಆತನು ಅಮೇರಿಕದಂತಹ ವಿದೇಶೀ ಶಕ್ತಿಗಳಿಗೆ ಚೀನಾದಲ್ಲಿ ತಮ್ಮಿಚ್ಛೆಯಂತೆ ನಡೆದುಕೊಳ್ಳಲು ಅವಕಾಶಮಾಡಿಕೊಟ್ಟನು. ಚೀನಾದಲ್ಲಿ ಕಲ್ಲಿದ್ದಲು, ಕಬ್ಬಿಣದ ಕಾರ್ಖಾನೆಗಳು, ಬ್ಯಾಂಕಿಂಗ್, ವಿದೇಶ ವ್ಯಾಪಾರ ಮೊದಲಾದ ರಂಗಗಳಲ್ಲಿ ವಿದೇಶೀಯರು ನಿಯಂತ್ರಣವನ್ನು ಹೊಂದಿದ್ದರು. ಚಿಯಾಂಗ್ ಕೈಶೇಕ್‌ನ ಧೋರಣೆಗಳನ್ನು ಕಮ್ಯೂನಿಸ್ಟರು ವಿರೋಧಿಸಿದುದರಿಂದ ಕಮ್ಯೂನಿಸ್ಟರನ್ನು ಕ್ರೂರವಾಗಿ ದಮನಿಸಿದನು. ಇದೇ ಸಮಯದಲ್ಲಿ ಮಾವೊ ತ್ಸೆ ತುಂಗ್ ಚೀನಾದ ಕಮ್ಯೂನಿಸ್ಟ್ ಪಕ್ಷದ ನೇತಾರನಾದನು. 1934ರಲ್ಲಿ ಕಮ್ಯೂನಿಸ್ಟರು ಮಾವೊನ ನೇತೃತ್ವದಲ್ಲಿ ದಕ್ಷಿಣ ಚೀನಾದ ಕಿಯಾಂಗ್‌ಸಿಯಿಲ್‌ನಿಂದ ಒಂದು ಜಾಥಾವನ್ನು ಆರಂಭಿಸಿದರು. ಅನೇಕ ಸವಾಲುಗಳನ್ನು ಎದುರಿಸಿ ಅತ್ಯಂತ ಸಾಹಸಿಕವಾಗಿ ಯಾತ್ರೆಯು ವಾಯುವ್ಯ ಭಾಗದ ಯೆನಾನ್‌ನಲ್ಲಿ ಪೂರ್ತಿಗೊಂಡಿತು. ಯಾತ್ರೆಯ ಉದ್ದಕ್ಕೂ ಧಾರಾಳ ಕೃಷಿ ಭೂಮಿಗಳನ್ನು ಶ್ರೀಮಂತ ಪ್ರಭುಗಳಿಂದ ವಶಪಡಿಸಿ ಕೃಷಿಕರಿಗೆ ನೀಡಿದರು. ಸುಮಾರು 12,000 ಕಿ.ಮೀ. ಸಂಚರಿಸಿದ ಈ ಯಾತ್ರೆಯನ್ನು 'ಲೋಂಗ್ ಮಾರ್ಚ್' ಎಂದು ಕರೆಯುತ್ತಾರೆ. ಅದರ ಪರಿಣಾಮವಾಗಿ ಮಾವೊ ತ್ಸೆ ತುಂಗ್ ಮತ್ತು ಕಮ್ಯೂನಿಸ್ಟ್ ಪಕ್ಷವು ವಿದೇಶ ಆಧಿಪತ್ಯಕ್ಕೆದುರಾದ ಚೀನೀಯರ ಹೋರಾಟದ ಪ್ರತೀಕವಾಗಿ ಹೊರಹೊಮ್ಮಿದರು. ಇವರ ನೇತೃತ್ವದ ಕೆಂಪುಸೇನೆ (Red Army)ಯು ಕುಮಿಂಗ್‌ತಾಂಗ್ ಪಕ್ಷದ ಆಡಳಿತ ಕೇಂದ್ರಗಳನ್ನು ವಶಪಡಿಸಿಕೊಂಡಿತು. ಚಿಯಾಂಗ್ ಕೈಶೇಕನು ಆಡಳಿತ ಬಿಟ್ಟು ತೈವಾನ್‌ನಲ್ಲಿ ಆಶ್ರಯ ಪಡೆದನು. 1949 ಅಕ್ಟೋಬರ್ 1 ರಂದು ಮಾವೋ ತ್ಸೆ ತುಂಗ್‌ನ ನೇತೃತ್ವದಲ್ಲಿ 'ಚೀನಾವು ಜನತಾ ಗಣರಾಜ್ಯವಾಗಿ' ಮಾರ್ಪಟ್ಟಿತು.




ಮಾವೋ ತ್ಸೆ ತುಂಗ್

ಚೈನಾವನ್ನು ಜನತಾ ಗಣರಾಜ್ಯದೇಶವಾಗಿ ಬದಲಾಯಿಸುವಲ್ಲಿ ಮಾವೋ ತ್ಸೆ ತುಂಗ್‌ನ ಪಾತ್ರವೇನು?



ಸ್ವಾತಂತ್ರ್ಯವನ್ನು ನಿಷೇಧಿಸಿದ ಜನತೆಯು ಜಗತ್ತಿನ ವಿವಿಧ ಭಾಗಗಳಲ್ಲಿ ನಡೆಸಿದ ಕ್ರಾಂತಿಗಳ ಕುರಿತು ನಾವು ಚರ್ಚಿಸಿದೆವು. ಈ ಕ್ರಾಂತಿಗಳು ಮುಂದಿರಿಸಿದ ಆಶಯಗಳು ಆಧುನಿಕ ಜಾಗತಿಕ ಚರಿತ್ರೆಯನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರವಹಿಸಿದವು. ಕ್ರಾಂತಿಕಾರಿಗಳ ಘೋಷಣೆಗಳು ಮಾನವ ಸಮಾಜವು ಸಾಧಿಸಿದ ಪ್ರಗತಿಗೆ ಮೈಲುಗಲ್ಲುಗಳಾಗಿ ಇಂದೂ ಅಸ್ತಿತ್ವದಲ್ಲಿವೆ.

ಪ್ರಪಂಚದ ಪ್ರಧಾನ ಕ್ರಾಂತಿಗಳ ಕುರಿತು ಮಾಹಿತಿಗಳನ್ನು ಸಂಗ್ರಹಿಸಿ ಒಂದು ಸಂಚಿಕೆಯನ್ನು ತಯಾರಿಸಿರಿ.



ಅಮೇರಿಕಾ, ಯುರೋಪ್, ಏಷ್ಯಾ ಎಂಬೀ ಕಡೆಗಳಲ್ಲಿ ನಡೆದ ಕ್ರಾಂತಿಗಳನ್ನು ಹೋಲಿಸಿ ಕೆಳಗೆ ನೀಡಿರುವ ಪಟ್ಟಿಯನ್ನು ಪೂರ್ತಿಗೊಳಿಸಿರಿ.



| ಕ್ರಾಂತಿಗಳು | ಅಮೇರಿಕ ಸ್ವಾತಂತ್ರ್ಯ ಸಂಗ್ರಾಮ | ಫ್ರೆಂಚ್ ಕ್ರಾಂತಿ | ಲ್ಯಾಟಿನ್ ಅಮೇರಿಕಾದ ಕ್ರಾಂತಿ | ರಷ್ಯಾದ ಕ್ರಾಂತಿ | ಚೀನಾ ಕ್ರಾಂತಿ |
|---|---|---|---|---|---|
| ಕಾಲ | | | | | |
| ನೇತಾರರು | | | | | |
| ಪ್ರಧಾನ ಗುರಿಗಳು | | | | | |
| ಪ್ರಭಾವ ಬೀರಿದ ಆಶಯಗಳು/ತತ್ವಚಿಂತಕರು | | | | | |
| ಪರಿಣಾಮಗಳು | | | | | |

**ಜಗತ್ತಿನ ಗತಿಬದಲಾಯಿಸಿದ ಕ್ರಾಂತಿಗಳು**

| ಅಮೇರಿಕಾ ಸ್ವಾತಂತ್ರ್ಯ ಸಂಗ್ರಾಮ | ಫ್ರೆಂಚ್ ಕ್ರಾಂತಿ | ಲೇಟಿನ್ ಅಮೇರಿಕಾ ಕ್ರಾಂತಿ | ರಷ್ಯಾದ ಕ್ರಾಂತಿ | ಚೀನಾದ ಕ್ರಾಂತಿ |
|---|---|---|---|---|
| ಬ್ರಿಟನಿನ ವಸಾಹತುಶಾಹಿತ್ವಕ್ಕೆ ಎದುರಾಗಿ | ಸ್ವೇಚ್ಛಾಧಿಪತ್ಯ ಮತ್ತು ಫ್ಯೂಡಲ್ ವ್ಯವಸ್ಥೆಗೆದುರಾಗಿ | ಸ್ಪೈನ್ ಮತ್ತು ಪೋರ್ಚುಗಲ್‌ನ ಆಧಿಪತ್ಯಕ್ಕೆದುರಾಗಿ | ರಾಜಾಧಿಪತ್ಯ ಮತ್ತು ಫ್ಯೂಡಲ್ ವ್ಯವಸ್ಥೆಗೆದುರಾಗಿ | ವಿದೇಶೀ ಆಡಳಿತ, ಫ್ಯೂಡಲ್ ವ್ಯವಸ್ಥೆ ಮತ್ತು ಮಾಂಚು ರಾಜ ವಂಶಕ್ಕೆದುರಾಗಿ |
| ಜೋರ್ಜ್ ವಾಷಿಂಗ್ಟನ್, ಥೋಮಸ್ ಜೆಫರ್‌ಸನ್, ಥೋಮಸ್ ಪೇಯ್ನ್ | ವಾಲ್ಟೇರ್, ರುಸ್ಸೊ, ಮೊಂಟೆಸ್ಕ್ಯೂ | ಫ್ರಾನ್ಸಿಸ್ಕೊ ಮಿಖಾಂಡ, ಸೈಮನ್ ಬೊಲಿವರ್, ಜೋಸ್ ಡಿ ಸಾನ್ ಮಾರ್ಟಿನ್ | ಕರೆನ್ಸ್ಕಿ ಲೆನಿನ್ ಟ್ರೊಟ್‌ಸ್ಕಿ | ಡಾ. ಸನ್‌ಯಾತ್ ಸೇನ್ ಮಾವೊ ತ್ಸೆ ತುಂಗ್ |

## ಮೌಲ್ಯನಿರ್ಣಯ ಮಾಡುವ

- ಅಮೇರಿಕಾ ಸ್ವಾತಂತ್ರ್ಯ ಸಂಗ್ರಾಮವು ಇಂಗ್ಲಿಷ್ ಜನತೆ ಇಂಗ್ಲೆಂಡಿಗೆದುರಾಗಿ ನಡೆಸಿದ ಹೋರಾಟವಾಗಿದೆ – ಹೇಳಿಕೆಯನ್ನು ಸಮರ್ಥಿಸಿರಿ.
- ಮಧ್ಯಮ ವರ್ಗದ ಅಸಂತೃಪ್ತಿಯು ಫ್ರೆಂಚ್ ಕ್ರಾಂತಿಗೆ ಹೇಗೆ ದಾರಿ ಮಾಡಿಕೊಟ್ಟಿತು?
- ಕೆಳಗೆ ನೀಡಿದ ಹೇಳಿಕೆಗಳನ್ನು ಕಾಲಕ್ರಮಕ್ಕನುಸಾರವಾಗಿ ಬರೆಯಿರಿ.
  - i. ಫೆಬ್ರವರಿ ಕ್ರಾಂತಿ
  - ii. ಲೋಂಗ್ ಮಾರ್ಚ್
  - iii. ಅಮೇರಿಕಾ ಸ್ವಾತಂತ್ರ್ಯ ಘೋಷಣೆ
  - iv. ಟೆನ್ನಿಸ್ ಅಂಗಣ ಪ್ರತಿಜ್ಞೆ
- ಫ್ರೆಂಚ್ ಕ್ರಾಂತಿಯು ನೆಪೋಲಿಯನ್‌ನ ಸುಧಾರಣೆಗಳ ಮೇಲೆ ಹೇಗೆ ಪ್ರಭಾವ ಬೀರಿತು?
- ವಸಾಹತುಶಾಹಿ ಆಧಿಪತ್ಯವು ಲೇಟಿನ್ ಅಮೇರಿಕಾದ ರಾಜ್ಯಗಳನ್ನು ಹೇಗೆ ಬಾಧಿಸಿತೆಂಬುದನ್ನು ವಿವರಿಸಿರಿ.
- ಕಾರ್ಮಿಕ ವರ್ಗದ ಬೆಳವಣಿಗೆಗೆ ರಷ್ಯಾದ ಕ್ರಾಂತಿಯು ಸಹಾಯಕವಾಯಿತು. ಈ ಹೇಳಿಕೆಯನ್ನು ನೀವು ಸಮರ್ಥಿಸುವಿರಾ? ಯಾಕಾಗಿ? ವಿಶ್ಲೇಷಿಸಿರಿ.
- ಚೀನಾವು ಒಂದು ಜನತಾ ಗಣರಾಜ್ಯವಾಗಿ ಬದಲಾದುದು ಹೇಗೆ ಎಂದು ವಿಶದೀಕರಿಸಿರಿ.

## ಮುಂದುವರಿದ ಚಟುವಟಿಕೆಗಳು

- ಜಗತ್ತಿನಲ್ಲಿ ನಡೆದ ವಿವಿಧ ಕ್ರಾಂತಿಗಳ ಮೇಲೆ ಪ್ರಭಾವ ಬೀರಿದ ಚಿಂತಕರು ಮತ್ತು ಬರಹಗಾರರ ಗ್ರಂಥಗಳನ್ನು ಶೇಖರಿಸಿ ಅದರ ಕುರಿತು ಒಂದು ಪ್ರಬಂಧ ತಯಾರಿಸಿರಿ.
- ಜಗತ್ತಿನ ಪ್ರಧಾನ ಕ್ರಾಂತಿಗಳ ಕುರಿತು ಮಾಹಿತಿಗಳನ್ನು ಸಂಗ್ರಹಿಸಿ ಒಂದು ಸಂಚಿಕೆ ತಯಾರಿಸಿರಿ.

ಅಧ್ಯಾಯ

02



# ಇಪ್ಪತ್ತನೇ ಶತಮಾನದ ಜಗತ್ತು




ಆಫ್ರಿಕಾ ಖಂಡದ ಭೂಪಟವನ್ನು ಮೇಲೆ ನೀಡಲಾಗಿದೆ. ಆಫ್ರಿಕಾದಲ್ಲಿರುವ ದೇಶಗಳ ಮೇರೆಗಳ ವಿಶೇಷತೆಗಳನ್ನು ಕಂಡುಹಿಡಿಯಬಹುದೇ? ಅವುಗಳಲ್ಲಿ ಹೆಚ್ಚಿನವುಗಳೂ ಸಾಧಾರಣವಾಗಿ ನೇರವಾದ ರೇಖೆಗಳಾಗಿವೆ.

ಆಫ್ರಿಕದ ದೇಶಗಳ ಮೇರೆಗಳು ನೇರ ರೇಖೆಗಳಾಗಿರಲು ಕಾರಣವೇನಾಗಿರಬಹುದು? ಸಂಪತ್ತನ್ನು ಅರಸಿ ಆಫ್ರಿಕಾಕ್ಕೆ ತಲುಪಿದ ಯುರೋಪಿಯನ್ನರು 20ನೇ ಶತಮಾನದ ಆರಂಭದಲ್ಲಿ ಈ ಖಂಡವನ್ನು ಪರಸ್ಪರ ಹಂಚಿಕೊಂಡರು. ಯುರೋಪಿಯನ್ನರು ತಮ್ಮೊಳಗೆ ಮಾಡಿಕೊಂಡ ಒಪ್ಪಂದದ ಪ್ರಕಾರ ಭೂಪಟದಲ್ಲಿ ಮೇರೆಗಳನ್ನು ಗುರುತಿಸಿ ಆಫ್ರಿಕವನ್ನು ಹಂಚಿಕೊಂಡರು.

ಯುರೋಪಿಯನ್ನರು ಯಾಕೆ ಆಫ್ರಿಕಾವನ್ನು ಹಂಚಿಕೊಂಡರು?

ಇದು ಆಫ್ರಿಕದ ಸಂಪತ್ತನ್ನು ದೋಚಲು ಯುರೋಪಿಯನ್ ಶಕ್ತಿಗಳು ನಡೆಸಿದ ಯತ್ನದ ಭಾಗವಾಗಿದೆ. ಜಗತ್ತಿನ ಇತರ ಭಾಗಗಳಲ್ಲಿಯೂ ಈ ರೀತಿಯ ಹಸ್ತಕ್ಷೇಪಗಳು ನಡೆದಿರುವುದನ್ನು ಕಾಣಬಹುದು.

## ಬಂಡವಾಳಶಾಹಿತ್ವದಿಂದ ಸಾಮ್ರಾಜ್ಯಶಾಹಿತ್ವದೆಡೆಗೆ

18ನೇ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಪ್ರಾರಂಭವಾದ ಕೈಗಾರಿಕಾ ಕ್ರಾಂತಿಯ ಕುರಿತು ಹಿಂದಿನ ತರಗತಿಗಳಲ್ಲಿ ಕಲಿತಿರುವುದನ್ನು ನೆನಪಿಸುವಿರಲ್ಲವೇ. ಇದು ಕ್ರಮೇಣ ಇಂಗ್ಲೆಂಡಿನಿಂದ ಯುರೋಪಿನ ಇನ್ನಿತರ ದೇಶಗಳಿಗೆ ಹಬ್ಬಿತು. ಕೈಗಾರಿಕೆಗಳಲ್ಲಿ ಬಂಡವಾಳವನ್ನು ಹೂಡಿ ಉದ್ಯಮಿಗಳು ಉತ್ಪಾದನೆಯನ್ನು ಹೆಚ್ಚಿಸಿದರು. ಇದು ಅವರ ಲಾಭವನ್ನು ಹೆಚ್ಚಿಸಿತು. ಲಾಭವನ್ನು ಉದ್ದೇಶವಾಗಿಟ್ಟುಕೊಂಡು ಉತ್ಪಾದನೆ ಮತ್ತು ವಿತರಣೆಯನ್ನು ಖಾಸಗಿ ವ್ಯಕ್ತಿಗಳು ನಿಯಂತ್ರಿಸುವ ಆರ್ಥಿಕ ವ್ಯವಸ್ಥೆಯನ್ನು ಬಂಡವಾಳಶಾಹಿತ್ವ (Capitalism) ಎಂದು ಕರೆಯುತ್ತಾರೆ. ಬೃಹತ್ ಕೈಗಾರಿಕೆಗಳ ಆಗಮನವು ಮೂಲಧನ ನಿಕ್ಷೇಪದ ವ್ಯಾಪ್ತಿ ಮತ್ತು ಪ್ರಾಧಾನ್ಯವನ್ನು ಹೆಚ್ಚಿಸಿತು. ಆಂತರಿಕ ಅಗತ್ಯಗಳಿಗೆ ಬೇಕಾದುದಕ್ಕಿಂತ ಹೆಚ್ಚು ಉತ್ಪನ್ನವನ್ನು ಪ್ರತಿಯೊಂದು ದೇಶವೂ ಉತ್ಪಾದಿಸಿತು. ಅವುಗಳನ್ನು ಮಾರಾಟಮಾಡಲು ಆ ದೇಶದ ಆಂತರಿಕ ಮಾರುಕಟ್ಟೆಗಳು ಮಾತ್ರ ಸಾಕಾಗಲಿಲ್ಲ. ಇದು ಯುರೋಪಿಯನಲ್ಲಿ ಕೈಗಾರಿಕಾಭಿವೃದ್ಧಿ ಗಳಿಸಿದ ರಾಷ್ಟ್ರಗಳೊಳಗೆ ಸ್ಪರ್ಧೆಗೆ ಕಾರಣವಾಯಿತು. ಏಷ್ಯಾ, ಆಫ್ರಿಕಾ, ಲೇಟಿನ್ ಅಮೇರಿಕಾದ ರಾಷ್ಟ್ರಗಳೊಂದಿಗೆ ಯುರೋಪಿನ ದೇಶಗಳು ಬಹಳ ಹಿಂದಿನಿಂದಲೇ ವ್ಯಾಪಾರ ಸಂಬಂಧವನ್ನು ಹೊಂದಿದ್ದವು. ಈ ದೇಶಗಳಲ್ಲಿ ಯುರೋಪಿಯನ್ನರು ರಾಜಕೀಯ ಅಧಿಕಾರ ಹಾಗೂ ಸೈನಿಕ ಸಾಮರ್ಥ್ಯವನ್ನು ಉಪಯೋಗಿಸಿ ಸಂಪತ್ತಿನ ಶೋಷಣೆಯನ್ನು ನಡೆಸಿದರು. ಈ ದೇಶಗಳು ನಂತರ ಯುರೋಪಿಯನ್ನರ ವಸಾಹತುಗಳಾದವು. ಈ ಪ್ರಕ್ರಿಯೆಯನ್ನು ವಸಾಹತೀಕರಣ ಎನ್ನುತ್ತಾರೆ.



1800ರಲ್ಲಿ ಇಂಗ್ಲೆಂಡಿನಲ್ಲಿದ್ದ ಒಂದು ಕಾರ್ಖಾನೆ



ಕೈಗಾರಿಕಾ ಕ್ರಾಂತಿಯು ವಸಾಹತೀಕರಣಕ್ಕೆ ಹೇಗೆ ಕಾರಣವಾಯಿತು? ಒಂದು ಫ್ಲೋಚಾರ್ಟ್‌ನೊಂದಿಗೆ ಸ್ಪಷ್ಟಪಡಿಸಿರಿ.

ಬಂಡವಾಳಶಾಹಿತ್ವದ ಶೋಷಣೆಗೆದುರಾಗಿ ಕಾರ್ಮಿಕ ಸಂಘಟನೆಗಳು ರೂಪುಗೊಂಡವು. ಕಾರ್ಮಿಕ ಸಂಘಟನೆಗಳ ನಿರಂತರ ಹೋರಾಟದ ಫಲವಾಗಿ ಕಾರ್ಮಿಕರಿಗೆ ವೇತನವು ಹೆಚ್ಚಾದಾಗ ಬಂಡವಾಳಶಾಹಿಗಳ ಲಾಭಾಂಶವು ಕಡಿಮೆಯಾಯಿತು. ಯುರೋಪಿನ ದೇಶಗಳು ವಸಾಹತುಗಳನ್ನು ಕಚ್ಚಾವಸ್ತುಗಳ ಕೇಂದ್ರಗಳನ್ನಾಗಿ ಮತ್ತು ಉತ್ಪನ್ನಗಳಿಗಿರುವ ಮಾರುಕಟ್ಟೆಗಳನ್ನಾಗಿ ಮಾಡಿಕೊಂಡರು. ಅನಂತರದ ಕಾಲದಲ್ಲಿ ವಸಾಹತುಶಾಹಿಗಳು ವಸಾಹತುಗಳಲ್ಲಿ ಬಂಡವಾಳವನ್ನು ಹೂಡಿದರು. ಇದಕ್ಕಾಗಿ ಬಂಡವಾಳಶಾಹೀ ದೇಶಗಳನ್ನು ಪ್ರೇರೇಪಿಸಿದ ಘಟಕಗಳು ಯಾವುವು ಎಂದು ಪರಿಶೀಲಿಸುವ.

- ಕಾರ್ಮಿಕರಿಗೆ ಕಡಿಮೆ ಸಂಬಳ
- ಕಚ್ಚಾವಸ್ತುಗಳ ಲಭ್ಯತೆ
- ವಸಾಹತುಗಳಲ್ಲಿ ಉತ್ಪಾದಿಸಿ ವಸಾಹತುಗಳಲ್ಲೇ ಮಾರಾಟದ ವ್ಯವಸ್ಥೆ ಇದ್ದುದರಿಂದ ಖರ್ಚು ಕಡಿಮೆಯಾಗಿತ್ತು.

ವಸಾಹತುಗಳಿಗೆ ಬಂಡವಾಳವನ್ನು ರಫ್ತು ಮಾಡಲು ಆರಂಭಿಸಿದ ಕಾಲವನ್ನು ಸಾಮ್ರಾಜ್ಯಶಾಹಿತ್ವ ಎನ್ನುತ್ತಾರೆ. ಒಂದು ದೇಶವು ಮತ್ತೊಂದು ದೇಶದ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ರಂಗಗಳ ಮೇಲೆ ಆಧಿಪತ್ಯ ಸ್ಥಾಪಿಸುವುದು ಸಾಮ್ರಾಜ್ಯಶಾಹಿತ್ವದ ವಿಶೇಷತೆಯಾಗಿದೆ. ಕಾನೂನುಗಳು, ಆಡಳಿತರೀತಿ, ಸೈನಿಕಶಕ್ತಿ ಮೊದಲಾದುವುಗಳನ್ನು ಉಪಯೋಗಿಸಿ ಸಾಮ್ರಾಜ್ಯಶಾಹಿಗಳು ವಸಾಹತುಗಳಲ್ಲಿ ಅವರ ಶೋಷಣೆಯ ಧೋರಣೆಗಳನ್ನು ಜಾರಿಗೊಳಿಸಿದರು.

ಸಾಮ್ರಾಜ್ಯಶಾಹಿತ್ವವು ವಸಾಹತುಶಾಹಿತ್ವಕ್ಕಿಂತ ಹೇಗೆ ಭಿನ್ನವಾಗಿದೆ?



ಸಾಮ್ರಾಜ್ಯಶಾಹಿತ್ವವು ವಸಾಹತುಗಳನ್ನು ಯಾವೆಲ್ಲಾ ರೀತಿಯಲ್ಲಿ ಬಾಧಿಸಿರಬಹುದು?

- ವಸಾಹತುಗಳಲ್ಲಿ ಪರಂಪರಾಗತವಾಗಿದ್ದ ಆರ್ಥಿಕ ವ್ಯವಸ್ಥೆಯನ್ನು ನಾಶಮಾಡಿದರು.
- ಆಡಳಿತ ರೀತಿ ಮತ್ತು ನ್ಯಾಯಾಂಗ ವ್ಯವಸ್ಥೆಯನ್ನು ಬದಲಾಯಿಸಿದರು.
- ಪರಂಪರಾಗತ ಆಹಾರ ಬೆಳೆಗಳ ಬದಲು ವಾಣಿಜ್ಯ ಬೆಳೆಗಳನ್ನು ಬೆಳೆಸಲು ನಿರ್ಬಂಧಿಸಿದರು.
- ಬಡತನ ಮತ್ತು ನಿರುದ್ಯೋಗವು ಹೆಚ್ಚಾಯಿತು.
- ಪ್ರಾಕೃತಿಕ ಸಂಪನ್ಮೂಲಗಳನ್ನು ನಿರಂತರವಾಗಿ ಕೊಳ್ಳೆಹೊಡೆದರು.
- ಸ್ಥಳೀಯ ಕಲೆ, ಸಾಹಿತ್ಯ, ಭಾಷೆ, ಸಂಸ್ಕೃತಿ, ವಿದ್ಯಾಭ್ಯಾಸ ಮೊದಲಾದುವುಗಳನ್ನು ನಾಶಮಾಡಿದರು.

ವಸಾಹತುಗಳಿಗೆ ಮತ್ತು ಮಾರುಕಟ್ಟೆಗಳಿಗಾಗಿ ನಡೆದ ಪರಸ್ಪರ ಸ್ಪರ್ಧೆಗಳು ಮತ್ತು ಹೋರಾಟಗಳು ಸಾಮ್ರಾಜ್ಯಶಾಹಿಗಳೊಳಗೆ ಯುದ್ಧಕ್ಕೆ ಕಾರಣವಾಯಿತು.

ಕೈಗಾರಿಕಾ ಕ್ರಾಂತಿಯು ಜಾಗತಿಕ ರಾಷ್ಟ್ರಗಳ ನಡುವಿನ ಸಂಘರ್ಷಗಳಿಗೆ ಹೇಗೆ ಕಾರಣವಾದುವು?



## ಒಂದನೇ ಜಾಗತಿಕ ಯುದ್ಧ

ಸಾಮ್ರಾಜ್ಯಶಾಹಿ ಶಕ್ತಿಗಳೊಳಗಿನ ವಿವಾದಗಳು ಜಗತ್ತನ್ನು ಒಂದು ಜಾಗತಿಕ ಯುದ್ಧದ ಕಡೆಗೆ ಕೊಂಡೊಯ್ದುವು. ಇದಕ್ಕೆ ಕಾರಣವಾದ ಘಟಕಗಳು ಯಾವುವೆಂದು ನೋಡೋಣ.

ಯುರೋಪಿನ ದೇಶಗಳು ತಮ್ಮೊಳಗೆ ವಸಾಹತುಗಳಿಗೆ ಬೇಕಾಗಿ ನಡೆಸಿದ ಸ್ಪರ್ಧೆಗಳು ಅವರೊಳಗೆ ಶತ್ರುತ್ವದ ಬೆಳವಣಿಗೆ ಮತ್ತು ಸಂಘರ್ಷಗಳಿಗೆ ಕಾರಣವಾದುವು. ಶತ್ರುಗಳು ಮತ್ತು ಮಿತ್ರರನ್ನು ಪತ್ತೆಹಚ್ಚಲು ಸಾಧ್ಯವಾಗದೇ ಇದ್ದಾಗ ಸೈನಿಕ ಒಪ್ಪಂದಗಳು ರೂಪುಗೊಂಡವು. ತ್ರಿಶಕ್ತಿ ಮೈತ್ರಿ (Tripple Alliance)ಮತ್ತು ತ್ರಿಶಕ್ತಿ ಸೌಹಾರ್ದ (Tripple Entente) ಎಂಬುದು ಹೀಗೆ ರೂಪಿಸಲ್ಪಟ್ಟ ಸೈನಿಕ ಒಪ್ಪಂದಗಳಾಗಿವೆ.

K7BNMB

**ತ್ರಿಶಕ್ತಿ ಮೈತ್ರಿ**
- ಜರ್ಮನಿ
- ಆಸ್ಟ್ರಿಯಾ-ಹಂಗೆರಿ
- ಇಟಲಿ

**ತ್ರಿಶಕ್ತಿ ಸೌಹಾರ್ದ**
- ಇಂಗ್ಲೆಂಡ್
- ಫ್ರಾನ್ಸ್
- ರಷ್ಯಾ

ಈ ರೀತಿಯ ಮೈತ್ರಿಗಳ ರೂಪೀಕರಣವು ಯುರೋಪಿನಲ್ಲಿ ಒಂದು ಯುದ್ಧದ ವಾತಾವರಣವನ್ನು ಸೃಷ್ಟಿಸಿತು. ಅವರು ವಿನಾಶಕಾರಿಯಾದ ಹೊಸ ಆಯುಧಗಳನ್ನು ನಿರ್ಮಿಸಲು ಮತ್ತು ಸಂಗ್ರಹಿಸಲು ಪ್ರಾರಂಭಿಸಿದರು.

ಸಾಮ್ರಾಜ್ಯಶಾಹಿ ಸ್ಪರ್ಧೆಗಳಲ್ಲಿ ಜಯಗಳಿಸಲು ಯುರೋಪಿನ ದೇಶಗಳು ವಿವಿಧ ಮಾರ್ಗಗಳನ್ನು ಸ್ವೀಕರಿಸಿದುವು. ಆಕ್ರಮಣಕಾರಿ ರಾಷ್ಟ್ರೀಯತೆಯು ಅವುಗಳಲ್ಲೊಂದಾಗಿದೆ. ಬೇರೆ ದೇಶಗಳನ್ನು ಮತ್ತು ಅವರ ಕೈವಶವಿರುವ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಯುರೋಪಿನ ದೇಶಗಳು ರಾಷ್ಟ್ರೀಯತೆಯನ್ನು ಉಪಯೋಗಿಸಿಕೊಂಡವು. ಇದನ್ನು ಆಕ್ರಮಣಕಾರಿ ರಾಷ್ಟ್ರೀಯತೆ (Aggressive Nationalism) ಎನ್ನುತ್ತಾರೆ. ತಮ್ಮ ದೇಶವು ಇತರ ದೇಶಗಳಿಗಿಂತ ಶ್ರೇಷ್ಠವಾದುದು ಮತ್ತು ತಾವು ಮಾಡುವುದೆಲ್ಲ ಸರಿಯೆಂದು ಸಮರ್ಥಿಸಿಕೊಳ್ಳುವುದು ಇದರ ವಿಶೇಷತೆಯಾಗಿದೆ. ಆಕ್ರಮಣಕಾರಿ ರಾಷ್ಟ್ರೀಯತೆಯ ಬೆಳವಣಿಗೆಯು ಯುರೋಪಿನಲ್ಲಿ ಕೆಲವು ಚಳವಳಿಗೆ ಕಾರಣವಾಯಿತು. ಪಾನ್ ಸ್ಲಾವ್, ಪಾನ್ ಜರ್ಮನ್, ಪ್ರತೀಕಾರ ಚಳುವಳಿ ಇವುಗಳು ಪ್ರಧಾನವಾದವುಗಳು.



**ಆಕ್ರಮಣಕಾರಿ ರಾಷ್ಟ್ರೀಯತೆಯಿಂದಾಗಿ ರೂಪೀಕರಿಸಲ್ಪಟ್ಟ ಚಳುವಳಿಗಳು**


| ಪಾನ್‌ಸ್ಲಾವ್ ಚಳವಳಿ (Pan-Slav Movement) | ಪಾನ್-ಜರ್ಮನ್ ಚಳವಳಿ (Pan-German Movement) | ಪ್ರತೀಕಾರ ಚಳವಳಿ (Revenge Movement) |
|---|---|---|
| ಪೂರ್ವ ಯುರೋಪಿನ ಬಲ್ಗೇರಿಯಾ, ಸರ್ಬಿಯಾ, ಗ್ರೀಸ್ ಮೊದಲಾದ ದೇಶಗಳಲ್ಲಿರುವ ಸ್ಲಾವ್ ವಂಶದ ಜನರನ್ನು ತಮ್ಮ ನೇತೃತ್ವದಲ್ಲಿ ಏಕೀಕರಿಸಲು ರಷ್ಯಾವು ಆಗ್ರಹಿಸಿತು. ಅದಕ್ಕಾಗಿ ಈ ವಲಯದಲ್ಲಿ ರಷ್ಯಾದ ಸಹಾಯದಿಂದ ರೂಪಿಸಿದ ಚಳುವಳಿಯೇ ಪಾನ್-ಸ್ಲಾವ್ ಚಳವಳಿಯಾಗಿದೆ. | ಮಧ್ಯ ಯುರೋಪಿನ ಬಾಲ್ಕನ್ ಪ್ರದೇಶದಲ್ಲಿ ತನ್ನ ಪ್ರಭಾವವನ್ನು ಖಾತರಿಪಡಿಸಲು ಜರ್ಮನಿಯು ಟ್ಯುಟೋನಿಕ್ ವರ್ಗವನ್ನು ಏಕೀಕರಿಸಿತು. ಇದಕ್ಕಾಗಿ ಜರ್ಮನಿಯು ಪಾನ್-ಜರ್ಮನ್ ಚಳುವಳಿಯನ್ನು ಆರಂಭಿಸಿತು. | 1871ರಲ್ಲಿ ಜರ್ಮನಿಯು ಫ್ರಾನ್ಸ್‌ನಿಂದ ಅಲ್ಸೇಸ್, ಲೊರೈನ್ ಪ್ರದೇಶಗಳನ್ನು ಸ್ವಾಧೀನ ಪಡಿಸಿಕೊಂಡಿತು. ಇದನ್ನು ಪುನಃ ವಶಪಡಿಸಿಕೊಳ್ಳಲು ಫ್ರಾನ್ಸಿನ ನೇತೃತ್ವದಲ್ಲಿ ಆರಂಭವಾದ ಚಳವಳಿಯೇ ಪ್ರತೀಕಾರ ಚಳವಳಿಯಾಗಿದೆ. |

ಸಾಮ್ರಾಜ್ಯಶಾಹಿಗಳೊಳಗಿನ ಅನಾರೋಗ್ಯಕರ ಸ್ಪರ್ಧೆಯು ಯುರೋಪಿನ ದೇಶಗಳನ್ನು ಸಂದಿಗ್ಧ ಪರಿಸ್ಥಿತಿಯತ್ತ ಸಾಗಿಸಿತು. ಅವುಗಳಲ್ಲಿ ಮೊರೊಕ್ಕೊ ಬಿಕ್ಕಟ್ಟು ಮತ್ತು ಬಾಲ್ಕನ್ ಬಿಕ್ಕಟ್ಟು ಪ್ರಧಾನವಾದವುಗಳಾಗಿವೆ.

**ಸಾಮ್ರಾಜ್ಯಶಾಹಿಗಳು ಸೃಷ್ಟಿಸಿದ ಬಿಕ್ಕಟ್ಟುಗಳು**

**ಮೊರೊಕ್ಕೊ ಬಿಕ್ಕಟ್ಟು**

1904ರಲ್ಲಿ ಬ್ರಿಟನ್ ಮತ್ತು ಫ್ರಾನ್ಸ್ ತಮ್ಮೊಳಗೆ ಸಹಿಹಾಕಿದ ರಹಸ್ಯ ಒಪ್ಪಂದದಂತೆ ಆಫ್ರಿಕಾದ ದೇಶವಾದ ಮೊರೊಕ್ಕೊದಲ್ಲಿ ಫ್ರಾನ್ಸಿನ ಆಧಿಪತ್ಯವನ್ನು ಬ್ರಿಟನ್ ಒಪ್ಪಿಕೊಂಡಿತು. ಆದರೆ ಮೊರೊಕ್ಕೊವನ್ನು ಆಗ್ರಹಿಸಿದ ಜರ್ಮನಿಯು ಇದನ್ನು ನಿರಾಕರಿಸಿತು. ಜರ್ಮನಿಯು ಮೊರೊಕ್ಕೊದ 'ಅಗಡಿರ್' ಬಂದರಿಗೆ ಯುದ್ಧ ಹಡಗುಗಳನ್ನು ಕಳುಹಿಸಿತು. ಅನಂತರ ಈ ಪರಿಸ್ಥಿತಿಯನ್ನು ನಿಭಾಯಿಸಲು ನಡೆದ ಮಾತುಕತೆಯಲ್ಲಿ ಫ್ರಾನ್ಸ್ ತಮ್ಮ ವಸಾಹತಾದ ಫ್ರೆಂಚ್ ಕೋಂಗೋದ ಕೆಲವು ಭಾಗಗಳನ್ನು ಜರ್ಮನಿಗೆ ನೀಡಿ ಈ ಪರಿಸ್ಥಿತಿಯನ್ನು ನಿಭಾಯಿಸಿತು. ಆದರೂ ಜರ್ಮನಿ ಮತ್ತು ಫ್ರಾನ್ಸ್‌ಗಳೊಳಗೆ ಶತ್ರುತ್ವವು ಮುಂದುವರಿಯಿತು.




**ಬಾಲ್ಕನ್ ಬಿಕ್ಕಟ್ಟು**

ಬಾಲ್ಕನ್ ಪ್ರದೇಶವು ಗ್ರೀಸಿನ ಪೂರ್ವದ ಏಜಿಯನ್ ಸಮುದ್ರ ಮತ್ತು ಕಪ್ಪು ಸಮುದ್ರದ ಸಮೀಪದಲ್ಲಿದೆ. ಇದು ಒಟ್ಟೋಮಾನ್ ತುರುಕರ ಸಾಮ್ರಾಜ್ಯದ ಭಾಗವಾಗಿತ್ತು. 1912ರಲ್ಲಿ ಬಾಲ್ಕನ್ ಮೈತ್ರಿಯು (ಸರ್ಬಿಯ, ಗ್ರೀಸ್, ಮೊಂಟೆನೆಗ್ರೊ, ಬಲ್ಗೇರಿಯಾ) ತುರ್ಕಿಯನ್ನು ಹೋರಾಟದಲ್ಲಿ ಪರಾಜಯಗೊಳಿಸಿತು. ಆದರೆ ಯುದ್ಧದಲ್ಲಿ ಗೆಲುವನ್ನು ಹಂಚಿಕೊಳ್ಳುವಾಗ ಬಾಲ್ಕನ್ ಮೈತ್ರಿಯ ರಾಷ್ಟ್ರಗಳೊಳಗೆ ಅಭಿಪ್ರಾಯ ವ್ಯತ್ಯಾಸಗಳುಂಟಾದವು. ಇದು ಬಾಲ್ಕನ್ ಪ್ರದೇಶದ ರಾಷ್ಟ್ರಗಳೊಳಗಿನ ಹೋರಾಟಕ್ಕೆ ಕಾರಣವಾಯಿತು.




ಬಾಲ್ಕನ್ ಪ್ರದೇಶದಲ್ಲಿ ಆಧಿಪತ್ಯವನ್ನು ಸ್ಥಾಪಿಸಲು ರಷ್ಯಾದ ಸಹಾಯದೊಂದಿಗೆ ಸರ್ಬಿಯ ಮತ್ತು ಜರ್ಮನಿಯ ಬೆಂಬಲದೊಂದಿಗೆ ಆಸ್ಟ್ರಿಯಾ ಪ್ರಯತ್ನಿಸಿತು. ಅದೇ ಸಮಯದಲ್ಲಿ 1914ರ ಜೂನ್‌ನಲ್ಲಿ ಆಸ್ಟ್ರಿಯಾದ ಉತ್ತರಾಧಿಕಾರಿಯಾದ ಫ್ರಾನ್ಸಿಸ್ ಫರ್ಡಿನಾಂಡನನ್ನು ಬೊಸ್ನಿಯಾದ ರಾಜಧಾನಿಯಾದ ಸರೆಜಾವೊದಲ್ಲಿ ಸರ್ಬಿಯದ ಯುವಕನಾದ ಗಾವ್‌ಲೊ ಪ್ರಿನ್ಸ್‌ಪ್ ಗುಂಡಿಕ್ಕಿ ಕೊಂದನು. ಸರ್ಬಿಯವೇ ಇದಕ್ಕೆ ಕಾರಣವೆಂದು ಘೋಷಿಸಿದ ಆಸ್ಟ್ರಿಯಾವು ಸರ್ಬಿಯಾದ ಮೇಲೆ 1914 ಜೂನ್ 28ರಂದು ಯುದ್ಧವನ್ನು ಘೋಷಿಸಿತು. ನಂತರ ಪ್ರತಿಯೊಂದು ರಾಷ್ಟ್ರವೂ ತಮ್ಮ ಒಕ್ಕೂಟದಲ್ಲಿ ಒಳಪಟ್ಟ ರಾಷ್ಟ್ರದ ಸಹಾಯಕ್ಕಾಗಿ ಮುಂದೆ ಬಂದುವು. ಜಗತ್ತಿನ ಸಣ್ಣ ಮತ್ತು ದೊಡ್ಡ ರಾಷ್ಟ್ರಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಇದರಲ್ಲಿ ಭಾಗವಹಿಸಿದುವು. ಆದುದರಿಂದ ಈ ಯುದ್ಧವನ್ನು ಒಂದನೇ ಜಾಗತಿಕ ಯುದ್ಧ ಎಂಬ ಹೆಸರಿನಿಂದ ಕರೆಯುತ್ತಾರೆ.



ಸಾಮ್ರಾಜ್ಯಶಾಹಿ ಸ್ಪರ್ಧೆಗಳು ಪ್ರಪಂಚದ ದೇಶಗಳನ್ನು ಒಂದು ಯುದ್ಧದ ಕಡೆಗೆ ಹೇಗೆ ಮುನ್ನಡೆಸಿದವು ಎಂಬುವುದನ್ನು ಚರ್ಚಿಸಿರಿ.

## ಯುದ್ಧದ ಪರಿಣಾಮಗಳು

ಒಂದನೇ ಜಾಗತಿಕ ಯುದ್ಧವು 1918ರಲ್ಲಿ ಕೊನೆಗೊಂಡಿತು. ಇದರ ದುಷ್ಪರಿಣಾಮಗಳು ಪ್ರಪಂಚದ ಎಲ್ಲ ರಾಷ್ಟ್ರಗಳನ್ನು ಬಾಧಿಸಿದುವು.

- ಮಿಲಿಯಗಟ್ಟಲೆ ಜನರು ಜೀವಹಾನಿಗೊಳಗಾದರು ಮತ್ತು ಗಾಯಗೊಂಡರು.
- ಯುರೋಪ್ ಆರ್ಥಿಕವಾಗಿ ದುರ್ಬಲವಾಯಿತು.
- ಬಡತನ, ನಿರುದ್ಯೋಗ, ಹಣದುಬ್ಬರ, ಮೊದಲಾದವುಗಳು ತಲೆದೋರಿದುವು.
- ಏಷ್ಯಾ ಮತ್ತು ಆಫ್ರಿಕಾದಲ್ಲಿ ಸ್ವಾತಂತ್ರ್ಯ ಹೋರಾಟಗಳು ತೀವ್ರಗೊಂಡವು.
- ಕೃಷಿ, ಕೈಗಾರಿಕೆ, ವಾರ್ತಾವಿನಿಮಯ ಮೊದಲಾದುವುಗಳು ಯುದ್ಧದಿಂದ ನಾಶವಾದವು.
- ಪ್ರಪಂಚದಲ್ಲಿ ಶಾಂತಿ ಸ್ಥಾಪನೆಗಾಗಿ ಜನಾಂಗ ಸಂಘದ (League of Nations) ಸ್ಥಾಪನೆಯಾಯಿತು.

### ಯುದ್ಧ ಸೆಲ್ಯುಲೊಯಿಡ್‌ನಲ್ಲೂ

'ಗ್ರೇಂಡ್ ಇಲ್ಯುಷನ್' ಒಂದನೇ ಜಾಗತಿಕ ಯುದ್ಧದ ಫ್ರೆಂಚ್ ಯುದ್ಧಕೈದಿಗಳ ಕಥೆಯನ್ನು ಆಧರಿಸಿ ಯಾಜ ರೆನ್ವಾ ನಿರ್ಮಿಸಿದ ಚಲನಚಿತ್ರವಾಗಿದೆ. ಇದು ಯುದ್ಧದ ಕುರಿತಾದ ಬಹಳ ಪ್ರಸಿದ್ಧ ಚಲನಚಿತ್ರಗಳಲ್ಲಿ ಒಂದಾಗಿದೆ. 'ಗ್ರೇಂಡ್ ಇಲ್ಯುಷನ್'ನ ಪ್ರಿಂಟ್‌ಗಳನ್ನು ನಾಝಿಗಳು ನಾಶಮಾಡಿದರೂ ನಂತರ ಅವುಗಳನ್ನು ಪತ್ತೆಹಚ್ಚಲಾಯಿತು. ಲೇವಿಸ್ ಮೈಲ್‌ಸ್ಟಾನ್ ನಿರ್ಮಿಸಿದ "All Quite on the Western Front", ಸ್ಟಾನ್ಲಿ ಕುಬ್ರಿಕಿನ "Path of Glory", ಎಂಬೀ ಚಲನಚಿತ್ರಗಳು ಒಂದನೇ ಜಾಗತಿಕ ಯುದ್ಧದ ದೃಶ್ಯಗಳನ್ನು ಕಣ್ಣಮುಂದಿರಿಸುತ್ತವೆ.

## ಶಾಂತಿ ಪ್ರಯತ್ನಗಳು

ಒಂದನೆಯ ಜಾಗತಿಕ ಯುದ್ಧದಲ್ಲಿ ಜಯಗಳಿಸಿದ ಮಿತ್ರರಾಷ್ಟ್ರಗಳು ಬ್ರಿಟನ್ ಮತ್ತು ಫ್ರಾನ್ಸ್‌ನ ನೇತೃತ್ವದಲ್ಲಿ 1919ರಲ್ಲಿ ಪ್ಯಾರಿಸ್‌ನಲ್ಲಿ ಶಾಂತಿ ಸಮ್ಮೇಳನವನ್ನು ನಡೆಸಿದವು. ಯುದ್ಧಾನಂತರದ ಪ್ರಪಂಚದ ಭವಿಷ್ಯವನ್ನು ನಿರ್ಧರಿಸುವುದಕ್ಕಾಗಿ ಈ ಸಭೆ ಜರಗಿತ್ತು. ಪರಾಜಯ ಹೊಂದಿದ ರಾಷ್ಟ್ರಗಳೊಂದಿಗೆ ಅವರು ಅನೇಕ ಶಾಂತಿ ಒಪ್ಪಂದಗಳಿಗೆ ಸಹಿಹಾಕಿದರು. ಜರ್ಮನಿಯೊಂದಿಗೆ 1919ರಲ್ಲಿ ಮಾಡಿಕೊಂಡ ವರ್ಸಾಯಿ ಒಪ್ಪಂದವು ಅದರಲ್ಲಿ ಪ್ರಧಾನವಾದುದಾಗಿದೆ. ಇದರಂತೆ ಜರ್ಮನಿಯ ಎಲ್ಲ ವಸಾಹತುಗಳನ್ನು ಮಿತ್ರಪಕ್ಷಗಳು ಹಂಚಿಕೊಂಡವು. ಯುದ್ಧದ ನಷ್ಟ ಪರಿಹಾರಕ್ಕಾಗಿ ಜರ್ಮನಿಯು ದೊಡ್ಡ ಮೊತ್ತದ ಹಣವನ್ನು ನೀಡಬೇಕಾಯಿತು. ಗಣಿಗಳಿಂದ ಸಂಪದ್ಭರಿತವಾದ ಪ್ರದೇಶಗಳನ್ನು ಮಿತ್ರಪಕ್ಷಗಳು ವಶಪಡಿಸಿಕೊಂಡುವು. ಎಲ್ಲಕ್ಕಿಂತಲೂ ಮಿಗಿಲಾಗಿ ಯುದ್ಧದ ಅಪರಾಧವನ್ನು ಜರ್ಮನಿಯ ಮೇಲೆ ಹೊರಿಸಿ ಅದನ್ನು ನಿಶ್ಶಸ್ತ್ರೀಕರಣಗೊಳಿಸಲಾಯಿತು.



ವರ್ಸಾಯಿ ಒಪ್ಪಂದವು ಒಂದನೇ ಜಾಗತಿಕ ಯುದ್ಧದಲ್ಲಿ ಜಯಗಳಿಸಿದವರಿಗೆ ಪರಾಜಯ ಹೊಂದಿದವರೊಂದಿಗೆ ಇದ್ದ ಪ್ರತೀಕಾರ ಮನೋಭಾವಕ್ಕೆ ಉದಾಹರಣೆಯಾಗಿದೆ. ಚರ್ಚಿಸಿರಿ.

## ಆರ್ಥಿಕ ಸಂದಿಗ್ಧತೆ

ಅಮೇರಿಕಾವು ಪ್ರಥಮ ಜಾಗತಿಕ ಯುದ್ಧದಲ್ಲಿ ನಾಶ ನಷ್ಟವನ್ನು ಅನುಭವಿಸದ ದೇಶವಾಗಿತ್ತು. ಯುದ್ಧದಿಂದ ಕಂಗೆಟ್ಟ ಯುರೋಪಿನ ದೇಶಗಳು ಅಮೇರಿಕಾದಿಂದ ಬೃಹತ್ ಪ್ರಮಾಣದ ಸಾಲವನ್ನು ಪಡೆದುಕೊಂಡವು. ಇದರೊಂದಿಗೆ ಬ್ರಿಟಿಷ್ ಪೌಂಡ್‌ನ ಬದಲು ಅಮೇರಿಕನ್ ಡಾಲರ್ ಅಂತಾರಾಷ್ಟ್ರೀಯ ವಿನಿಮಯದ ಮೂಲವಾಗಿ ಬದಲಾಯಿತು. ಅಮೇರಿಕಾವು ಯುರೋಪಿನ ಹೊರಗೆ ಹೊಸ ಆರ್ಥಿಕ ಶಕ್ತಿಯಾಗಿ ಮೂಡಿಬಂತು.

ಆದರೆ ಅಮೇರಿಕಾದ ಆರ್ಥಿಕ ಮುನ್ನಡೆಯು ದೀರ್ಘಕಾಲದವರೆಗೆ ಉಳಿಯಲಿಲ್ಲ. 1929ರಲ್ಲಿ ಇಡೀ ಪ್ರಪಂಚವನ್ನೇ ಬಾಧಿಸಿದ ಆರ್ಥಿಕ ಹಿಂಜರಿತವು ಅಮೇರಿಕಾದಿಂದಲೇ ಪ್ರಾರಂಭವಾಯಿತು. ಅದರ ಪರಿಣಾಮಗಳನ್ನು ಕೆಳಗೆ ನೀಡಲಾಗಿದೆ.

- ಯುದ್ಧದಿಂದ ಕಂಗಾಲಾದ ಜನರಿಗೆ ವಸ್ತುಗಳನ್ನು ಖರೀದಿಸುವ ಸಾಮರ್ಥ್ಯವು ಇಲ್ಲದಾಯಿತು.
- ಉತ್ಪನ್ನಗಳು ಮಾರಾಟವಾಗದೆ ಕಾರ್ಖಾನೆಗಳಲ್ಲೇ ಉಳಿದುವು.
- ಅಮೇರಿಕದಿಂದ ಪಡೆದ ಸಾಲವನ್ನು ಮರುಪಾವತಿಸಲು ಯುರೋಪಿನ ದೇಶಗಳಿಗೆ ಸಾಧ್ಯವಾಗಲಿಲ್ಲ.
- ಬ್ಯಾಂಕುಗಳು ಸ್ಥಗಿತಗೊಂಡವು.
- ಹಣದುಬ್ಬರ ಹೆಚ್ಚಾಯಿತು.
- ನಿರುದ್ಯೋಗ ಹಾಗೂ ಬಡತನ ಹೆಚ್ಚಾಯಿತು.



**ಕರಾಳ ಗುರುವಾರ**

1929 ಅಕ್ಟೋಬರ್ 24ರಂದು ನ್ಯೂಯೋರ್ಕ್‌ನ ಷೇರುಮಾರುಕಟ್ಟೆಯಲ್ಲುಂಟಾದ ಕುಸಿತವನ್ನು 'ಕರಾಳ ಗುರುವಾರ' ಎಂದು ಕರೆಯುತ್ತಾರೆ. ಅಂದಿನವರೆಗಿದ್ದ ಆರ್ಥಿಕ ಮುನ್ನಡೆಯು ಒಂದೇ ದಿವಸದಲ್ಲಿ ಕುಸಿದು ಹೋಯಿತು. ನಿಕ್ಷೇಪಕರ ಹಿಂತೆಗೆತ ಹಾಗೂ ಷೇರುಗಳ ಬೃಹತ್ ಪ್ರಮಾಣದ ಮಾರಾಟವು ಷೇರುಮಾರುಕಟ್ಟೆಯು ಕುಸಿಯುವಂತೆ ಮಾಡಿತು. ಅನೇಕಮಂದಿಗೆ ಜೀವನದ ಎಲ್ಲ ಸಂಪಾದನೆಯೂ ನಷ್ಟವಾಯಿತು. ಅನೇಕ ಜನರು ಆತ್ಮಹತ್ಯೆ ಮಾಡಿದರು. ನ್ಯೂಯೋರ್ಕಿನ ಕುಸಿತವು ಅಮೇರಿಕವನ್ನು ಮಾತ್ರವಲ್ಲ ಮತ್ತಿತರ ಯುರೋಪಿಯನ್ ದೇಶಗಳನ್ನೂ ಬಾಧಿಸಿತು. ಕೈಗಾರಿಕಾ ಕೇಂದ್ರಗಳಲ್ಲಿ ಉತ್ಪಾದನೆ ಕಡಿಮೆಯಾಯಿತು. ನಿರುದ್ಯೋಗ ಹೆಚ್ಚಾಯಿತು. ಜಾಗತಿಕ ವ್ಯಾಪಾರವೇ ತೊಂದರೆಗೊಳಗಾಯಿತು.

ಈ ಬಿಕ್ಕಟ್ಟಿನಿಂದ ಪಾರಾಗಲು ಯುರೋಪಿನ ದೇಶಗಳು ತಮ್ಮ ಅಧೀನದಲ್ಲಿದ್ದ ವಸಾಹತುಗಳಲ್ಲಿ ತೆರಿಗೆಯನ್ನು ಹೆಚ್ಚಿಸಲು ತೀರ್ಮಾನಿಸಿದುವು. ಹೀಗೆ ಸಾಮ್ರಾಜ್ಯಶಾಹಿ ದೇಶಗಳ ಆರ್ಥಿಕ ಬಿಕ್ಕಟ್ಟಿನ ಹೊರೆಯನ್ನು ವಸಾಹತಿನ ಜನರ ಮೇಲೆ ಹೊರಿಸಲಾಯಿತು.

ಅಮೇರಿಕಾದಲ್ಲುಂಟಾದ ಆರ್ಥಿಕ ಹಿಂಜರಿತವು ಇತರ ದೇಶಗಳ ಆರ್ಥಿಕ ವಲಯವನ್ನು ಹೇಗೆ ಬಾಧಿಸಿತು ಎಂಬುದನ್ನು ಕಂಡುಕೊಂಡು ಟಿಪ್ಪಣಿ ತಯಾರಿಸಿರಿ.



## ಫ್ಯಾಸಿಸಂ ಮತ್ತು ನಾಝಿಸಂ

*'ನನ್ನನ್ನು ಶಪಿಸುವವರನ್ನು ನಿರಾಸೆಪಡಿಸಬೇಡಿ ಎಂದು ನಾನು ಹೇಳುತ್ತೇನೆ. ಮನುಷ್ಯನ ಅತಿಯಾಸೆಯು ಅವನ ದುರಂತಕ್ಕೆ ಕಾರಣವಾಯಿತು. ಮಾನವ ದ್ವೇಷವು ಕೊನೆಗೊಳ್ಳಬಹುದು ಹಾಗೂ ಏಕಾಧಿಪತಿಗಳು ಮೃತರಾಗಬಹುದು. ಜನರಿಂದ ಕಸಿದುಕೊಂಡ ಅಧಿಕಾರವು ಅವರ ಮರಣದೊಂದಿಗೆ ಜನರಿಗೆ ಪುನಃ ಲಭಿಸುವುದು. ಮನುಷ್ಯನು ಇರುವ ವರೆಗೂ ಸ್ವಾತಂತ್ರ್ಯವು ನಾಶವಾಗದು.'*

*ಚಾರ್ಲಿ ಚಾಪ್ಲಿನ್‌ನ 'ದ ಗ್ರೇಟ್ ಡಿಕ್ಟೇಟರ್' ಎಂಬ ಸಿನಿಮಾದಿಂದ*

ಇದು ಪ್ರಥಮ ಜಾಗತಿಕ ಯುದ್ಧಾನಂತರ ಕೆಲವು ಯುರೋಪಿಯನ್ ದೇಶಗಳ ಅಧಿಕಾರದಲ್ಲಿ ಬಂದ ಸ್ವೇಚ್ಛಾಧಿಪತ್ಯ ಆಡಳಿತಕ್ಕೆ ಸಂಬಂಧಿಸಿ ಚಾರ್ಲಿ ಚಾಪ್ಲಿನ್ ಅವರ ನಿರೀಕ್ಷಣೆಯಾಗಿದೆ. ಅಂತಹ ಆಡಳಿತ ಒಕ್ಕೂಟಗಳು ರೂಪುಗೊಳ್ಳಲು ಕಾರಣವಾದ ಸನ್ನಿವೇಶಗಳು ಯಾವುವು ಎಂಬುದನ್ನು ನೋಡೋಣ.



**ಫ್ಯಾಸಿಸಂ**

ಫ್ಯಾಸಿಸಂ ಎಂಬ ಪದವು ಲ್ಯಾಟಿನ್ ಭಾಷೆಯಿಂದ ರೂಪುಗೊಂಡಿದೆ. ಒಂದು ಕಟ್ಟು ಕೋಲು ಮತ್ತು ಅದರ ಮೇಲೆ ಕೊಡಲಿ ಎಂಬುದು ಇದರ ಅರ್ಥ. ಇದು ಪ್ರಾಚೀನ ರೋಮಿನ ಅಧಿಕಾರದ ಚಿಹ್ನೆಯಾಗಿತ್ತು.

ಪ್ರಥಮ ಜಾಗತಿಕ ಯುದ್ಧದಲ್ಲಿ ಗೆಲುವನ್ನು ಪಡೆದ ದೇಶಗಳು ಹಾಗೂ ಸೋಲನ್ನು ಅನುಭವಿಸಿದ ದೇಶಗಳ ಸ್ಥಿತಿಯು ಶೋಚನೀಯವಾಗಿತ್ತು. ಯುರೋಪಿನ ಹಲವು ದೇಶಗಳಲ್ಲಿ ಅಸ್ತಿತ್ವದಲ್ಲಿದ್ದ ಆಡಳಿತ ಒಕ್ಕೂಟಗಳು ಅಧಿಕಾರವನ್ನು ಕಳೆದುಕೊಂಡವು. ಜನರು ನಿರುದ್ಯೋಗಿಗಳಾದರು. ಹಣದುಬ್ಬರವು ಆರ್ಥಿಕ ಕ್ಷೇತ್ರವನ್ನು ಬಾಧಿಸಿತು. ಇಟಲಿಯ ಫ್ಯಾಸಿಸಂ ಮತ್ತು ಜರ್ಮನಿಯ ನಾಝಿಸಂಗಳು ಈ ರೀತಿಯ ರಾಜಕೀಯ-ಆರ್ಥಿಕ ಅನಿಶ್ಚಿತತೆಯನ್ನು ಶೋಷಣೆ ಮಾಡಿ ಅಧಿಕಾರವನ್ನು ಗಳಿಸಿದ ಎರಡು ಸೈದ್ಧಾಂತಿಕ ಒಕ್ಕೂಟಗಳಾಗಿವೆ. ಆರ್ಥಿಕ ಅಧಃಪತನ, ಯುದ್ಧದಲ್ಲಿ ಗೆಲುವು ಸಾಧಿಸಿದವರಲ್ಲಿ ಪ್ರತೀಕಾರ ಮನೋಭಾವ, ಗೊತ್ತು ಗುರಿಯಿಲ್ಲದಿರುವಿಕೆ ಮುಂತಾದ ಘಟಕಗಳು ಇದಕ್ಕೆ ಅನುಕೂಲಕರವಾದ ಸನ್ನಿವೇಶವನ್ನು ಸೃಷ್ಟಿಸಿದುವು. ಫ್ಯಾಸಿಸಂನ ಕೆಲವು ವಿಶೇಷತೆಗಳನ್ನು ಪರಿಚಯಿಸಿಕೊಳ್ಳೋಣ.

**ಫ್ಯಾಸಿಸಂ**

| | |
|---|---|
| ಪ್ರಜಾಪ್ರಭುತ್ವಕ್ಕೆ ವಿರೋಧ | ಸಮಾಜವಾದಕ್ಕೆ ವಿರೋಧ |
| ರಾಷ್ಟ್ರವನ್ನು ವೈಭವೀಕರಿಸುವುದು. | ವಂಶೀಯತೆಯನ್ನು ಎತ್ತಿ ಹಿಡಿಯುವುದು |
| ಯುದ್ಧವನ್ನು ವೈಭವೀಕರಿಸುವುದು | ಆಕ್ರಮಣಕಾರಿ ರಾಷ್ಟ್ರೀಯತೆಯನ್ನು ಪ್ರಚಾರಮಾಡುವುದು. |
| ಭೂತಕಾಲವನ್ನು ಹೊಗಳುವುದು. | ಕಲೆ, ಸಾಹಿತ್ಯ, ಶಿಕ್ಷಣ ಮೊದಲಾದುವುಗಳ ಮೂಲಕ ಆಶಯವನ್ನು ಪ್ರಚಾರಮಾಡುವುದು. |
| ಸೈನಿಕ ಸ್ವೇಚ್ಛಾಧಿಪತ್ಯ | ರಾಜಕೀಯ ವೈರಿಗಳನ್ನು ನಿರ್ಮೂಲನ ಮಾಡುವುದು |

"ಫ್ಯಾಸಿಸಂ ಎಂಬುದು ಪ್ರಥಮ ಜಾಗತಿಕ ಯುದ್ಧದ ಸೃಷ್ಟಿಯಾಗಿತ್ತು" ಈ ಹೇಳಿಕೆಯನ್ನು ಚರ್ಚಿಸಿರಿ.



## ಮುಸ್ಸೋಲಿನಿ ಮತ್ತು ಫ್ಯಾಸಿಸಂ

*'ಪುರುಷನಿಗೆ ಯುದ್ಧ ಸ್ತ್ರೀಗೆ ಮಾತೃತ್ವ ಎಂಬ ಹಾಗೆ"'*

*ಮುಸ್ಸೋಲಿನಿ*


ಬೆನಿಟ್ಟೋ ಮುಸ್ಸೋಲಿನಿ

ಇದು ಇಟೆಲಿಯಲ್ಲಿ ಫ್ಯಾಸಿಸ್ಟ್ ಆಡಳಿತಕ್ಕೆ ನೇತೃತ್ವ ನೀಡಿದ ಬೆನಿಟ್ಟೋ ಮುಸ್ಸೋಲಿನಿಯ ಮಾತುಗಳಾಗಿವೆ. ಇಟೆಲಿಯಲ್ಲಿ ಫ್ಯಾಸಿಸ್ಟ್ ಪಾರ್ಟಿಯು ಅಧಿಕಾರಕ್ಕೆ ಬರಲು ಕಾರಣವಾದ ಸನ್ನಿವೇಶವನ್ನು ನಾವು ಪರಿಚಯಿಸಿಕೊಳ್ಳೋಣ.

- ಪ್ರಥಮ ಜಾಗತಿಕ ಯುದ್ಧದಲ್ಲಿ ಜಯಗಳಿಸಿದ ಒಕ್ಕೂಟದಲ್ಲಿದ್ದರೂ ಇಟೆಲಿಗೆ ಬಹುದೊಡ್ಡ ಪ್ರಯೋಜನವೇನೂ ಲಭಿಸಲಿಲ್ಲ.
- ಯುದ್ಧದ ಅನಂತರ ಕೈಗಾರಿಕೆಗಳ ಹಿನ್ನಡೆ, ನಿರುದ್ಯೋಗ, ತೆರಿಗೆ ಹೆಚ್ಚಳ, ಹಣದುಬ್ಬರ ಮೊದಲಾದುವುಗಳು ಜನರು ಆಡಳಿತದಿಂದ ದೂರ ಸರಿಯುವಂತೆ ಮಾಡಿತು.
- ದೇಶವು ಸಾಮಾಜವಾದದ ಕಡೆಗೆ ಹೋಗುವುದೋ ಎಂಬ ಭಯವು ಧನಿಕರನ್ನು ಫ್ಯಾಸಿಸಂಗೆ ಬೆಂಬಲ ನೀಡುವಂತೆ ಪ್ರೇರೇಪಿಸಿತು.



**ಜಯಗಳಿಸಿದ ಇಟೆಲಿ**

ಪ್ರಥಮ ಜಾಗತಿಕ ಯುದ್ಧ ಆರಂಭಗೊಂಡಾಗ ತ್ರಿಶಕ್ತಿ ಮೈತ್ರಿಯಲ್ಲಿದ್ದ ಇಟೆಲಿಯು ಯುದ್ಧ ಮುಂದುವರಿದಂತೆಯೇ ಬ್ರಿಟನ್ ಹಾಗೂ ಫ್ರಾನ್ಸಿನೊಂದಿಗೆ ಸೇರಿಕೊಂಡಿತು. ಹೀಗೆ ಯುದ್ಧ ಕೊನೆಗೊಳ್ಳುವಾಗ ಇಟೆಲಿಯು ಜಯಗಳಿಸಿದ ಒಕ್ಕೂಟದ ಅಂಗವಾಯಿತು.

ಇಟೆಲಿಯಲ್ಲಿ ಅಧಿಕಾರಕ್ಕೇರಿದ ಮುಸ್ಸೋಲಿನಿಯು ರಾಜಕೀಯ ಆರ್ಥಿಕ ಕ್ಷೇತ್ರಗಳಲ್ಲಿ ಸ್ವೇಚ್ಛಾಧಿಪತ್ಯ ರೀತಿಯ ಕ್ರಮಗಳನ್ನು ಕೈಗೊಂಡನು. ಫ್ಯಾಸಿಸ್ಟರು ಆಕ್ರಮಣಕಾರಿ ಹಾಗೂ ಹಿಂಸಾತ್ಮಕ ಮಾರ್ಗಗಳನ್ನು ಸ್ವೀಕರಿಸಿದರು. ಸಮಾಜವಾದಿಗಳು, ಕಾರ್ಮಿಕರು – ಕೃಷಿಕ ನೇತಾರರು ಎಂಬವರನ್ನು ರಾಷ್ಟ್ರದ ಶತ್ರುಗಳನ್ನಾಗಿ ಘೋಷಿಸಿದರು. ಫ್ಯಾಸಿಸ್ಟ್ ಪಾರ್ಟಿಯನ್ನು ವಿರೋಧಿಸಿದವರನ್ನು ಗಲ್ಲಿಗೇರಿಸಲಾಯಿತು. ಪ್ರಾಚೀನ ರೋಮನ್ ಸಾಮ್ರಾಜ್ಯವನ್ನು ಪುನಃಸ್ಥಾಪಿಸುವುದು ಮುಸ್ಸೋಲಿನಿಯ ಗುರಿಯಾಗಿತ್ತು. ಅದರ ಅಂಗವಾಗಿ ಪ್ರಾಚೀನ ರೋಮನ್ ಆಡಳಿತದ ಹಲವು ಮುದ್ರೆಗಳನ್ನು ಅವನು ಸ್ವೀಕರಿಸಿದನು. ಫ್ಯಾಸಿಸ್ಟ್ ಧೋರಣೆಗಳನ್ನು ಜಾರಿಗೊಳಿಸಲು ಕಪ್ಪಂಗಿಗಳು (Black Shirts) ಎಂಬ ಸೈನಿಕ ವಿಭಾಗವನ್ನು ಉಪಯೋಗಿಸಿ ವಿರೋಧಿಗಳನ್ನು ದಮನಿಸಿದನು. ಆಕ್ರಮಣಕಾರಿ ವಿದೇಶ ನೀತಿಯನ್ನು ಸ್ವೀಕರಿಸಿದ ಮುಸ್ಸೋಲಿನಿಯು ಇಥಿಯೋಪಿಯಾ, ಅಲ್ಬೇನಿಯಾ ಮೊದಲಾದ ದೇಶಗಳನ್ನು ಆಕ್ರಮಿಸಿದನು. ಇಟೆಲಿಯ ಸಾಮ್ರಾಜ್ಯ ವ್ಯಾಮೋಹವು ಜಗತ್ತಿನ ದೇಶಗಳನ್ನು ಇನ್ನೊಂದು ಜಾಗತಿಕ ಯುದ್ಧದ ಕಡೆಗೆ ಮುನ್ನಡೆಸಿತು.



**ಮೆಟ್ಟಿಯೋಟ್ಟಿ**

ಮೆಟ್ಟಿಯೋಟ್ಟಿಯು ಇಟೆಲಿಯ ಪ್ರಮುಖ ಸಾಮಾಜಿಕ ಚಿಂತಕನಾಗಿದ್ದನು. ಫ್ಯಾಸಿಸ್ಟ್‌ಗಳ ಚಟುವಟಿಕೆಗಳನ್ನು ಅವರು ಜನಸಾಮಾನ್ಯರಿಗೆ ತಿಳಿಸಿಕೊಟ್ಟರು. ಸ್ವತಂತ್ರವಾದ ಲೇಖನಗಳು ಹಾಗೂ ಭಾಷಣಗಳ ಮೂಲಕ ಫ್ಯಾಸಿಸ್ಟರನ್ನು ವಿರೋಧಿಸಿದ್ದ ಮೆಟ್ಟಿಯೋಟ್ಟಿಯನ್ನು ಫ್ಯಾಸಿಸ್ಟರು ಬೀದಿಯಲ್ಲೇ ಹಿಡಿದು ಕೊಂದರು.

## ಹಿಟ್ಲರ್ ಮತ್ತು ನಾಝಿಸಂ



ಅಡೋಲ್ಫ್ ಹಿಟ್ಲರ್

*" ಅವರು ಮೊದಲು ಸಮಾಜವಾದಿಗಳನ್ನು ಹುಡುಕಿಕೊಂಡು ಬಂದರು. ನಾನೊಬ್ಬ ಸಮಾಜವಾದಿ ಅಲ್ಲದ ಕಾರಣ ಆಗ ಪ್ರತಿಭಟಿಸಲಿಲ್ಲ. ಅನಂತರ ಅವರು ಕಾರ್ಮಿಕ ಸಂಘಟನೆಯವರನ್ನು ಹುಡುಕಿಕೊಂಡು ಬಂದರು. ನಾನೊಬ್ಬ ಕಾರ್ಮಿಕ ಸಂಘಟನೆಯವನಲ್ಲದ ಕಾರಣ ಪ್ರತಿಭಟಿಸಲಿಲ್ಲ. ಅನಂತರ ಅವರು ಯಹೂದ್ಯರನ್ನು ಹುಡುಕಿಕೊಂಡು ಬಂದರು. ಓರ್ವ ಯಹೂದ್ಯನಲ್ಲದ ಕಾರಣ ಆಗಲೂ ನಾನು ಪ್ರತಿಭಟಿಸಲಿಲ್ಲ. ಕೊನೆಯದಾಗಿ ಅವರು ನನ್ನನ್ನು ಹುಡುಕಿಕೊಂಡು ಬಂದರು. ಆಗ ನನಗಾಗಿ ಪ್ರತಿಭಟಿಸಲು ಬೇರೆ ಯಾರು ಬಾಕಿ ಇರಲಿಲ್ಲ"*

**........... - ಪಾಸ್ಟರ್ ಮಾರ್ಟಿನ್ ನಿಮೋಯ್ಲರ್**

ಫ್ರಾನ್ಸಿನ ಜರ್ಮನಿ ಆವೃತ್ತಿಯು ನಾಝಿಸಂ ಆಗಿದೆ. ನಾಝಿಸಂನ ನೇತಾರನಾದ ಹಿಟ್ಲರನು ಅಧಿಕಾರಕ್ಕೆ ಬರಲು ಸಹಾಯಕವಾದ ಕೆಲವು ಸನ್ನಿವೇಶಗಳನ್ನು ಪರಿಚಯಿಸಿಕೊಳ್ಳೋಣ.

- ಪ್ರಥಮ ಜಾಗತಿಕ ಯುದ್ಧದ ನಂತರ ಜರ್ಮನಿಯ ಮೇಲೆ ಹೇರಿದ ವರ್ಸಾಯಿ ಒಪ್ಪಂದ.
- ಆರ್ಥಿಕ ಅಧಃಪತನ ಹಾಗೂ ಹಣದುಬ್ಬರ.
- ಜರ್ಮನ್ ಆಡಳಿತದ ವೈಫಲ್ಯ ಹಾಗೂ ರಾಜಕೀಯ ಅಸ್ಥಿರತೆ.

ಹಿಟ್ಲರನು ತನ್ನ ಸಂಘಟನಾ ಸಾಮರ್ಥ್ಯ ಹಾಗೂ ಮಾತುಗಾರಿಕಾ ಚತುರತೆಯನ್ನು ಉಪಯೋಗಿಸಿ ಬಹಳ ಬೇಗನೆ ಜರ್ಮನರನ್ನು ಆಕರ್ಷಿಸಿದನು. ಆಡಳಿತ ನಡೆಸುತ್ತಿದ್ದವರನ್ನು ಪದಚ್ಯುತಿಗೊಳಿಸಿ ಅಧಿಕಾರಕ್ಕೇರಿದ ಹಿಟ್ಲರನು ನಾಝಿಸಂನ ಪ್ರಧಾನ ವಿರೋಧಿಗಳಾದ ಸಮಾಜವಾದಿಗಳು, ಕಮ್ಯೂನಿಸ್ಟರು, ಯಹೂದ್ಯರು ಹಾಗೂ ಪ್ರಜಾಪ್ರಭುತ್ವವಾದಿಗಳನ್ನು ವಧಿಸಿದನು. ಜರ್ಮನಿಗೆ ಆದ ಅವಮಾನ ಹಾಗೂ ಹಿನ್ನಡೆಗೆ ಯಹೂದ್ಯರೇ ಕಾರಣ ಎಂದು ಹಿಟ್ಲರನು ಆರೋಪಿಸಿದನು. ವಿಶೇಷವಾಗಿ ತಯಾರಿಸಿದ ಕಾನ್‌ಸಂಟ್ರೇಶನ್ ಕ್ಯಾಂಪುಗಳಲ್ಲಿ ಯಹೂದ್ಯರನ್ನು ಸಾಮೂಹಿಕವಾಗಿ ವಧಿಸಿದನು. ಇದನ್ನು ಹೋಲೋಕಾಸ್ಟ್ (Holocaust) ಎಂದು ಕರೆಯುತ್ತಾರೆ. ಇದಕ್ಕಾಗಿ 'ಕಂದು ಅಂಗಿ' (Brown Shirts) ಎಂಬ ಸೈನ್ಯವನ್ನು ಮತ್ತು 'ಗಸ್ಟಾಪೊ' ಎಂಬ ರಹಸ್ಯ ಗುಂಪನ್ನು ರೂಪಿಸಿದನು.

ಆರ್ಯರು ಪ್ರಪಂಚದ ಅತ್ಯಂತ ಪರಿಶುದ್ಧವಾದ ವಂಶಜರೆಂದೂ ಅವರು ಜಗತ್ತನ್ನಾಳಬೇಕೆಂದೂ ಜರ್ಮನರು ಆರ್ಯವಂಶದವರೆಂದೂ ಹಿಟ್ಲರನು



### ಆನ್‌ಫ್ರಾಂಕಿನ ಡೈಯರಿ ಟಿಪ್ಪಣಿಗಳು




ಆನ್‌ಫ್ರಾಂಕಿನ ಡೈಯರಿ ಟಿಪ್ಪಣಿಗಳು ನಾಝಿಗಳ ಆಡಳಿತಕಾಲದಲ್ಲಿ ಯಹೂದ್ಯರು ಅನುಭವಿಸಿದ ಕಷ್ಟಗಳ ವಿವರಣೆಗಳಾಗಿವೆ. ನಾಝಿಗಳ ಆಡಳಿತಕಾಲದಲ್ಲಿ ಆನ್‌ಫ್ರಾಂಕಿನ ಕುಟುಂಬವು ಜರ್ಮನಿಯಿಂದ ಪಲಾಯನಗೈದಿತು. ಆದರೆ ನಾಝಿಗಳಿಂದ ಸೆರೆಹಿಡಿಯಲ್ಪಟ್ಟ ಆನ್‌ಫ್ರಾಂಕ್ ಹಾಗೂ ಸಹೋದರಿಯನ್ನು ಔಷ್‌ವಿಟ್ಸ್ ಕಾನ್‌ಸಂಟ್ರೇಶನ್ ಕ್ಯಾಂಪಿನಲ್ಲಿ ಬಂಧನದಲ್ಲಿರಿಸಿದರು. ಅವರು ಅಲ್ಲೇ ಮೃತಪಟ್ಟರು.



### ಚಂಪಕರಾಮನ್ ಪಿಳ್ಳೆ ಮತ್ತು ನಾಝಿಗಳು

ಮಲಯಾಳಿಯಾದ ಚಂಪಕರಾಮನ್ ಪಿಳ್ಳೆಯವರು ಭಾರತದ ಸ್ವಾತಂತ್ರ್ಯಕ್ಕಾಗಿ ಜೀವನದ ಕೊನೆಯ ತನಕ ಹೋರಾಡಿದ ಕ್ರಾಂತಿಕಾರಿಯಾಗಿದ್ದಾರೆ. ಕಾಬೂಲನ್ನು ಕೇಂದ್ರವಾಗಿರಿಸಿ ರಾಜಾ ಮಹೇಂದ್ರ ಪ್ರತಾಪನು ಸ್ಥಾಪಿಸಿದ ಪ್ರಥಮ ಸ್ವತಂತ್ರ ಭಾರತ ಸರಕಾರದಲ್ಲಿ ಇವರು ವಿದೇಶಾಂಗ ಮಂತ್ರಿಯಾಗಿದ್ದರು. ಜರ್ಮನಿಯ ರಾಷ್ಟ್ರೀಯ ಪಕ್ಷದ ಸದಸ್ಯತ್ವವಿದ್ದ ಏಕೈಕ ವಿದೇಶೀಯರಾಗಿದ್ದ ಇವರು ಹಿಟ್ಲರ್ ಹಾಗೂ ನಾಝಿಗಳಿಂದ ದೂರವಾದಾಗ ಅವರ ಶತ್ರುವಾದರು. ಅವರ ಸೊತ್ತುಗಳನ್ನು ಸರಕಾರ ಜಪ್ತಿ ಮಾಡಿತು. ಚಂಪಕರಾಮನ್ ಪಿಳ್ಳೆಯವರ ಮರಣಕ್ಕೆ ನಾಝಿಗಳೇ ಕಾರಣ ಎಂದು ನಂಬಲಾಗಿದೆ.



ಯಹೂದ್ಯರನ್ನು ಮತ್ತು ಕಮ್ಯೂನಿಸ್ಟರನ್ನು ಮಾರಣಹೋಮಕ್ಕೆ ಗುರಿಯಾಗಿಸಿದ ನಾಜಿಗಳ ಕೋನ್‌ಸಂಟ್ರೇಶನ್ ಕ್ಯಾಂಪಿನ ದೃಶ್ಯಗಳು

ಅಭಿಪ್ರಾಯ ಪಟ್ಟಿದ್ದನು. ಅವನು ನಾಝಿ ಪಾರ್ಟಿಯೊಂದನ್ನು ಬಿಟ್ಟು ಉಳಿದ ಎಲ್ಲ ಪಾರ್ಟಿಗಳನ್ನು ನಿಷೇಧಿಸಿದನು. ಕಾರ್ಮಿಕ ಸಂಘಟನೆಗಳನ್ನು ನಿಷೇಧಿಸಿದನು.

ಜನರಿಗೆ ಸೈನಿಕಸೇವೆಯನ್ನು ಕಡ್ಡಾಯಗೊಳಿಸಿದನು. ವರ್ಸಾಯಿ ಒಪ್ಪಂದದ ತೀರ್ಮಾನಗಳಿಗೆದುರಾಗಿ ಜನರಲ್ಲಿ ಪ್ರತೀಕಾರ ಮನೋಭಾವವನ್ನು ಬೆಳೆಸಿದನು. ಪತ್ರಿಕೆ, ಸಿನಿಮಾ, ರೇಡಿಯೋ, ಶಿಕ್ಷಣ ಮೊದಲಾದವುಗಳನ್ನು ತನ್ನ ಆಶಯದ ಪ್ರಚಾರಕ್ಕಾಗಿ ಬಳಸಿದನು. ಜನರ ಪ್ರತೀಕಾರ ಮನೋಭಾವದ ಲಾಭವನ್ನು ಪಡೆದ ಹಿಟ್ಲರನು ಆಕ್ರಮಣಕಾರಿ ವಿದೇಶಿ ನೀತಿಯನ್ನು ಸ್ವೀಕರಿಸಿದನು. ಆಸ್ಟ್ರಿಯಾ, ಜೆಕೋಸ್ಲೋವಾಕಿಯಾ ಮೊದಲಾದ ದೇಶಗಳನ್ನು ಆಕ್ರಮಿಸಿದನು. ಇಟೆಲಿ, ಜಪಾನ್ ಎಂಬೀ ದೇಶಗಳೊಂದಿಗೆ ಸೇರಿ ಸೈನಿಕ ಒಕ್ಕೂಟಗಳನ್ನು ರೂಪಿಸಿದನು. ಹಿಟ್ಲರನ ಈ ನೀತಿಗೆದುರಾಗಿ ಇತರ ದೇಶಗಳೂ ಒಕ್ಕೂಟಗಳನ್ನು ರೂಪಿಸಿದುದು ಇನ್ನೊಂದು ಜಾಗತಿಕ ಯುದ್ಧಕ್ಕೆ ಕಾರಣವೂ ಆಯಿತು.



ಫ್ಯಾಸಿಸಂ ಮತ್ತು ನಾಝಿಸಂನ ಚಟುವಟಿಕೆಗಳಲ್ಲಿ ಕೆಲವು ಸಮಾನತೆಗಳಿದ್ದುವು. ಪಾಠಭಾಗವನ್ನು ಓದಿ ಅವುಗಳಿಗೆ ಉದಾಹರಣೆಗಳನ್ನು ಕಂಡುಕೊಂಡು ಪಟ್ಟಿಯನ್ನು ಪೂರ್ತಿಗೊಳಿಸಿರಿ.

| | ಫ್ಯಾಸಿಸಂ | ನಾಝಿಸಂ |
|---|---|---|
| • ವಂಶ ಶ್ರೇಷ್ಠತೆ<br>•<br>•<br>• | •<br>•<br>•<br>• | •<br>•<br>•<br>• |




ಇಟಲಿಯ ಫ್ಯಾಸಿಸಂ ಮತ್ತು ಜರ್ಮನಿಯ ನಾಝಿಸಂ ವಿಶ್ವಶಾಂತಿಗೆ ಹೇಗೆ ಬೆದರಿಕೆಯಾದುವು? ಎಂಬ ವಿಷಯದಲ್ಲಿ ಒಂದು ಸೆಮಿನಾರ್ ನಡೆಸಿರಿ.

## ಎರಡನೇ ಜಾಗತಿಕ ಯುದ್ಧ

ಒಂದನೇ ಜಾಗತಿಕ ಯುದ್ಧ ಕೊನೆಗೊಂಡು ಇಪ್ಪತ್ತು ವರ್ಷಗಳು ಕಳೆದಾಗ ಜಗತ್ತು ಇನ್ನೊಂದು ಯುದ್ಧಕ್ಕೆ ಸಾಕ್ಷಿಯಾಯಿತು. 1939ರಿಂದ 1945ರ ವರೆಗೆ ನಡೆದ ಎರಡನೇ ಜಾಗತಿಕ ಯುದ್ಧದ ಹಿನ್ನೆಲೆಯನ್ನು ಪರಿಶೀಲಿಸೋಣ.

1919ರ ಪ್ಯಾರಿಸ್ ಶಾಂತಿ ಒಪ್ಪಂದದ ಪ್ರಕಾರ ಪರಾಜಯಹೊಂದಿದ ದೇಶಗಳ ಎಲ್ಲ ವಸಾಹತುಗಳನ್ನು ಜಯಗಳಿಸಿದ ದೇಶಗಳು ವಶಪಡಿಸಿದವು. ಜರ್ಮನಿ, ಇಟೆಲಿ ಮೊದಲಾದ ದೇಶಗಳಿಗೆ ವಸಾಹತುಗಳೋ ಮಾರುಕಟ್ಟೆಗಳೋ ಇರಲಿಲ್ಲ. ಆದ್ದರಿಂದ ತಮ್ಮ ರಾಜಕೀಯ -ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ವಸಾಹತುಗಳನ್ನು ವಶಪಡಿಸಲು ಹಾಗೂ ದೇಶಗಳನ್ನು ಆಕ್ರಮಿಸಲು ಅವರು ಯೋಜನೆಗಳನ್ನು ರೂಪಿಸಿದರು. ಈ ಆಕ್ರಮಣ ನೀತಿಯನ್ನು ವ್ಯಾಪಿಸುವುದಕ್ಕಾಗಿ ಜರ್ಮನಿ, ಇಟೆಲಿ ಮತ್ತು ಜಪಾನ್ ಸೇರಿಕೊಂಡು ಅಕ್ಷಶಕ್ತಿಗೆ (Axis Powers) ರೂಪುನೀಡಿದುವು. ಇದಕ್ಕೆದುರಾಗಿ ಇಂಗ್ಲೆಂಡ್, ಫ್ರಾನ್ಸ್, ಚೀನಾ ಎಂಬೀ ದೇಶಗಳು ಸೇರಿ ಒಂದು ಸೈನಿಕ ಒಕ್ಕೂಟಕ್ಕೆ ರೂಪುನೀಡಿದುವು. ಇದನ್ನು ಮಿತ್ರಶಕ್ತಿ (Allied Powers) ಎಂದು ಕರೆದರು.






### ಮ್ಯೂನಿಚ್ ಒಪ್ಪಂದ

1938ರ ಮ್ಯೂನಿಚ್ ಒಪ್ಪಂದವು ತುಷ್ಟೀಕರಣ ನೀತಿಗೆ ಅತ್ಯಂತ ಉತ್ತಮ ಉದಾಹರಣೆಯಾಗಿದೆ. ಜೆಕೋಸ್ಲೋವಾಕಿಯಾದ ಸಂಪತ್ಸಮೃದ್ಧ ಪ್ರದೇಶವಾದ ಸುಡಟ್ಟನ್‌ಲೇಂಡಿನ ಮೇಲೆ ಹಿಟ್ಲರನು ಹಕ್ಕು ಮಂಡಿಸಿದನು. ಬಳಿಕ ಈ ಸಮಸ್ಯೆಯನ್ನು ಚರ್ಚಿಸಲು ಬ್ರಿಟನ್, ಫ್ರಾನ್ಸ್, ಇಟಲಿ, ಜರ್ಮನಿ ಎಂಬೀ ದೇಶಗಳ ಪ್ರತಿನಿಧಿಗಳು ಜರ್ಮನಿಯ ಮ್ಯೂನಿಚ್‌ನಲ್ಲಿ ಸಭೆಸೇರಿದರು. ಇದಕ್ಕೆ ಜೆಕೋಸ್ಲೋವಾಕಿಯಾವನ್ನು ಆಮಂತ್ರಿಸಲಿಲ್ಲ. ಈ ಸಮ್ಮೇಳನದಲ್ಲಿ ಸುಡಟ್ಟನ್‌ಲೇಂಡನ್ನು ಜರ್ಮನಿಗೆ ನೀಡಲು ತೀರ್ಮಾನಿಸಿದರು.

ಅನಂತರ ಅಮೇರಿಕಾ ಹಾಗೂ ಸೋವಿಯತ್ ಯೂನಿಯನ್‌ಗಳು ಫ್ಯಾಸಿಸ್ಟ್ ವಿರುದ್ಧದ ಒಕ್ಕೂಟದೊಂದಿಗೆ ಸೇರಿಕೊಂಡರು. ಅಕ್ಷಶಕ್ತಿಗಳ ಆಕ್ರಮಣವನ್ನು ತಡೆಗಟ್ಟುವಲ್ಲಿ ಜನಾಂಗ ಸಂಘವು ಪರಾಜಯ ಹೊಂದಿತು. ಜರ್ಮನಿ, ಇಟಲಿ ಹಾಗೂ ಜಪಾನ್ ವಿವಿಧ ದೇಶಗಳನ್ನು ಆಕ್ರಮಿಸಿದಾಗ ಬ್ರಿಟನ್, ಫ್ರಾನ್ಸ್ ಮೊದಲಾದ ಬಂಡವಾಳಶಾಹಿ ದೇಶಗಳು ಈ ಆಕ್ರಮಣಗಳನ್ನು ಎದುರಿಸಲಿಲ್ಲ. ಮಾತ್ರವಲ್ಲ ಅವರು ಸಮಾಜವಾದಿ ದೇಶವಾಗಿದ್ದ ಸೋವಿಯತ್ ಯೂನಿಯನನ್ನು ತಮ್ಮ ಮುಖ್ಯ ಶತ್ರುವಾಗಿ ಕಂಡರು. ಫ್ಯಾಸಿಸ್ಟ್ ಆಕ್ರಮಣಕ್ಕೆ ಪ್ರೋತ್ಸಾಹ ನೀಡಿದ ಈ ನೀತಿಯನ್ನು ತುಷ್ಟೀಕರಣ ನೀತಿ (Policy of Appeasement) ಎಂದು ಕರೆಯುತ್ತಾರೆ. 1939ರ ಸೆಪ್ಟೆಂಬರ್ 1 ರಂದು ಜರ್ಮನಿಯು ಪೋಲೆಂಡನ್ನು ಆಕ್ರಮಿಸಿತು. ಇದಕ್ಕೆದುರಾಗಿ ಸೆಪ್ಟಂಬರ್ 3 ರಂದು ಮಿತ್ರಶಕ್ತಿಗಳು ಜರ್ಮನಿಯ ವಿರುದ್ಧ ಯುದ್ಧವನ್ನು ಘೋಷಿಸಿದವು. ಇದು ಎರಡನೇ ಜಾಗತಿಕ ಯುದ್ಧದ ಆರಂಭಕ್ಕೆ ಕಾರಣವಾಯಿತು.



**ಒಂದನೇ ಜಾಗತಿಕ ಯುದ್ಧ ಹಾಗೂ ಎರಡನೇ ಜಾಗತಿಕ ಯುದ್ಧದ ಕಾರಣಗಳಿಗೆ ಅನೇಕ ಸಮಾನತೆಗಳು ಇದ್ದುವು. ಈ ಹೇಳಿಕೆಯನ್ನು ಅವಲೋಕಿಸಿರಿ.**



### ಅನಾಕ್ರಮಣ ಒಪ್ಪಂದ (Non Aggression Pact)

1939ರಲ್ಲಿ ಸೋವಿಯತ್ ಯೂನಿಯನ್ ಮತ್ತು ಜರ್ಮನಿಯು ಒಂದು ಅನಾಕ್ರಮಣ ಒಪ್ಪಂದಕ್ಕೆ ಸಹಿಹಾಕಿದುವು. ಈ ಒಪ್ಪಂದದ ಪ್ರಕಾರ ಪರಸ್ಪರ ಆಕ್ರಮಿಸಬಾರದೆಂದೂ ಪೋಲೆಂಡನ್ನು ಹಂಚಿಕೊಳ್ಳುವುದೆಂದೂ ತೀರ್ಮಾನಿಸಲಾಯಿತು. ಆದರೆ 1941ರಲ್ಲಿ ಹಿಟ್ಲರನು ರಷ್ಯಾವನ್ನು ಆಕ್ರಮಿಸುವುದರೊಂದಿಗೆ ಈ ಒಪ್ಪಂದವು ಕೊನೆಗೊಂಡಿತು.



**ಒಂದನೇ ಜಾಗತಿಕ ಯುದ್ಧದ ಕೆಲವು ಪರಿಣಾಮಗಳನ್ನು ಕೆಳಗೆ ನೀಡಲಾಗಿದೆ. ಇವುಗಳು ಎರಡನೇ ಜಾಗತಿಕ ಯುದ್ಧಕ್ಕೆ ಹೇಗೆ ಕಾರಣವಾದುವು ಎಂಬುದನ್ನು ಚರ್ಚಿಸಿರಿ.**

- ವರ್ಸಾಯಿ ಒಪ್ಪಂದ.
- ಜನಾಂಗ ಸಂಘದ ರೂಪೀಕರಣ
- ಫ್ಯಾಸಿಸಂ ಮತ್ತು ನಾಝಿಸಂನ ಆವಿರ್ಭಾವ.

## ಯುದ್ಧವು ಬಾಕಿ ಉಳಿಸಿದ್ದು

ಸೋವಿಯತ್ ಯೂನಿಯನ್ ಹಾಗೂ ಅಮೇರಿಕಾದ ಸೇರ್ಪಡೆಯು ಎರಡನೇ ಜಾಗತಿಕ ಯುದ್ಧದ ಗತಿಯನ್ನೇ ಬದಲಾಯಿಸಿತು. ಮಿತ್ರಶಕ್ತಿಗಳ ಆಕ್ರಮಣವನ್ನು ಸಹಿಸಲಾಗದೆ ಇಟೆಲಿಯೂ ಜರ್ಮನಿಯೂ ಶರಣಾಗತವಾದುವು. ಮುಸ್ಸೋಲಿನಿಯನ್ನು ನಾಗರಿಕರು ಸೆರೆಹಿಡಿದು ವಧಿಸಿದರು. ಹಿಟ್ಲರನು ಆತ್ಮಹತ್ಯೆ ಮಾಡಿಕೊಂಡನು. ಜಪಾನ್ ಆಗಲೂ ಶರಣಾಗಲು ತಯಾರಾಗಲಿಲ್ಲ. ಜಪಾನನ್ನು ಸೋಲಿಸುವುದಕ್ಕಾಗಿ ಸೋವಿಯತ್ ಯೂನಿಯನ್ ಟ್ರಾನ್ಸ್ ಸೈಬೀರಿಯದ ಮೂಲಕ ಜಪಾನಿನ ಕಡೆಗೆ ಮುನ್ನುಗ್ಗಿತು. ಆದರೆ ಸೋವಿಯತ್ ಯೂನಿಯನ್ ತಲುಪುವ ಮೊದಲೇ ಅಮೇರಿಕಾವು 1945ರ ಆಗಸ್ಟ್ 6ರಂದು ಹಿರೋಶಿಮಾದ ಮೇಲೆ ಲಿಟ್ಲ್‌ಬಾಯ್ ಎಂಬ ಅಣುಬಾಂಬ್ ಹಾಗೂ ಆಗಸ್ಟ್ 9ರಂದು ನಾಗಸಾಕಿಯ ಮೇಲೆ ಫ್ಯಾಟ್‌ಮಾನ್ ಎಂಬ ಅಣುಬಾಂಬನ್ನು ಪ್ರಯೋಗಿಸಿತು. ಇದರೊಂದಿಗೆ ಜಪಾನ್ ಶರಣಾಗತವಾಯಿತು.

**ಪರ್ಲ್‌ಹಾರ್ಬರ್ ಆಕ್ರಮಣ**

1941ರಲ್ಲಿ ಹವಾಯ್ ದ್ವೀಪದಲ್ಲಿದ್ದ ಅಮೇರಿಕಾದ ನೌಕಾನೆಲೆಯಾದ ಪರ್ಲ್ ಹಾರ್ಬರನ್ನು ಜಪಾನ್ ಆಕ್ರಮಿಸಿತು. ಫೆಸಿಫಿಕ್ ವಲಯದ ಮೇಲೆ ಎರಡು ದೇಶಗಳಿಗಿದ್ದ ಆರ್ಥಿಕ ಆಸಕ್ತಿಯು ಜಪಾನನ್ನು ಇದಕ್ಕೆ ಪ್ರೇರೇಪಿಸಿತು. ಇದರಿಂದಾಗಿ ಜಪಾನಿನ ವಿರುದ್ಧ ಯುದ್ಧ ಘೋಷಿಸುತ್ತಾ ಅಮೇರಿಕಾವು ಎರಡನೇ ಜಾಗತಿಕ ಯುದ್ಧವನ್ನು ಪ್ರವೇಶಿಸಿತು.

K7KJNY



ಅಣುಬಾಂಬ್ ಸ್ಫೋಟ



ಬಾಂಬ್ ಧಾಳಿಯಲ್ಲಿ ನಿಶ್ಚಲವಾದ ಗಡಿಯಾರ



ಬಾಂಬ್ ಧಾಳಿಯ ನಂತರದ ಹಿರೋಶಿಮಾ

*ಅಮೇರಿಕಾವು ಅಣುಬಾಂಬು ದಾಳಿ ನಡೆಸಿದ ಫಲವಾಗಿ ಜಪಾನ್‌ನಲ್ಲಿ ಉಂಟಾದ ನಾಶನಷ್ಟಗಳನ್ನು ತೋರಿಸುವ ಡಿಜಿಟಲ್ ಆಲ್ಬಂ ತಯಾರಿಸಿರಿ.*

ಮೇಲೆ ಕೊಟ್ಟಿರುವವುಗಳು ಜಪಾನಿನಲ್ಲಿ ಅಮೇರಿಕಾವು ನಡೆಸಿದ ಬಾಂಬ್ ಧಾಳಿಗೆ ಸಂಬಂಧಿಸಿದ ಚಿತ್ರಗಳಾಗಿವೆ. ಎರಡನೇ ಜಾಗತಿಕ ಯುದ್ಧವು ಮಾನವ ಸಮೂಹಕ್ಕೆ ದೂರವ್ಯಾಪಕವಾದ ಪರಿಣಾಮಗಳನ್ನು ಉಂಟುಮಾಡಿತು. ಅವುಗಳು ಯಾವುವು ಎಂದು ನೋಡೋಣ.

- ಹತ್ತು ಲಕ್ಷದಷ್ಟು ಜನರು ಮೃತಪಟ್ಟರು.
- ಯುರೋಪಿನ ದೇಶಗಳ ಆರ್ಥಿಕ ಸ್ಥಿತಿಯು ಅಲ್ಲೋಲಕಲ್ಲೋಲವಾಯಿತು.
- ಯುರೋಪಿನ ದೇಶಗಳ ಜಾಗತಿಕ ಮೇಧಾವಿತ್ವವು ನಾಶಯಿತು.
- ಏಷ್ಯಾ-ಆಫ್ರಿಕಾ ದೇಶಗಳ ಸ್ವಾತಂತ್ರ್ಯ ಹೋರಾಟವು ಪ್ರಬಲವಾಯಿತು.
- ಅಮೇರಿಕ ಮತ್ತು ಸೋವಿಯತ್ ಯೂನಿಯನ್ ಪ್ರಬಲ ಶಕ್ತಿಗಳಾಗಿ ಹೊರಹೊಮ್ಮಿದುವು.
- ಜಾಗತಿಕ ಶಾಂತಿಗಾಗಿ ವಿಶ್ವಸಂಸ್ಥೆಯನ್ನು ರೂಪೀಕರಿಸಲಾಯಿತು.

**ಹಿಬಾಕುಷ್‌ಗಳು**

ಹಿಬಾಕುಷ್‌ಗಳು ಹಿರೋಶಿಮ, ನಾಗಸಾಕಿ ದುರಂತಕ್ಕೆ ಬಲಿಪಶುಗಳಾಗಿ ಜೀವಿಸುವ ಮನುಷ್ಯರಾಗಿದ್ದಾರೆ. ಅಣುವಿಕಿರಣದ ತೀವ್ರತೆಯಿಂದ ಪ್ರತಿನಿಮಿಷವೂ ನೋವು ಅನುಭವಿಸಿಕೊಂಡು ಬದುಕುವ ಸಾವಿರಾರು ಮಂದಿ ಹಿಬಾಕುಷ್‌ಗಳು ಜಪಾನಿನಲ್ಲಿದ್ದಾರೆ.

### ಕಲಾಕೃತಿಗಳಲ್ಲಿ ಯುದ್ಧ

ಪಿಕಾಸೊವಿನ ವಿಶ್ವವಿಖ್ಯಾತ ಚಿತ್ರವಾದ 'ಗ್ವೆರ್ನಿಕ', ಅರ್ನೆಸ್ಟ್ ಹೆಮಿಂಗ್‌ವೆಯ ಕಾದಂಬರಿಯಾದ 'ಗಂಟೆ ಮೊಳಗುವುದು ಯಾರಿಗಾಗಿ'(For whom the bell tolls) ಎಂಬಿವುಗಳು ಎರಡನೇ ಜಾಗತಿಕ ಯುದ್ಧಕ್ಕೆ ಸಂಬಂಧಿಸಿ ಕಲೆಯಲ್ಲಿ ಮೂಡಿಬಂದ ಪ್ರತಿಕ್ರಿಯೆಯಾಗಿದೆ. 'ಜನರೇಶನ್', 'ಕನಾಲ್', 'ಆಶಸ್ ಎಂಡ್ ಡಯಮಂಡ್' ಎಂಬಿವುಗಳು ಪೋಲೆಂಡಿನ ನಿರ್ದೇಶಕನಾದ ಆಂದ್ರೆ ವೈದ ಇವರ ಯುದ್ಧ ಚಲನಚಿತ್ರಗಳಾಗಿವೆ. ಡೇವಿಡ್‌ಲೀನ್ ನಿರ್ದೇಶಿಸಿದ 'ದ ಬ್ರಿಜ್ ಓನ್ ದ ರಿವರ್‌ಕ್ವಾಯ್', ಚಾರ್ಲಿ ಚಾಪ್ಲಿನ್‌ನ 'ದ ಗ್ರೇಟ್ ಡಿಕ್ಟೇಟರ್', ಅಲನ್ ರೆನೇಯ 'ಹಿರೋಶಿಮ ಮೋನ್ ಅಮೋರ್', ಸ್ಟೀವನ್ ಸ್ಪಿಲ್‌ಬರ್ಗ್‌ನ 'ಶಿನ್‌ಡಲರ್ಸ್ ಲಿಸ್ಟ್' ಇತ್ಯಾದಿಗಳು ಯುದ್ಧಕ್ಕೆ ಸಂಬಂಧಿಸಿದ ಚಲನ ಚಿತ್ರಗಳಾಗಿವೆ.

## ಶಾಂತಿಯ ರೆಕ್ಕೆಯನ್ನೇರಿ




ನಿಮ್ಮ ಶಾಲೆಯಲ್ಲಿ ಈ ದಿನವನ್ನು ಆಚರಿಸುತ್ತೀರಲ್ಲವೆ? ಈ ದಿನದ ಪ್ರಾಧಾನ್ಯವೇನು? ಅಕ್ಟೋಬರ್ 24 ವಿಶ್ವಸಂಸ್ಥೆ ದಿನವಾಗಿದೆ. ಒಂದನೇ ಜಾಗತಿಕ ಯುದ್ಧದ ನಂತರ ಜನಾಂಗ ಸಂಘ ಎಂಬ ಸಂಘಟನೆಯನ್ನು ರೂಪಿಸಿದರೂ ಅದು ಜಾಗತಿಕ ಶಾಂತಿಯನ್ನು ಕಾಪಾಡುವುದರಲ್ಲಿ ವಿಫಲವಾಯಿತು. ಎರಡನೇ ಜಾಗತಿಕ ಯುದ್ಧಾನಂತರ ಪ್ರಪಂಚದಲ್ಲಿ ಶಾಂತಿಯನ್ನು ಪುನಃಸ್ಥಾಪಿಸುವುದಕ್ಕಾಗಿ ಸಂಘಟನೆಯೊಂದನ್ನು ಸ್ಥಾಪಿಸಲು ಪ್ರಯತ್ನಗಳು ಆರಂಭವಾದುವು. ಇದರ ಫಲವಾಗಿ 1945ರ ಅಕ್ಟೋಬರ್ 24ರಂದು ವಿಶ್ವಸಂಸ್ಥೆ ಅಥವಾ ಸಂಯುಕ್ತ ರಾಷ್ಟ್ರ ಸಂಘ (United Nations Organisation) ವು ರೂಪುಗೊಂಡಿತು. ಅಮೇರಿಕಾದ ನ್ಯೂಯೋರ್ಕ್ ಇದರ ಕೇಂದ್ರವಾಗಿದೆ. ಮುಂದಿನ ತಲೆಮಾರನ್ನು ಯುದ್ಧ ಭೀತಿಯಿಂದ ಸಂರಕ್ಷಿಸುವುದು, ಅಂತಾರಾಷ್ಟ್ರೀಯ ಒಪ್ಪಂದ ಹಾಗೂ ಕಾನೂನುಗಳನ್ನು ಸಂರಕ್ಷಿಸುವುದು, ವಿಶ್ವದ ದೇಶಗಳ ಪ್ರಗತಿಗಾಗಿರುವ ಕಾರ್ಯಚಟುವಟಿಕೆಗಳನ್ನು ಏಕೀಕರಿಸುವುದು ಮೊದಲಾದುವುಗಳು ವಿಶ್ವಸಂಸ್ಥೆಯ ಕೆಲವು ಉದ್ದೇಶಗಳಾಗಿವೆ.



ವಿಶ್ವಸಂಸ್ಥೆಯ ಧ್ವಜ



ವಿಶ್ವಸಂಸ್ಥೆಯ ಚಿಹ್ನೆ

### ಸಡಾಕೊ




ಸಡಾಕೋ ಸಸುಕಿ ಎಂಬವಳು ಹಿರೋಶಿಮಾದ ಅಣುಬಾಂಬ್ ಧಾಳಿಯ ಪರಿಣಾಮವಾಗಿ ಉಂಟಾದ ಅಣುವಿಕಿರಣಕ್ಕೆ ಬಲಿಪಶುವಾದ ಬಾಲಕಿಯಾಗಿದ್ದಾಳೆ. ಅವಳು ರೋಗಶಯ್ಯೆಯಲ್ಲಿಯೇ ನಿರ್ಮಿಸಿದ ಸಡಾಕೊ ಕೊಕ್ಕರೆಗಳು ಇಂದು ಯುದ್ಧ ವಿರುದ್ಧ ಮನೋಭಾವದ ಪ್ರತೀಕವಾಗಿವೆ.

*ಒಂದನೇ ಹಾಗೂ ಎರಡನೇ ಜಾಗತಿಕ ಯುದ್ಧದ ನಾಶನಷ್ಟಗಳ ಚಿತ್ರಗಳನ್ನೂ ವಾರ್ತೆಗಳನ್ನೂ ಸೇರಿಸಿದ ಒಂದು ಕಿರುಚಿತ್ರವನ್ನು ತಯಾರಿಸಿ ಮಂಡಿಸಿರಿ.*

**ಯುದ್ಧವು ನಿರಪರಾಧಿಗಳನ್ನು ಮತ್ತು ಯುದ್ಧಕ್ಕೆ ಕಾರಣರಾದವರನ್ನು ಒಂದೇ ರೀತಿಯಾಗಿ ಬಾಧಿಸುತ್ತದೆ. ಒಂದನೇ ಹಾಗೂ ಎರಡನೇ ಜಾಗತಿಕಯುದ್ಧವು ಮನುಕುಲಕ್ಕೆ ಯಾವೆಲ್ಲ ಪಾಠಗಳನ್ನು ನೀಡಿದುವು ಎಂಬುದನ್ನು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.**

## ವಸಾಹತುಗಳು ಸ್ವತಂತ್ರವಾಗುತ್ತಿವೆ

ಎರಡನೇ ಜಾಗತಿಕ ಯುದ್ಧದ ಬಳಿಕ ಸಾಮ್ರಾಜ್ಯಶಾಹಿ ಶಕ್ತಿಗಳ ಆಧಿಪತ್ಯವನ್ನು ಪ್ರಶ್ನಿಸಲು ಆರಂಭಿಸಿದರು. ಇದರಿಂದಾಗಿ ವಸಾಹತುಗಳಲ್ಲಿ ಮೂಡಿಬಂದ ರಾಷ್ಟ್ರೀಯ ಹೋರಾಟಗಳನ್ನು ನಿಯಂತ್ರಿಸಲು ಯುರೋಪಿನ ದೇಶಗಳಿಗೆ ಸಾಧ್ಯವಾಗಲಿಲ್ಲ. ಅಲ್ಲದೆ ಬೃಹತ್ ಶಕ್ತಿಗಳಾಗಿ ಮೂಡಿಬಂದ ಅಮೇರಿಕಾ ಹಾಗೂ ಸೋವಿಯತ್ ಯೂನಿಯನ್ ವಸಾಹತುಗಳ ಸ್ವಾತಂತ್ರ್ಯ ಹೋರಾಟವನ್ನು ಬೆಂಬಲಿಸಿದವು. ಸಾಮ್ರಾಜ್ಯಶಾಹಿಗಳ ಆಡಳಿತದಿಂದ ವಸಾಹತುಗಳು ಸ್ವತಂತ್ರವಾದುವು. ಇದನ್ನು ನಿರ್ವಸಾಹತೀಕರಣ (Decolonisation) ಎಂದು ಕರೆಯುತ್ತಾರೆ. ಕೆಳಗೆ ನೀಡಿರುವ ಚಿತ್ರಗಳನ್ನು ನಿರೀಕ್ಷಿಸಿರಿ. ಇವುಗಳು ಸಾಮ್ರಾಜ್ಯಶಾಹಿಗಳಿಗೆ ವಿರುದ್ಧವಾದ ಹೋರಾಟಗಳಿಗೆ ನೇತೃತ್ವ ನೀಡಿದ ಕೆಲವು ರಾಷ್ಟ್ರನಾಯಕರ ಚಿತ್ರಗಳಾಗಿವೆ.



*ಗಾಂಧೀಜಿ*
*ಭಾರತ*



*ನೆಲ್ಸನ್ ಮಂಡೇಲ*
*ದಕ್ಷಿಣ ಆಫ್ರಿಕಾ*



*ಕ್ವಾಮಿ ಎನ್‌ಕ್ರೂಮ*
*ಘಾನ*



*ಜೋಮೋಕೆನಿಯಾತ್*
*ಕೆನ್ಯಾ*

**ಎರಡನೇ ಜಾಗತಿಕ ಯುದ್ಧದ ಬಳಿಕ ಏಷ್ಯಾ ಹಾಗೂ ಆಫ್ರಿಕಾದಲ್ಲಿ ಸ್ವತಂತ್ರಗೊಂಡ ದೇಶಗಳು ಹಾಗೂ ಅಲ್ಲಿನ ನಾಯಕರ ಕುರಿತು ಒಂದು ಸಂಚಿಕೆ ತಯಾರಿಸಿರಿ.**



## ಶೀತಲ ಸಮರ (Cold War)

ಎರಡನೇ ಜಾಗತಿಕ ಯುದ್ಧದ ಕಾಲದಲ್ಲಿ ಫ್ಯಾಸಿಸಂಗೆದುರಾಗಿ ಭಿನ್ನತೆಗಳನ್ನೆಲ್ಲ ಮರೆತು ಒಂದಾದ ಅಮೇರಿಕಾ ಹಾಗೂ ಸೋವಿಯತ್ ಯೂನಿಯನ್ ಯುದ್ಧದ ಬಳಿಕ ಪುನಃ ಬೇರ್ಪಟ್ಟವು. ಅಮೇರಿಕಾವು ಹೊಸ ರಾಜಕೀಯ-ಆರ್ಥಿಕ ಶಕ್ತಿಯಾಗಿ ಬಂಡವಾಳಶಾಹಿ ಗುಂಪಿಗೆ ನೇತೃತ್ವ ನೀಡಿತು. ಸಮಾಜವಾದಿ ಆರ್ಥಿಕ ವ್ಯವಸ್ಥೆಯನ್ನು ಸ್ವೀಕರಿಸಿದ ಗುಂಪಿಗೆ ಸೋವಿಯತ್ ಯೂನಿಯನ್ ನೇತೃತ್ವ ನೀಡಿತು. ಈ ರೀತಿಯಲ್ಲಿ ಪರಸ್ಪರ ಶತ್ರುತ್ವವನ್ನು ಬೆಳೆಸಿದ ಎರಡು ಗುಂಪುಗಳ ನಡುವೆ ನಡೆದ ಆಶಯಪರವಾದ ಘರ್ಷಣೆಗಳು ಹಾಗೂ ರಾಜತಾಂತ್ರಿಕ ಯುದ್ಧಗಳನ್ನು ಶೀತಲ ಸಮರ (Cold War) ಎಂದು ಕರೆಯುತ್ತಾರೆ.



**ಶೀತಲ ಸಮರ**

ಅಮೇರಿಕಾದ ರಾಜತಾಂತ್ರಿಕನಾದ ಬರ್ನಾರ್ಡ್ ಬರೂಚ್ ಮೊತ್ತಮೊದಲಾಗಿ ಶೀತಲ ಸಮರ ಎಂಬ ಪದವನ್ನು ಬಳಸಿದನು. ವಾಲ್ಟರ್ ಲಿಪ್‌ಮ್ಯಾನ್ ಎಂಬವನು ಬರೆದ 'ಶೀತಲ ಸಮರ' ಎಂಬ ಗ್ರಂಥವು ಇದಕ್ಕೆ ಹೆಚ್ಚು ಪ್ರಚಾರವನ್ನು ತಂದುಕೊಟ್ಟಿತು.

**ಎರಡು ಧ್ರುವಗಳ ರಾಜಕೀಯ**

ಎರಡನೇ ಜಾಗತಿಕ ಯುದ್ಧದಲ್ಲಿ ಒಂದೇ ಗುಂಪಿನಲ್ಲಿದ್ದ ಅಮೇರಿಕಾ ಹಾಗೂ ಸೋವಿಯತ್ ಯೂನಿಯನ್ ಯುದ್ಧದ ನಂತರ ಯಥಾಪ್ರಕಾರ ಬಂಡವಾಳಶಾಹಿ ಗುಂಪು ಹಾಗೂ ಸಮಾಜವಾದಿ ಗುಂಪಿಗೆ ನೇತೃತ್ವ ನೀಡಿದವು. ಆಶಯಪರವಾದ ಈ ವಿಭಾಗೀಕರಣವನ್ನು ಚರಿತ್ರೆಗಾರನಾದ ಅರ್ನಾಲ್ಡ್ ಟೋಯನ್ಬಿಯು ಎರಡು ಧ್ರುವಗಳ ರಾಜಕೀಯ ಎಂಬುದಾಗಿ ವಿಶ್ಲೇಷಿಸಿದನು.

**ಶೀತಲ ಸಮರ ಕಾಲದ ಸೈನಿಕ ಒಪ್ಪಂದಗಳು**

- ನೋರ್ತ್ ಅಟ್ಲಾಂಟಿಕ್ ಟ್ರೀಟಿ ಆರ್ಗನೈಸೇಶನ್ (NATO) – ಅಮೇರಿಕ ಹಾಗೂ ಮಿತ್ರಪಕ್ಷಗಳು
- ಸೌತ್ ಈಸ್ಟ್ ಏಷ್ಯಾ ಟ್ರೀಟಿ ಆರ್ಗನೈಸೇಷನ್ (SEATO) – ಅಮೆರಿಕ ಹಾಗೂ ಮಿತ್ರಪಕ್ಷಗಳು
- ಸೆಂಟ್ರಲ್ ಟ್ರೀಟಿ ಆರ್ಗನೈಸೇಶನ್ (CENTO)– ಅಮೆರಿಕ ಹಾಗೂ ಮಿತ್ರಪಕ್ಷಗಳು
- ವಾರ್ಸಾ ಒಪ್ಪಂದ (WARSAW PACT)– ಸೋವಿಯತ್ ಯೂನಿಯನ್ ಹಾಗೂ ಮಿತ್ರಪಕ್ಷಗಳು

**ಆಶಯಪರವಾದ ಭಿನ್ನತೆಯು ಶೀತಲ ಸಮರಕ್ಕೆ ಕಾರಣವಾಗಿದೆ. ಹೇಳಿಕೆಯನ್ನು ಅವಲೋಕಿಸಿರಿ.**

## ಎರಡು ಬಣಗಳಿಗೊಂದು ಪರ್ಯಾಯ – ಅಲಿಪ್ತತೆ

ಬಂಡವಾಳಶಾಹಿಗಳು ಹಾಗೂ ಸಮಾಜವಾದಿಗಳಿಗೆ ಪರ್ಯಾಯವಾಗಿ ಅಲಿಪ್ತತೆ ಎಂಬ ಆಶಯಕ್ಕೆ ರೂಪುನೀಡಿದ ನಾಯಕರ ಚಿತ್ರಗಳನ್ನು ಕೆಳಗೆ ನೀಡಲಾಗಿದೆ.



*ಜವಹರಲಾಲ್ ನೆಹರು*
*ಭಾರತ*



*ಗಮಾಲ್ ಅಬ್ದುಲ್ ನಾಸರ್*
*ಈಜಿಪ್ಟ್*



*ಮಾರ್ಷಲ್ ಟಿಟೊ*
*ಯುಗೋಸ್ಲಾವಿಯಾ*



*ಅಹಮ್ಮದ್ ಸುಕಾರ್ನೋ*
*ಇಂಡೋನೇಷ್ಯಾ*

## ಅಲಿಪ್ತ ಚಳುವಳಿ ಎಂದರೇನು?

ಎರಡನೇ ಜಾಗತಿಕ ಯುದ್ಧದ ಬಳಿಕ ಏಷ್ಯಾ, ಆಫ್ರಿಕಾ ಹಾಗೂ ಲ್ಯಾಟಿನ್ ಅಮೇರಿಕಾದ ಅನೇಕ ದೇಶಗಳು ಸ್ವತಂತ್ರವಾದುವು. ಶೀತಲ ಸಮರವು ಸಾಮ್ರಾಜ್ಯಶಾಹಿತ್ವದ ಇನ್ನೊಂದು ರೂಪವಾಗಿದೆ. ಇದು ಎಂದೆಂದಿಗೂ ವಿಶ್ವಶಾಂತಿಗೆ  ಭೀತಿಯಾಗಿದೆ ಎಂದು ಈ ದೇಶಗಳು ಕಂಡುಕೊಂಡವು. ಇದಕ್ಕಾಗಿ ಬಂಡವಾಳಶಾಹಿ ಗುಂಪಿಗೆ ಅಥವಾ ಸಮಾಜವಾದಿ ಗುಂಪಿಗೆ ಸೇರದೆ ಇರುವ ರಾಷ್ಟ್ರಗಳ ಸಂಘಟನೆಯೇ ಅಲಿಪ್ತ ಚಳುವಳಿಯಾಗಿದೆ. ಬೃಹತ್‌ಶಕ್ತಿಗಳ ಆಯುಧ ಸ್ಪರ್ಧೆ ಹಾಗೂ ಸೈನಿಕ ಮಿತ್ರತ್ವವು ತಮಗೆ ಮಾರಕವಾಗಬಹುದು ಎಂದು ಹೊಸತಾಗಿ ಸ್ವಾತಂತ್ರ್ಯ ಪಡೆದ ದೇಶಗಳು ಅರಿತುಕೊಂಡವು. ಯುದ್ಧ, ಸಂಘರ್ಷಗಳು ಇಲ್ಲದ ಪ್ರಪಂಚಕ್ಕೆ ಮಾತ್ರ ಆರ್ಥಿಕವಾಗಿಯೂ ಸಾಮಾಜಿಕವಾಗಿಯೂ ಮುನ್ನಡೆಯಲು ಸಾಧ್ಯ ಎಂದು ಅವರು ಕಂಡುಕೊಂಡರು. 1955ರಲ್ಲಿ ಇಂಡೋನೇಷ್ಯಾದ ಬಾಂಡುಂಗಿನಲ್ಲಿ ಸೇರಿದ ಸಮ್ಮೇಳನದಲ್ಲಿ ಅಲಿಪ್ತ ಚಳುವಳಿಗೆ ರೂಪು ನೀಡಲು ತೀರ್ಮಾನಿಸಲಾಯಿತು. 1961ರಲ್ಲಿ

ಬೆಲ್‌ಗ್ರೇಡ್‌ನಲ್ಲಿ ಅಲಿಪ್ತ ದೇಶಗಳ ಮೊತ್ತಮೊದಲ ಸಮ್ಮೇಳನ ನಡೆಯಿತು. "ಅಲಿಪ್ತತೆಯು ಜಗತ್ತಿನ ದೇಶಗಳಿಂದ ದೂರ ಉಳಿಯುವುದಲ್ಲ. ಜಗತ್ತು ಎದುರಿಸುತ್ತಿರುವ ವಿವಿಧ ಸಮಸ್ಯೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿದೆ" ಎಂಬ ಜವಹರಲಾಲ್ ನೆಹರೂ ಅವರ ಅಭಿಪ್ರಾಯವು ಅಲಿಪ್ತ ಚಳುವಳಿಯ ಗುರಿಯ ಕಡೆಗೆ ಬೊಟ್ಟುಮಾಡುತ್ತದೆ.



ನಿರ್ವಸಾಹತೀಕರಣ ಹಾಗೂ ಶೀತಲಸಮರವು ಅಲಿಪ್ತ ಚಳುವಳಿ ರೂಪುಗೊಳ್ಳಲು ಹೇಗೆ ದಾರಿಮಾಡಿಕೊಟ್ಟಿತು?



**"ಎರಡನೇ ಜಾಗತಿಕ ಯುದ್ಧವು ಜಾಗತಿಕ ಚರಿತ್ರೆಯ ಮೇಲೆ ಬೀರಿದ ಪ್ರಭಾವ" ಎಂಬ ವಿಷಯದಲ್ಲಿ ಒಂದು ಸೆಮಿನಾರ್ ಏರ್ಪಡಿಸಿರಿ. ಪರಿಗಣಿಸಬೇಕಾದ ವಿಷಯಗಳು:**

- **ಏಷ್ಯಾ ಮತ್ತು ಆಫ್ರಿಕಾದ ದೇಶಗಳ ಸ್ವಾತಂತ್ರ್ಯ**
- **ಶೀತಲ ಸಮರ**
- **ಅಲಿಪ್ತ ಚಳುವಳಿ**

## ಪಶ್ಚಿಮ ಏಷ್ಯಾ

*'ಒಂದು ಕೈಯಲ್ಲಿ ಶಾಂತಿಯ ಸಂಕೇತವಾದ ಒಲಿವ್ ಎಲೆಗಳನ್ನೂ ಇನ್ನೊಂದು ಕೈಯಲ್ಲಿ ವಿಮೋಚನಾ ಹೋರಾಟಗಾರನ ಬಂದೂಕನ್ನೂ ಹಿಡಿದುಕೊಂಡು ನಾನು ಬಂದಿರುವೆನು. ಒಲಿವ್ ಎಲೆಗಳು ನನ್ನ ಕೈಯಿಂದ ನಷ್ಟವಾಗದಿರಲಿ".*



*ಯಾಸರ್ ಅರಾಫತ್*

ಇದು ಪ್ಯಾಲಸ್ತೀನ್ ವಿಮೋಚನ ಸಂಘಟನೆಯ ಅಧ್ಯಕ್ಷನಾದ ಯಾಸರ್ ಅರಾಫತ್ 1974ರಲ್ಲಿ ವಿಶ್ವಸಂಸ್ಥೆಯ ಮಹಾಸಭೆಯಲ್ಲಿ ಮಾಡಿದ ಭಾಷಣದ ಒಂದು ಭಾಗವಾಗಿದೆ. ಈ ರೀತಿಯಲ್ಲಿ ಭಾಷಣ ಮಾಡುವಂತೆ ಅವರನ್ನು ಪ್ರೇರೇಪಿಸಿದ ಘಟಕಗಳು ಯಾವುವು ಎಂದು ನೋಡೋಣ.

ಒಂದನೇ ಜಾಗತಿಕ ಯುದ್ಧದ ವರೆಗೆ ಪ್ಯಾಲಸ್ತೀನನ್ನು ಒಳಗೊಂಡಿದ್ದ ಪ್ರದೇಶವು ತುರ್ಕಿ ಸಾಮ್ರಾಜ್ಯದ ಭಾಗವಾಗಿತ್ತು. ಒಂದನೇ ಜಾಗತಿಕ ಯುದ್ಧದಲ್ಲಿ ತುರ್ಕಿಯು ಪರಾಜಯಗೊಳ್ಳುವುದರೊಂದಿಗೆ ಪ್ಯಾಲಸ್ತೀನ್ ಒಳಗೊಂಡ ಪ್ರದೇಶವು ಬ್ರಿಟನಿನ ನಿಯಂತ್ರಣಕ್ಕೊಳಗಾಯಿತು. ಈ ಯುದ್ಧದಲ್ಲಿ ಯಹೂದ್ಯರು ಮಾಡಿದ ಸೇವೆಗೆ ಪ್ರತ್ಯುಪಕಾರವಾಗಿ ಪಶ್ಚಿಮ ಏಷ್ಯಾದಲ್ಲಿ ಅವರಿಗೆ ಸ್ವಂತವಾದ ಒಂದು ದೇಶವನ್ನು ನೀಡುವುದಾಗಿ ಬ್ರಿಟನ್‌ನ ವಿದೇಶಾಂಗ ಕಾರ್ಯದರ್ಶಿಯಾಗಿದ್ದ ಆರ್ಥರ್ ಬಾಲ್ಫರ್ ಘೋಷಿಸಿದರು. ಇದನ್ನು ಬಾಲ್ಫರ್ ಘೋಷಣೆ ಎಂದು ಕರೆಯುತ್ತಾರೆ. ಝಿಯೋನಿಸ್ಟ್ ಚಳುವಳಿ ಎಂಬುದು ಯಹೂದ್ಯರಿಗೆ ಒಂದು ದೇಶವನ್ನು ಸ್ಥಾಪಿಸಬೇಕು ಎಂಬ ಗುರಿಯೊಂದಿಗೆ ರೂಪುಗೊಂಡ ಚಳುವಳಿಯಾಗಿದೆ. ಹಿಟ್ಲರನು ಜರ್ಮನಿಯಲ್ಲಿ ಯಹೂದ್ಯರಿಗೆ ನೀಡಿದ ಕಿರುಕುಳದ ಬಗ್ಗೆ ನಾವು ಮೊದಲು ಚರ್ಚಿಸಿದೆವು. ಇಂತಹ ಘಟನೆಗಳು ಯಹೂದ್ಯರಿಗೆ ಸ್ವಂತವಾದ ಒಂದು ದೇಶ ಬೇಕೆಂಬ ಆವಶ್ಯಕತೆಯ ತೀವ್ರತೆಯನ್ನು ಹೆಚ್ಚಿಸಿತು. 1948ರಲ್ಲಿ ಇಸ್ರೇಲ್ ಎಂಬ ದೇಶವು ರೂಪುಗೊಂಡಿತು. ಅನಂತರ ಇಸ್ರೇಲ್ ಹಾಗೂ ಅರಬ್ ದೇಶಗಳೊಳಗೆ ಅನೇಕ ಯುದ್ಧಗಳು ನಡೆದವು. ಇಸ್ರೇಲ್ ಪ್ಯಾಲಸ್ತೀನನ್ನು ವಶಪಡಿಸಿಕೊಂಡಿತು.


ಪಶ್ಚಿಮ ಏಷ್ಯಾದ ಸಂಘರ್ಷದ ಚಿತ್ರಗಳು

ತಾಯ್ನಾಡಿನಿಂದ ಹೊರಹೋಗಬೇಕಾಗಿ ಬಂದ ಪ್ಯಾಲಸ್ತೀನಿನ ಜನರು ವಿವಿಧ ಅರಬ್ ದೇಶಗಳಲ್ಲಿ ಆಶ್ರಯ ಪಡೆದರು. ಇಸ್ರೇಲ್‌ನ ರೂಪೀಕರಣದೊಂದಿಗೆ ನಿರಾಶ್ರಿತರಾಗಬೇಕಾಗಿ ಬಂದ ಪ್ಯಾಲಸ್ತೀನಿನ ಜನರಿಗೆ ಸ್ವಂತವಾದ ಒಂದು ದೇಶವನ್ನು ರೂಪಿಸುವ ಗುರಿಯೊಂದಿಗೆ ಪ್ಯಾಲಸ್ತೀನ್ ವಿಮೋಚನಾ ಸಂಘಟನೆ (Palestine Liberation Organisation (PLO)) ಯು ಸ್ಥಾಪಿತವಾಯಿತು. ಯಾಸರ್ ಅರಾಫತ್ ಇದರ ಸ್ಥಾಪಕ ಅಧ್ಯಕ್ಷರಾಗಿದ್ದಾರೆ. ಅನೇಕ ರಕ್ತಪಾತಗಳ ನಂತರ 1993ರಲ್ಲಿ ಅಮೇರಿಕಾದ ಮಧ್ಯಸ್ಥಿಕೆಯಲ್ಲಿ ಸಹಿಮಾಡಿದ 'ಓಸ್ಲೋ' ಒಪ್ಪಂದದ ಪ್ರಕಾರ ಪ್ಯಾಲಸ್ತೀನನ್ನು ಸ್ವತಂತ್ರ ದೇಶವನ್ನಾಗಿಸಲು ಇಸ್ರೇಲ್ ಅಂಗೀಕಾರ ನೀಡಿತು. ಆದರೆ ಅದು ಪೂರ್ಣವಾಗಿ ಜಾರಿಗೆ ಬರಲಿಲ್ಲ.

**ತೈಲ – ರಾಜಕೀಯ ಆಯುಧ**

ಜಗತ್ತಿನ ತೈಲ ಸಂಪತ್ತಿನ ಅರ್ಧಾಂಶವೂ ಪಶ್ಚಿಮ ಏಷ್ಯಾದಲ್ಲೇ ಇದೆ. ಅರಬ್-ಇಸ್ರೇಲ್ ಯುದ್ಧದ ನಂತರ ತೈಲ ರಫ್ತು ಮಾಡುವ ದೇಶಗಳ ಒಂದು ಸಂಘಟನೆಯನ್ನು (OPEC) ರೂಪಿಸಿದರು. ಪ್ಯಾಲಸ್ತೀನ್‌ನ ಸಮಸ್ಯೆಯನ್ನು ಪರಿಹರಿಸಲಿರುವ ದಾರಿ ಎಂಬ ನೆಲೆಯಲ್ಲಿ ತೈಲವನ್ನು ಒಂದು ಒತ್ತಡ ತಂತ್ರವಾಗಿ ಉಪಯೋಗಿಸಿದರು. ತೈಲದ ಉತ್ಪಾದನೆಯನ್ನು ಕಡಿಮೆ ಮಾಡಿ, ಬೆಲೆ ಹೆಚ್ಚಳ ಮಾಡಿ ಪ್ರಸ್ತುತ ತಂತ್ರವನ್ನು ಜಾರಿಮಾಡಿದರು.

**ಸಿಯೋನಿಸಂ**

ಯಹೂದ್ಯರಿಗಾಗಿ ಪ್ರತ್ಯೇಕ ರಾಷ್ಟ್ರವನ್ನು ರೂಪೀಕರಿಸಬೇಕೆಂಬ ಉದ್ದೇಶದಿಂದ ಆರಂಭಿಸಿದ ಹೋರಾಟ. ಈ ಆಶಯವನ್ನು ಮೊತ್ತಮೊದಲಾಗಿ ಥಿಯೋಡರ್ ಹರ್ಜಲ್ ಎಂಬ ಬರಹಗಾರನು ಮಂಡಿಸಿದನು. ಅವನು 'ದಿ ಜ್ಯೂವಿಶ್ ಸ್ಟೇಟ್' ಎಂಬ ಪುಸ್ತಕದಲ್ಲಿ ಯಹೂದಿ ದೇಶ ಎಂಬ ಆಶಯವನ್ನು ಮುಂದಿರಿಸಿದನು.

ಸಾಮ್ರಾಜ್ಯಶಾಹಿಗಳ ಆಸಕ್ತಿಯು ಪಶ್ಚಿಮ ಏಷ್ಯಾದ ಸಂಘರ್ಷಕ್ಕೆ ಕಾರಣವಾಯಿತೇ ಎಂಬುದನ್ನು ಅವಲೋಕಿಸಿರಿ.

**ಪಶ್ಚಿಮ ಏಷ್ಯಾದ ಪ್ರಚಲಿತ ವಿದ್ಯಮಾನಗಳ ಕುರಿತಾದ ವಾರ್ತೆಗಳನ್ನು ಸಂಗ್ರಹಿಸಿ ಒಂದು ಭಿತ್ತಿ ಪತ್ರಿಕೆಯನ್ನು ತಯಾರಿಸಿರಿ.**


ಗೋರ್ಬಚೇವ್

## ಸೋವಿಯತ್ ಯೂನಿಯನ್‌ನ ಪತನ

ಸೋವಿಯತ್ ಯೂನಿಯನ್‌ನ ಪತನವು ಇಪ್ಪತ್ತನೇ ಶತಮಾನದ ಕೊನೆಯ ದಶಕದಲ್ಲುಂಟಾದ ಪ್ರಧಾನವಾದ ಘಟನೆಯಾಗಿದೆ. ಇದಕ್ಕೆ ಕಾರಣಗಳೇನೆಂದು ನೋಡೋಣ.

- ಸಮಾಜವಾದದ ಮೂಲತತ್ವಗಳಿಂದ ದೂರ ಸರಿದುದು.
- ಆರ್ಥಿಕ ಕ್ಷೇತ್ರದ ಬದಲಾವಣೆಗಳನ್ನು ಅಳವಡಿಸಿಕೊಳ್ಳುವುದರಲ್ಲಿ ಉಂಟಾದ ಪರಾಜಯ.

- ನೌಕರರ ಭ್ರಷ್ಟಾಚಾರ ಹಾಗೂ ಕಳಪೆ ನಿರ್ವಹಣೆ.
- ಮಿಖಾಯಿಲ್ ಗೋರ್ಬಚೇವ್‌ನ ಆಡಳಿತ ಸುಧಾರಣೆಗಳು. (ಗ್ಲಾಸ್‌ನೋಸ್ತ್, ಪೆರಿಸ್ಟ್ರೋಯಿಕ)

1991 ರಲ್ಲಿ ಗೋರ್ಬಚೇವ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವುದರೊಂದಿಗೆ ಸೋವಿಯತ್ ಯೂನಿಯನ್ ಪತನವಾಯಿತು. ಸೋವಿಯತ್ ಯೂನಿಯನ್‌ನ ಪತನದೊಂದಿಗೆ ಶೀತಲಸಮರವು ಕೊನೆಗೊಂಡಿತು ಹಾಗೂ ಸಾಮ್ರಾಜ್ಯಶಾಹಿಗಳ ಕಾರ್ಯ ಚಟುವಟಿಕೆಗಳು ಪ್ರಶ್ನಾತೀತವಾಯಿತು. ಇದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರೀ ಪರಿಣಾಮಗಳಿಗೆ ಕಾರಣವಾಯಿತು. ಎರಡು ಧ್ರುವಗಳ ಜಗತ್ತು ಪತನಗೊಂಡು ಅಮೇರಿಕಾದ ಆಧಿಪತ್ಯದಲ್ಲಿ ಏಕಧ್ರುವೀಯ ಜಗತ್ತು ಉದಯವಾಯಿತು.



### ಗ್ಲಾಸ್‌ನೋಸ್ತ್ ಮತ್ತು ಪೆರಿಸ್ಟ್ರೋಯಿಕ

ಮಿಖಾಯಿಲ್ ಗೋರ್ಬಚೇವ್ ಸೋವಿಯತ್ ಯೂನಿಯನ್‌ನಲ್ಲಿ ಜಾರಿಗೊಳಿಸಿದ ಸುಧಾರಣೆಗಳು ಗ್ಲಾಸ್‌ನೋಸ್ತ್ (Glassnost) ಹಾಗೂ ಪೆರಿಸ್ಟ್ರೋಯಿಕ (Peristroika) ಗಳಾಗಿವೆ. ರಾಜಕೀಯ ಕ್ಷೇತ್ರದಲ್ಲಿ ತೆರೆದ ಸಮೀಪನ (Openness) ವನ್ನು ಜಾರಿಗೊಳಿಸುವುದಕ್ಕಾಗಿ ಗ್ಲಾಸ್‌ನೋಸ್ತ್ ನೀತಿಯನ್ನು ತರಲಾಯಿತು. ಇದರ ಪ್ರಕಾರ ಪೌರರ ಹಕ್ಕುಗಳ ಮೇಲಿನ ನಿಯಂತ್ರಣಗಳು ಹಾಗೂ ಪತ್ರಿಕಾ ಮಾಧ್ಯಮಗಳ ಮೇಲಿನ ನಿಯಂತ್ರಣಗಳನ್ನು ತೆರವುಗೊಳಿಸಿದರು. ಸೋವಿಯತ್ ಯೂನಿಯನ್‌ನ ಅರ್ಥ ವ್ಯವಸ್ಥೆಯನ್ನು ಪುನಃ ಸಂಘಟಿಸುವುದಕ್ಕಾಗಿ (Restructure) ಪೆರಿಸ್ಟ್ರೋಯಿಕಾವನ್ನು ಜಾರಿಗೆ ತಂದರು. ಉತ್ಪಾದನ ವಲಯದಲ್ಲಿ ಸರಕಾರದ ನಿಯಂತ್ರಣವನ್ನು ಕೊನೆಗೊಳಿಸುವುದು, ಕೇಂದ್ರೀಕೃತ ಯೋಜನೆಯಲ್ಲಿ ರಿಯಾಯಿತಿ ತರುವುದು ಎಂಬಿವುಗಳು ಇದರ ಭಾಗವಾಗಿತ್ತು.

## ಏಕಧ್ರುವೀಯ ಜಗತ್ತು - ಅಮೇರಿಕದ ಆಧಿಪತ್ಯ

ಸೋವಿಯತ್ ಯೂನಿಯನಿನ ಪತನವು ಅಮೇರಿಕಾವು ಜಾಗತಿಕ ಶಕ್ತಿಯಾಗಿ ಬದಲಾಗಲು ಕಾರಣವಾಯಿತು. ಇದರೊಂದಿಗೆ ಜಾಗತಿಕ ರಾಜಕೀಯ ರಂಗದ ಕೇಂದ್ರವಾಗಿ ಅಮೇರಿಕಾವು ಬದಲಾಯಿತು. ಇದನ್ನು ಏಕಧ್ರುವೀಯ ಜಗತ್ತು ಎಂದು ಕರೆಯುತ್ತಾರೆ. ಅಮೇರಿಕಾವು ಜಾಗತಿಕ ಮಟ್ಟದಲ್ಲಿ ತನ್ನ ಆಧಿಪತ್ಯವನ್ನು ಸ್ಥಿರಗೊಳಿಸಲು ಹಲವು ತಂತ್ರಗಳನ್ನು ಆವಿಷ್ಕರಿಸಿತು. ಅವುಗಳು ಯಾವುವು ಎಂದು ನೋಡೋಣ.

- ♦ ಅಂತಾರಾಷ್ಟ್ರೀಯ ಏಜೆನ್ಸಿಗಳನ್ನು ಉಪಯೋಗಿಸಿ ದೇಶಗಳಿಗೆ ಆರ್ಥಿಕ-ಸೈನಿಕ ಸಹಾಯವನ್ನು ಒದಗಿಸಿತು.
- ♦ ಸೈನಿಕ ಒಡಂಬಡಿಕೆಗಳನ್ನು ವ್ಯಾಪಕಗೊಳಿಸಿತು.
- ♦ ಮಾಧ್ಯಮಗಳನ್ನು ತಮ್ಮ ಹಿತಾಸಕ್ತಿಗಾಗಿ ಬಳಸಿತು.

ಅಮೇರಿಕಾದ ಸಾಮ್ರಾಜ್ಯಶಾಹಿ ಧೋರಣೆಗಳು ಕೊಲ್ಲಿ ಯುದ್ಧಕ್ಕೆ ಕಾರಣವಾದುವು. ಅಮೇರಿಕಾವು ಈ ಯುದ್ಧದಲ್ಲಿ ತಮ್ಮ ಸೈನಿಕ ಸಾಮರ್ಥ್ಯ ಹಾಗೂ ತಾಂತ್ರಿಕತೆಯನ್ನು ಬಳಸಿತ್ತು. ಅಮೇರಿಕಾದ ಮೇಲೆ ಉಂಟಾದ ಭಯೋತ್ಪಾದಕರ ಆಕ್ರಮಣವು ಅದು ಆಕ್ರಮಣಕಾರಿಯಾದ ವಿದೇಶ ನೀತಿಯನ್ನು ಸ್ವೀಕರಿಸಲು ಹಾಗೂ ಹಲವು ದೇಶಗಳ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡಲು ಪ್ರೇರೇಪಿಸಿತು. ಅಫಘಾನಿಸ್ಥಾನ, ಇರಾಕ್, ಸಿರಿಯಾ ಮೊದಲಾದ ದೇಶಗಳಲ್ಲಿ ಅಮೇರಿಕಾವು ನಡೆಸಿದ ಹಸ್ತಕ್ಷೇಪವು ಇದಕ್ಕೆ ಉದಾಹರಣೆಯಾಗಿದೆ. ಆದರೆ ಅಮೇರಿಕಾದ ಆಧಿಪತ್ಯಕ್ಕೆದುರಾದ ಒಗ್ಗೂಡುವಿಕೆಯು ಜಗತ್ತಿನ ವಿವಿಧ ಭಾಗಗಳಲ್ಲಿ ರೂಪುಗೊಳ್ಳುತ್ತಿದೆ.



### ಕೊಲ್ಲಿ ಯುದ್ಧಗಳು

1991ರಲ್ಲಿ ಹಾಗೂ 2003ರಲ್ಲಿ ನಡೆದ ಕೊಲ್ಲಿ ಯುದ್ಧ (ಗಲ್ಫ್ ಯುದ್ಧ)ಗಳು ಎರಡನೇ ಜಾಗತಿಕ ಯುದ್ಧದ ನಂತರ ಉಂಟಾದ ಪ್ರಧಾನ ಘಟನೆಗಳಾಗಿವೆ. ಇರಾಕ್‌ನ ಆಡಳಿತಾಧಿಕಾರಿಯಾಗಿದ್ದ ಸದ್ದಾಂ ಹುಸೈನ್ ಕುವೈಟನ್ನು ಆಕ್ರಮಿಸುವುದರೊಂದಿಗೆ ಕೊಲ್ಲಿ ಯುದ್ಧವು ಆರಂಭವಾಯಿತು. ಅಮೇರಿಕ ಹಾಗೂ ಬ್ರಿಟನ್‌ನ ನೇತೃತ್ವದ ಮಿತ್ರಪಕ್ಷ ಸೈನ್ಯವು ಇರಾಕನ್ನು ಆಕ್ರಮಿಸಿ ಕುವೈಟನ್ನು ವಿಮೋಚನೆಗೊಳಿಸಿತು. ಪೆಟ್ರೋಲಿಯಂ ಉತ್ಪನ್ನಗಳ ನಿಯಂತ್ರಣವನ್ನು ವಶದಲ್ಲಿರಿಸಿಕೊಳ್ಳುವುದಕ್ಕೆ ಸಂಬಂಧಿಸಿ ಉಂಟಾದ ತರ್ಕವು ಈ ಯುದ್ಧಗಳಿಗೆ ಕಾರಣವಾಗಿತ್ತು.

## ನವೀನ ಸಾಮ್ರಾಜ್ಯಶಾಹಿತ್ವ (New Imperialism)

ಎರಡನೇ ಜಾಗತಿಕ ಯುದ್ಧದ ಬಳಿಕ ಜಗತ್ತಿನಲ್ಲಿ ನವೀನ ರೀತಿಯ ಸಾಮ್ರಾಜ್ಯಶಾಹಿತ್ವ ವ್ಯವಸ್ಥೆಯು ಆರಂಭಗೊಂಡಿತು. ಒಂದು ದೇಶದಲ್ಲಿ ನೋಂದಾಯಿಸಲ್ಪಟ್ಟು ವಿವಿಧ ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬಹುರಾಷ್ಟ್ರೀಯ ಕಂಪೆನಿಗಳು ಅವರ ಹಿತಾಸಕ್ತಿಗಳಿಗಾಗಿ ಅಭಿವೃದ್ಧಿಹೊಂದಿದ ಹಾಗೂ ಅಭಿವೃದ್ಧಿಹೊಂದುತ್ತಿರುವ ದೇಶಗಳ ಆರ್ಥಿಕ - ಸಾಮಾಜಿಕ-ಸಾಂಸ್ಕೃತಿಕ ವಲಯಗಳಲ್ಲಿ ಹಸ್ತಕ್ಷೇಪ ಮಾಡಲು ಆರಂಭಿಸಿದವು. ಇದನ್ನು ನವೀನ ಸಾಮ್ರಾಜ್ಯಶಾಹಿತ್ವ (New Imperialism) ಎಂದು ಕರೆಯುತ್ತಾರೆ. ತೃತೀಯ ಜಗತ್ತಿನ ದೇಶಗಳ ಸಂಪತ್ತನ್ನು ವಶಪಡಿಸಲು ಬಹುರಾಷ್ಟ್ರೀಯ ಕಂಪನಿಗಳು ಸ್ಪರ್ಧಿಸಿದುವು. ಅವರ ತಂತ್ರಗಳು ಹೊಸ ಒಂದು ಬಳಕೆದಾರ ಸಂಸ್ಕೃತಿಯು ಬೆಳೆದು ಬರಲು ಕಾರಣವಾಯಿತು. ಅಭಿವೃದ್ಧಿಶೀಲ ದೇಶಗಳು ಬಹುರಾಷ್ಟ್ರೀಯ ಕಂಪೆನಿಗಳ ಮಾರುಕಟ್ಟೆಗಳಾಗಿ ಬದಲಾದುವು. ಅಭಿವೃದ್ಧಿಹೊಂದಿದ ದೇಶಗಳ ಉತ್ಪನ್ನಗಳು ಅಭಿವೃದ್ಧಿಶೀಲ ದೇಶಗಳ ಗ್ರಾಮಗಳಿಗೂ ತಲುಪಿದುವು. ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಸ್ಪರ್ಧಿಸಲು ಸಾಧ್ಯವಾಗದೆ ಸ್ವದೇಶದ ಆರ್ಥಿಕ ವಲಯವು ಕುಸಿಯಲು ಆರಂಭವಾಯಿತು.



ನವೀನ ಸಾಮ್ರಾಜ್ಯಶಾಹಿತ್ವವು ತೃತೀಯ ಜಗತ್ತಿನ ದೇಶಗಳ ಆರ್ಥಿಕತೆಯನ್ನು ಯಾವೆಲ್ಲ ರೀತಿಯಲ್ಲಿ ಬಾಧಿಸಿತು ಎಂದು ಕಂಡುಕೊಳ್ಳಿರಿ.

## ನವೀನ ಆರ್ಥಿಕ ಧೋರಣೆ (Globalisation)

ಜಾಗತೀಕರಣ, ಖಾಸಗೀಕರಣ, ಉದಾರೀಕರಣ ಎಂಬಿವುಗಳು ನವೀನ ಸಾಮ್ರಾಜ್ಯಶಾಹಿತ್ವದ ಆಶಯಗಳಾಗಿವೆ. ಅವುಗಳ ವಿಶೇಷತೆಗಳು ಯಾವುವು ಎಂದು ನೋಡೋಣ.

**ಉದಾರೀಕರಣ**

- ಬಹುರಾಷ್ಟ್ರೀಯ ಕಂಪನಿಗಳ ಉತ್ಪನ್ನಗಳು ಹಾಗೂ ಮೂಲಧನವು ಅನಿಯಂತ್ರಿತವಾಗಿ ಹರಿದು ಬರಲು ಆಮದು ನೀತಿ ಹಾಗೂ ತೆರಿಗೆಗಳನ್ನು ಉದಾರಗೊಳಿಸಿದರು.

**ಖಾಸಗೀಕರಣ**

- ಖಾಸಗಿ ವಲಯವನ್ನು ಪ್ರೋತ್ಸಾಹಿಸುವುದರ ಅಂಗವಾಗಿ ಸಾರ್ವಜನಿಕ ಸಂಸ್ಥೆಗಳನ್ನು ಖಾಸಗೀಕರಣಗೊಳಿಸಿದರು.

**ಜಾಗತೀಕರಣ**

- ದೇಶದ ಆರ್ಥಿಕ ವ್ಯವಸ್ಥೆಯನ್ನು ಜಾಗತಿಕ ವ್ಯವಸ್ಥೆಗೆ ಅನುಗುಣವಾಗಿ ರೂಪಿಸಿದರು.
- ಬಹುರಾಷ್ಟ್ರೀಯ ಕಂಪನಿಗಳ ಹಿತಾಸಕ್ತಿಗಳನ್ನು ಸಂರಕ್ಷಿಸಿದರು.
- ಸ್ಪರ್ಧಾತ್ಮಕ ಮಾರುಕಟ್ಟೆಗಳು ಅಸ್ತಿತ್ವಕ್ಕೆ ಬಂದುವು.
- ಉತ್ಪನ್ನಗಳು, ಸೇವೆಗಳು, ಸಂಪನ್ಮೂಲಗಳು, ಮೂಲಧನ, ನವೀನ ತಾಂತ್ರಿಕತೆ, ಮಾನವ ಸಂಪನ್ಮೂಲ ಇತ್ಯಾದಿಗಳು ಯಾವುದೇ ಅಡೆತಡೆಗಳಿಲ್ಲದೆ ಹರಿದುಬರಲಾರಂಭಿಸಿತು.

ವಿಶ್ವಬ್ಯಾಂಕ್, ಅಂತಾರಾಷ್ಟ್ರೀಯ ಹಣಕಾಸು ನಿಧಿ (IMF), ವಿಶ್ವವ್ಯಾಪಾರ ಸಂಘಟನೆ (WTO)ಮೊದಲಾದ ಅಂತಾರಾಷ್ಟ್ರೀಯ ಸಂಸ್ಥೆಗಳು ಜಾಗತೀಕರಣಕ್ಕೆ ಸೂಕ್ತವಾದ ಧೋರಣೆಗಳನ್ನು ರೂಪಿಸಿ ಜಾರಿಗೊಳಿಸಿದುವು. ಜಾಗತೀಕರಣವು ಜಗತ್ತಿನೆದುರು ಹೊಸ ಸಾಧ್ಯತೆಗಳನ್ನು ಮತ್ತು ಸಂದರ್ಭಗಳನ್ನು ತೆರೆಯಿತು. ಮಾಹಿತಿ ತಂತ್ರಜ್ಞಾನದ ವ್ಯಾಪಿಸುವಿಕೆ ಹಾಗೂ ವಸ್ತು ಮತ್ತು ಸೇವೆಗಳ ಮೇರೆಗಳಿಲ್ಲದ ವಿನಿಮಯವು ಜಾಗತಿಕ ಗ್ರಾಮ (Global Village) ಎಂಬ ಆಶಯಕ್ಕೆ ರೂಪು ನೀಡಿತು. ಆದರೆ ಜಾಗತೀಕರಣವು ಅಭಿವೃದ್ಧಿಶೀಲ ದೇಶಗಳ ಮೇಲೆ ಬೀರಿದ ದುಷ್ಪರಿಣಾಮಗಳು ಯಾವುವು ಎಂಬುದನ್ನು ನೋಡೋಣ.

- ಸ್ವದೇಶೀ ರಾಷ್ಟ್ರ ಎಂಬ ಆಶಯಕ್ಕೆ ಬಹುರಾಷ್ಟ್ರೀಯ ಕಂಪೆನಿಗಳ ನುಸುಳುವಿಕೆಯು ಸವಾಲಾಯಿತು.
- ಸ್ವದೇಶೀ ಸಂಸ್ಕೃತಿಯ ಅವನತಿಗೆ ದಾರಿಮಾಡಿಕೊಟ್ಟಿತು.
- ಕೃಷಿ ಉತ್ಪನ್ನಗಳ ಬೆಲೆಗಳಲ್ಲಿ ಕುಸಿತ ಉಂಟಾಯಿತು.
- ಸಾರ್ವಜನಿಕ ಸಂಸ್ಥೆಗಳು ಅಧಃಪತನಗೊಂಡವು.
- ಸರಕಾರಗಳು ಸಾಮಾಜಿಕ ಸೇವಾವಲಯಗಳಿಂದ ಹಿಂದೆ ಸರಿದವು.
- ಪ್ರಾಕೃತಿಕ ಸಂಪನ್ಮೂಲಗಳನ್ನು ಕೊಳ್ಳೆಹೊಡೆದರು.


**ಜಾಗತೀಕರಣವು ನಮ್ಮ ದೈನಂದಿನ ಜೀವನದ ಮೇಲೆ ಎಷ್ಟರಮಟ್ಟಿಗೆ ಪ್ರಭಾವ ಬೀರುತ್ತದೆ ಎಂಬುದನ್ನು ಚರ್ಚಿಸಿರಿ.**



ಇಪ್ಪತ್ತನೇ ಶತಮಾನದಲ್ಲಿ ಪ್ರಪಂಚದ ವಿವಿಧ ಭಾಗಗಳಲ್ಲಿ ಉಂಟಾದ ಘಟನೆಗಳು ಹಾಗೂ ಅವುಗಳು ಜಾಗತಿಕ ಚರಿತ್ರೆಯ ಮೇಲೆ ಯಾವೆಲ್ಲ ರೀತಿಯಲ್ಲಿ ಪ್ರಭಾವ ಬೀರಿವೆ ಎಂದು ನಾವು ಚರ್ಚಿಸಿದೆವು. ಸಾಮ್ರಾಜ್ಯಶಾಹಿತ್ವದ ಉದಯಕ್ಕೆ ದಾರಿಮಾಡಿಕೊಟ್ಟ ಸನ್ನಿವೇಶಗಳು, ಸಾಮ್ರಾಜ್ಯಶಾಹಿತ್ವವು ಎದುರಿಸಿದ ಸವಾಲುಗಳು, ಸಾಮ್ರಾಜ್ಯಶಾಹಿತ್ವದ ದುಷ್ಪರಿಣಾಮಗಳು ಎಂಬಿವುಗಳು ಇಪ್ಪತ್ತನೇ ಶತಮಾನದ ಚರಿತ್ರೆಯನ್ನು ರೂಪಿಸುವಲ್ಲಿ ಪ್ರಧಾನ ಪಾತ್ರವಹಿಸಿದವು.

*ಇಪ್ಪತ್ತನೇ ಶತಮಾನದ ವಿಭಿನ್ನ ಘಟನೆಗಳನ್ನು ಸೇರಿಸಿ ಒಂದು ಡಿಜಿಟಲ್ ಕೊಲಾಷ್ ತಯಾರಿಸಿರಿ.*





## ಮೌಲ್ಯನಿರ್ಣಯ ಮಾಡುವ

- ಸಾಮ್ರಾಜ್ಯಶಾಹಿತ್ವ ಎಂದರೇನು?
- ವಸಾಹತುಶಾಹಿತ್ವವು ಸಾಮ್ರಾಜ್ಯಶಾಹಿತ್ವದಿಂದ ಹೇಗೆ ಭಿನ್ನವಾಗಿದೆ?
- ಪ್ಯಾರಿಸ್ ಶಾಂತಿ ಒಪ್ಪಂದವು ಎರಡನೇ ಜಾಗತಿಕ ಯುದ್ಧಕ್ಕೆ ಹಿನ್ನೆಲೆಯಾಯಿತು. ಈ ಹೇಳಿಕೆಯನ್ನು ನೀವು ಒಪ್ಪುವಿರಾ? ಯಾಕೆ?
- ಅಮೇರಿಕಾದ ಆರ್ಥಿಕ ಕುಸಿತಕ್ಕೆ ಕಾರಣವಾದ ಘಟಕಗಳು ಯಾವುವು?
- ಫ್ಯಾಸಿಸಂನ ಪ್ರಧಾನ ವಿಶೇಷತೆಗಳನ್ನು ಪಟ್ಟಿಮಾಡಿರಿ.
- ಪ್ಯಾಲಸ್ತೀನ್- ಇಸ್ರೇಲ್‌ನ ಸಮಸ್ಯೆಗಳಿಗೆ ಕಾರಣವಾದ ರಾಜಕೀಯ ಸನ್ನಿವೇಶವನ್ನು ವಿಶದೀಕರಿಸಿರಿ.
- 'ಎ' ವಿಭಾಗಕ್ಕೆ ಸರಿಹೊಂದುವವುಗಳನ್ನು 'ಬಿ' ವಿಭಾಗದಿಂದ ಆರಿಸಿರಿ.

| ಎ | ಬಿ |
|---|---|
| ♦ ಅಡಾಲ್ಫ್ ಹಿಟ್ಲರ್ | ♦ ಒಂದನೇ ಜಾಗತಿಕ ಯುದ್ಧ |
| ♦ ವಾರ್ಸಾಯಿ ಒಪ್ಪಂದ | ♦ ಗಸ್ಟಾಪೋ |
| ♦ ಸೋವಿಯತ್ ಯೂನಿಯನ್‌ನ ಪತನ | ♦ ಇಟೆಲಿ |
| ♦ ಬೆನೆಟ್ಟೋ ಮುಸ್ಸೋಲಿನಿ | ♦ ಮಿಖಾಯಿಲ್ ಗೋರ್ಬಚೇವ್ |

- ಅಲಿಪ್ತತೆಯ ಔಚಿತ್ಯವನ್ನು ಅವಲೋಕಿಸಿರಿ.
- ಸೋವಿಯತ್ ಯೂನಿಯನಿನ ಪತನದಿಂದ ಜಾಗತಿಕ ರಾಜಕೀಯದಲ್ಲಿ ಉಂಟಾದ ಬದಲಾವಣೆಗಳು ಯಾವುವು?

## ಮುಂದುವರಿದ ಚಟುವಟಿಕೆಗಳು

- ನಮ್ಮ ದೈನಂದಿನ ಜೀವನದಲ್ಲಿ ಬಹುರಾಷ್ಟ್ರೀಯ ಕಂಪೆನಿಗಳು ಬೀರುವ ಪ್ರಭಾವದ ಆಧಾರದಲ್ಲಿ ಒಂದು ಲೇಖನ ತಯಾರಿಸಿರಿ.
- ಯುದ್ಧ ವಿರುದ್ಧ ಚಿತ್ರಗಳು, ವಾರ್ತೆಗಳು, ಕವಿತೆಗಳು, ಹೇಳಿಕೆಗಳು ಮೊದಲಾದುವುಗಳನ್ನು ಸೇರಿಸಿ ಒಂದು ಪ್ರದರ್ಶನ ಏರ್ಪಡಿಸಿರಿ.
- ಯು. ಎನ್. ದಿನಾಚರಣೆಯ ಅಂಗವಾಗಿ ಒಂದು 'ಯು.ಎನ್. ದಿನ ರಸಪ್ರಶ್ನೆ' ಕಾರ್ಯಕ್ರಮವನ್ನು ಏರ್ಪಡಿಸಿರಿ.



ಅಧ್ಯಾಯ

03

# ಸಾರ್ವಜನಿಕ ಆಡಳಿತ




ಇವರಿಂದ

ಸುರೇಶ್‌ಕುಮಾರ್

ಅನಶ್ವರ, ವಳುತಕ್ಕಾಡ್, ತಿರುವನಂತಪುರಂ

ಸ್ವೀಕರಿಸುವವ

ಪಬ್ಲಿಕ್ ಇನ್‌ಫಾರ್ಮೇಶನ್ ಆಫೀಸರ್

ಸರಕಾರಿ ಹೈಯರ್ ಸೆಕೆಂಡರಿ ಶಾಲೆ, ಕರಮನ, ತಿರುವನಂತಪುರಂ

ಮಾನ್ಯರೇ,

ಮಾಹಿತಿ ಹಕ್ಕು 2005ರ ಪ್ರಕಾರ, ನಿಮ್ಮ ವಿದ್ಯಾಲಯದಲ್ಲಿರುವ ಶಾಲಾ ಲೈಬ್ರರಿಗೆ ಸಂಬಂಧಿಸಿ ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ನೀಡಬೇಕೆಂದು ಅಪೇಕ್ಷಿಸುತ್ತಿದ್ದೇನೆ.

1. ವಿದ್ಯಾಲಯದಲ್ಲಿರುವ ಲೈಬ್ರರಿ ಕಾರ್ಯನಿರ್ವಹಿಸುತ್ತಿದೆಯೇ? ಇದ್ದರೆ ಅದರ ಕೆಲಸದ ಸಮಯ ಎಷ್ಟರಿಂದ ಎಷ್ಟರವರೆಗೆ?
2. ಲೈಬ್ರರಿಗೆ ಸಂಬಂಧಿಸಿದ ಜವಾಬ್ದಾರಿಯನ್ನು ಯಾರಿಗಾದರೂ ನೀಡಲಾಗಿದೆಯೇ?
3. ಸ್ಟಾಕ್ ರಿಜಿಸ್ಟರ್‌ನ ಪ್ರಕಾರ ಶಾಲಾ ಲೈಬ್ರರಿಯಲ್ಲಿ ಎಷ್ಟು ಪುಸ್ತಕಗಳಿವೆ?
4. ಯಾವ ಯಾವ ನಿಯತಕಾಲಿಕೆಗಳನ್ನು ಶಾಲಾ ಲೈಬ್ರರಿಗೆ ತರಿಸಿಕೊಳ್ಳಲಾಗುತ್ತದೆ?

ತಿರುವನಂತಪುರಂ ವಿಧೇಯ(ಸಹಿ)

25/08/15 ಸುರೇಶ್‌ಕುಮಾರ್

ಮಾಹಿತಿ ಹಕ್ಕಿಗೆ ಸಂಬಂಧಿಸಿ ಸಮರ್ಪಿಸಿದ ಅರ್ಜಿಯನ್ನು ಮೇಲೆ ಪರಿಚಯಿಸಲಾಗಿದೆ. ಮಕ್ಕಳಿಗೆ ಉತ್ತಮವಾದ ಓದಿನ ಸಂದರ್ಭಗಳನ್ನು ಒದಗಿಸುವುದು ಶಾಲೆಯ ಜವಾಬ್ದಾರಿಯಾಗಿದೆ. ಶಾಲಾ ಲೈಬ್ರರಿ ಈ ವಿಷಯದಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ.

ವಿದ್ಯಾಲಯಗಳಂತೆಯೇ ದೈನಂದಿನ ಜೀವನಕ್ಕೆ ಸಂಬಂಧಿಸಿ ಅನೇಕ ಸರಕಾರೀ ಸಂಸ್ಥೆಗಳು ನಮ್ಮ ಸುತ್ತುಮುತ್ತಲಿನಲ್ಲಿ ಇವೆ. ಈ ರೀತಿಯ ಕೆಲವು ಸಂಸ್ಥೆಗಳನ್ನು ಮತ್ತು ಅವು ನಿರ್ವಹಿಸುವ ಜವಾಬ್ದಾರಿಗಳನ್ನು ಕೆಳಗೆ ನೀಡಲಾಗಿದೆ. ಈ ಪಟ್ಟಿಯನ್ನು ವಿಸ್ತರಿಸಿರಿ.

| ಸಂಸ್ಥೆಗಳು | ಜವಾಬ್ದಾರಿಗಳು |
|---|---|
| ◆ ಪ್ರಾಥಮಿಕ ಆರೋಗ್ಯ ಕೇಂದ್ರ | ◆ ಚಿಕಿತ್ಸಾ ಸೌಕರ್ಯಗಳನ್ನು ಒದಗಿಸುವುದು. |
| ◆ ಕೃಷಿ ಭವನ | ◆ ಕೃಷಿಯನ್ನು ಪ್ರೋತ್ಸಾಹಿಸುವುದು. |
| ◆ ಪೋಲೀಸ್ ಸ್ಟೇಷನ್ | ◆ ಶಾಂತಿಯನ್ನು ಕಾಪಾಡುವುದು. |
| ◆ | ◆ |

ಪ್ರತಿಯೊಂದು ಸಂಸ್ಥೆಯೂ ವ್ಯತ್ಯಸ್ತವಾದ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದೆಯೆಂಬುದನ್ನು ಪಟ್ಟಿಯಿಂದ ತಿಳಿದುಕೊಳ್ಳಬಹುದು. ರಾಷ್ಟ್ರದಾದ್ಯಂತ ಈ ರೀತಿಯ ಸಂಸ್ಥೆಗಳು ಕಾರ್ಯ ನಿರ್ವಹಿಸುವುದನ್ನು ಕಾಣಬಹುದು.

ಸರಕಾರವು ರೂಪಿಸುವ ನಿಯಮಗಳು, ಅಭಿವೃದ್ಧಿ ಯೋಜನೆಗಳು ಇತ್ಯಾದಿಗಳನ್ನು ಜಾರಿಗೊಳಿಸಲು ಪ್ರತಿಯೊಂದು ದೇಶದಲ್ಲಿಯೂ ಆಡಳಿತ ಸಂಸ್ಥೆಗಳು ಅಸ್ತಿತ್ವದಲ್ಲಿವೆ. ಈ ಸಂಸ್ಥೆಗಳು ಸರಕಾರದ ಜವಾಬ್ದಾರಿಗಳನ್ನು ಫಲಪ್ರದವಾಗಿ ನಿರ್ವಹಿಸುತ್ತವೆ.

## ಸಾರ್ವಜನಿಕ ಆಡಳಿತ (Public Administration)

> *ಸರಕಾರದ ಆಡಳಿತಕ್ಕೆ ಸಂಬಂಧಿಸಿದವುಗಳು ಸಾರ್ವಜನಿಕ ಆಡಳಿತವೆನಿಸುತ್ತವೆ.*
>
> **ಎನ್. ಗ್ಲಾಡನ್**


ಸಾರ್ವಜನಿಕ ಆಡಳಿತವನ್ನು ವಿಶ್ಲೇಷಿಸಿ, ನಿರ್ವಚಿಸಿದ ಪಾಶ್ಚಾತ್ಯ ಚಿಂತಕನಾದ ಗ್ಲಾಡನ್‌ನ ನಿರ್ವಚನವನ್ನು ಮೇಲೆ ಕೊಡಲಾಗಿದೆ. ಅದರಂತೆ ಸರಕಾರದ ಆಡಳಿತವು ಸಾರ್ವಜನಿಕ ಆಡಳಿತದ ಪ್ರಧಾನ ವಲಯವಾಗಿದೆ ಎಂದು ತಿಳಿದುಕೊಳ್ಳಬಹುದು. ದೇಶದಲ್ಲಿ ಈಗಿರುವ ಕಾನೂನುಗಳನ್ನು, ಸರಕಾರದ ಧೋರಣೆಗಳನ್ನು, ಅಭಿವೃದ್ಧಿ ಪರ ಯೋಜನೆಗಳನ್ನು ಜಾರಿಗೆ ತರಲು ಅಗತ್ಯವಾದ ಭೌತಿಕ ಸನ್ನಿವೇಶವನ್ನು ಸೃಷ್ಟಿಸುವುದು ಹಾಗೂ ಮಾನವ ಸಂಪನ್ಮೂಲವನ್ನು ಫಲಪ್ರದವಾಗಿ ವಿನಿಯೋಗಿಸುವುದನ್ನು ಸಾರ್ವಜನಿಕ ಆಡಳಿತ ಎನ್ನುತ್ತಾರೆ. ಈ ರೀತಿಯ ಸರಕಾರಿ ಸಂಸ್ಥೆಗಳು ಸಾರ್ವಜನಿಕ ಆಡಳಿತದ ಭಾಗವಾಗಿವೆ. ಸಾರ್ವಜನಿಕ ಕ್ಷೇಮವನ್ನು

ಗುರಿಯಾಗಿಸಿಕೊಂಡು ಈ ಸಂಸ್ಥೆಗಳು ಕಾರ್ಯನಿರ್ವಹಿಸುತ್ತವೆ. ಸರಕಾರಗಳು ಅಸ್ತಿತ್ವದಲ್ಲಿರಲು ಹಾಗೂ ಕಾರ್ಯನಿರ್ವಹಿಸಲು ಆಡಳಿತ ವಿಧಾನಗಳು ಅಗತ್ಯವಾಗಿವೆ.

ರಾಷ್ಟ್ರದ ಆರಂಭದೊಂದಿಗೆ ಸಾರ್ವಜನಿಕ ಆಡಳಿತದ ಚರಿತ್ರೆಯು ಆರಂಭವಾಗುತ್ತದೆ.

ಆಡಳಿತ ವಿಧಾನಕ್ಕೆ ಅನುಗುಣವಾಗಿ ಸಾರ್ವಜನಿಕ ಆಡಳಿತದಲ್ಲಿಯೂ ವ್ಯತ್ಯಾಸವನ್ನು ಕಾಣಬಹುದು. ರಾಜನ ಆಡಳಿತ ಕಾಲದಲ್ಲಿ ರಾಜರ ಹಿತಾಸಕ್ತಿಯ ಆಧಾರದಲ್ಲಿ ಸಾರ್ವಜನಿಕ ಆಡಳಿತ ಇರುತ್ತಿತ್ತು. ಆದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ಹಿತಾಸಕ್ತಿಯೇ ಪ್ರಧಾನವಾಗಿದೆ. ಸಾರ್ವಜನಿಕ ಆಡಳಿತ ವಿಧಾನದ ಮೂಲಕ ಪ್ರಜಾಪ್ರಭುತ್ವ ಆಡಳಿತವು ಹೆಚ್ಚು ಯಶಸ್ವಿಯಾಗುತ್ತದೆ ಹಾಗೂ ಕಾರ್ಯದಕ್ಷವಾಗುತ್ತದೆ.

**ರಾಜಾಡಳಿತ ಪ್ರಜಾಪ್ರಭುತ್ವ ಮೊದಲಾದ ಆಡಳಿತ ವಿಧಾನಗಳಲ್ಲಿ ಸಾರ್ವಜನಿಕ ಆಡಳಿತ ವಿಧಾನದ ಉದ್ದೇಶಗಳನ್ನು ಮತ್ತು ಅವುಗಳಲ್ಲಿ ಬಂದ ಬದಲಾವಣೆಗಳನ್ನು ಚರ್ಚಿಸಿ ಪಟ್ಟಿ ತಯಾರಿಸಿರಿ.**




## ಸಾರ್ವಜನಿಕ ಆಡಳಿತದ ಪ್ರಾಧಾನ್ಯ




ನೀಡಿರುವ ವಾರ್ತಾಶೀರ್ಷಿಕೆಗಳನ್ನು ಗಮನಿಸಿರಿ. ಸರಕಾರಿ ಸಂಸ್ಥೆಗಳಿಂದ ಜನರಿಗೆ ಸಿಗುವ ಸೇವೆಯ ಕುರಿತು ಇದರಲ್ಲಿ ಪ್ರತಿಪಾದಿಸಲಾಗಿದೆ. ಜನರ ವಿವಿಧ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಹಾಗೂ ಜನರ ಕ್ಷೇಮವನ್ನು ಖಾತರಿಪಡಿಸಲು ಸಾರ್ವಜನಿಕ ಆಡಳಿತದ ಮೂಲಕ ಸರಕಾರವು ಪ್ರಯತ್ನಿಸುತ್ತದೆ.


ಸಾರ್ವಜನಿಕ ಆಡಳಿತದ ಪ್ರಾಧಾನ್ಯವನ್ನು ಸೂಚಿಸುವ ಪದಸೂರ್ಯವನ್ನು ಗಮನಿಸಿರಿ.




ಈ ಮೇಲಿನ ಗಾಂಧೀಜಿಯ ಮಾತುಗಳು ಯಾವ ಸಂದೇಶವನ್ನು ನೀಡುತ್ತವೆ? ಆಡಳಿತದ ಪ್ರಯೋಜನಗಳು ಯಾರಿಗೆಲ್ಲ ಸಿಗಬೇಕೆಂದು ಅವರು ಆಗ್ರಹಿಸುತ್ತಾರೆ?

ಸಾರ್ವಜನಿಕ ಆಡಳಿತದ ಮೂಲಕ ಎಲ್ಲರ ಹಿತಾಸಕ್ತಿಯ ಸಂರಕ್ಷಣೆಯು ಗಾಂಧೀಜಿಯವರ ಉದ್ದೇಶವಾಗಿದೆ.

> ನೀವು ಏನನ್ನಾದರೂ ಜಾರಿಗೊಳಿಸುವ ಮುನ್ನ, ನೀವು ನೋಡಿದ ಬಡವನೂ ನಿಸ್ಸಹಾಯಕನೂ ಆದ ಒಬ್ಬನ ಮುಖವನ್ನು ಜ್ಞಾಪಿಸಿಕೊಳ್ಳಿರಿ. ನಾನೀಗ ಮಾಡಲು ಹೋಗುತ್ತಿರುವ ಕಾರ್ಯದಿಂದ, ಆ ಬಡವನಿಗೆ ಹೇಗೆ ಸಹಾಯವಾಗಬಹುದು ಎಂದು ಸ್ವಯಂ ಪ್ರಶ್ನಿಸಿಕೊಳ್ಳಿರಿ.
>
> ಮಹಾತ್ಮಾಗಾಂಧಿ



ಆದರೆ ಹೆಚ್ಚಿನ ಪ್ರಾಶಸ್ತ್ಯ, ಸಂರಕ್ಷಣೆಯ ಅಗತ್ಯವಿರುವವರೂ ನಮ್ಮ ಸಮಾಜದಲ್ಲಿದ್ದಾರೆ. ಸಾರ್ವಜನಿಕ ಆಡಳಿತವು ಅವರನ್ನು ವಿಶೇಷವಾಗಿ ಪರಿಗಣಿಸಬೇಕು ಹಾಗೂ ಸಂರಕ್ಷಿಸಬೇಕು ಎಂದು ಆವರು ಅಭಿಪ್ರಾಯಪಟ್ಟರು.



**ಸಾರ್ವಜನಿಕ ಆಡಳಿತದಿಂದ ಯಾರಿಗೆಲ್ಲ ಯಾವೆಲ್ಲ ಸೇವೆಗಳು ಲಭಿಸಬೇಕೆಂಬುದು. ನಿಮ್ಮ ಅಭಿಪ್ರಾಯವಾಗಿದೆ? ತರಗತಿಯಲ್ಲಿ ಚರ್ಚಿಸಿ ಅಭಿಪ್ರಾಯಗಳನ್ನು ಬರೆಯಿರಿ.**

ಗಾಂಧೀಜಿಯ ಗ್ರಾಮ ಸ್ವರಾಜ್ ಎಂಬ ಆಶಯವು ಭಾರತದಲ್ಲಿ ಸಾರ್ವಜನಿಕ ಆಡಳಿತ ದೃಷ್ಟಿಕೋನದ ಮೇಲೆ ಪ್ರಭಾವವನ್ನು ಬೀರುವುದು. ಇದರ ಪರಿಣಾಮವಾಗಿ ಸ್ಥಳೀಯ ಸಂಸ್ಥೆಗಳನ್ನು ರೂಪಿಸಲಾಗಿದೆ. ಈ ಸಂಸ್ಥೆಗಳ ಕುರಿತಾಗಿ ಹಿಂದಿನ ತರಗತಿಗಳಲ್ಲಿ ಚರ್ಚಿಸಿರುವಿರಲ್ಲವೇ?.

## ನೌಕರ ವೃಂದ (Bureaucracy)

ಜನಕ್ಷೇಮವನ್ನು ಲಕ್ಷ್ಯವಾಗಿರಿಸಿ ಸರಕಾರ ಕೈಗೊಳ್ಳುವ ತೀರ್ಮಾನಗಳನ್ನು ಪತ್ರಿಕಾ ಶೀರ್ಷಿಕೆಯಲ್ಲಿ ಕೊಡಲಾಗಿದೆ. ಈ ಸೇವೆಗಳನ್ನು ಜನರಿಗೆ ತಲುಪಿಸುವುದು ಯಾರು?




ಆಯ್ಕೆಯಾದ ಜನಪ್ರತಿನಿಧಿಗಳಿಗೆ ಮಾತ್ರ ಈ ರೀತಿಯ ಕೆಲಸಗಳನ್ನು ಜಾರಿಗೊಳಿಸಲು ಸಾಧ್ಯವಿಲ್ಲ. ಆದ್ದರಿಂದ ಅವರಿಗೆ ಆಡಳಿತ ನಿರ್ವಹಣೆಯಲ್ಲಿ ಸಹಾಯ ಮಾಡಲು, ಸಲಹೆ ನೀಡಲು, ಜಾರಿಗೊಳಿಸಲು ನೌಕರ ವೃಂದವನ್ನು ರೂಪಿಸಲಾಗಿದೆ. ಗ್ರಾಮೀಣ ಮಟ್ಟದಿಂದ ಕೇಂದ್ರದವರೆಗೆ ವ್ಯಾಪಿಸಿರುವ ಸಾರ್ವಜನಿಕ ವ್ಯವಸ್ಥೆಯೊಂದನ್ನು ಇದರೊಂದಿಗೆ ಜೋಡಿಸಲಾಗಿದೆ. ಈ ಸಂಸ್ಥೆಗಳ ದೈನಂದಿನ ಕಾರ್ಯನಿರ್ವಹಣೆಗೆ ಧಾರಾಳ ನೌಕರರನ್ನು ನೇಮಿಸಲಾಗಿದೆ. ನೌಕರವೃಂದವು ಸಾರ್ವಜನಿಕ ಆಡಳಿತವನ್ನು ಕ್ರಿಯಾತ್ಮಕವನ್ನಾಗಿಸುತ್ತದೆ. ಸರಕಾರದಿಂದ ಲಭಿಸುವ ಎಲ್ಲ ಸೇವೆಗಳು ಇವರ ಮೂಲಕ ಜನರಿಗೆ ಲಭಿಸುತ್ತದೆ. ದೇಶದ ಆಡಳಿತ ಕಾರ್ಯಗಳನ್ನು

ನಿರ್ವಹಿಸುವ ಮತ್ತು ಸಾರ್ವಜನಿಕ ಆಡಳಿತದ ಅಧೀನದಲ್ಲಿ ಕಾರ್ಯನಿರ್ವಹಿಸುವ ಉದ್ಯೋಗಿಗಳನ್ನು ನೌಕರವೃಂದ ಎನ್ನುತ್ತಾರೆ.

ದೇಶದ ಪ್ರಾಕೃತಿಕ ಮತ್ತು ಮಾನವ ಸಂಪನ್ಮೂಲಗಳನ್ನು ಗರಿಷ್ಠ ಪ್ರಮಾಣದಲ್ಲಿ ಉಪಯೋಗಿಸಿದಾಗ ದೇಶವು ಅಭಿವೃದ್ಧಿಯನ್ನು ಹೊಂದುತ್ತದೆ. ನೌಕರವೃಂದವು ಇವುಗಳನ್ನು ವೈಜ್ಞಾನಿಕವಾಗಿ ವಿನಿಯೋಗಿಸುವ ಯೋಜನೆಗಳನ್ನು ತಯಾರಿಸುತ್ತದೆ ಹಾಗೂ ಜಾರಿಗೊಳಿಸುವ ಕೆಲಸವನ್ನು ನಿರ್ವಹಿಸುತ್ತದೆ. ನೌಕರವೃಂದಕ್ಕೆ ಸಾಮಾನ್ಯವಾದ ಕೆಲವು ವಿಶೇಷತೆಗಳಿವೆ. ಅವುಗಳು ಯಾವುವೆಂದು ನೋಡುವ:

**ನೌಕರವೃಂದದ ವಿಶೇಷತೆಗಳು**

**ಶ್ರೇಣಿ ಆಧಾರಿತ ಸಂಸ್ಥೆ**

ಅತ್ಯುನ್ನತ ಹಂತದಲ್ಲಿ ಓರ್ವ ಉದ್ಯೋಗಿಯೂ ಅದಕ್ಕಿಂತ ಕೆಳಗಿನ ಹಂತದಲ್ಲಿ ಹಲವಾರು ಉದ್ಯೋಗಿಗಳನ್ನೂ ಒಳಗೊಂಡ ರೀತಿಯನ್ನು ಶ್ರೇಣಿ ಆಧಾರಿತ ಸಂಸ್ಥೆಗಳು ಎಂದು ಕರೆಯುತ್ತಾರೆ.

**ಸ್ಥಿರತೆ**

ಉದ್ಯೋಗಿಯಾಗಿ ಆಯ್ಕೆಯಾಗುವವರಿಗೆ ನಿಶ್ಚಿತ ಪ್ರಾಯದವರೆಗೆ ಸೇವಾವಧಿಯಿರುತ್ತದೆ.

**ಯೋಗ್ಯತೆಯ ಆಧಾರದಲ್ಲಿ ನೇಮಕಾತಿ**

ಶೈಕ್ಷಣಿಕ ಯೋಗ್ಯತೆಯ ಆಧಾರದಲ್ಲಿ ಆಯ್ಕೆ ಮತ್ತು ನೇಮಕಾತಿ.

**ರಾಷ್ಟ್ರೀಯ ನಿಷ್ಪಕ್ಷಪಾತ**

ಯಾವುದೇ ರಾಜಕೀಯ ಪಕ್ಷವು ಅಧಿಕಾರಕ್ಕೆ ಬಂದರೂ ಧೋರಣೆಗಳನ್ನು ಜಾರಿಗೊಳಿಸಲು ಉದ್ಯೋಗಿಗಳು ಜವಾಬ್ದಾರರು. ಅವರ ರಾಜಕೀಯ ಆಸಕ್ತಿಗಳು ಅವರ ಕಾರ್ಯ ನಿರ್ವಹಣೆಗೆ ಅಡ್ಡಿಯಾಗಬಾರದು. ಅಂದರೆ ಅವರು ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸಬೇಕು.

**ಪರಿಣತಿ**

ಪ್ರತಿಯೊಬ್ಬ ಸರಕಾರಿ ಉದ್ಯೋಗಿಯು ತಾನು ನಿರ್ವಹಿಸುವ ಉದ್ಯೋಗದಲ್ಲಿ ಪರಿಣತಿಯನ್ನು ಹೊಂದಿದವನಾಗಿರಬೇಕು.

**ನಿಮ್ಮ ಸಮೀಪದ ಸರಕಾರಿ ಕಚೇರಿಯೊಂದನ್ನು ಸಂದರ್ಶಿಸಿ ನೌಕರವೃಂದದ ವಿಶೇಷತೆಗಳನ್ನು ಕಂಡುಕೊಂಡು ವರದಿ ತಯಾರಿಸಿರಿ.**



ನೌಕರವೃಂದದ ಈ ವಿಶೇಷತೆಗಳೇ ಆಡಳಿತವನ್ನು ಸುಲಲಿತವೂ ಸಮರ್ಥವೂ ಆಗುವಂತೆ ಮಾಡುತ್ತವೆ. ಎಲ್ಲ ದೇಶಗಳಲ್ಲಿಯೂ ನೌಕರವೃಂದದ ಈ ವಿಶೇಷತೆಗಳನ್ನು ಕಾಣಬಹುದು.

## ಭಾರತದಲ್ಲಿ ನೌಕರವೃಂದ

ಪ್ರಾಂತ್ಯ ಸರಕಾರಿ ಸೇವೆಗಿರುವ ಆಯ್ಕೆಯನ್ನು ಕೇರಳ ರಾಜ್ಯ ಲೋಕಸೇವಾ ಆಯೋಗವು ಪತ್ರಿಕಾ ಪ್ರಕಟನೆಯ ಮೂಲಕ ಜನರಿಗೆ ತಿಳಿಸುತ್ತದೆ. ನಂತರ ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಸಂದರ್ಶನದ ಆಧಾರದಲ್ಲಿ ಯೋಗ್ಯರಾದವರನ್ನು ಆಯ್ಕೆಮಾಡಿ ವಿವಿಧ ಸರಕಾರಿ ಕಚೇರಿಗಳಿಗೆ ನೇಮಿಸುತ್ತಾರೆ. ಈ ರೀತಿಯಲ್ಲಿ ನೇಮಕಗೊಂಡವರು ಭಾರತದ ಸಿವಿಲ್ ಸರ್ವಿಸ್‌ನ ಭಾಗವಾಗುತ್ತಾರೆ.

ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರದ ಕೈಕೆಳಗೆ ಕಾರ್ಯನಿರ್ವಹಿಸುವ ಎಲ್ಲ ಉದ್ಯೋಗಿಗಳೂ ವಿವಿಧ ಸಾರ್ವಜನಿಕ ಸಂಸ್ಥೆಗಳ ಉದ್ಯೋಗಿಗಳೂ ಭಾರತದ ಸಿವಿಲ್ ಸರ್ವೀಸ್‌ನ ಭಾಗವಾಗಿದ್ದಾರೆ. ಭಾರತದ ಸಿವಿಲ್ ಸರ್ವೀಸ್‌ನ ವರ್ಗೀಕರಣವನ್ನು ಸೂಚಿಸುವ ಚಾರ್ಟ್‌ನ್ನು ಗಮನಿಸಿರಿ.

### ಭಾರತೀಯ ಸಿವಿಲ್ ಸರ್ವೀಸ್

| ಅಖಿಲ ಭಾರತೀಯ ಸಿವಿಲ್ ಸರ್ವೀಸ್ (All India Civil Service) | ಕೇಂದ್ರ ಸರ್ವೀಸ್ (Central Service) | ಸ್ಟೇಟ್ ಸರ್ವೀಸ್ (State Service) |
|---|---|---|
| ♦ ದೇಶೀಯ ಮಟ್ಟದಲ್ಲಿ ಆಯ್ಕೆ ಮಾಡುವುದು.<br>♦ ಕೇಂದ್ರ ಅಥವಾ ರಾಜ್ಯ ಸರ್ವೀಸ್‌ನಲ್ಲಿ ಆಯ್ಕೆಯಾಗುವರು.<br>ಉದಾ:<br>♦ ಐ.ಎ.ಎಸ್.(Indian administrative Service)<br>♦ ಐ.ಪಿ.ಎಸ್.(Indian Police Service) | ♦ ದೇಶೀಯ ಮಟ್ಟದಲ್ಲಿ ಆಯ್ಕೆ<br>♦ ಕೇಂದ್ರ ಸರಕಾರಕ್ಕೆ ಮಾತ್ರ ಅಧಿಕಾರವಿರುವ ಆಡಳಿತ ಇಲಾಖೆಗಳಲ್ಲಿ ಆಯ್ಕೆಯಾಗುವರು.<br>ಉದಾ:<br>♦ ಇಂಡಿಯನ್ ಫಾರಿನ್ ಸರ್ವೀಸ್<br>♦ ಇಂಡಿಯನ್ ರೈಲ್ವೇ | ♦ ರಾಜ್ಯ ಮಟ್ಟದಲ್ಲಿ ಆಯ್ಕೆ<br>♦ ರಾಜ್ಯಸರಕಾರದ ಕೈಕೆಳಗೆ ಬರುವ ಇಲಾಖೆಗಳಲ್ಲಿ ನೇಮಕ<br>ಉದಾ:<br>♦ ರಾಜ್ಯ ಸರಕಾರ ಸೇವೆ. |


ಯು.ಪಿ.ಎಸ್.ಸಿ.

ಅಖಿಲ ಭಾರತ ಸಿವಿಲ್ ಸರ್ವಿಸ್ ಮತ್ತು ಕೇಂದ್ರ ಸರ್ವಿಸಿಗೆ ನೌಕರರನ್ನು ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್ ಆಯ್ಕೆಮಾಡುತ್ತದೆ (ಯು.ಪಿ.ಎಸ್.ಸಿ). ಈ ಕಮಿಷನಿನ ಚೆಯರ್‌ಮೆನ್ ಮತ್ತು ಸದಸ್ಯರನ್ನು ರಾಷ್ಟ್ರಪತಿಯುವರು ನೇಮಿಸುತ್ತಾರೆ. ಯೋಗ್ಯತೆಯ ಆಧಾರದಲ್ಲಿ ನೌಕರರನ್ನು ಆಯ್ಕೆ ಮಾಡುವ ವಿಫುಲವಾದ ವಿಧಾನಗಳು ಯು.ಪಿ.ಎಸ್.ಸಿ ಗಿದೆ.

**ನಿಮಗೂ ಜಿಲ್ಲಾಧಿಕಾರಿ ಆಗಬಹುದು**

ಜಿಲ್ಲಾಧಿಕಾರಿಯವರು ಜಿಲ್ಲೆಯ ಉನ್ನತ ಅಧಿಕಾರಿಯಾಗಿದ್ದಾರೆ. ಐ.ಎ.ಎಸ್. ದರ್ಜೆಯಲ್ಲಿರುವವರನ್ನು ಜಿಲ್ಲಾಧಿಕಾರಿಯಾಗಿ ನೇಮಕಗೊಳಿಸುತ್ತಾರೆ. ಇದಕ್ಕಾಗಿ ಯು.ಪಿ.ಎಸ್.ಸಿ. ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯನ್ನು ಸಿವಿಲ್ ಸರ್ವೀಸ್ ಪರೀಕ್ಷೆ ಎಂದು ಕರೆಯುತ್ತಾರೆ. ಯಾವುದಾದರೂ ವಿಷಯದಲ್ಲಿ ಪಡೆದ ಪದವಿಯು ಈ ಪರೀಕ್ಷೆಗೆ ಅರ್ಜಿ ಸಲ್ಲಿಸಲಿರುವ ಯೋಗ್ಯತೆಯಾಗಿದೆ. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉನ್ನತ ರ್‍ಯಾಂಕನ್ನು ಗಳಿಸುವವರನ್ನು ಐ.ಎ.ಎಸ್. ದರ್ಜೆಗೆ ಸೇರಿಸಿ ತರಬೇತಿಯನ್ನು ನೀಡಲಾಗುತ್ತದೆ. ಉನ್ನತ ಪೋಲೀಸ್ ಅಧಿಕಾರಿಯ ಯೋಗ್ಯತೆಯಾದ ಐ.ಪಿ.ಎಸ್. ದರ್ಜೆಯಲ್ಲಿರುವವರನ್ನೂ ಇದೇ ರೀತಿಯ ಪರೀಕ್ಷೆಯ ಮೂಲಕ ಆಯ್ಕೆ ಮಾಡಲಾಗುತ್ತದೆ.



ಕೇರಳ ಪಿ.ಎಸ್.ಸಿ

ರಾಜ್ಯಮಟ್ಟದಲ್ಲಿ ಆಯಾ ರಾಜ್ಯಗಳ ಪಬ್ಲಿಕ್ ಸರ್ವೀಸ್ ಕಮಿಷನ್ (ಪಿ.ಎಸ್.ಸಿ)ನೌಕರರನ್ನು ಆಯ್ಕೆಮಾಡುತ್ತದೆ. ರಾಜ್ಯಪಾಲರು ಪಿ.ಎಸ್.ಸಿ. ಯ ಚಯರ್‌ಮೆನ್ ಮತ್ತು ಸದಸ್ಯರನ್ನು ನೇಮಿಸುತ್ತಾರೆ. ಯು.ಪಿ.ಯಎಸ್.ಸಿ ಮತ್ತು ಪಿ.ಎಸ್.ಸಿ ಗಳು ನಮ್ಮ ಸಂವಿಧಾನದ ನಿಯಮಗಳ ಆಧಾರದಲ್ಲಿ ರೂಪುಗೊಂಡ ಸಂಸ್ಥೆಗಳಾಗಿವೆ. ಆದ್ದರಿಂದ ಇವುಗಳನ್ನು ಸಾಂವಿಧಾನಿಕ ಸಂಸ್ಥೆಗಳೆಂದು ಕರೆಯುತ್ತಾರೆ.

ಶ್ರೇಣಿ ಆಧಾರದ ರಚನೆಯು ನೌಕರ ವೃಂದದ ಪ್ರಧಾನ ವಿಶೇಷತೆಯೆಂಬುದನ್ನು ತಿಳಿದಿರಲ್ಲವೇ. ಇದು ಕೆಲವೊಮ್ಮೆ ಶೀಘ್ರವಾದ ತೀರ್ಮಾನ ಕೈಗೊಳ್ಳುವಲ್ಲಿ ಅಡ್ಡಿಯಾಗುವುದಿದೆ. ಇಂತಹ ಸಮಸ್ಯೆಗಳ ಪರಿಹಾರಕ್ಕೆ ಹಾಗೂ ಸಾರ್ವಜನಿಕರಿಗೆ ಉತ್ತಮ ಸೇವೆಯು ಲಭಿಸುವುದಕ್ಕಾಗಿ ಕೆಲವು ಕ್ರಮಗಳನ್ನು ಸರಕಾರವು ಆವಿಷ್ಕರಿಸಿದೆ. ಅವು ಯಾವುದೆಂಬುದನ್ನು ಪರಿಶೀಲಿಸುವ.

## ಆಡಳಿತ ನವೀಕರಣ


ಆಡಳಿತ ನಿರ್ವಹಣೆಯ ಕಾರ್ಯದಕ್ಷತೆಯನ್ನು ಹೆಚ್ಚಿಸಲು, ವಿಳಂಬವಿಲ್ಲದೆ ಸಮಯಕ್ಕೆ ಸರಿಯಾಗಿ ಸಾರ್ವಜನಿಕರಿಗೆ ಸೇವೆಗಳನ್ನು ಸಲ್ಲಿಸಲು ಸರಕಾರವು ವಿವಿಧ ಯೋಜನೆಗಳನ್ನು ಹಮ್ಮಿಕೊಂಡಿದೆ. ಇವುಗಳನ್ನು ಆಡಳಿತ ನವೀಕರಣ ಕ್ರಮಗಳೆನ್ನುತ್ತಾರೆ. ಇದರ ಪ್ರಧಾನ ಉದ್ದೇಶವು ಆಡಳಿತವನ್ನು ಹೆಚ್ಚು ಕಾರ್ಯದಕ್ಷತೆಯಿಂದಲೂ ಜನಸೌಹಾರ್ದದಿಂದಲೂ ನಡೆಸುವುದಾಗಿದೆ. ಇದಕ್ಕಾಗಿ ರಾಷ್ಟ್ರಮಟ್ಟದಲ್ಲಿ ಮತ್ತು ರಾಜ್ಯಮಟ್ಟದಲ್ಲಿ ಆಡಳಿತ ಸುಧಾರಣಾ ಕಮಿಷನುಗಳನ್ನು ರೂಪಿಸಲಾಗಿದೆ.

ಆಡಳಿತ ನವೀಕರಣವನ್ನು ಉದ್ದೇಶವಾಗಿರಿಸಿಕೊಂಡು ನಮ್ಮ ರಾಷ್ಟ್ರದಲ್ಲಿ ಜಾರಿಗೊಳಿಸಿದ ಕೆಲವು ಸುಧಾರಣೆಗಳನ್ನು ತಿಳಿದುಕೊಳ್ಳುವ.

## ಇ-ಗವರ್ನೆನ್ಸ್

ಪಾರದರ್ಶಕವಾದ ಮತ್ತು ಕ್ರಿಯಾಶೀಲವಾದ ಸರಕಾರಿ ವ್ಯವಸ್ಥೆಗಳು ಸುರಕ್ಷಿತವಾಗಿ ಮತ್ತು ವೇಗವಾಗಿ ಇಲಾಖೆಗಳ ಮಟ್ಟದಲ್ಲಿ ತಡೆರಹಿತವಾಗಿ ಎಲ್ಲರಿಗೂ ತಲುಪುವ ಮಾಹಿತಿಗಳು ಎಲ್ಲಾ ಪ್ರಜೆಗಳಿಗೂ ಭೇದರಹಿತವಾದ ಪಾರದರ್ಶಕ ಸೇವೆಯು ಲಭಿಸುವ ಉದ್ದೇಶವನ್ನು ಹೊಂದಿರುವ ವ್ಯವಸ್ಥೆ -

ಎ.ಪಿ.ಜೆ. ಅಬ್ದುಲ್‌ಕಲಾಂ.



ಇಲ್ಲಿ ನೀಡಿರುವುದು ಇ-ಗವರ್ನೆನ್ಸ್‌ನ ಕುರಿತಾಗಿ ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂರವರ ಅಭಿಪ್ರಾಯವಾಗಿದೆ.

ವೈಜ್ಞಾನಿಕ ಮತ್ತು ಮಾಹಿತಿ ತಂತ್ರಜ್ಞಾನ ರಂಗದಲ್ಲಿ ನಾವು ಪಡೆದ ಪ್ರಗತಿಯನ್ನು ಆಡಳಿತ ವಲಯದಲ್ಲಿ ಬಳಸಬೇಕಾಗಿದೆ. ಇ-ಗವರ್ನೆನ್ಸ್‌ಎಂದರೆ ಆಡಳಿತರಂಗದಲ್ಲಿ ಇಲೆಕ್ಟ್ರೋನಿಕ್ ತಾಂತ್ರಿಕತೆಯ ಉಪಯೋಗವಾಗಿದೆ. ಇದು ಸರಕಾರೀ ಸೇವೆಗಳು ವೇಗವಾಗಿ ಮತ್ತು ಸುಲಭವಾಗಿ ಲಭಿಸುವಂತೆ ಮಾಡಲು ಸಹಾಯಕವಾಯಿತು. ಹೈಯರ್ ಸೆಕೆಂಡರಿ ಪ್ರವೇಶಕ್ಕಿರುವ ಏಕಗವಾಕ್ಷಿ ಅರ್ಜಿ ಸಲ್ಲಿಸುವ ವಿಧಾನ ವಿವಿಧ ಸ್ಕಾಲರ್‌ಶಿಪ್‌ಗಳಿಗಿರುವ ಆನ್‌ಲೈನ್ ಅರ್ಜಿ ವಿಧಾನ ಮೊದಲಾದುವುಗಳು ಇ-ಗವರ್ನೆನ್ಸ್‌ಗೆ ಉದಾಹರಣೆಯಾಗಿವೆ. ಇ-ಗವರ್ನೆನ್ಸ್‌ನಿಂದ ಸಾರ್ವಜನಿಕರಿಗೆ ಯಾವೆಲ್ಲ ಪ್ರಯೋಜನಗಳಿವೆಯೆಂದು ಕಂಡುಕೊಳ್ಳುವ.

- ಮಾಹಿತಿ ತಂತ್ರಜ್ಞಾನದ ಸಹಾಯದಿಂದ ಸೇವೆಯನ್ನು ಪಡೆಯಬಹುದು.
- ಸೇವೆಗಾಗಿ ಸರಕಾರಿ ಕಚೇರಿಗಳಲ್ಲಿ ಕಾಯಬೇಕಾಗಿಲ್ಲ.
- ಸರಕಾರದಿಂದ ಲಭಿಸಬೇಕಾದ ಸೇವೆಯು ಕಡಿಮೆ ವೆಚ್ಚದಲ್ಲಿಯೂ ವೇಗವಾಗಿಯೂ ಲಭಿಸುತ್ತದೆ.
- ಕಚೇರಿಗಳ ಕಾರ್ಯದಕ್ಷತೆಯು ಉತ್ತಮಗೊಳ್ಳುವುದರೊಂದಿಗೆ ಸೇವೆಯ ಗುಣಮಟ್ಟವು ಹೆಚ್ಚುತ್ತದೆ.

### ಅಕ್ಷಯ ಕೇಂದ್ರ

ಇ-ಗವರ್‌ನೆನ್ಸ್‌ನ ಮೂಲಕ ಸರಕಾರವು ನೀಡುವ ಸೇವೆಗಳನ್ನು ಜನರಿಗೆ ತಲುಪಿಸಲು ರೂಪುಗೊಂಡಿರುವ ವ್ಯವಸ್ಥೆಯು ಅಕ್ಷಯ ಕೇಂದ್ರವಾಗಿದೆ. ಜನರನ್ನು ಇ-ಸಾಕ್ಷರರನ್ನಾಗಿಸುವುದೂ ಅಕ್ಷಯ ಕೇಂದ್ರದ ಉದ್ದೇಶವಾಗಿದೆ. ಇಂಟರ್‌ನೆಟ್, ಇಲೆಕ್ಟ್ರೋನಿಕ್ ತಂತ್ರಜ್ಞಾನದ ಪ್ರಾಥಮಿಕ ಅರಿವನ್ನು ಇ-ಸಾಕ್ಷರತೆ ಎಂದು ಕರೆಯುತ್ತಾರೆ.



ಇಂದು ಹೆಚ್ಚಿನ ಸರಕಾರೀ ಸಂಸ್ಥೆಗಳಲ್ಲಿ ಈ ಸೌಕರ್ಯವು ಲಭ್ಯವಿದೆ. ಕೇರಳದಲ್ಲಿರುವ ಎಲ್ಲರಿಗೂ ಈ ಸೇವೆಯನ್ನು ಒದಗಿಸುವುದಕ್ಕೆ ಅಗತ್ಯವಾದ ಮೂಲಸೌಲಭ್ಯವನ್ನು ಅಕ್ಷಯ ಕೇಂದ್ರದ ಮೂಲಕ ಖಾತರಿಪಡಿಸಲಾಗುತ್ತದೆ. ಇ-ಸಾಕ್ಷರತೆಯು ವ್ಯಾಪಕಗೊಳ್ಳುವುದರೊಂದಿಗೆ ಇ-ಗವರ್ನೆನ್ಸ್‌ನ ಮೂಲಕ ಸೇವೆಗಳನ್ನು ಎಲ್ಲರಿಗೂ ಮನೆಯಿಂದಲೇ ಪಡೆಯಬಹುದು.

## ಮಾಹಿತಿ ಹಕ್ಕು (Right to Information)

### ಮಾಹಿತಿ ಹಕ್ಕು ಅರ್ಜಿದಾರನಿಗಿರುವ ಉತ್ತರ

ಇವರಿಂದ

ಪಬ್ಲಿಕ್ ಇನ್‌ಫೊರ್ಮೇಶನ್ ಆಫೀಸರ್
ಸರಕಾರಿ ಹೈಯರ್ ಸೆಕೆಂಡರಿ ಶಾಲೆ, ಕರಮನ, ತಿರುವನಂತಪುರಂ

ಸ್ವೀಕರಿಸುವವ

ಸುರೇಶ್‌ಕುಮಾರ್
ಅನಶ್ವರ, ವಳುತಕ್ಕಾಡ್, ತಿರುವನಂತಪುರಂ

ಮಾನ್ಯರೇ,

ವಿಷಯ: ಮಾಹಿತಿ ಹಕ್ಕು 2005ರ ಪ್ರಕಾರ ಮಾಹಿತಿಯನ್ನು ನೀಡುವುದಕ್ಕೆ ಸಂಬಂಧಿಸಿ
ಸೂಚನೆ: 25-08-2015ರಂದು ಲಭಿಸಿದ ಅರ್ಜಿ

ತಾವು ಸಮರ್ಪಿಸಿದ ಮಾಹಿತಿ ಹಕ್ಕು ಪ್ರಕಾರದ ಅರ್ಜಿಯಲ್ಲಿ ಅಪೇಕ್ಷಿಸಿದ ವಿವರಣೆಗಳನ್ನು ಇದರೊಂದಿಗೆ ಸೇರಿಸಲಾಗಿದೆ.

ಉತ್ತರವನ್ನು ಪ್ರಶ್ನೆಗಳ ಸಂಖ್ಯೆಯ ಕ್ರಮದಲ್ಲಿ ನೀಡಲಾಗಿದೆ.

ಉತ್ತರ 1: ಇದೆ, 10 AM ನಿಂದ 4 PM ವರೆಗೆ.
ಉತ್ತರ 2 : ಪ್ರತ್ಯೇಕ ಲೈಬ್ರೇರಿಯನ್ ನೇಮಕವಾಗಿಲ್ಲ. ಶಾಲೆಯ ಓರ್ವ ಅಧ್ಯಾಪಿಕೆಗೆ ಜವಾಬ್ದಾರಿಯನ್ನು ನೀಡಲಾಗಿದೆ.
ಉತ್ತರ 3: ಸ್ಟಾಕ್ ರಿಜಿಸ್ಟರ್ ಪ್ರಕಾರ 6216 ಪುಸ್ತಕಗಳಿವೆ.
ಉತ್ತರ 4: ದಿನಪತ್ರಿಕೆಗಳು, ವಾರಪತ್ರಿಕೆಗಳು, ಮಾಸಪತ್ರಿಕೆಗಳು,

ಇನ್‌ಫಾರ್ಮೇಶನ್ ಆಫೀಸು ತಮಗೆ ನೀಡಿದ ವಿವರಣೆಯ ಕುರಿತು ತಮಗೆ ಆಕ್ಷೇಪಗಳಿದ್ದರೆ 30ದಿವಸಗಳೊಳಗೆ ಅಪೀಲ್ ಅಧಿಕಾರಿಗಳಿಗೆ ಅಪೀಲನ್ನು ಸಲ್ಲಿಸಬಹುದು. ಅಪೀಲು ಅಧಿಕಾರಿಯ ವಿಳಾಸ:

ಅಪೀಲು ಅಧಿಕಾರಿಗಳು
ಡಿ.ಇ.ಒ. ತಿರುವನಂತಪುರಂ

ವಿಶ್ವಾಸಗಳೊಂದಿಗೆ

ತಿರುವನಂತಪುರಂ (ಸಹಿ)
ದಿನಾಂಕ : 08/09/2015 ಪಬ್ಲಿಕ್ ಇನ್‌ಫಾರ್ಮೇಶನ್ ಆಫೀಸರ್

ಅಧ್ಯಾಯದ ಆರಂಭದಲ್ಲಿ ಪರಿಚಯಿಸಿದ ಮಾಹಿತಿ ಹಕ್ಕು ಅರ್ಜಿಗೆ ಬಂದ ಉತ್ತರವನ್ನು ಮೇಲೆ ನೀಡಲಾಗಿದೆ. ಯಾವುದೇ ಸರಕಾರಿ ಸಂಸ್ಥೆಯಿಂದ ಅದರ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿ ಮಾಹಿತಿಯನ್ನು ಈ ರೀತಿ ಪಡೆಯಬಹುದು. 2005ರ ಮಾಹಿತಿ ಹಕ್ಕು ನಿಯಮವು ಈ ಅವಕಾಶವನ್ನು ಜನರಿಗೆ ನೀಡಿದೆ.

ರಾಜಸ್ಥಾನದಲ್ಲಿ ಮಸ್‌ದೂರ್ ಕಿಸಾನ್ ಶಕ್ತಿ ಸಂಘಾತನ್ ಎನ್ನುವ ಸಂಘಟನೆ ನಡೆಸಿದ ಕಾರ್ಯಚಟುವಟಿಕೆಗಳು ಮಾಹಿತಿ ಹಕ್ಕು ನಿಯಮ ನಿರ್ಮಾಣಕ್ಕೆ ಕಾರಣವಾದುವು. ವಿವಿಧ ಸಂಘಟನೆಗಳು, ಸಾಮಾಜಿಕ ಕಾರ್ಯಕರ್ತರ ಸಕ್ರಿಯ ಪಾಲ್ಗೊಳ್ಳುವಿಕೆಯ ಮೂಲಕ 2005ರ ಮಾಹಿತಿ ಹಕ್ಕು ನಿಯಮ ನಿರ್ಮಾಣಕ್ಕೆ ದಾರಿಮಾಡಿಕೊಟ್ಟಿತು. ಇದು ದೇಶದ ಪ್ರಜೆಗಳಿಗೆಲ್ಲ ಮಾಹಿತಿಯನ್ನು ಪಡೆಯುವ ಹಕ್ಕನ್ನು ಖಾತರಿಪಡಿಸಿತು.



ಮಾಹಿತಿ ಹಕ್ಕು ನಿಯಮವು ಸಾರ್ವಜನಿಕ ಆಡಳಿತದ ಕಾರ್ಯದಕ್ಷತೆಯನ್ನು ಹೇಗೆ ಹೆಚ್ಚಿಸಿತು. ವಿಶ್ಲೇಷಿಸಿರಿ.

ಭ್ರಷ್ಟಾಚಾರವನ್ನು ನಿಯಂತ್ರಿಸುವುದು, ನೌಕರರಲ್ಲಿ ಜವಾಬ್ದಾರಿ ಪ್ರಜ್ಞೆಯನ್ನು ಮೂಡಿಸುವುದು, ಸರಕಾರದ ಕಾರ್ಯವೈಖರಿಯನ್ನು ಪಾರದರ್ಶಕವನ್ನಾಗಿ ಮಾಡುವುದು ಈ ನಿಯಮದ ಉದ್ದೇಶವಾಗಿದೆ. ಅಲ್ಲದೆ ಸಾರ್ವಜನಿಕ ಸಂಸ್ಥೆಯ ಕೈಯಲ್ಲಿರುವ ಮಾಹಿತಿಗಳನ್ನು ಪ್ರಜೆಗಳು ತಿಳಿದುಕೊಳ್ಳಲು ಬಯಸಿದಾಗ ನೀಡುವುದಕ್ಕೂ ಈ ನಿಯಮವು ಸಹಾಯಕವಾಯಿತು.

## ಮಾಹಿತಿ ಹಕ್ಕು ಆಯೋಗ (Information Commission)

ಮಾಹಿತಿ ಹಕ್ಕು ನಿಯಮದ ಪ್ರಕಾರವಿರುವ ಅಧಿಕಾರಗಳನ್ನು ಪ್ರಯೋಗಿಸಲೂ ಕರ್ತವ್ಯಗಳನ್ನು ನಿಭಾಯಿಸಲೂ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಮಾಹಿತಿ ಹಕ್ಕು ಆಯೋಗವನ್ನು ರೂಪಿಸಲಾಗಿದೆ. ಮಾಹಿತಿ ಹಕ್ಕು ಆಯೋಗದ ಮುಖ್ಯಸ್ಥರಲ್ಲದೆ ಹತ್ತಕ್ಕಿಂತ ಕಡಿಮೆಯಿಲ್ಲದ ಸದಸ್ಯರು ಈ ಆಯೋಗದಲ್ಲಿರುತ್ತಾರೆ.

ನಾವು ಕೇಳುವ ಮಾಹಿತಿಗಳಿಗೆ ನಿಶ್ಚಿತ ಸಮಯದೊಳಗೆ ಮಾಹಿತಿಯನ್ನು ನೀಡದಿರುವುದೋ, ನಿರುತ್ಸಾಹಗೊಳಿಸುವುದೋ, ಅಪೂರ್ಣ, ತಪ್ಪಾದ ಮತ್ತು ತೃಪ್ತಿಕರವಲ್ಲದ ಮಾಹಿತಿಯನ್ನು ನೀಡಿದರೆ ಮಾಹಿತಿ ಹಕ್ಕು ಆಯೋಗಕ್ಕೆ ಅಪೀಲು ಸಲ್ಲಿಸಬಹುದಾಗಿದೆ. ಇದು ಆಯೋಗಕ್ಕೆ ಮನವರಿಕೆಯಾದರೆ ಮಾಹಿತಿಯನ್ನು ನೀಡುವವರೆಗೆ ಪ್ರತಿಯೊಂದು ದಿನಕ್ಕೆ ಉದ್ಯೋಗಾಧಿಕಾರಿಗೆ 250 ರೂಪಾಯಿಗಳಂತೆ ದಂಡವನ್ನು ವಿಧಿಸುವ ಅಧಿಕಾರವು ಆಯೋಗಕ್ಕಿದೆ.



### ಯಾವೆಲ್ಲ ಮಾಹಿತಿಗಳಿವೆ?


ಸರಕಾರೀ ಸಂಸ್ಥೆಗೆ ಸಂಬಂಧಿಸಿದ ಫೈಲ್, ದಾಖಲೆಗಳು, ಅಧಿಸೂಚನೆಗಳು, ಆದೇಶಗಳು, ಮೆಮೋಗಳು, ಸಲಹೆಗಳು, ಸೂಚನೆಗಳು, ಬಾಂಡ್‌ಗಳು, ಒಪ್ಪಂದ ದಾಖಲೆಗಳು, ಸ್ಥಿತಿಗತಿ ವಿವರಗಳು, ವರದಿಗಳು, ಲೋಗ್‌ಬುಕ್, ಪತ್ರಿಕಾ ಹೇಳಿಕೆ, ಸ್ಯಾಂಪಲ್ಸ್, ಮಾದರಿಗಳು, ಇಲೆಕ್ಟ್ರೋನಿಕ್ ರೂಪದಲ್ಲಿ ಸಂಗ್ರಹಿಸಿರುವ ವಿವರಣೆಗಳು, ಇ-ಮೆಯಿಲ್, ಸಾರ್ವಜನಿಕ ಅಧಿಕಾರಿಗಳಿಗೆ ಲಭ್ಯವಾಗುವ ಖಾಸಗಿ ಸಂಸ್ಥೆಗಳಿಗೆ ಸಂಬಂಧಿಸಿದ ಮಾಹಿತಿಗಳು ಮುಂತಾದವುಗಳನ್ನು ಮಾಹಿತಿಯಲ್ಲಿ ಪಡೆಯಬಹುದಾಗಿದೆ. ಈ ನಿಯಮದ ಮೂಲಕ ಸರಕಾರಿ ಸಂಸ್ಥೆಗಳು, ಸರಕಾರದಿಂದ ಧನಸಹಾಯಪಡುವ ಸಂಸ್ಥೆಗಳ ನಿಯಂತ್ರಣದಲ್ಲಿರುವ ಮಾಹಿತಿಗಳು, ದಾಖಲೆಗಳ ಪ್ರತಿಗಳನ್ನು ಪರಿಶೀಲಿಸುವ ಹಾಗೂ ಅದರ ಪ್ರತಿಗಳನ್ನು ಪಡೆಯುವ ಹಕ್ಕುಗಳನ್ನು ಒಳಗೊಂಡಿವೆ.

ಆದರೆ ರಾಷ್ಟ್ರದ ಭದ್ರತೆ ಮತ್ತು ಅಖಂಡತೆಯನ್ನು ಬಾಧಿಸುವ ಮಾಹಿತಿಗಳು, ಕೋರ್ಟಿನ ಪರಿಗಣನೆಯಲ್ಲಿರುವವುಗಳು, ವ್ಯಕ್ತಿಗಳ ಜೀವನ ಮತ್ತು ಸುರಕ್ಷೆಗೆ ಬೆದರಿಕೆಯಾಗುವ ರೀತಿಯ ಮಾಹಿತಿಗಳನ್ನು ಬಹಿರಂಗಪಡಿಸಲಾಗುವುದಿಲ್ಲ.



**ನಮ್ಮ ಸಮಾಜದಲ್ಲಿ ಯಾವೆಲ್ಲ ಸನ್ನಿವೇಶಗಳಲ್ಲಿ ಮಾಹಿತಿ ಹಕ್ಕು ನಿಯಮಗಳನ್ನು ಬಳಸಬಹುದು? ಚರ್ಚಿಸಿ ಟಿಪ್ಪಣಿ ತಯಾರಿಸಿರಿ.**

## ಸೇವೆ ಪಡೆಯುವ ಹಕ್ಕು




ಸೇವೆ ಪಡೆಯುವ ಹಕ್ಕು
ಪರೀಕ್ಷಾ ಭವನದಲ್ಲಿ ಸಾರ್ವಜನಿಕರಿಗೆ ಲಭಿಸುವ ಸೇವೆಗಳು

- ವಿವಿಧ ಪರೀಕ್ಷೆಗಳನ್ನು ನಡೆಸುವುದು.
- 10ನೇ ತರಗತಿ ಪೂರ್ತಿಗೊಳಿಸಿದ ವಿದ್ಯಾರ್ಥಿಗಳ ಜನನ ದಿನಾಂಕ ತಿದ್ದುವಿಕೆ (6ತಿಂಗಳು)
- ಎಸ್.ಎಸ್.ಎಲ್.ಸಿ. ಮುಂತಾದವುಗಳ ಪ್ರಮಾಣ ಪತ್ರದ ನಕಲಿ /ಡ್ಯುಪ್ಲಿಕೇಟ್ ವಿತರಣೆ, ಮಾರ್ಕ್‌ಲಿಸ್ಟ್‌ನ ನಕಲಿ ನೀಡಲು, ಸರಿಯಾದ ಸಮಯದಲ್ಲಿ ಪ್ರಮಾಣ ಪತ್ರವನ್ನು ಹಿಂತಿರುಗಿಸುವುದು (ಅವಧಿ 3 ತಿಂಗಳು) ಯೋಗ್ಯತೆ, ಸಮತ್ವ, ದೃಢೀಕರಣ, ಪ್ರಮಾಣಪತ್ರಗಳ ವಿತರಣೆ (30ದಿನ)
- ಪರೀಕ್ಷಾ ಭವನದಿಂದ ವಿತರಿಸಿದ ಪ್ರಮಾಣ ಪತ್ರಗಳ ತಪ್ಪುಗಳನ್ನು ತಿದ್ದುವುದು. (1ವಾರ)
- ವಿದ್ಯಾರ್ಥಿಗಳ ಪ್ರಾದೇಶಿಕ ಭಾಷಾ ಅಧ್ಯಯನ ಬದಲಾಯಿಸುವುದು. (1ನೇ ಭಾಷೆಯಲ್ಲಿ ಭಾಗ - 1.2,3) ಮೂರನೇ ಭಾಷೆ ಬದಲಾಯಿಸಲು (1ತಿಂಗಳು)
- ಉತ್ತರಪತ್ರಿಕೆಯ ಸೂಕ್ಷ್ಮ ಪರಿಶೀಲನೆ, ಮರುಮೌಲ್ಯಮಾಪನ ನಕಲು ಪ್ರತಿ ನೀಡಲು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿನ ಮರು ಮೌಲ್ಯಮಾಪನದಿಂದ ಹೆಚ್ಚಿನ ಗ್ರೇಡ್‌ಗೆ ಅರ್ಹರಾದವರ ಮರು ನಿರ್ಣಯಮಾಡಿ ಶುಲ್ಕ ಹಿಂತಿರುಗಿಸಲು (1ತಿಂಗಳು).
- ಗ್ರೇಸ್ ಮಾರ್ಕ್ ಒಳಪಡಿಸಿ ಅಂಕಪಟ್ಟಿ ನೀಡಲು (1ವಾರ)
- ಗ್ರೂಪ್ ಡಿಪ್ಲೋಮ ಸರ್ಟಿಫಿಕೇಟಿನ ವಿತರಣೆ
- ವಿದ್ಯಾರ್ಥಿಗಳ ಎಸ್.ಎಸ್.ಎಲ್.ಸಿ. ಅಂಕಗಳ ವಿವರಗಳನ್ನು ಸಂಸ್ಥೆಯ ಅಧಿಕಾರಿಗಳಿಗೆ ನೀಡಲು (ಉನ್ನತ ವಿದ್ಯಾಭ್ಯಾಸಕ್ಕೆ ರಾಜ್ಯದಿಂದ ಹೊರಹೋಗುವವರಿಗೆ (1 ತಿಂಗಳು))

ಇದು ಸರಕಾರಿ ಕಚೇರಿಗಳಲ್ಲಿ ಪ್ರದರ್ಶಿಸುವ ಬೋರ್ಡ್. ಯಾವೆಲ್ಲ ಸೇವೆಗಳು ಒಂದು ಸರಕಾರಿ ಕಚೇರಿಯಿಂದ ಲಭಿಸುತ್ತವೆಯೆಂದು ಇದರಿಂದ ತಿಳಿಯಬಹುದು. ಸೇವೆ ಪಡೆಯುವ ಹಕ್ಕು ಎಂಬುದು ಸರಕಾರದ ಸೇವೆಗಳು ಜನರಿಗೆ ಸರಿಯಾಗಿ ಲಭಿಸಲು ಅವಕಾಶ ಒದಗಿಸುವ ನಿಯಮವಾಗಿದೆ. ಪ್ರತಿಯೊಂದು ಸರಕಾರಿ ಕಚೇರಿಗಳಲ್ಲಿ ನೀಡುವ ಸೇವೆಗಳು ಎಷ್ಟು ಕಾಲಾವಧಿಯೊಳಗೆ ನೀಡಬೇಕೆಂದನ್ನು ಈ ನಿಯಮವು ಹೇಳುತ್ತದೆ. ಅರ್ಹವಾದ ಸೇವೆಯನ್ನು ನಿಶ್ಚಿತ ಅವಧಿಯೊಳಗೆ ಪೌರನಿಗೆ ನೀಡದಿದ್ದರೆ ಸಂಬಂಧಪಟ್ಟ ಅಧಿಕಾರಿಗಳು ದಂಡ ನೀಡಬೇಕೆಂಬ ವ್ಯವಸ್ಥೆಯು ನಿಯಮದಲ್ಲಿದೆ. ಸೇವೆ ಪಡೆಯುವ ಹಕ್ಕಿನ ನಿಯಮದ ಪ್ರಕಾರ ಎಲ್ಲ ಕಚೇರಿಗಳಲ್ಲಿ ಅರ್ಜಿದಾರರಿಗೆ ಮಾರ್ಗದರ್ಶನ ನೀಡುವುದಕ್ಕೆ ಸಹಾಯಕರಾಗಿ ಒಬ್ಬ ಅಧಿಕಾರಿಯನ್ನು ನೇಮಿಸುತ್ತಾರೆ. ಸಮಾಜದ ನಿರಂತರವಾದ ಹಸ್ತಕ್ಷೇಪ ಹಾಗೂ ಅವಶ್ಯಕತೆಗಳನ್ನು ಪರಿಗಣಿಸಿ ಸಾರ್ವಜನಿಕ ಆಡಳಿತವನ್ನು ಕಾರ್ಯದಕ್ಷಗೊಳಿಸುವುದಕ್ಕೆ ಇಂತಹ ಕ್ರಮಗಳನ್ನು ಸರಕಾರವು ಕೈಗೊಂಡಿದೆ. ಅವುಗಳಲ್ಲಿ ಕೆಲವನ್ನು ಪರಿಶೀಲಿಸೋಣ.

**ಸಾರ್ವಜನಿಕರಿಗೆ ಸರಕಾರದ ಕಚೇರಿಗಳಿಂದ ಲಭಿಸಬೇಕಾದ ಸೇವೆಗಳು ಸರಿಯಾಗಿ ಲಭಿಸುವಂತೆ ಮಾಡಲು ಈ ನಿಯಮವು ಸಹಾಯಕವಾಗುವುದೆ? ಚರ್ಚಿಸಿರಿ.**



## ಲೋಕಪಾಲ್ ಹಾಗೂ ಲೋಕಾಯುಕ್ತ

ಲೋಕಪಾಲ್ ಹಾಗೂ ಲೋಕಾಯುಕ್ತ ಎಂಬುದು ಆಡಳಿತ ಹಂತದಲ್ಲಿಯೂ ಉದ್ಯೋಗ ಹಂತದಲ್ಲಿಯೂ ರಾಜಕೀಯ ಹಂತದಲ್ಲಿಯೂ ಭ್ರಷ್ಟಾಚಾರವನ್ನು ತಡೆಯುವುದಕ್ಕೆ ರೂಪುಗೊಂಡ ಸಂಸ್ಥೆಗಳಾಗಿವೆ. ಲೋಕಪಾಲ್ ಎಂಬುದು ರಾಷ್ಟ್ರ ಮಟ್ಟದಲ್ಲಿ ಭ್ರಷ್ಟಾಚಾರವನ್ನು ತಡೆಯುವುದಕ್ಕಾಗಿ ಇರುವ ಸಂಸ್ಥೆಯಾಗಿದೆ. ಸಾಮಾಜಿಕ ಕಾರ್ಯಕರ್ತರಿಗೆ ಎದುರಾಗಿ ಮತ್ತು ಅಧಿಕಾರಿಗಳ ವಿರುದ್ಧವಾಗಿ ಬರುವ ಭ್ರಷ್ಟಾಚಾರದ ಕುರಿತು ದೂರು ದಾಖಲಿಸಿ ಅನ್ವೇಷಣೆ ನಡೆಸಲು ಮತ್ತು ಕ್ರಮ ಕೈಗೊಳ್ಳಲು ಲೋಕಪಾಲ್‌ಗೆ ಅಧಿಕಾರವಿದೆ. ಲೋಕಾಯುಕ್ತವು ರಾಜ್ಯಮಟ್ಟದಲ್ಲಿ ಭ್ರಷ್ಟಾಚಾರವನ್ನು ಅನ್ವೇಷಿಸುವುದಕ್ಕಿರುವ ಸಂಸ್ಥೆಯಾಗಿದೆ. ಇದು ನ್ಯಾಯಾಲಯ ವ್ಯವಸ್ಥೆಯ ರೀತಿಯಲ್ಲಿದೆ.

## ಸೆಂಟ್ರಲ್ ವಿಜಿಲೆನ್ಸ್ ಕಮಿಷನ್ (Central Vigilence Commission)

ಎಲ್ಲ ಸರಕಾರಿ ಕಚೇರಿಗಳಲ್ಲಿ ಈ ರೀತಿಯ ಬೋರ್ಡುಗಳು ಕಂಡುಬರುತ್ತವೆ. ಭ್ರಷ್ಟಾಚಾರ ಕಂಡುಬಂದಲ್ಲಿ ಏನು ಮಾಡಬೇಕೆಂದು ಇದು ಪ್ರತಿಪಾದಿಸುತ್ತದೆ. ಸೆಂಟ್ರಲ್ ವಿಜಿಲೆನ್ಸ್ ಕಮಿಷನ್ ಎಂಬುದು ಭ್ರಷ್ಟಾಚಾರವನ್ನು ತಡೆಯುವುದಕ್ಕೆ ರಾಷ್ಟ್ರಮಟ್ಟದಲ್ಲಿರುವ ಸಂಸ್ಥೆಯಾಗಿದೆ. 1964ರಲ್ಲಿ ಇದು ಅಸ್ತಿತ್ವಕ್ಕೆ ಬಂತು. ಕೇಂದ್ರ ಸರಕಾರದ ಕಚೇರಿಗಳಲ್ಲಿನ ಭ್ರಷ್ಟಾಚಾರ ತಡೆಯುವುದಕ್ಕೆ ಇದನ್ನು ಸ್ಥಾಪಿಸಿದ್ದಾರೆ. ಸೆಂಟ್ರಲ್ ವಿಜಿಲೆನ್ಸ್ ಕಮಿಷನ್‌ನ ಮುಖ್ಯಸ್ಥರಾಗಿ ಓರ್ವ ವಿಜಿಲೆನ್ಸ್ ಕಮಿಷನರ್ ಇರುತ್ತಾರೆ. ಅದೇ ರೀತಿಯಲ್ಲಿ ಎಲ್ಲ ಇಲಾಖೆಯಲ್ಲಿಯೂ




ಮುಖ್ಯ ವಿಜಿಲೆನ್ಸ್ ಆಫೀಸರು ಕಾರ್ಯನಿರ್ವಹಿಸುತ್ತಾರೆ. ದೂರುಗಳನ್ನು ವಿಚಾರಣೆ ನಡೆಸಿ ಅಗತ್ಯವಿರುವ ಶಿಕ್ಷಾ ರೀತಿಯನ್ನು ಜಾರಿಗೊಳಿಸುವುದು ಇವರ ಜವಾಬ್ದಾರಿಯಾಗಿದೆ. ಸೆಂಟ್ರಲ್ ವಿಜಿಲೆನ್ಸ್ ಕಮಿಷನ್‌ನ ಮಾದರಿಯಲ್ಲಿ ಎಲ್ಲಾ ರಾಜ್ಯಗಳಲ್ಲಿಯೂ ರಾಜ್ಯ ವಿಜಿಲೆನ್ಸ್ ಕಮಿಷನ್ ರೂಪಿಸಲಾಗಿದೆ. ರಾಜ್ಯ ಸರಕಾರದ ಕಚೇರಿಗಳಲ್ಲಿನ ಭ್ರಷ್ಟಾಚಾರದ ಕುರಿತು ತನಿಖೆ ನಡೆಸುವುದು ಇವರ ಜವಾಬ್ದಾರಿಯಾಗಿದೆ. ವಿಜಿಲೆನ್ಸ್ ಕೇಸುಗಳಲ್ಲಿ ತೀರ್ಪನ್ನು ನೀಡಲು ವಿಜಿಲೆನ್ಸ್ ನ್ಯಾಯಾಲಯಗಳು ಅಸ್ತಿತ್ವದಲ್ಲಿವೆ.

## ಒಂಬುಡ್ಸ್‌ಮೆನ್

ಜನಪ್ರತಿನಿಧಿಗಳು ಮತ್ತು ನೌಕರರು ಸಾರ್ವಜನಿಕ ಆಡಳಿತದ ಭಾಗವಾಗಿದ್ದಾರೆಂಬುದನ್ನು ತಿಳಿದಿರಲ್ಲವೇ. ಅವರು ಭ್ರಷ್ಟಾಚಾರ, ಸ್ವಜನಪಕ್ಷಪಾತ, ಹಣ ದುರುಪಯೋಗ, ಕರ್ತವ್ಯಲೋಪವೆಸಗುವುದು ಕಂಡುಬಂದಲ್ಲಿ ಅದಕ್ಕೆ ವಿರುದ್ಧವಾಗಿ ದೂರು ಸಲ್ಲಿಸಬಹುದು. ಒಂಬುಡ್ಸ್‌ಮೆನ್ ಎಂಬುದು ಅದಕ್ಕಿರುವ ಇನ್ನೊಂದು ವಿಧಾನವಾಗಿದೆ. ಸೇವೆಯಿಂದ ನಿವೃತ್ತಿಹೊಂದಿದ ಹೈಕೋರ್ಟಿನ ನ್ಯಾಯಾಧೀಶರನ್ನು ಒಂಬುಡ್ಸ್‌ಮೆನ್ ಆಗಿ ನೇಮಕ ಮಾಡುತ್ತಾರೆ. ಜನರಿಗೆ ದೂರುಗಳಿದ್ದಲ್ಲಿ ನೇರವಾಗಿ ಒಂಬುಡ್ಸ್‌ಮೆನನ್ನು ಸಂಪರ್ಕಿಸಬಹುದು.

ದೂರು ಲಭಿಸಿದರೆ ಅವರನ್ನು ಕರೆದು ವಿಚಾರಣೆ ನಡೆಸಿ ಶಿಸ್ತು ಕ್ರಮಗಳನ್ನು ಶಿಫಾರಸು ಮಾಡುವ ಅಧಿಕಾರ ಅವರಿಗಿದೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಗ್ರಾಹಕರ ದೂರನ್ನು ಆಲಿಸಿ ಅದನ್ನು ಪರಿಹರಿಸಲು ಬೇಕಾಗಿ ಒಂಬುಡ್ಸ್‌ಮೆನ್‌ನ್ನು ಆರಂಭಿಸಲಾಗಿದೆ.

**ಒಂಬುಡ್ಸ್‌ಮೆನ್ ವ್ಯವಸ್ಥೆಯಿಂದ ಸಾರ್ವಜನಿಕರಿಗಿರುವ ಪ್ರಯೋಜನಗಳು ಯಾವುವು? ಟಿಪ್ಪಣಿ ತಯಾರಿಸಿರಿ.**




ಸೇವೆಗಳನ್ನು ತಡವಾಗಿ ನೀಡುವುದು, ಸೇವೆ ಲಭಿಸುವುದಕ್ಕಿರುವ ಓರ್ವ ಪೌರನ ಹಕ್ಕನ್ನು ನಿಷೇಧಿಸುವುದು, ಸೇವೆಯನ್ನು ತನ್ನ ಔದಾರ್ಯವೆಂದು ಪರಿಗಣಿಸುವುದು ಆಧುನಿಕ ಸಮಾಜದಲ್ಲಿ ಭ್ರಷ್ಟಾಚಾರ ಎಂದು ಲೆಕ್ಕ ಹಾಕಲಾಗುತ್ತದೆ. ಸರಕಾರದ ಸೇವೆಯು ಯಾರೊಬ್ಬರ ಔದಾರ್ಯಲ್ಲವೆಂದೂ ಸಾರ್ವಜನಿಕರಿಗೆ ಇದರಲ್ಲಿ ಹಕ್ಕುಗಳಿವೆಯೆಂಬ ದೃಷ್ಟಿಕೋನವನ್ನು ಮೂಡಿಸಲೂ ಇಂದು ನಮ್ಮ ಸಾರ್ವಜನಿಕ ಆಡಳಿತ ವ್ಯವಸ್ಥೆಯ ಪ್ರಯತ್ನಿಸುತ್ತದೆ.

*ಸಾರ್ವಜನಿಕ ಆಡಳಿತದ ಪ್ರಸಕ್ತಿ ಹಾಗೂ ಪ್ರಾಧಾನ್ಯವನ್ನು ವ್ಯಕ್ತಪಡಿಸುವ ಡಿಜಿಟಲ್ ಪ್ರಬಂಧವನ್ನು ತಯಾರಿಸಿರಿ.*



**ಮೇಲೆ ಹೇಳಲಾದ ವಿಧಾನದಿಂದ ಸರಕಾರದ ಸೇವೆ ಸುಲಭವಾಗಿ ಹಾಗೂ ಭ್ರಷ್ಟಾಚಾರ ರಹಿತವಾಗಿ ಮಾಡಲು ಸಾಧ್ಯವಾಗುತ್ತಿದೆಯೇ? ತರಗತಿಯಲ್ಲಿ ಚರ್ಚೆ ಮಾಡಿರಿ.**





## ಮೌಲ್ಯನಿರ್ಣಯ ಮಾಡುವ

- ಒಂದು ರಾಷ್ಟ್ರದ ಸಾರ್ವಜನಿಕ ಆಡಳಿತ ವಿಧಾನದ ಅವಶ್ಯಕತೆಯು ಏನೆಂದು ವಿವರಿಸಿರಿ.
- ಸಾರ್ವಜನಿಕ ಆಡಳಿತ ರಂಗದ ನೌಕರರ ನೇಮಕಾತಿಗಿರುವ ವಿಧಾನಗಳು ಯಾವುವು?
- ಉದ್ಯೋಗರಂಗದ ವಿಶೇಷತೆಗಳನ್ನು ಸ್ಪಷ್ಟಪಡಿಸಿರಿ.
- ಭಾರತದ ನೌಕರವೃಂದದ ವಿವಿಧ ವಿಭಾಗಗಳನ್ನು ಕ್ರಮೀಕರಿಸಿ ವಿವರಿಸಿರಿ.
- ಆಡಳಿತ ನವೀಕರಣಕ್ಕಾಗಿ ಭಾರತದಲ್ಲಿ ಜಾರಿಗೊಳಿಸಿರುವ ವಿವಿಧ ಕಾರ್ಯ ಚಟುವಟಿಕೆಗಳು ಯಾವುವು? ಟಿಪ್ಪಣಿ ತಯಾರಿಸಿರಿ.
- ಇ-ಗವರ್ನೆನ್ಸ್ ವಿಧಾನವು ಯಾವೆಲ್ಲ ರೀತಿಯಲ್ಲಿ ಜನರಿಗೆ ಪ್ರಯೋಜನವಾಗಬಹುದು?
- ತಿಳಿಯಲಿರುವ ಹಕ್ಕು, ಸೇವೆ ಪಡೆಯುವ ಹಕ್ಕು ಇತ್ಯಾದಿಗಳು ನಮ್ಮ ಸಾರ್ವಜನಿಕ ಆಡಳಿತವನ್ನು ಜನರಿಗೆ ತಲುಪಿಸಲು ಯಾವೆಲ್ಲ ವಿಧದಲ್ಲಿ ಸಹಕರಿಸುತ್ತವೆ? ಈ ಅಭಿಪ್ರಾಯವನ್ನು ಸಮರ್ಥಿಸಿರಿ.
- ಭಾರತದ ಆಡಳಿತದಲ್ಲಿರುವ ಭ್ರಷ್ಟಾಚಾರವನ್ನು ತಡೆಯಲು ಜಾರಿಗೊಳಿಸಿದ ಕ್ರಮಗಳನ್ನು ಪಟ್ಟಿಮಾಡಿರಿ.

## ಮುಂದುವರಿದ ಚಟುವಟಿಕೆಗಳು

- ಯಾವುದಾದರೊಂದು ಕಛೇರಿಗೆ ಸಂಬಂಧಿಸಿ ಮಾಹಿತಿ ಹಕ್ಕು ಅರ್ಜಿ ತಯಾರಿಸಿರಿ.
- ಭ್ರಷ್ಟಾಚಾರ ನಿರ್ಮೂಲನಕ್ಕೆ ಸಂಬಂಧಿಸಿದ ವಾರ್ತೆಗಳು, ಚಿತ್ರಗಳನ್ನು ಸಂಗ್ರಹಿಸಿ ಕೊಲಾಷ್ ತಯಾರಿಸಿ ಪ್ರದರ್ಶಿಸಿರಿ.
- ಅಖಿಲ ಭಾರತ ಸಿವಿಲ್ ಸರ್ವಿಸ್‌ನ ಪ್ರಾಧಾನ್ಯವನ್ನು ತಿಳಿಸುವ ಚಾರ್ಟ್ ತಯಾರಿಸಿರಿ.
- ಜಿಲ್ಲಾಧಿಕಾರಿಯೊಂದಿಗೆ ಸಂದರ್ಶನ ನಡೆಸಲು ಸಂದರ್ಭ ದೊರೆಯಿತು ಎಂದು ಭಾವಿಸಿರಿ. ಸಂದರ್ಶನ ನಡೆಸಲು ಬೇಕಾದ ಪ್ರಶ್ನಾವಳಿ ತಯಾರಿಸಿರಿ.

ಅಧ್ಯಾಯ

04




# ಬ್ರಿಟಿಷರ ಶೋಷಣೆ ಹಾಗೂ ಪ್ರತಿಭಟನೆಗಳು

*1907 ಜನವರಿಯ ಒಂದು ದಿನ; ಅಂದು ಕಲ್ಕತ್ತದ ಸಮೀಪವಿರುವ ಒಂದು ಗ್ರಾಮದಲ್ಲಿನ ಕೃಷಿಕನಾದ ಗಾಂಗೂಲಿಯ ಮಗಳ ವಿವಾಹವಾಗಿತ್ತು. ಅಂಗಳದಲ್ಲಿ ಸಜ್ಜುಗೊಳಿಸಿದ ಸಣ್ಣ ಚಪ್ಪರದಲ್ಲಿ ಹೆಚ್ಚಿನ ಸಂಖ್ಯೆಯ ಅತಿಥಿಗಳಿದ್ದರು. ಅವರಿಗೆಲ್ಲ ಸಿಹಿ ತಿಂಡಿ ವಿತರಿಸಿ ಗಾಂಗೂಲಿಯೂ ಮನೆಯವರೂ ಉಪಚರಿಸಿದರು. ಆದರೆ ಅದರಲ್ಲಿ ಸಕ್ಕರೆಯನ್ನು ಸೇರಿಸಿರಲಿಲ್ಲ! ಬದಲಾಗಿ ಬೆಲ್ಲವನ್ನು ಉಪಯೋಗಿಸಿದ್ದರು. ಇದರ ಕುರಿತು ಕೇಳಿದವರಲ್ಲಿ ಗಾಂಗೂಲಿಯು ಅಭಿಮಾನದಿಂದ ಹೇಳಿದನು: "ನಮ್ಮ ಕಷ್ಟಗಳಿಗೆಲ್ಲಾ ಕಾರಣಕಾರರು ಬ್ರಿಟಿಷರು. ಅವರ ಉತ್ಪನ್ನಗಳನ್ನು ಬಹಿಷ್ಕರಿಸಲು ನಾವು ತೀರ್ಮಾನಿಸಿದ್ದೇವಲ್ಲವೇ. ಆದುದರಿಂದ ಬ್ರಿಟಿಷರ ಉತ್ಪನ್ನವಾದ ಸಕ್ಕರೆ ಬೇಡವೆಂದು ನಮ್ಮದೇ ಉತ್ಪನ್ನವಾದ ಬೆಲ್ಲವನ್ನು ಉಪಯೋಗಿಸಿರುವುದು".*

ಬ್ರಿಟಿಷರ ಉತ್ಪನ್ನಗಳನ್ನು ಬಹಿಷ್ಕರಿಸಲು ಜನರನ್ನು ಪ್ರೇರೇಪಿಸಿರುವುದು ಏನಾಗಿರಬಹುದು? ಬ್ರಿಟಿಷರ ಆಡಳಿತವು ಭಾರತದಲ್ಲಿನ ವಿವಿಧ ವಿಭಾಗದ ಜನರನ್ನು ಹೇಗೆ ಬಾಧಿಸಿತು? ಅವರು ಹೇಗೆ ಬ್ರಿಟಿಷರ ಆಡಳಿತಕ್ಕೆ ಪ್ರತಿಕ್ರಿಯಿಸಿದರು? ಇತ್ಯಾದಿಗಳನ್ನು ನಾವು ಪರಿಶೀಲಿಸುವ.

ವ್ಯಾಪಾರಕ್ಕಾಗಿ ಬಂದ ಬ್ರಿಟಿಷರು ಭಾರತದ ದೇಶೀಯ ರಾಜ್ಯಗಳನ್ನು ವಶಪಡಿಸಿ ಅಧಿಕಾರವನ್ನೂ ವಶಪಡಿಸಿದುದರ ಕುರಿತು ಹಿಂದಿನ ತರಗತಿಯಲ್ಲಿ ಚರ್ಚಿಸಿರುವುದನ್ನು ನೆನಪಿಸುವಿರಲ್ಲವೇ. ಸೈನಿಕಶಕ್ತಿಯ ಮೂಲಕವೂ ಧೋರಣೆಯ ಮೂಲಕವೂ ಬ್ರಿಟಿಷರು ದೇಶೀಯ ರಾಜ್ಯಗಳನ್ನು ಸ್ವಾಧೀನಪಡಿಸಿದರು. 1757ರ ಪ್ಲಾಸಿ ಯುದ್ಧದಿಂದ 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ವರೆಗಿನ ನೂರು ವರ್ಷ ಭಾರತ ಉಪಭೂಖಂಡದ ಹೆಚ್ಚಿನ ಪ್ರದೇಶಗಳು ಬ್ರಿಟಿಷರ ಅಧೀನಕ್ಕೆ ಒಳಗಾದುವು. (ಭೂಪಟವನ್ನು ನಿರೀಕ್ಷಿಸಿರಿ). ಭಾರತ ಉಪಭೂಖಂಡದ ಸುಮಾರು 63% ಬ್ರಿಟಿಷರ ನೇರ ನಿಯಂತ್ರಣಕ್ಕೆ ಒಳಪಟ್ಟಿತು. ಉಳಿದ ಹೆಚ್ಚಿನ ಭಾಗಗಳಲ್ಲಿ ಬ್ರಿಟಿಷರ ನಿಯಂತ್ರಣದಲ್ಲಿರುವ ದೇಶೀಯ ರಾಜರುಗಳು ಆಡಳಿತ ನಡೆಸುತ್ತಿದ್ದರು.




## ಬ್ರಿಟಿಷರ ಧೋರಣೆಗಳ ದುಷ್ಪರಿಣಾಮಗಳು

ಬ್ರಿಟಿಷ್ ಆಧಿಪತ್ಯದ ಪರಿಣಾಮವನ್ನು ಮೊದಲಿಗೆ ಅನುಭವಿಸಿದವರು ಕೃಷಿಕರಾಗಿದ್ದರು. ಬ್ರಿಟಿಷರು ಜಾರಿಗೊಳಿಸಿದ ಭೂಕಂದಾಯ ಧೋರಣೆಯು ಕೃಷಿಕರ ಬೆನ್ನೆಲುಬನ್ನು ಮುರಿಯಿತು. ಗರಿಷ್ಠ ಆದಾಯ ಗಳಿಸುವುದು ತೆರಿಗೆಯ ಉದ್ದೇಶವಾಗಿತ್ತು. ಬ್ರಿಟಿಷ್ ಆಡಳಿತದ ಅಧೀನದಲ್ಲಿರುವ ವಿವಿಧ ಪ್ರದೇಶಗಳಲ್ಲಿ ವಿಭಿನ್ನ ರೀತಿಯ ಕಂದಾಯ ವಿಧಾನವನ್ನು ಅವರು ಜಾರಿಗೊಳಿಸಿದರು. ನೀಡಿರುವ ಪಟ್ಟಿಯಿಂದ ಬ್ರಿಟಿಷ್ ಭೂಕಂದಾಯ ಸಂಪ್ರದಾಯಗಳನ್ನು ಪರಿಚಯಿಸೋಣ.

| ಭೂಕಂದಾಯ ವ್ಯವಸ್ಥೆ | ಜಾರಿಗೊಳಿಸಿದ ಪ್ರಧಾನ ಪ್ರದೇಶಗಳು |
|---|---|
| ♦ ಶಾಶ್ವತ ಭೂಕಂದಾಯ ವ್ಯವಸ್ಥೆ | ♦ ಬಂಗಾಳ, ಬಿಹಾರ, ಒರಿಸ್ಸಾ ಪ್ರದೇಶಗಳಲ್ಲಿ |
| ♦ ರೈತ್‌ವಾರಿ ವ್ಯವಸ್ಥೆ | ♦ ದಕ್ಷಿಣ ಭಾರತದ ಪ್ರದೇಶಗಳಲ್ಲಿ |
| ♦ ಮಹಲ್‌ವಾರಿ ವ್ಯವಸ್ಥೆ | ♦ ವಾಯುವ್ಯ ಭಾರತ |


**ಶಾಶ್ವತ ಭೂಕಂದಾಯ ವ್ಯವಸ್ಥೆಯ ವಿಶೇಷತೆಗಳು:**

- ಶಾಶ್ವತ ಭೂಕಂದಾಯ ವ್ಯವಸ್ಥೆಯಲ್ಲಿ ತೆರಿಗೆ ಸಂಗ್ರಹಿಸುವವರು ಜಮೀನ್ದಾರರು ಆಗಿದ್ದರು.
- ತೆರಿಗೆ ಸಂಗ್ರಹಿಸುವ ಅಧಿಕಾರವಿರುವ ಪ್ರದೇಶದ ಸಂಪೂರ್ಣ ಭೂಮಿಯ ಯಜಮಾನನು ಜಮೀನ್ದಾರನಾಗಿದ್ದನು.
- ಜಮೀನ್ದಾರರು ಭೂಮಿಯ ಯಜಮಾನರಾದಾಗ ಯಥಾರ್ಥ ಕೃಷಿಕರು ಒಕ್ಕಲುಗಳಾಗಿ ಬದಲಾದರು.
- ಬೆಳೆಯ 60%ದಷ್ಟನ್ನು ಕೃಷಿಕರು ತೆರಿಗೆಯಾಗಿ ನೀಡಬೇಕಿತ್ತು.
- ಫಸಲು ಕಡಿಮೆಯಾಗಿದ್ದರೂ ತೆರಿಗೆಯನ್ನು ಪಾವತಿಸಬೇಕಿತ್ತು.
- ನಿಶ್ಚಿತ ದಿನಾಂಕದಂದು ತೆರಿಗೆಯನ್ನು ಹಣದ ರೂಪದಲ್ಲಿ ನೀಡಬೇಕಿತ್ತು. (ಹಿಂದಿನ ಕಾಲಗಳಲ್ಲಿ ಉತ್ಪನ್ನಗಳನ್ನು ಕೃಷಿಕರು ತೆರಿಗೆಯಾಗಿ ಕೊಡುತ್ತಿದ್ದರು).

ಬ್ರಿಟೀಷ್ ಗವರ್ನರ್ ಜನರಲ್ ಆಗಿದ್ದ ಕೋರ್ನ್‌ವಾಲಿಸ್ ಪ್ರಭು ಈ ವ್ಯವಸ್ಥೆಯನ್ನು ಜಾರಿಗೊಳಿಸಿದರು.

ದಕ್ಷಿಣಭಾರತದಲ್ಲಿ ಜಾರಿಗೊಳಿಸಿದ ರೈತ್‌ವಾರಿ ಸಂಪ್ರದಾಯದಲ್ಲಿ ಕೃಷಿಕರಿಂದ (ರಯಟ್) ನೇರವಾಗಿ ತೆರಿಗೆ ಸಂಗ್ರಹಿಸುವ ರೀತಿ ಜಾರಿಯಲ್ಲಿತ್ತು. ಭೂಮಿಯ ಯಜಮಾನಿಕೆಯ ಹಕ್ಕು ಕೃಷಿಕನಿಗಾಗಿತ್ತು. ಆದರೆ ಅಮಿತವಾದ ತೆರಿಗೆಯ ಭಾರವು ಕೃಷಿಕರನ್ನು ದರಿದ್ರರನ್ನಾಗಿ ಮಾಡಿತು. ಮಾತ್ರವಲ್ಲ ತೆರಿಗೆಯ ದರವನ್ನು ಆಗಾಗ ಹೆಚ್ಚಿಸುತ್ತಿದ್ದರು. ಮಹಲ್‌ವಾರಿ ವ್ಯವಸ್ಥೆಯಲ್ಲಿ ಗ್ರಾಮದ ಮುಖ್ಯಸ್ಥರು ತೆರಿಗೆಯನ್ನು ಸಂಗ್ರಹಿಸುತ್ತಿದ್ದರು. ಈ ವ್ಯವಸ್ಥೆಯಲ್ಲೂ ತೆರಿಗೆಯ ದರವು ಅತಿ ಹೆಚ್ಚಾಗಿತ್ತು. ಗ್ರಾಮವನ್ನು (ಮಹಲ್) ಒಂದು ಯೂನಿಟ್ಟಾಗಿ ಲೆಕ್ಕಹಾಕಿ ತೆರಿಗೆ ಸಂಗ್ರಹಿಸುತ್ತಿದ್ದರು.

**ಶಾಶ್ವತ ಭೂಕಂದಾಯ, ರೈತ್‌ವಾರಿ, ಮಹಲ್‌ವಾರಿ ಎಂಬೀ ತೆರಿಗೆ ವ್ಯವಸ್ಥೆಗಳ ವಿಶೇಷತೆಗಳನ್ನು ಕಂಡುಹಿಡಿದು ಡಯಗ್ರಾಂ ತಯಾರಿಸಿರಿ.**



ಬ್ರಿಟಿಷರು ಜಾರಿಗೊಳಿಸಿದ ತೆರಿಗೆ ಧೋರಣೆಗಳು ಕೃಷಿರಂಗದಲ್ಲಿ ಹೆಚ್ಚು ದುಷ್ಪರಿಣಾಮವನ್ನುಂಟುಮಾಡಿದುವು. ಹೆಚ್ಚು ತೆರಿಗೆಯನ್ನು ನಿಶ್ಚಿತ ಸಮಯದಲ್ಲಿ ಹಣವಾಗಿ ಕೊಡಲು ಸಾಧ್ಯವಾಗದ ಕೃಷಿಕರಿಗೆ ದುಬಾರಿ ಬಡ್ಡಿದಾರರಿಂದ ಹಣವನ್ನು ಸಾಲ ಪಡೆಯಬೇಕಾಗಿ ಬಂತು. ಕೃಷಿಭೂಮಿಯನ್ನು ಅಡವಿಟ್ಟು ಅವರು ಸಾಲವನ್ನು ಪಡೆದರು. ಲೇವಾದೇವಿಗಾರರು ತುಂಬಾ ಹೆಚ್ಚಿನ ಬಡ್ಡಿದರವನ್ನು ಕೃಷಿಕರಿಂದ ವಸೂಲು ಮಾಡಿದರು. ಇದರಿಂದಾಗಿ ಸಾಲವನ್ನೂ ಬಡ್ಡಿಯನ್ನೂ ಕೊಡಲು ಸಾಧ್ಯವಾಗದ ಕೃಷಿಕರ ಭೂಮಿಯನ್ನು ದುಬಾರಿ ಬಡ್ಡಿ ವಸೂಲಿದಾರರು ವಶಪಡಿಸಿಕೊಂಡರು.

ಬ್ರಿಟಿಷರ ತೆರಿಗೆ ಧೋರಣೆಯು ಹೇಗೆ ಕೃಷಿಕರನ್ನು ದುಬಾರಿ ಬಡ್ಡಿದಾರರ ಶೋಷಣೆಗೆ ತಳ್ಳಿತು? ವಿವರಿಸಿರಿ.



## ಕೃಷಿಯ ವಾಣಿಜ್ಯೀಕರಣ

ಭಾರತದಲ್ಲಿ ಕೃಷಿಕರು ತನ್ನ ಕುಟುಂಬ ಹಾಗೂ ಗ್ರಾಮದ ಅಗತ್ಯಗಳಿಗಾಗಿ ಪರಂಪರಾಗತವಾಗಿ ಕೃಷಿಯನ್ನು ಮಾಡುತ್ತಿದ್ದರು. ಆದರೆ ಬ್ರಿಟಿಷರ ಆಡಳಿತ ಕಾಲದಲ್ಲಿ ಕೃಷಿಕರು ವ್ಯಾಪಾರವನ್ನು ಉದ್ದೇಶವಾಗಿರಿಸಿ ಕೃಷಿಮಾಡಲು ನಿರ್ಬಂಧಿತರಾದರು. ಆಹಾರ ಬೆಳೆಗಳ ಬದಲಾಗಿ ವಾಣಿಜ್ಯ ಬೆಳೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕೃಷಿ ಮಾಡಿದರು. ಈ ಬದಲಾವಣೆಯನ್ನು ಕೃಷಿಯ ವಾಣಿಜ್ಯೀಕರಣ ಎಂದು ಕರೆಯುತ್ತಾರೆ.

ಬ್ರಿಟಿಷರ ಆಡಳಿತದ ಸಮಯದಲ್ಲಿ ತೆರಿಗೆಯ ದರ ಹೆಚ್ಚಾಗಿತ್ತಲ್ಲವೇ. ಮಾತ್ರವಲ್ಲ ತೆರಿಗೆಯ ಹಣವನ್ನು ನಿಶ್ಚಿತ ಸಮಯದಲ್ಲೇ ನೀಡಬೇಕಾಗಿತ್ತು. ಈ ಸಂಕಷ್ಟದಿಂದ ಪಾರಾಗಲು ಕೃಷಿಕರು ಮಾರುಕಟ್ಟೆಯಲ್ಲಿ ಅಧಿಕ ಬೆಲೆ ಲಭಿಸುವ ಉತ್ಪನ್ನಗಳನ್ನು ಕೃಷಿಮಾಡಿದರು. ಯುರೋಪಿನ ರಾಷ್ಟ್ರಗಳಿಗೆ ಅಗತ್ಯವಿರುವ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆ ಲಭಿಸುತ್ತಿತ್ತು. ಹೀಗೆ ಭಾರತದ ಕೃಷಿ ಪ್ರದೇಶಗಳು ಯುರೋಪಿಗಾಗಿ ಕೃಷಿಮಾಡಲು ಉಪಯೋಗಿಸಲ್ಪಟ್ಟವು. ಅಂದಿನ ಕಾಲದಲ್ಲಿ ವ್ಯಾಪಕವಾಗಿ ಕೃಷಿ ಮಾಡಿದ ಬೆಳೆಗಳು ಯಾವುವು ಎಂಬುದನ್ನು ಪಟ್ಟಿಯಿಂದ ಕಂಡುಹಿಡಿಯಿರಿ.


| ಬೆಳೆ | ಪ್ರದೇಶ |
|---|---|
| • ನೀಲ | • ಬಂಗಾಳ, ಬಿಹಾರ |
| • ಹತ್ತಿ | • ಮಹಾರಾಷ್ಟ್ರ, ಪಂಜಾಬ್ |
| • ಕಬ್ಬು | • ಉತ್ತರಪ್ರದೇಶ |
| • ಚಾಸೊಪ್ಪು | • ಆಸ್ಸಾಂ, ಕೇರಳ |
| • ಸೆಣಬು | • ಬಂಗಾಳ |
| • ಗೋಧಿ | • ಪಂಜಾಬ್ |



**ಬ್ರಿಟಿಷರ ಧೋರಣೆ ಹಾಗೂ ಕೃಷಿಯ ವಾಣಿಜ್ಯೀಕರಣ ಎಂಬ ವಿಷಯದ ಕುರಿತು ತರಗತಿಯಲ್ಲಿ ಒಂದು ಚರ್ಚೆ ನಡೆಸಿರಿ.**

## ನೀಲಕೃಷಿಕರ ದಂಗೆ

ನೀಲಕ್ಕೆ ಆ ಕಾಲದಲ್ಲಿ ಮಾರುಕಟ್ಟೆಯಲ್ಲಿ ಅಧಿಕ ಬೆಲೆ ಲಭಿಸುತ್ತಿತ್ತು. ನೀಲವನ್ನು ಬಟ್ಟೆಗಳಿಗೆ



ನೀಲವನ್ನು ಬೆಳೆಸುವುದು


ಬಣ್ಣವನ್ನು ಕೊಡಲು ಉಪಯೋಗಿಸುತ್ತಿದ್ದರು. ಇಂದಿನಂತೆ ಕೃತಕ ಬಣ್ಣಗಳು ಅಂದು ಇರಲಿಲ್ಲ.

ಹದಿನೆಂಟನೇ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಉಂಟಾದ ಕೈಗಾರಿಕಾ ಕ್ರಾಂತಿಯು ಬಟ್ಟೆ ನಿರ್ಮಾಣರಂಗದಲ್ಲಿ ಹೆಚ್ಚಿನ ನೆಗೆತಕ್ಕೆ ಕಾರಣವಾಯಿತು. ಇದು ನೀಲದ ಬೇಡಿಕೆಯನ್ನು ಹೆಚ್ಚಿಸಿತು.

ಭಾರತದಲ್ಲಿ ನೀಲಕೃಷಿಯನ್ನು ವ್ಯಾಪಿಸುವುದು ಬ್ರಿಟಿಷ್ ಕೈಗಾರಿಕೋದ್ಯಮಿಗಳ ಅಗತ್ಯವಾಗಿತ್ತು. ಕೃಷಿಕರಿಗೆ ದೊಡ್ಡಮೊತ್ತದ ಹಣವನ್ನು ಮುಂಗಡವಾಗಿ ನೀಡಿ ಅವರಿಂದ ನೀಲಕೃಷಿಯನ್ನು ಮಾಡಿಸಿದರು. ಹೆಚ್ಚಿನ ಪ್ರಮಾಣದ ಭೂತೆರಿಗೆಯನ್ನು ಪಾವತಿಸಲು ಸಾಧ್ಯವಾಗದೇ ತೊಂದರೆ ಅನುಭವಿಸುವ ಕೃಷಿಕರು ಬ್ರಿಟಿಷರ ಆಮಿಷಕ್ಕೆ ಬಲಿಯಾಗಿ ನೀಲವನ್ನು ವ್ಯಾಪಕವಾಗಿ ಕೃಷಿಮಾಡಿದರು. ಬ್ರಿಟಿಷರಿಂದ ಹಣವನ್ನು ಮುಂಗಡವಾಗಿ ಪಡೆದ ಭೂಮಿಯ ನಾಲ್ಕರಲ್ಲಿ ಒಂದು ಭಾಗದಲ್ಲಿ ನೀಲಕೃಷಿಯನ್ನು ಮಾಡಬೇಕೆಂಬ ನಿಬಂಧನೆಯಿತ್ತು. ಮಾತ್ರವಲ್ಲ, ತನ್ನ ಕೃಷಿಭೂಮಿಯ ಅತಿ ಹೆಚ್ಚು ಫಲವತ್ತಾದ ಭಾಗದಲ್ಲಿ ನೀಲವನ್ನು ಬೆಳೆಸುತ್ತಿದ್ದರು. ಆದುದರಿಂದ ಆಹಾರಧಾನ್ಯಗಳನ್ನು ಕೃಷಿಮಾಡುವ ಸ್ಥಳಗಳು ನೀಲಕೃಷಿಗಾಗಿ ಕಾದಿರಿಸಬೇಕಾಯಿತು. ಬೆಳೆಕೊಯ್ಲಿನ ಕಾಲದಲ್ಲಿ ಬ್ರಿಟಿಷ್ ದಲ್ಲಾಳಿಗಳ ಮಧ್ಯಪ್ರವೇಶದಿಂದಾಗಿ ನೀಲಕೃಷಿಗೆ ಕಡಿಮೆ ಬೆಲೆ ದೊರೆಯುತ್ತಿತ್ತು. ಅನಂತರ ಕೃತಕ ಬಣ್ಣಗಳ ಕಂಡುಹಿಡಿಯುವಿಕೆಯಿಂದಾಗಿ ಬಟ್ಟೆಗಳಿಗೆ ಬಣ್ಣನೀಡಲು



ನೀಲ ಕಾರ್ಖಾನೆ



ನೀಲವನ್ನು ಸಂಗ್ರಹಿಸುತ್ತಿರುವುದು.

ನೀಲದ ಅಗತ್ಯವಿಲ್ಲದಾಯಿತು. ಇದರಿಂದಾಗಿ ಕೃಷಿಭೂಮಿಯ ಹೆಚ್ಚಿನ ಭಾಗವನ್ನೂ ನೀಲಕೃಷಿಗೆ ಕಾದಿರಿಸಿದ ಕೃಷಿಕನ ಸ್ಥಿತಿಯು ಹೆಚ್ಚು ತೊಂದರೆಗೊಳಗಾಯಿತು.



**ನೀವು ಒಬ್ಬರು ಪತ್ರಕರ್ತರೆಂದು ಭಾವಿಸಿರಿ. ಹತ್ತೊಂಬತ್ತನೆಯ ಶತಮಾನದ ನೀಲ ಕೃಷಿಕನ ಸ್ಥಿತಿಗೆ ಸಂಬಂಧಿಸಿ ಒಂದು ಪತ್ರಿಕಾವರದಿ ತಯಾರಿಸಿರಿ.**

1859ರಲ್ಲಿ ಬಂಗಾಳದಲ್ಲಿ ಕೃಷಿಕರು ಸಂಘಟಿತಗೊಂಡು ನೀಲಕೃಷಿಯನ್ನು ಮಾಡುವುದಿಲ್ಲವೆಂದು ಘೋಷಿಸಿದರು. ಬಿಲ್ಲು, ಬಾಣ, ಖಡ್ಗ, ಈಟಿಯೊಂದಿಗೆ ಅವರು ನೀಲ ಕಾರ್ಖಾನೆಗಳನ್ನು ಆಕ್ರಮಿಸಿದರು. ಸ್ತ್ರೀಯರು ಹೆಚ್ಚಿನ ಸಂಖ್ಯೆಯಲ್ಲಿ ಹೋರಾಟದಲ್ಲಿ ಭಾಗವಹಿಸಿದರು. ಬ್ರಿಟಿಷರನ್ನು ಬೆಂಬಲಿಸಿದವರನ್ನು ಹಾಗೂ ಅವರಿಗೆ ಬೇಕಾಗಿ ಕೆಲಸಮಾಡುವವರನ್ನು ಹೋರಾಟಗಾರರು ಬಹಿಷ್ಕರಿಸಿದರು. ಗ್ರಾಮಗಳಲ್ಲಿ ಬ್ರಿಟಿಷರಿಗೆ ವಿರುದ್ಧವಾಗಿ ಆರಂಭಿಸಿದ ಹೋರಾಟದ ಕುರಿತು ತಿಳಿದು ಕಲ್ಕತ್ತದಿಂದ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾಸಂಪನ್ನರು ಗಲಭೆಯ ಪ್ರದೇಶಗಳಿಗೆ ತಲುಪಿ ಕೃಷಿಕರಿಗೆ ಬೆಂಬಲ ನೀಡಿದರು.

ಇದರಿಂದಾಗಿ ನೀಲಕೃಷಿಕರ ಸಮಸ್ಯೆಗಳನ್ನು ಅಧ್ಯಯನ ಮಾಡಲು ಬ್ರಿಟಿಷ್ ಆಡಳಿತಾಧಿಕಾರಿಗಳು ಒಂದು ಕಮಿಷನನ್ನು ನೇಮಿಸಿದರು. ಲಾಭಕರವಲ್ಲದುದರಿಂದ ನೀಲಕೃಷಿಯನ್ನು ಕೊನೆಗೊಳಿಸಬೇಕೆಂದು ಕಮಿಷನ್ ಆದೇಶಿಸಿತು.



ನೀಲಕೃಷಿಕರ ಗಲಭೆಗೆ ಕಾರಣವಾದ ಪರಿಸ್ಥಿತಿಯನ್ನು ಮೌಲ್ಯಮಾಪನಮಾಡಿರಿ.

## ಕೇರಳದಲ್ಲಿ ಕೃಷಿಕರ ದಂಗೆಗಳು



**ಕನೋಲಿ ಪ್ರಭು**

ಕನೋಲಿ ಪ್ರಭುವು ಮಾಪಿಳ್ಳ ದಂಗೆಯ ಕಾಲದಲ್ಲಿ ಅಂದಿನ ಕಲ್ಲಿಕೋಟೆಯ ಜಿಲ್ಲಾ ಮ್ಯಾಜಿಸ್ಟ್ರೇಟರಾಗಿದ್ದರು. ಇವರು ಕಲ್ಲಿಕೋಟೆಯ ವೆಸ್ಟ್‌ಹಿಲ್ಲಿನಲ್ಲಿ ವಾಸಿಸುತ್ತಿದ್ದಾಗ ದಂಗೆಗಾರರು ಇವರನ್ನು ವಧಿಸಿದರು.

ಬ್ರಿಟಿಷರ ಅಧೀನಕ್ಕೊಳಪಟ್ಟ ಮಲಬಾರು ಹಲವಾರು ದಂಗೆಗಳಿಗೆ ಸಾಕ್ಷಿಯಾಯಿತು. ಜಮೀನ್ದಾರರ ಹಾಗೂ ಬ್ರಿಟಿಷರ ಶೋಷಣೆಯೂ ದಬ್ಬಾಳಿಕೆಯೂ ದಂಗೆಗಳಿಗೆ ಕಾರಣವಾಯಿತು. ಬ್ರಿಟಿಷರ ಬೆಂಬಲಿಗರೊಂದಿಗೆ ಜಮೀನ್ದಾರರು ನಡೆಸಿದ ಒಕ್ಕಲೆಬ್ಬಿಸುವಂತಹ ಕ್ರೂರಕೃತ್ಯಗಳಿಗೆ ವಿರುದ್ಧವಾಗಿ ಗಲಭೆಯು ನಡೆಯಿತು. ದಕ್ಷಿಣದ ಮಲಬಾರಿನ ಕೃಷಿಕರು ಭೂಮಿಯ ಯಜಮಾನರಾಗಿದ್ದ ಜಮೀನ್ದಾರರಿಂದ ಸ್ಥಳವನ್ನು ಗೇಣಿಗೆ ಪಡೆದು ಕೃಷಿಮಾಡಿ ಜೀವಿಸುತ್ತಿದ್ದ ಒಕ್ಕಲುಗಳಾಗಿದ್ದರು. ಅವರಲ್ಲಿ ಬಹುಪಾಲು ಜನರೂ ಮಾಪಿಳ್ಳೆಗಳಾಗಿದ್ದರು. (ಮಲಬಾರಿನ ಮುಸ್ಲಿಮರನ್ನು ಮಾಪಿಳ್ಳೆಗಳು ಎಂದು ಕರೆಯುತ್ತಿದ್ದರು). ಆದುದರಿಂದ ಹತ್ತೊಂಬತ್ತನೇ ಶತಮಾನದಲ್ಲುಂಟಾದ ಈ ದಂಗೆಗಳನ್ನು ಮಾಪಿಳ್ಳೆ ದಂಗೆಗಳೆಂದು ಕರೆಯುತ್ತಾರೆ.

ಸುಮಾರು ಇಪ್ಪತ್ತೆರಡರಷ್ಟು ದಂಗೆಗಳು ಮಲಬಾರಿನಲ್ಲಿ ನಡೆದುವು. ಈ ದಂಗೆಗಳನ್ನು ಹತ್ತಿಕ್ಕುವುದಕ್ಕಾಗಿ ಮಲಬಾರ್ ಸ್ಪೆಶಲ್ ಪೋಲೀಸ್ (ಎಂ.ಎಸ್.ಪಿ.) ಎಂಬ ಹೆಸರಿನಲ್ಲಿ ಒಂದು ಪ್ರತ್ಯೇಕ ಪೋಲೀಸ್ ಸೇನೆಯನ್ನು ರೂಪಿಸಿದರು. ನಿರಂತರವಾಗಿ ನಡೆಯುವ

ದಂಗೆಗಳ ಕುರಿತು ಅಧ್ಯಯನ ನಡೆಸಲು ಬ್ರಿಟಿಷ್ ಸರಕಾರವು ವಿಲಿಯಂ ಲೋಗನ್ ಕಮಿಷನ್ ನೇಮಿಸಿತು. ಬ್ರಿಟಿಷರ ತಪ್ಪಾದ ಕಂದಾಯ ಧೋರಣೆಯು ಗಲಭೆಗೆ ಕಾರಣವೆಂದು ಕಮಿಷನ್ ಬೊಟ್ಟುಮಾಡಿತು.

## ಕಾಡುಗಳು ಗಲಭೆಯ ಭೂಮಿಯಾಗುತ್ತದೆ




ಸಂತಾಳರ ಹೋರಾಟಕ್ಕೆ ನೇತೃತ್ವ ನೀಡಿದ ಸಿದ್ದುವನ್ನೂ ಕಾನುವನ್ನೂ ಅಭಿನಂದಿಸಿ ಭಾರತದ ಸರಕಾರವು ಹೊರತಂದ ಅಂಚೆ ಚೀಟಿ

*ಸಂತಾಳರು ಬಂಗಾಳ, ಜಾರ್ಖಂಡ್, ಬಿಹಾರ ಪ್ರಾಂತ್ಯಗಳಲ್ಲಿ ವಿಸ್ತಾರವಾಗಿ ಹರಡಿಕೊಂಡಿರುವ ರಾಜ್‌ಮಹಲ್ ಬೆಟ್ಟಗಳ ಕಣಿವೆಗಳಲ್ಲಿ ಜೀವಿಸುತ್ತಿದ್ದ ಬುಡಕಟ್ಟು ಜನವಿಭಾಗದವರಾಗಿದ್ದಾರೆ. ಇವರು ಕಾಡಿನ ಸಂಪನ್ಮೂಲಗಳನ್ನು ಸಂಗ್ರಹಿಸಿಯೂ ಕೃಷಿಮಾಡಿಯೂ ಪ್ರಕೃತಿಯೊಂದಿಗೆ ಹೊಂದಾಣಿಕೆಯಿಂದ ಜೀವಿಸುತ್ತಿದ್ದರು.*

*ಇವರು ಧೈರ್ಯಶಾಲಿಗಳೂ ಕಠಿಣ ದುಡಿಮೆಗಾರರೂ ಸ್ವಂತವಾದ ಸಂಸ್ಕೃತಿಯನ್ನು ಹೊಂದಿದವರೂ ಆಗಿದ್ದರು. ಬ್ರಿಟಿಷ್ ಆಧಿಪತ್ಯ ಸ್ಥಾಪನೆಯಿಂದಾಗಿ ಸಂತಾಳರ ಜೀವನದ ತಾಳ ತಪ್ಪಿತು.*

*ಜಮೀನ್ದಾರರೂ ಅತಿಹೆಚ್ಚಿನ ಬಡ್ಡಿ ವಸೂಲಿಗಾರರೂ ಅವರ ಭೂಮಿಯನ್ನು ವಶಪಡಿಸಿಕೊಂಡರು. ರೈಲು ನಿರ್ಮಾಣಕ್ಕಾಗಿ ಸಂತಾಳರನ್ನು ಗುಲಾಮರಂತೆ ಬ್ರಿಟಿಷ್ ಅಧಿಕಾರಿಗಳು ದುಡಿಸಿದರು. ಸಂಕಷ್ಟಕ್ಕೀಡಾದ ಸಂತಾಳರು ಸಿದ್ದುವಿನ ಹಾಗೂ ಕಾನುವಿನ ನೇತೃತ್ವದಲ್ಲಿ ಆಯುಧ ಹಿಡಿದರು. ರಾಜ್‌ಮಹಲ್ ಬೆಟ್ಟಗಳು ಬ್ರಿಟಿಷ್ ಶೋಷಣೆಗಾರರ ವಿರುದ್ಧದ ಹೋರಾಟದ ವೇದಿಕೆಯಾಯಿತು. ಬುಡಕಟ್ಟು ಜನರ ಹೋರಾಟದ ಕೆಚ್ಚಿನ ಎದುರು ಬ್ರಿಟಿಷರು ಬೆದರಿಹೋದರು.*

*ಆದರೆ ದೀರ್ಘ ಕಾಲ ಹೋರಾಡಲು ಸಂತಾಳರಿಗೆ ಸಾಧ್ಯವಾಗಲಿಲ್ಲ. ಸಾವಿರಾರು ಸಂತಾಳರು ಹೋರಾಟದಲ್ಲಿ ಮರಣವನ್ನಪ್ಪಿದರು.*

ಮೇಲೆ ನೀಡಿರುವುದು 1855ರಲ್ಲಿ ಬ್ರಿಟೀಷರಿಗೆ ವಿರುದ್ಧವಾಗಿ ಸಂತಾಳರು ನಡೆಸಿದ ಪ್ರತಿಭಟನೆಯ ವಿವರಣೆಯಾಗಿದೆ.

ಬುಡಕಟ್ಟು ಜನತೆಯೂ ಬ್ರಿಟಿಷ್ ಆಡಳಿತದ ದುರಿತಗಳನ್ನು ಅನುಭವಿಸಿದ್ದರು. ಅರಣ್ಯ ಸಂಪನ್ಮೂಲಗಳ ಶೇಖರಣೆ, ಜಾನುವಾರು ಸಾಕಣೆ, ಕಮರಿ ಕೃಷಿ, ಬೇಟೆಯಾಡುವುದು ಮುಂತಾದುವುಗಳು ಬುಡಕಟ್ಟು ಜನಾಂಗದವರ ಜೀವನ ಮಾರ್ಗಗಳಾಗಿದ್ದುವು.



ಸಂತಾಳರ ಗ್ರಾಮ
ಚಿತ್ರಗಾರನ
ದೃಷ್ಟಿಕೋನದಲ್ಲಿ

ಬ್ರಿಟಿಷರು ಜಾರಿಗೊಳಿಸಿದ ಅರಣ್ಯನಿಯಮಗಳು ಬುಡಕಟ್ಟು ಜನರ ಜೀವನವನ್ನು ಶೋಚನೀಯಗೊಳಿಸಿತು. ಅರಣ್ಯಗಳನ್ನು ಸಂರಕ್ಷಿತ ಪ್ರದೇಶಗಳಾಗಿ ಘೋಷಿಸಿದುದರಿಂದ ಅರಣ್ಯಗಳಿಗಿರುವ ಪ್ರವೇಶವನ್ನು ನಿಷೇಧಿಸಿದರು. ಸಂರಕ್ಷಿತ ವನವಾಗಿ ಘೋಷಿಸಲ್ಪಟ್ಟ ಪ್ರದೇಶವು ಬ್ರಿಟಿಷರಿಗೆ ಅಗತ್ಯವಿರುವ ಮರಗಳು ಲಭ್ಯವಾಗುವ ಅರಣ್ಯಗಳಾಗಿದ್ದುವು.

ಹಡಗು ನಿರ್ಮಾಣ, ರೈಲು ಹಳಿ ನಿರ್ಮಾಣ ಮುಂತಾದ ಅಗತ್ಯಗಳಿಗಾಗಿ ಅರಣ್ಯಗಳಿಂದ ಬ್ರಿಟಿಷರು ಧಾರಾಳ ಮರಗಳನ್ನು ಕಡಿಯುತ್ತಿದ್ದರು. ತೋಟಗಾರಿಕೆಗಳನ್ನು ಆರಂಭಿಸುವುದಕ್ಕಾಗಿಯೂ ಕಾಡುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನಾಶಮಾಡಿದರು. ಇಂತಹ ತೋಟಗಳಲ್ಲಿ ಬುಡಕಟ್ಟು ಜನರನ್ನು ಗುಲಾಮರಂತೆ ಕೆಲಸಮಾಡಿಸಿದರು. ಬುಡಕಟ್ಟು ವರ್ಗದ ಜನರು ಸಂಗ್ರಹಿಸಿದ ಅರಣ್ಯಸಂಪನ್ಮೂಲಗಳ ಮೇಲೆ ಬ್ರಿಟಿಷರು ಅತಿ ಹೆಚ್ಚು ತೆರಿಗೆಯನ್ನು ವಿಧಿಸಿದರು. ಈ ಪರಿಸ್ಥಿತಿಯಲ್ಲಿ ವಿವಿಧ ಬುಡಕಟ್ಟು ಜನಾಂಗದವರು ಬ್ರಿಟಿಷರ ವಿರುದ್ಧ ದಂಗೆ ನಡೆಸಿದರು.



ಬ್ರಿಟೀಷ್ ಆಡಳಿತವು ಬುಡಕಟ್ಟು ಜನಾಂಗದ ಜೀವನವನ್ನು ಸಂಘರ್ಷಗೊಳಿಸುವುದು ಹೇಗೆ? ಅವಲೋಕಿಸಿರಿ.

## ಕುರಿಚಿಯರ ದಂಗೆ

ಕುರಿಚಿಯರ ದಂಗೆಯು ಬ್ರಿಟಿಷರ ಶೋಷಣೆಯ ವಿರುದ್ಧ ನಡೆದ ಇನ್ನೊಂದು ಬುಡಕಟ್ಟು ದಂಗೆಯಾಗಿದೆ. ವಯನಾಡಿನ ಬುಡಕಟ್ಟು ಜನಾಂಗವಾದ ಕುರಿಚಿಯರೂ ಕುರುಂಬರೂ ದಂಗೆಯನ್ನು ನಡೆಸಿದರು. 1812 ರಲ್ಲಿ ನಡೆದ ದಂಗೆಯ ಕಾರಣಗಳು ಏನಾಗಿದ್ದುವು?

- ಬ್ರಿಟಿಷರು ಹೆಚ್ಚು ತೆರಿಗೆಯನ್ನು ಹೊರಿಸಿದುದು
- ತೆರಿಗೆಯನ್ನು ಹಣವಾಗಿ ಪಾವತಿಸಲು ನಿರ್ಬಂಧಿಸಿರುವುದು
- ತೆರಿಗೆ ಪಾವತಿಸಲು ಸಾಧ್ಯವಾಗದಿರುವವರ ಕೃಷಿಭೂಮಿಯನ್ನು ಬ್ರಿಟಿಷರು ನಿರ್ಬಂಧವಾಗಿ ವಶಪಡಿಸಿದುದು

ರಾಮನಂಬಿಯವರ ನೇತೃತ್ವದಲ್ಲಿ ದಂಗೆ ನಡೆಯಿತು. ಬುಡಕಟ್ಟು ಜನತೆಯ ಹೊರತಾಗಿ ಇತರ ವಿಭಾಗಗಳೂ ದಂಗೆಯಲ್ಲಿ ಭಾಗವಹಿಸಿದುವು. ದಂಗೆಯನ್ನು ಹತ್ತಿಕ್ಕಿದ ಬ್ರಿಟಿಷರು ರಾಮನಂಬಿಯನ್ನು ಸೆರೆಹಿಡಿದು ವಧಿಸಿದರು. ತಲಶ್ಶೇರಿಯ ಅಂದಿನ ಸಬ್‌ಕಲೆಕ್ಟರ್ ಟಿ.ಎಚ್.ಬೇಬರ್ ದಂಗೆಯ ಕುರಿತು ಈ ರೀತಿಯಲ್ಲಿ ದಾಖಲಿಸಿದರು: “ಒಂದು ತಿಂಗಳಾದರೂ ತಮ್ಮ ಹಿಡಿತದಲ್ಲಿರಿಸಲು ದಂಗೆಗಾರರಿಗೆ ಸಾಧ್ಯವಾಗುತ್ತಿದ್ದಲ್ಲಿ ರಾಜ್ಯವು ಅವರ ನಿಯಂತ್ರಣದಲ್ಲಾಗುತ್ತಿತ್ತು.”

ಹತ್ತೊಂಬತ್ತನೇ ಶತಮಾನದಲ್ಲಿ ಸಂತಾಳರ ಮತ್ತು ಕುರಿಚಿಯರ ದಂಗೆಗಳ ಹೊರತಾಗಿ ಹಲವಾರು ಬುಡಕಟ್ಟು ದಂಗೆಗಳು ಭಾರತದ ವಿವಿಧ ಪ್ರದೇಶಗಳಲ್ಲಿ ನಡೆದುವು. ಕೆಳಗೆ ಹೇಳಿರುವವುಗಳು ಅವುಗಳಲ್ಲಿ ಪ್ರಧಾನವಾದವುಗಳು.

- ಪಹಾರೀಯ ದಂಗೆ
- ಬೀಲ್ ದಂಗೆ
- ಕೋಳ್ ದಂಗೆ
- ಮುಂಡಾ ದಂಗೆ
- ಖಾಸೀ ದಂಗೆ

ಭಾರತದಲ್ಲಿನ ಬುಡಕಟ್ಟು ದಂಗೆಗಳ ಕುರಿತು ಚರಿತ್ರೆಗಾರನಾದ ಕೆ. ಸುರೇಶ್‌ಸಿಂಗ್ ಹೇಳಿರುವ ಮಾತುಗಳನ್ನು ಗಮನಿಸಿರಿ: “ನಿರಕ್ಷರರಾದ ಬುಡಕಟ್ಟು ವಿಭಾಗದ ಜನತೆಯು ಬ್ರಿಟಿಷ್ ವಿರುದ್ಧವಾಗಿ ನಡೆಸಿದ ದಂಗೆಗಳು ಕೃಷಿಕರೂ ಒಳಗೊಂಡಿರುವ ಇತರ ಯಾವುದೇ ಜನವಿಭಾಗಗಳು ನಡೆಸಿದ ದಂಗೆಗಳಿಗಿಂತ ತೀವ್ರ, ನಿರಂತರ ಹಾಗೂ ಆಕ್ರಮಣಕಾರಿಯಾಗಿದ್ದುವು.”

**ವಯನಾಡಿನ ಬುಡಕಟ್ಟು ದಂಗೆಯ ಆಧಾರದಲ್ಲಿ ಒಂದು ಸ್ಕ್ರಿಪ್ಟ್ ಮಂಡಿಸಲಿರುವ ಸಂಭಾಷಣೆ ತಯಾರಿಸಿರಿ.**




## ಪರಂಪರಾಗತ ಕೈಗಾರಿಕೆಗಳ ಪತನ

*'ಭಾರತದ ವಾಣಿಜ್ಯ ಚರಿತ್ರೆಯಲ್ಲಿ ಈ ರೀತಿಯಲ್ಲಿನ ಸಂಕಷ್ಟಗಳು ಕಾಣಲು ಸಾಧ್ಯವಿಲ್ಲ. ಹತ್ತಿಯ ನೇಯ್ಗೆಗಾರರ ಎಲುಬುಗಳು ಭಾರತದ ಸಮತಲಗಳನ್ನು ಬೆಳ್ಳಗಾಗಿಸುತ್ತದೆ."*

ವಿಲಿಯಂ ಬೆಂಟಿಕ್ ಪ್ರಭು (1834-35)

ಒಂದು ಕಾಲದಲ್ಲಿ ಜಗತ್ತಿನೆಲ್ಲೆಡೆಯೂ ಪ್ರಸಿದ್ಧಿಹೊಂದಿದ್ದ ಭಾರತದ ಬಟ್ಟೆ ಉದ್ದಿಮೆಯ ಪತನಕ್ಕೆ ಸಂಬಂಧಿಸಿ ಭಾರತದಲ್ಲಿನ ಗವರ್ನರ್ ಜನರಲ್ ಆಗಿದ್ದ ವಿಲಿಯಂ ಬೆಂಟಿಕ್ ಪ್ರಭು ನಡೆಸಿದ ನಿರೀಕ್ಷಣೆಯಾಗಿದೆ. ಬ್ರಿಟಿಷರ ಧೋರಣೆಗಳು ಭಾರತದ ಕೃಷಿರಂಗಕ್ಕೆ ಮಾತ್ರವಲ್ಲ ಕರಕುಶಲ ಕೈಗಾರಿಕೆಯನ್ನೂ ಸಂಪೂರ್ಣವಾಗಿ ನಾಶಮಾಡಿದುವು. ಈ ಅವನತಿಗಿರುವ ಕಾರಣಗಳನ್ನು ಪರಿಶೀಲಿಸೋಣ.

ಯಂತ್ರದಿಂದ ನಿರ್ಮಿತವಾದ ಬ್ರಿಟಿಷ್ ಬಟ್ಟೆಗಳನ್ನು ಅಧಿಕ ಪ್ರಮಾಣದಲ್ಲಿ ಭಾರತಕ್ಕೆ ಆಮದು ಮಾಡಿದುದು ಭಾರತದ ಬಟ್ಟೆಯು ಕೈಗಾರಿಕೆಯು ಅವನತಿಗಿರುವ ಪ್ರಧಾನ ಕಾರಣವಾಯಿತು.



ಬ್ರಿಟಿಷರ ಕಾಲದ ಭಾರತದ ರೈಲು

ಬ್ರಿಟನ್‌ನಿಂದ ಆಮದಾದ ಯಂತ್ರ ನಿರ್ಮಿತ ಬಟ್ಟೆಗಳಿಗೆ ದರ ಕಡಿಮೆಯಾದುದರಿಂದಾಗಿ ಭಾರತದಲ್ಲಿ ಸುಲಭವಾಗಿ ಮಾರಾಟವಾಯಿತು.

ರೈಲಿನ ವಿಸ್ತರಣೆಯೂ ಭಾರತದ ಬಟ್ಟೆ ಉದ್ದಿಮೆಯ ಪತನಕ್ಕೆ ಕಾರಣವಾಯಿತು. ಭಾರತದಲ್ಲಿನ ಬಂದರು ನಗರಗಳಿಗೆ ತಲುಪುವ ವಿವಿಧ ರೀತಿಯ ಬಟ್ಟೆಗಳು ದೂರದ ಗ್ರಾಮಗಳಿಗೆ ತಲುಪಿಸಲೂ ಗ್ರಾಮಗಳಿಂದ ಹತ್ತಿಯನ್ನು ಸಂಗ್ರಹಿಸಿ ಬಂದರುಗಳ ಮೂಲಕ ಬ್ರಿಟನ್ನಿಗೆ ತಲುಪಿಸಲೂ ರೈಲಿನ ವಿಸ್ತರಣೆಯು ಬ್ರಿಟಿಷರಿಗೆ ಸಹಾಯಕವಾಯಿತು. ಇದರಿಂದಾಗಿ ಗ್ರಾಮಗಳಲ್ಲಿನ ವ್ಯಾಪಾರವು ಭಾರತದ ನೇಯ್ಗೆಗಾರರಿಗೆ ನಷ್ಟವಾಯಿತು.


ಬ್ರಿಟನಿಗೆ ರಫ್ತು ಮಾಡಿರುವ ಭಾರತದ ಬಟ್ಟೆಗಳ ಮೇಲೆ ಬ್ರಿಟಿಷ್ ಸರಕಾರವು ಹೊರಿಸಿದ ಅತಿ ಹೆಚ್ಚಿನ ತೆರಿಗೆಯು ಅವುಗಳ ಬೆಲೆಯನ್ನು ಹೆಚ್ಚಿಸಿತು. ಅದರಿಂದಾಗಿ ಬ್ರಿಟಿಷ್ ಮಾರುಕಟ್ಟೆಯಲ್ಲಿ ಭಾರತದ ಬಟ್ಟೆಬರೆಗಳಿಗೆ ನಷ್ಟ ಉಂಟಾಯಿತು.

ಬ್ರಿಟಿಷ್ ಅಧಿಕಾರಿಗಳ ಶೋಷಣೆ ಹಾಗೂ ಪೀಡನೆಯ ಕಾರಣದಿಂದಾಗಿ ಹೆಚ್ಚಿನ ಕೆಲಸಗಾರರು ನೇಯ್ಗೆಯನ್ನು ತೊರೆದರು. ಕಡಿಮೆ ಬೆಲೆಗೆ ಉತ್ಪನ್ನಗಳನ್ನು ವಿನಿಮಯ ಮಾಡಲು ಮತ್ತು

ಕಡಿಮೆ ಕೂಲಿಗೆ ಕೆಲಸ ಮಾಡಲು ಅವರು ಕೆಲಸಗಾರರನ್ನು ನಿರ್ಬಂಧಿಸಿದರು. ಈ ಕಾರಣದಿಂದಾಗಿ ಹಲವರು ಇತರ ಕೆಲಸಗಳನ್ನು ಹುಡುಕಿಕೊಂಡು ಹೋದರು.



**ಭಾರತದ ಬಟ್ಟೆ ಕೈಗಾರಿಕೆಯ ಪತನದ ಕಾರಣಗಳನ್ನು ಕಂಡುಕೊಂಡು ಡಯಾಗ್ರಾಂ ಪೂರ್ತಿಗೊಳಿಸಿರಿ.**




ಬಟ್ಟೆ ಕೈಗಾರಿಕೆಯ ಪತನದ ಮೊದಲ ಆಘಾತವು ಕಂಡುಬಂದದ್ದು ನಗರಗಳಲ್ಲಾಗಿತ್ತು. ಮುರ್ಷಿದಾಬಾದ್ ಹಾಗೂ ಢಾಕಾದಂತಹ ಬಟ್ಟೆಗಳ ನಿರ್ಮಾಣ ಕೇಂದ್ರಗಳು ಜನವಾಸ ರಹಿತವಾಗಿ ಆ ಕೆಲಸದಲ್ಲಿ ತೊಡಗಿಸಿಕೊಂಡವರು ಗ್ರಾಮಗಳಲ್ಲಿ ಕೃಷಿಕೆಲಸಕ್ಕೆ ಹಿಂದಿರುಗಿದರು. ಇದು ಕೃಷಿಯನ್ನು ಆಶ್ರಯಿಸಿ ಜೀವಿಸುವವರ ಸಂಖ್ಯೆಯಲ್ಲಿ ಹೆಚ್ಚಳವನ್ನುಂಟುಮಾಡಿತು. ಕೃಷಿವಲಯದಲ್ಲಿ ತೊಡಗಿಸಿಕೊಂಡಿರುವವರ ಸಂಖ್ಯೆಯಲ್ಲಿನ ಹೆಚ್ಚಳದ ಕಾರಣದಿಂದಾಗಿ ಕೃಷಿಭೂಮಿಯು ಸಣ್ಣ ಸಣ್ಣ ತುಂಡುಗಳಾಗಿ ಬದಲಾಯಿತು. ಇದರ ಪ್ರತ್ಯಕ್ಷ ಫಲವು ಉತ್ಪಾದನೆಯ ಕುಸಿತವಾಗಿತ್ತು. ಗ್ರಾಮಗಳಲ್ಲಿನ ಕರಕೌಶಲ ಕೈಗಾರಿಕೆಗಳ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿರಲಿಲ್ಲ. ಪಟ್ಟಿಯನ್ನು ಗಮನಿಸಿರಿ.

| ಗ್ರಾಮೀಣ | ಪತನದ ಕಾರಣ |
|---|---|
| ♦ ಮಣ್ಣಿನ ಪಾತ್ರೆಯ ನಿರ್ಮಾಣ | ♦ ಅಲ್ಯೂಮಿನಿಯಂ ಪಾತ್ರಗಳ ಆಮದು |
| ♦ ಚರ್ಮದ ಕೆಲಸ | ♦ ಕಚ್ಚಾ ಚರ್ಮವನ್ನು ಯುರೋಪಿನೆಡೆಗೆ ರಫ್ತು |
| ♦ ಮರದ ಕೆಲಸ | ♦ ಲೋಹ ನಿರ್ಮಿತ ಯಂತ್ರಗಳ ಉಪಯೋಗ |

ಕೃಷಿವಲಯ ಹಾಗೂ ಕರಕುಶಲ ಕೈಗಾರಿಕೆಯ ಪತನವು ಬರಗಾಲಕ್ಕೂ ಹಸಿವಿನಿಂದ ಮರಣದೆಡೆಗೂ ಭಾರತವನ್ನು ತಳ್ಳಿತು. ಈ ಬರಗಾಲದಿಂದಾಗಿ ಲಕ್ಷಾಂತರ ಜನರು ಮರಣಹೊಂದಿದರು.

## ಆಧುನಿಕ ಕೈಗಾರಿಕೆಗಳ ಆರಂಭ ಹಾಗೂ ಕಾರ್ಮಿಕರ ಸ್ಥಿತಿ

ಹತ್ತೊಂಬತ್ತನೇ ಶತಮಾನದಲ್ಲಿ ಬ್ರಿಟಿಷ್ ಕೈಗಾರಿಕೋದ್ಯಮಿಗಳು ಭಾರತದಲ್ಲಿ ಆಧುನಿಕ ಕೈಗಾರಿಕೆಗಳನ್ನು ಆರಂಭಿಸಿದರು. ಆದರೆ ಅವುಗಳ ಸಂಖ್ಯೆಯು ತುಂಬಾ ಪರಿಮಿತವಾಗಿತ್ತು. ಆರಂಭದಲ್ಲಿ ತೋಟಗಾರಿಕೆಗಳನ್ನು ಸ್ಥಾಪಿಸಿದರು. ನಂತರ ಬಟ್ಟೆ, ಸೆಣಬು, ಕಬ್ಬಿಣ ಮತ್ತು ಉಕ್ಕು, ಕಾಗದ ಮುಂತಾದ ಕೈಗಾರಿಕೆಗಳನ್ನು ಆರಂಭಿಸಿದರು. ಇಂತಹ ಕೈಗಾರಿಕೆಗಳಲ್ಲಿನ

ಕಾರ್ಮಿಕರು ಶೋಷಣೆಗೆ ಒಳಗಾದರು. ಅವರ ಅವಸ್ಥೆಯು ತುಂಬಾ ಶೋಚನೀಯವಾಗಿತ್ತು.

- ಹಲವಾರು ಗಂಟೆಗಳ ದೀರ್ಘ ಸಮಯದ ದುಡಿತ
- ಕಡಿಮೆ ಸಂಬಳ
- ಅನಾರೋಗ್ಯಕರವಾದ ವಾಸಸ್ಥಳಗಳು

ಎಂಬಿವುಗಳು ಕಾರ್ಮಿಕರ ಪ್ರಧಾನ ಸಮಸ್ಯೆಗಳಾಗಿದ್ದುವು. ಅಂದಿನ ಕಾಲದಲ್ಲಿ ಭಾರತದಲ್ಲಿ ಸಂಘಟಿತ ಕಾರ್ಮಿಕ ಸಂಘಟನೆಗಳು ಇರಲಿಲ್ಲ. ಆದರೂ ಶೋಷಣೆಯನ್ನು ಸಹಿಸಲು ಸಾಧ್ಯವಾಗದೆ ಕಾರ್ಮಿಕರು ಹೋರಾಟಗಳನ್ನು ನಡೆಸಿದರು. ಬೊಂಬೈಯ ಬಟ್ಟೆಗಿರಣಿಯ ಕಾರ್ಮಿಕರು ಹಾಗೂ ಕಲ್ಕತ್ತದಲ್ಲಿನ ಸೆಣಬಿನ ಕಾರ್ಮಿಕರು ನಡೆಸಿದ ಮುಷ್ಕರವು ಇದಕ್ಕೆ ಉದಾಹರಣೆಯಾಗಿದೆ.

**ಬ್ರಿಟಿಷ್ ಆಧಿಪತ್ಯ ಕಾಲದ ಕಾರ್ಮಿಕರ ಜೀವನ**

"ಹೊಟ್ಟೆ ತುಂಬ ಆಹಾರವಿಲ್ಲದೆ, ಬೆಳಕೋ ಶುದ್ಧವಾಯುವೋ ನೀರೋ ಇಲ್ಲದ ಸಣ್ಣ ಗುಡಿಸಲುಗಳಲ್ಲಿ ಮೃಗಕ್ಕೆ ಸಮಾನರಾಗಿ ನರಕಯಾತನೆ ಅನುಭವಿಸುತ್ತಿರುವ ಭಾರತದ ಕೈಗಾರಿಕಾ ಕಾರ್ಮಿಕರು ಕೈಗಾರಿಕಾ ಯಜಮಾನತ್ವದ ಲೋಕದಲ್ಲಿ ಅತಿಹೆಚ್ಚಿನ ಶೋಷಣೆಗೆ ಒಳಗಾದವರಲ್ಲಿ ಒಬ್ಬರಾಗಿರುವೆನು"
**ಜರಗನ್ ಕುಸ್‌ಯಾಸ್‌ಕೀ (ಜರ್ಮನಿಯ ಆರ್ಥಿಕ ಚರಿತ್ರೆಗಾರ)**

ಬ್ರಿಟಿಷರ ಆರ್ಥಿಕ ಶೋಷಣೆಯ ದುಷ್ಪರಿಣಾಮವನ್ನು ಅನುಭವಿಸಬೇಕಾದ ವಿವಿಧ ಜನವಿಭಾಗಗಳ ಕುರಿತು ಮತ್ತು ಅವರು ನಡೆಸಿದ ಹೋರಾಟಗಳ ಕುರಿತು ನಾವು ಈ ವರೆಗೆ ಚರ್ಚಿಸಿದೆವು. ಈ ಯಾವ ಹೋರಾಟಗಳೂ ಆಯಾಯ ಪ್ರದೇಶಗಳಿಂದ ಹೊರಕ್ಕೆ ವ್ಯಾಪಿಸಲಿಲ್ಲ. ಮಾತ್ರವಲ್ಲದೆ ಇವುಗಳಿಗೆ ಸಂಘಟಿತ ಸ್ವಭಾವವೂ ಕಡಿಮೆಯಾಗಿತ್ತು. ಆದರೂ ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ ಶೋಷಿತರಾದ ವಿವಿಧ ಜನವಿಭಾಗಗಳು ಒಟ್ಟಾಗಿ ಬ್ರಿಟಿಷ್ ಆಡಳಿತಕ್ಕೆ ವಿರುದ್ಧವಾಗಿ ಸಂಘಟಿತ ಹೋರಾಟಕ್ಕೆ ನಾಂದಿಹಾಡಿದುವು.

*ಭಾರತದಲ್ಲಿನ ವಿವಿಧ ಜನವಿಭಾಗಗಳು ಬ್ರಿಟಿಷ್ ಆಡಳಿತಕ್ಕೆ ವಿರುದ್ಧವಾಗಿ ಪ್ರತಿಭಟನೆಗಳ ವಾರ್ತೆಗಳು ಹಾಗೂ ಚಿತ್ರಗಳನ್ನು ಸಂಗ್ರಹಿಸಿ ಡಿಜಿಟಲ್ ಮೇಗಸಿನ್ ತಯಾರಿಸಿರಿ.*

**'ಬ್ರಿಟಿಷರ ಧೋರಣೆಯ ಕಾರಣದಿಂದ ವಿವಿಧ ಜನವಿಭಾಗಗಳು ಎದುರಿಸಿದ ಸಮಸ್ಯೆಗಳು' ಎಂಬ ವಿಷಯದಲ್ಲಿ ಒಂದು ಲೇಖನವನ್ನು ತಯಾರಿಸಿರಿ.**

## 1857ರ ಪ್ರಥಮ ಸ್ವಾತಂತ್ರ್ಯ ಹೋರಾಟ

*1857 ಮೇ 11, ಮುಂಜಾನೆ*

*ದೊಡ್ಡ ಆವೇಶಭರಿತವಾದ ಕೂಗನ್ನು ಕೇಳಿಕೊಂಡು ದೆಹಲಿಯ ಜನರು ನಿದ್ರೆಯಿಂದೆದ್ದರು. ಮೀರತ್‌ನಿಂದ ಯಮುನಾ ನದಿ ದಾಟಿ ಆಯುಧಗಳೊಂದಿಗೆ ಸಾವಿರಾರು ದಂಗೆಗಾರರು ದೆಹಲಿಗೆ ಆಗಮಿಸಿದರು. ಅವರಲ್ಲಿ ಸಿಪಾಯಿಗಳು ಎಂಬುದಾಗಿ ತಿಳಿಯಲ್ಪಡುವ ಭಾರತೀಯರಾದ ಸೈನಿಕರೂ ಜನಸಾಮಾನ್ಯರೂ ಇದ್ದರು. ಹಿಂದಿನ ದಿನ ರಾತ್ರಿ ಮೀರತ್‌ನಲ್ಲಿ ಅವರು ಬ್ರಿಟಿಷ್ ಅಧಿಕಾರಿಗಳನ್ನು ವಧಿಸಿ ಬ್ರಿಟಿಷ್ ಸಂಸ್ಥೆಗಳಿಗೆ ಬೆಂಕಿಯನ್ನು ಹಚ್ಚಿದರು.*

*ದೆಹಲಿಗೆ ತಲುಪಿದ ದಂಗೆಗಾರರು ಮೊಗಲ್ ಚಕ್ರವರ್ತಿ ಎರಡನೆಯ ಬಹದ್ದೂರ್ ಶಾನನ್ನು ಭಾರತದ ಚಕ್ರವರ್ತಿಯಾಗಿ ಘೋಷಿಸಿದರು. ಹೆಚ್ಚು ತಡವಾಗದೆ ದಂಗೆಯು ಉತ್ತರಭಾರತದ ಇತರ ಭಾಗಗಳಿಗೂ ವ್ಯಾಪಿಸಿತು.*

ಮೇಲೆ ವಿವರಿಸಿರುವುದು ಚರಿತ್ರೆಕಾರರು ಭಾರತದ ಮೊದಲ ಸ್ವಾತಂತ್ರ್ಯ ಹೋರಾಟವೆಂದು ಕರೆಯುವ 1857ರ ದಂಗೆಯ ಆರಂಭವನ್ನಾಗಿದೆ. ದಂಗೆಯ ಆರಂಭಕ್ಕೆ ಕಾರಣರಾದವರು ಮೀರತ್‌ನ ಸಿಪಾಯಿಗಳಾಗಿದ್ದರು. ಅವರನ್ನು ದಂಗೆಗೆ ಮುನ್ನುಗ್ಗಲು ಪ್ರೇರೇಪಿಸಿದುದು ಯಾವುದು?


ಮಂಗಲ್‌ಪಾಂಡೆ

ಕಡಿಮೆ ಸಂಬಳ ಮತ್ತು ಬ್ರಿಟಿಷ್ ಅಧಿಕಾರಿಗಳಿಂದ ಎದುರಿಸಿದ ಅವಹೇಳನವು ಸಿಪಾಯಿಗಳ ಅಸಂತೃಪ್ತಿಗೆ ಕಾರಣವಾಗಿತ್ತು. ಸೈನಿಕರಿಗೆ ಹೊಸತಾಗಿ ನೀಡಿರುವ ಎನ್‌ಫೀಲ್ಡ್ ಕೋವಿಗಳಲ್ಲಿ ಉಪಯೋಗಿಸುವ ಮದ್ದುಗುಂಡುಗಳಿಗೆ ದನದ ಹಾಗೂ ಹಂದಿಯ ಕೊಬ್ಬುಗಳನ್ನು ಉಪಯೋಗಿಸುತ್ತಾರೆಂಬ ವಾರ್ತೆ ಅವರನ್ನು ಕೋಪೋದ್ರಿಕ್ತರನ್ನಾಗಿ ಮಾಡಿತು. ಇದು ಹಿಂದುಗಳ ಹಾಗೂ ಮುಸ್ಲಿಮರನ್ನೊಳಗೊಂಡ ಸೈನಿಕರ ಧಾರ್ಮಿಕ ಭಾವನೆಗಳಿಗೆ ಆಘಾತವನ್ನುಂಟುಮಾಡಿತು.

ಹೊಸ ತೋಟಗಳನ್ನು ಉಪಯೋಗಿಸಲು ಒಪ್ಪದಿರುವ ಸಿಪಾಯಿಗಳನ್ನು ಬ್ರಿಟಿಷ್ ಅಧಿಕಾರಿಗಳು ಶಿಕ್ಷಿಸಿದರು. ಬಂಗಾಳದ ಭಾರಖ್‌ಪುರ್‌ನಲ್ಲಿ ಮಂಗಲ್‌ಪಾಂಡೆ ಎಂಬ ಸೈನಿಕನು ಹೊಸತೋಟೆಯನ್ನು ಉಪಯೋಗಿಸಲು ನಿರ್ಬಂಧಿಸಿದ ಬ್ರಿಟೀಷ್ ಅಧಿಕಾರಿಯ ಮೇಲೆ ಗುಂಡೆಸೆದನು. ನಂತರ ಮಂಗಲ್ ಪಾಂಡೆಯನ್ನು ದಸ್ತಗಿರಿ ಮಾಡಿ ವಿಚಾರಣೆಗೊಳಪಡಿಸಿ ನೇಣುಗಂಬಕ್ಕೇರಿಸಿದರು.

ಪ್ರಥಮ ಸ್ವಾತಂತ್ರ್ಯ ಹೋರಾಟಕ್ಕೆ ನೇತೃತ್ವ ನೀಡಿದವರ ಪ್ರೊಫೈಲ್ ತಯಾರಿಸಿ ಮಂಡಿಸಿರಿ.



ರಾಜರುಗಳು, ಕೃಷಿಕರು, ಕರಕುಶಲ ಕೆಲಸಗಾರರು ಹೀಗೆಯೇ ಭಾರತದ ಸಮಾಜದಲ್ಲಿನ ವಿವಿಧ ವಿಭಾಗಗಳ ಜನರು ಕ್ರಾಂತಿಯಲ್ಲಿ ಭಾಗವಹಿಸಿದರು. ಬ್ರಿಟಿಷರ ಆಡಳಿತವು ರಾಜರುಗಳನ್ನೂ ಪ್ರತಿಕೂಲವಾಗಿ ಭಾದಿಸಿತು. ದತ್ತುಪುತ್ರನಿಗೆ ಹಕ್ಕಿಲ್ಲ ನಿಯಮದ ಹೊರತಾಗಿ ದುರಾಡಳಿತದ ತಪ್ಪನ್ನು ಆರೋಪಿಸಿ ಬ್ರಿಟಿಷರು ದೇಶೀಯ ರಾಜ್ಯಗಳನ್ನು ವಶಪಡಿಸಿದರು. ಇದು ರಾಜರುಗಳು ದಂಗೆಗೆ ನೇತೃತ್ವವನ್ನು ನೀಡುವಂತೆ ಪ್ರೇರಣೆಯನ್ನಿತ್ತಿತು.

ರಾಜರುಗಳೊಂದಿಗೆ ಹಾಗೂ ಸಿಪಾಯಿಗಳೊಂದಿಗೆ ಜನಸಾಮಾನ್ಯರೂ ಹೋರಾಟದಲ್ಲಿ



**1857ರ ಹೋರಾಟದ ವಿವಿಧ ಕಾರಣಗಳನ್ನು ಕೆಳಗೆ ಕೊಟ್ಟಿರುವ ಸೂಚನೆಗಳ ಆಧಾರದಲ್ಲಿ ಚರ್ಚಿಸಿರಿ.**

- **ಕೃಷಿಕರ ಸಂಕಷ್ಟಗಳು**
- **ಕರಕುಶಲ ಕೆಲಸಗಾರರ ಬಡತನ**
- **ರಾಜರುಗಳ ಸಮಸ್ಯೆಗಳು**
- **ಸಿಪಾಯಿಗಳ ಸಂಕಷ್ಟಗಳು**


ಎರಡನೆಯ ಬಹದ್ದೂರ್ ಶಾ


ತಾಂತ್ಯಾ ತೋಪಿ

ಭಾಗವಹಿಸಿದರು. ಬ್ರಿಟಿಷರನ್ನೂ ಅತಿ ಹೆಚ್ಚು ಬಡ್ಡಿವಸೂಲುಗಾರರನ್ನೂ ಆಕ್ರಮಿಸಿ ಹಣ ವ್ಯವಹಾರದ ದಾಖಲೆಗಳನ್ನೂ ಲೆಕ್ಕಪುಸ್ತಕಗಳನ್ನೂ ಅವರು ಬೆಂಕಿಗಾಹುತಿಮಾಡಿದರು. ಜನಸಾಮಾನ್ಯರಾದ ಕೃಷಿಕರ ಹಾಗೂ ಕರಕುಶಲ ಕೆಲಸಗಾರರ ಭಾಗವಹಿಸುವಿಕೆಯು ಈ ಹೋರಾಟದ ವಿಶೇಷತೆಯಾಗಿದೆ. ಔಧ್ ಎಂಬ ದೇಶೀಯ ರಾಜ್ಯದ ಹೋರಾಟದಲ್ಲಿ ಮಡಿದ ಒಂದೂವರೆಲಕ್ಷ ಜನರಲ್ಲಿ ಒಂದು ಲಕ್ಷದವರೆಗಿನವರು ಜನಸಾಮಾನ್ಯರಾಗಿದ್ದರು.


ರಾಣಿಲಕ್ಷ್ಮೀಬಾಯಿ


ಬೇಗಂ ಹಸ್ರತ್‌ಮಹಲ್

ಹೋರಾಟದ ನಿಜವಾದ ಶಕ್ತಿ ಹಿಂದೂ ಮುಸಲ್ಮಾನರ ಏಕತೆಯಾಗಿತ್ತು. ಸೈನಿಕರ ಹಾಗೂ ಜನ ನೇತಾರರ ಮಧ್ಯದಲ್ಲಿ ಸಂಪೂರ್ಣ ಸಹಕಾರವಿತ್ತು. ದೆಹಲಿಯನ್ನು ವಶಪಡಿಸಿದ ಹೋರಾಟಗಾರರು ಎರಡನೆಯ ಬಹದ್ದೂರ್ ಶಾನನ್ನು ಚಕ್ರವರ್ತಿಯಾಗಿ ಘೋಷಿಸಿದರು. ದಂಗೆಯ ಪ್ರಧಾನ ಕೇಂದ್ರಗಳು ಮತ್ತು ಅಲ್ಲಿ ನೇತೃತ್ವ ನೀಡಿದವರ ಹೆಸರುಗಳನ್ನು ಕೆಳಗೆ ನೀಡಿರುವ ಪಟ್ಟಿಯಿಂದ ಪರಿಚಯಿಸುವ.

ಬ್ರಿಟಿಷರ ಶಕ್ತಿಯುತವಾದ ಸೈನಿಕ ಬಲದ ಮುಂದೆ ನಿಲ್ಲಲು

| ದಂಗೆಯ ಕೇಂದ್ರಗಳು | ನೇತಾರರು |
|---|---|
| ● ದೆಹಲಿ | ● ಎರಡನೆಯ ಬಹದ್ದೂರ್‌ಶಾ |
| ● ಝಾನ್ಸಿ | ● ರಾಣಿಲಕ್ಷ್ಮೀಬಾಯಿ |
| ● ಲಕ್ನೋ | ● ಬೇಗಂ ಹಸ್ರತ್ ಮಹಲ್ |
| ● ಕಾನ್ಪುರ | ● ನಾನಾಸಾಹೇಬ್ ತಾಂತಿಯಾತೋಪಿ |
| ● ಫೈಸಾಬಾದ್ | ● ಮೌಲವಿ ಅಹಮ್ಮದುಲ್ಲ |


ನಾನಾಸಾಹೇಬ್

ದಂಗೆಗಾರರಿಗೆ ಸಾಧ್ಯವಾಗಲಿಲ್ಲ. ದಂಗೆಯನ್ನು ಬ್ರಿಟಿಷರು ಸಂಪೂರ್ಣವಾಗಿ ಹತ್ತಿಕ್ಕಿದರು. ಪರಾಜಯ ಹೊಂದಿದರೂ ಅದು ಬ್ರಿಟಿಷ್ ಆಧಿಪತ್ಯದಿಂದ ಮುಕ್ತಗೊಳ್ಳಲು ಭಾರತದ ಜನರು ನಡೆಸಿದ ಮೊದಲ ಮಹತ್ತರವಾದ ಹೋರಾಟವಾಗಿತ್ತು. 1857ರ ದಂಗೆಯು ಭಾರತದಲ್ಲಿನ ಬ್ರಿಟಿಷ್ ಆಡಳಿತದಲ್ಲಿ ಹಾಗೂ ಧೋರಣೆಯಲ್ಲಿ ಮಹತ್ತರವಾದ ಬದಲಾವಣೆಯನ್ನುಂಟುಮಾಡಿತು. ಭಾರತದ ಆಡಳಿತವು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯಿಂದ ಬ್ರಿಟಿಷ್ ಪಾರ್ಲಿಮೆಂಟ್ ಕೈಗೆತ್ತಿಕೊಂಡಿತು. 1857ರ ಬಳಿಕ ಬ್ರಿಟಿಷರ ಆರ್ಥಿಕ ಶೋಷಣೆಯು ಅತಿ ತೀವ್ರವಾಯಿತು.


ಬಂಗಾಳದ ಬರಗಾಲದ ಸಂಕಷ್ಟಗಳನ್ನನುಭವಿಸಿದವರ ಚಿತ್ರ


ಅಂದಿನ ದಿನಗಳಲ್ಲಿ ಹಸಿವಿನಿಂದ ಉಂಟಾದ ಮರಣವು ಇದನ್ನು ಖಚಿತಪಡಿಸುತ್ತದೆ. ಹತ್ತೊಂಬತ್ತನೇ ಶತಮಾನದ ದ್ವಿತೀಯಾರ್ಧದಲ್ಲಿ ಉಂಟಾದ ಅತಿದೊಡ್ಡ ಇಪ್ಪತ್ತನಾಲ್ಕು ಬರಗಾಲಗಳಲ್ಲಿ ಎರಡು ಕೋಟಿಯಷ್ಟು ಜನರು ಮರಣಹೊಂದಿದರು.

## ಶೋಷಣೆಯನ್ನು ಮನಗಂಡರು


ಬ್ರಿಟಿಷರು ನಡೆಸಿದ ಆರ್ಥಿಕ ಶೋಷಣೆಯು ಭಾರತದ ವಿವಿಧ ವಿಭಾಗದ ಜನರೆಡೆಯಲ್ಲಿ ತೀವ್ರವಾದ ಬ್ರಿಟಿಷ್ ವಿರುದ್ಧ ಮನೋಭಾವವನ್ನು ಮೂಡಿಸಿತು. ಈ ಮನೋಭಾವವು ಹತ್ತೊಂಭತ್ತನೆಯ ಶತಮಾನದಲ್ಲಿ ಭಾರತದಲ್ಲಿ ರಾಷ್ಟ್ರೀಯತೆಯು ರೂಪುಗೊಳ್ಳಲಿರುವ ಪ್ರಧಾನ ಘಟಕವಾಗಿದೆ. ರಾಷ್ಟ್ರೀಯತೆಯೆಂದರೆ ಜಾತಿ-ಧರ್ಮ-ವರ್ಗ-ಪ್ರಾದೇಶಿಕ ವ್ಯತ್ಯಾಸಗಳಿಲ್ಲದೆ ಒಂದು ರಾಷ್ಟ್ರದ ಜನರೆಡೆಯಲ್ಲಿದ್ದ ಏಕತೆಯ ಮನೋಭಾವವಾಗಿದೆ. ಹೀಗೆ ಬೆಳೆದುಬಂದ ರಾಷ್ಟ್ರೀಯತೆಯ ಒಂದು ಸಂಘಟಿತ ರೂಪವೇ ಇಂಡಿಯನ್ ನೇಶನಲ್ ಕಾಂಗ್ರೆಸ್. 1885 ಡಿಸೆಂಬರ್‌ನಲ್ಲಿ ಬೊಂಬಾಯಿಯಲ್ಲಿ ಇಂಡಿಯನ್ ನೇಶನಲ್ ಕಾಂಗ್ರೆಸ್ ರೂಪುಗೊಂಡಿತು. ಭಾರತದ ವಿವಿಧ ಭಾಗಗಳಿಂದ ಆಗಮಿಸಿದ 72 ಜನಪ್ರತಿನಿಧಿಗಳು ರೂಪೀಕರಣ ಸಮ್ಮೇಳನದಲ್ಲಿ ಭಾಗವಹಿಸಿದರು. ಇಂಡಿಯನ್ ನೇಶನಲ್ ಕಾಂಗ್ರೆಸ್ 1885ರಿಂದ 1947ರ ಸ್ವಾತಂತ್ರ್ಯ ಲಭಿಸುವ ತನಕ ಭಾರತದಲ್ಲಿ ಬ್ರಿಟಿಷ್ ವಿರುದ್ಧ ಹೋರಾಟಗಳಿಗೆ ನೇತೃತ್ವ ವಹಿಸಿತು.


ದಾದಾಬಾಯಿ ನವರೋಜಿ

ಬ್ರಿಟಿಷರ ಕಾಲದಲ್ಲಿ ಭಾರತದ ಆರ್ಥಿಕ ವ್ಯವಸ್ಥೆಯಲ್ಲುಂಟಾದ ಪತನವನ್ನು ಅವರು


ರಮೇಶ್‌ಚಂದ್ರ ದತ್

ತನ್ನ ಅಧ್ಯಯನದ ಮೂಲಕ ತಿಳಿಯಪಡಿಸಿದರು. ಸ್ಪಷ್ಟವಾದ ದಾಖಲೆಗಳನ್ನು ಸಂಗ್ರಹಿಸಿ ಅಧ್ಯಯನ ನಡೆಸಿದ ಅವರು ಭಾರತದಿಂದ ಪ್ರತಿವರ್ಷವೂ ಹೆಚ್ಚಿನ ಮೊತ್ತವು ಬ್ರಿಟನ್ನಿಗೆ ಹರಿಯುತ್ತದೆ ಹಾಗೂ ಸಂಪತ್ತಿನ ಈ ಹರಿವು ಭಾರತದ ದಾರಿದ್ರ್ಯ ಮತ್ತು ಹಸಿವಿಗೆ ಕಾರಣವಾಗಿದೆ ಎಂದು ವಿವರಿಸಿದರು. 'ಸೋರಿಕೆ ಸಿದ್ಧಾಂತ' ಎಂಬುದಾಗಿ ಕರೆಯಲ್ಪಡುವ ನಿಗಮನಗಳನ್ನು ಅವರು ತನ್ನ 'ಪವರ್ಟಿ ಏಂಡ್ ಅನ್‌ಬ್ರಿಟಿಷ್ ರೂಲ್ ಇನ್ ಇಂಡಿಯಾ' (Poverty and UnBritish Rule in India) ಎಂಬ ಪುಸ್ತಕದಲ್ಲಿ ಪ್ರತಿಪಾದಿಸಿದರು. ಭಾರತದ ಸಂಪತ್ತು ಬ್ರಿಟನ್ನಿಗೆ ಸೋರಿಕೆಯಾದುದು ಹೇಗೆ?


ಗೋಪಾಲಕೃಷ್ಣ ಗೋಖಲೆ

- ಭಾರತದಿಂದ ಕಚ್ಚಾವಸ್ತುಗಳ ರಫ್ತು
- ಭಾರತದ ಬ್ರಿಟಿಷ್ ಅಧಿಕಾರಿಗಳಿಗೆ ನೀಡುತ್ತಿರುವ ಸಂಬಳ ಮತ್ತು ನಿವೃತ್ತಿ ವೇತನ
- ಭಾರತದಲ್ಲಿ ಬ್ರಿಟಿಷ್ ಉತ್ಪನ್ನಗಳನ್ನು ಮಾರಾಟಮಾಡುವುದರ ಮೂಲಕ ಅವರಿಗೆ ಲಭಿಸುವ ಲಾಭ
- ಭಾರತದಿಂದ ಸಂಗ್ರಹಿಸುವ ತೆರಿಗೆ

ಬ್ರಿಟಿಷರ ಆರ್ಥಿಕ ಧೋರಣೆಗಳು ಭಾರತವನ್ನು ಹೇಗೆ ದಾರಿದ್ರ್ಯದೆಡೆಗೆ ಕೊಂಡೊಯ್ಯುತ್ತದೆಂಬುದಕ್ಕೆ ಸಂಬಂಧಿಸಿ ಜನಸಾಮಾನ್ಯರಿಗೆ ತಿಳುವಳಿಕೆಯನ್ನು ನೀಡುವುದರಲ್ಲಿ ಆರಂಭಕಾಲದ ನೇತಾರರಾದ ದಾದಾಬಾಯಿ ನವರೋಜಿ, ರಮೇಶ್‌ಚಂದ್ರ ದತ್, ಗೋಪಾಲಕೃಷ್ಣ ಗೋಖಲೆ ಮುಂತಾದವರು ಪ್ರಮುಖ ಪಾತ್ರ ವಹಿಸಿದರು. ತಾವು ಅನುಭವಿಸುತ್ತಿರುವ ಬಡತನ ಹಾಗೂ ಶೋಷಣೆ ಬ್ರಿಟಿಷರ ಸೃಷ್ಟಿಯಾಗಿದೆ ಎಂಬ ತಿಳುವಳಿಕೆಯು ಜನರಲ್ಲಿ ಬ್ರಿಟಿಷ್ ವಿರುದ್ಧ ಮನೋಭಾವವು ಬೆಳೆಯಲು ಕಾರಣವಾಯಿತು. ಈ ರೀತಿಯಲ್ಲಿ ಬೆಳೆದುಬಂದ ಭಾರತದ ರಾಷ್ಟ್ರೀಯತೆಯನ್ನು ಕೆಲವು ಚರಿತ್ರೆಗಾರರು ಆರ್ಥಿಕ ರಾಷ್ಟ್ರೀಯತೆ ಎಂಬುದಾಗಿ ಕರೆಯುತ್ತಾರೆ.



**ಸೋರಿಕೆಯ ಸಿದ್ಧಾಂತಕ್ಕೆ ಸಂಬಂಧಿಸಿದ ಟಿಪ್ಪಣಿ ತಯಾರಿಸಿರಿ.**

## ಸ್ವದೇಶೀ ಆಂದೋಲನ – ನೂತನ ಪ್ರತಿಭಟನೆಗಳು



**ಸ್ವದೇಶೀ ಆಂದೋಲನದ ನರ್ಸರಿ**

ಭಾರತದ ರಾಷ್ಟ್ರೀಯ ಆಂದೋಲನದ ಆರಂಭಕಾಲದ ನೇತಾರರಲ್ಲಿ ಹೆಚ್ಚಿನವರು ಬಂಗಾಳಿಗಳಾಗಿದ್ದರು. ಆದುದರಿಂದ ಬಂಗಾಳವನ್ನು ಭಾರತದ ರಾಷ್ಟ್ರೀಯ ಆಂದೋಲನದ ನರ್ಸರಿ ಎಂಬ ವಿಶೇಷ ನಾಮದಿಂದ ಗುರುತಿಸುತ್ತಿದ್ದರು. ನಂತರ ಭಾರತದ ರಾಷ್ಟ್ರೀಯ ಆಂದೋಲನವನ್ನು ದುರ್ಬಲಗೊಳಿಸುವುದಕ್ಕಾಗಿ 1905ರಲ್ಲಿ ಕರ್ಜನ್ ಪ್ರಭುವು ಬಂಗಾಳವನ್ನು ವಿಭಜಿಸಿದನು.

ಆರ್ಥಿಕ ಸೋರಿಕೆಯನ್ನು ತಡೆಯುವುದಕ್ಕಾಗಿ ಬ್ರಿಟಿಷ್ ಉತ್ಪನ್ನಗಳನ್ನು ಬಹಿಷ್ಕರಿಸಬೇಕು ಮತ್ತು ಅದಕ್ಕೆ ಬದಲಾಗಿ ಭಾರತದ ಉತ್ಪನ್ನಗಳನ್ನು ಉಪಯೋಗಿಸಿಕೊಂಡು ಭಾರತದ ಕೈಗಾರಿಕೆಗಳನ್ನು ಬಲಪಡಿಸಬೇಕೆಂದು ಆರಂಭಕಾಲದ ರಾಷ್ಟ್ರೀಯ ನೇತಾರರು ಕರೆನೀಡಿದರು. ಬ್ರಿಟಿಷ್ ಉತ್ಪನ್ನಗಳ ಬಹಿಷ್ಕಾರ ಹಾಗೂ ಸ್ವದೇಶೀ ವಸ್ತುಗಳ ಉಪಯೋಗವು 1905ರಲ್ಲಿ ಬ್ರಿಟಿಷರು ಬಂಗಾಳವನ್ನು ವಿಭಜಿಸಿದುದರ ವಿರುದ್ಧ ಆರಂಭಿಸಿದ ಹೋರಾಟದ ಪ್ರಧಾನ ವಿಷಯ. ವಿದೇಶಿ ವಸ್ತುಗಳನ್ನು ಸಂಗ್ರಹಿಸಿ ಸಾರ್ವಜನಿಕವಾಗಿ ಸುಡುವುದು ಈ ಹೋರಾಟದ ಪ್ರಧಾನ ಉದ್ದೇಶವಾಗಿತ್ತು. ವಿದೇಶೀ ವಸ್ತುಗಳ ಬಹಿಷ್ಕಾರವು ಭಾರತದ ಕೈಗಾರಿಕೆಗಳಿಗೆ ನವಚೇತನವನ್ನು ನೀಡಿತು. ಧಾರಾಳ ಬಟ್ಟೆಯ ಮಿಲ್ಲು, ಸಾಬೂನು

ಕಾರ್ಖಾನೆ, ಬೆಂಕಿಪೆಟ್ಟಿಗೆ ಕಂಪೆನಿ, ರಾಷ್ಟ್ರೀಯ ಬ್ಯಾಂಕು, ವಿಮಾ ಕಂಪೆನಿ ಮುಂತಾದುವುಗಳು ಆರಂಭವಾದುವು. ಬಂಗಾಳದ ಬಂಗಾಳೀ ಕೆಮಿಕಲ್ ಸ್ಟೋರ್, ಮಹಾರಾಷ್ಟ್ರದ ಟಾಟಾ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, ತಮಿಳುನಾಡಿನ ಸ್ವದೇಶೀ ಸ್ಟೀಮ್ ನಾವಿಗೇಶನ್ ಕಂಪೆನಿ ಎಂಬಿವುಗಳು ಸ್ವದೇಶೀ ಹೋರಾಟದ ಕಾಲದಲ್ಲಿ ಆರಂಭವಾದುವು.



### ಹಡಗನ್ನು ಓಡಿಸಿದ ತಮಿಳ

ವಿ.ಒ. ಚಿದಂಬರಂ ಪಿಳ್ಳೆಯವರು ತಮಿಳುನಾಡಿನಲ್ಲಿ ಸ್ವದೇಶಿ ಆಂದೋಲನಕ್ಕೆ ನೇತೃತ್ವ ನೀಡಿದವರಾಗಿದ್ದಾರೆ. ತೂತುಕ್ಕುಡಿಯನ್ನು ಕೇಂದ್ರವಾಗಿಟ್ಟುಕೊಂಡು 1906ರಲ್ಲಿ ಸ್ವದೇಶಿ ಸ್ಟೀಂ ನಾವಿಗೇಶನ್ ಕಂಪೆನಿಯನ್ನು ಆರಂಭಿಸಿದರು. ಆದುದರಿಂದ ಅವರನ್ನು ಹಡಗನ್ನು ಓಡಿಸಿದ ತಮಿಳ ಎಂಬುದಾಗಿ ಕರೆಯುತ್ತಾರೆ. ಪ್ರಾದೇಶಿಕ ವ್ಯಾಪಾರಿಗಳಿಂದ ಸಂಗ್ರಹಿಸಿದ 6ಲಕ್ಷ ರೂಪಾಯಿಯನ್ನು ಬಂಡವಾಳವಾಗಿ ತೊಡಗಿಸಿ ಈ ಕಂಪೆನಿಯನ್ನು ಆರಂಭಿಸಿದರು.



K7UFQL

ಭಾರತದೆಡೆಗಿರುವ ಬ್ರಿಟಿಷರ ಉತ್ಪನ್ನಗಳ ಆಮದು ಆಕಾಲದಲ್ಲಿ ತುಂಬಾ ಕಡಿಮೆಯಾಯಿತು. ಸ್ತ್ರೀಯರು, ಕಾರ್ಮಿಕರು, ವಿದ್ಯಾರ್ಥಿಗಳು ಎಂಬಿವರ ಭಾಗವಹಿಸುವಿಕೆಯು ಈ ಹೋರಾಟದ ವಿಶೇಷತೆಯಾಗಿತ್ತು. ವಿದೇಶಿ ವಸ್ತ್ರಗಳನ್ನು ಒಗೆಯುವುದಿಲ್ಲವೆಂದು ಬಟ್ಟೆ ಒಗೆಯುವವನೂ ವಿದೇಶಿ ವಸ್ತುಗಳನ್ನು ಉಪಯೋಗಿಸಿ ಪೂಜೆ ಮಾಡುವುದಿಲ್ಲವೆಂದು ಪುರೋಹಿತರೂ ಪ್ರತಿಜ್ಞೆ ಕೈಗೊಂಡರು. ವಿದೇಶದಿಂದ ಬರುವ ಬಳೆಗಳನ್ನೂ ವಸ್ತ್ರಗಳನ್ನೂ ಬಹಿಷ್ಕರಿಸಿ ಸ್ತ್ರೀಯರೂ ಶಾಲೆಗಳನ್ನು ಬಹಿಷ್ಕರಿಸಿ ವಿದ್ಯಾರ್ಥಿಗಳೂ ಹೋರಾಟದಲ್ಲಿ ಪಾಲ್ಗೊಂಡರು.


ಸ್ವದೇಶಿ ಆಂದೋಲನದಿಂದ ಭಾರತದ ರಾಷ್ಟ್ರೀಯತೆ ಹೆಚ್ಚು ಬಲಗೊಂಡಿತು. ಆರಂಭಕಾಲದ ನೇತಾರರಿಗಿಂತ ಭಿನ್ನವಾಗಿ ಬಾಲಗಂಗಾಧರ ತಿಲಕರು, ಲಾಲಾಲಜಪತ್‌ರಾಯ್, ಬಿಪಿನ್‌ಚಂದ್ರಪಾಲ್ ಎಂಬಿವರು ಬ್ರಿಟಿಷರ ಆಡಳಿತವನ್ನು ಕೊನೆಗೊಳಿಸುವುದರ ಅಗತ್ಯವನ್ನು ಒತ್ತಿಹೇಳಿದರು. ಅವರು ಲಾಲ್-ಪಾಲ್-ಬಾಲ್ ಎಂಬುದಾಗಿ ತಿಳಿಯಲ್ಪಟ್ಟರು. 'ಸ್ವಾತಂತ್ರ್ಯವನ್ನು ಜನ್ಮ ಸಿದ್ದ ಹಕ್ಕು. ಅದನ್ನು ನಾನು ಪಡೆದೇ ತೀರುವೆನು', ಬ್ರಿಟೀಷ್ ಆಡಳಿತದಲ್ಲಿ ಆತಂಕದಲ್ಲಿದ್ದ ಭಾರತೀಯರ ಮನಸುಗಳನ್ನು ಏಕೀಕರಿಸಿ ರಾಷ್ಟ್ರೀಯ ಚಳುವಳಿಯನ್ನು ಬಲಪಡಿಸುವಲ್ಲಿ ತಿಲಕರು ನಿರ್ಣಾಯಕ ಪಾತ್ರವಹಿಸಿದರು. ಇದರಿಂದ ಇವರನ್ನು ಭಾರತದ ಅರಾಜಕತೆಯ ಪಿತಾಮಹ ಎಂದು ಬ್ರಿಟಿಷ್ ಪತ್ರಕರ್ತರ ಮತ್ತು ಚರಿತ್ರೆಗಾರನಾದ ವಾಲೆಂಟಿಯನ್ ಶಿರೋಲ್ ಅಭಿಪ್ರಾಯಪಟ್ಟರು.



ಬಿಪಿನ್‌ಚಂದ್ರಪಾಲ್



ಲಾಲಾಲಜಪತ್ ರಾಯ್



ಬಾಲಗಂಗಾಧರ ತಿಲಕರು


*ಬ್ರಿಟಿಷರ ಶೋಷಣೆ ಹಾಗೂ ಪ್ರತಿಭಟನೆಗಳು ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಬ್ಲೋಗ್ ತಯಾರಿಸಿರಿ.*



ಭಾರತದ ಸಂಪತ್ತನ್ನು ಕೊಳ್ಳೆಹೊಡೆದು ಭಾರತವನ್ನು ಬಡತನದೆಡೆಗೆ ಕೊಂಡೊಯ್ದ ಬ್ರಿಟಿಷ್ ಧೋರಣೆಗಳಿಗೆ ವಿರುದ್ಧವಾಗಿ ನಡೆದ ಹೋರಾಟಗಳು ಒಂದು ಸಂಘಟಿತ ರೂಪವನ್ನು ತಾಳಿದುದು ಹೇಗೆಂದು ನೋಡಿದಿರಲ್ಲವೇ. ಇಂತಹ ಪ್ರತಿಭಟನೆಗಳು ಭಾರತದ ರಾಷ್ಟ್ರೀಯತೆಯಾಗಿ ಮಾರ್ಪಟ್ಟವು. ವಿದೇಶೀ ವಸ್ತುಗಳ ಬಹಿಷ್ಕಾರ ಹಾಗೂ ಸ್ವದೇಶೀ ನಿರ್ಮಿತ ವಸ್ತುಗಳ ಉಪಯೋಗ ಬ್ರಿಟಿಷ್ ವಿರುದ್ಧ ಹೋರಾಟಗಳಲ್ಲಿನ ಹರಿತವಾದ ಆಯುಧವಾಗಿತ್ತು. ನಂತರದ ಕಾಲದಲ್ಲಿ ಗಾಂಧೀಜಿ ಈ ಹೋರಾಟವನ್ನು ಹೆಚ್ಚು ಶಕ್ತಿಯುತವೂ ಜನಪರವೂ ಆಗಿ ಮಾರ್ಪಡಿಸಿದರು.



**'ಬ್ರಿಟಿಷರ ಆರ್ಥಿಕ ಶೋಷಣೆಯು ಭಾರತದ ರಾಷ್ಟ್ರೀಯತೆಯ ಉಗಮಕ್ಕೆ ಹೇಗೆ ಕಾರಣವಾಯಿತು' ಈ ವಿಚಾರದಲ್ಲಿ ಸೆಮಿನಾರ್ ಏರ್ಪಡಿಸಿರಿ.**



## ಮೌಲ್ಯನಿರ್ಣಯ ಮಾಡುವ

- ಕಂದಾಯ ಧೋರಣೆಯು ಬ್ರಿಟಿಷರ ಕಾಲದಲ್ಲಿ ಭಾರತದ ಕೃಷಿರಂಗದ ಪತನಕ್ಕಿರುವ ಪ್ರಧಾನ ಕಾರಣವಾಗಿತ್ತು. ಶಾಶ್ವತ ಭೂಕಂದಾಯ ಸಂಪ್ರದಾಯದ ವಿಶೇಷತೆಗಳನ್ನು ವಿಶ್ಲೇಷಿಸಿ ಈ ಹೇಳಿಕೆಯನ್ನು ಪರಿಶೀಲಿಸಿರಿ.
- ವಿಭಾಗ 'ಎ'ಯಲ್ಲಿರುವವುಗಳಿಗೆ ಸರಿಹೊಂದುವವುಗಳನ್ನು ವಿಭಾಗ 'ಬಿ' ಯಿಂದ ಆರಿಸಿ ಬರೆಯಿರಿ.

| ಎ | ಬಿ |
|---|---|
| ◆ ಸಂತಾಳರ ದಂಗೆ | ◆ ಮಲಬಾರ್ |
| ◆ ಮಾಪಿಳ್ಳೆ ದಂಗೆಗಳು | ◆ ದಾದಾಬಾಯಿ ನವರೋಜಿ |
| ◆ ಕುರಿಚಿಯರ ದಂಗೆ | ◆ ರಾಜ್‌ಮಹಲ್ ಗುಡ್ಡೆಗಳು |
| ◆ ಸೋರಿಕೆಯ ಸಿದ್ಧಾಂತ | ◆ ವಯನಾಡು |


- ಬ್ರಿಟಿಷರ ಕಾಲದಲ್ಲಿ ಕೃಷಿಯ ವಾಣಿಜ್ಯೀಕರಣಕ್ಕೆ ಕಾರಣವಾದ ಪರಿಸ್ಥಿತಿ ಯಾವುದಾಗಿತ್ತು?
- ನೀಲ ಕೃಷಿಕರ ಪ್ರತಿಭಟನೆಯ ಕಾರಣಗಳನ್ನು ವಿಶ್ಲೇಷಿಸಿರಿ.
- ಕುರುಚಿಯರ ದಂಗೆಯು ಬ್ರಿಟಿಷ್ ಶೋಷಣೆಗೆ ವಿರುದ್ಧವಾಗಿ ನಡೆದ ಬುಡಕಟ್ಟು ಜನತೆಯ ಪ್ರತಿಭಟನೆಯಾಗಿತ್ತು. ಕುರುಚಿಯರನ್ನು ದಂಗೆಯೆಡೆಗೆ ಕೊಂಡೊಯ್ದ ಪರಿಸ್ಥಿತಿಯನ್ನು ವಿವರಿಸಿರಿ.
- ಭಾರತದ ಬಟ್ಟೆ ಕೈಗಾರಿಕೆಗಳ ಪತನಕ್ಕಿರುವ ಕಾರಣಗಳು ಯಾವುವು?
- ಭಾರತದಲ್ಲಿನ ಬರಗಾಲವು ಬ್ರಿಟಿಷ್ ಆಡಳಿತದ ಸೃಷ್ಟಿಯಾಗಿದೆ ಎಂಬುದನ್ನು ನೀವು ಒಪ್ಪುವಿರಾ? ಯಾಕೆ?
- ಭಾರತದಲ್ಲಿನ ಸಾಮಾನ್ಯ ಜನರಲ್ಲಿ ರಾಷ್ಟ್ರೀಯ ಚಿಂತನೆಯನ್ನು ಪ್ರಚಾರ ಮಾಡುವುದರಲ್ಲಿ ದಾದಾಬಾಯಿ ನವರೋಜಿಯವರ ಸೋರಿಕೆಯ ಸಿದ್ಧಾಂತವು ವಹಿಸಿದ ಪಾತ್ರವನ್ನು ಮೌಲ್ಯಮಾಪನ ಮಾಡಿರಿ.
- 1857ರ ಹೋರಾಟಕ್ಕಿರುವ ವಿವಿಧ ಕಾರಣಗಳನ್ನು ವಿಶ್ಲೇಷಿಸಿರಿ.
- ಭಾರತದಿಂದ ಬ್ರಿಟನಿನ ಕಡೆಗಿರುವ ಸಂಪತ್ತಿನ ಸೋರಿಕೆಯ ವಿವಿಧ ಮೂಲಗಳು ಯಾವುವು?
- ಸ್ವದೇಶೀ ಹೋರಾಟವು ಬಹುಜನರ ಹೋರಾಟವಾಗಿತ್ತು ಎಂಬುದಾಗಿ ನೀವು ಭಾವಿಸುವಿರಾ? ಯಾಕೆ?

## ಮುಂದುವರಿದ ಚಟುವಟಿಕೆಗಳು

- ಭಾರತದ ವಿವಿಧ ಭಾಗಗಳಲ್ಲಿ ನಡೆದ ಕೃಷಿಕರ ಮತ್ತು ಬುಡಕಟ್ಟು ವರ್ಗಗಳು ನಡೆಸಿದ ದಂಗೆಗಳ ಕುರಿತಾದ ವಾರ್ತೆಗಳನ್ನು ಹಾಗೂ ಚಿತ್ರಗಳನ್ನು ಸಂಗ್ರಹಿಸಿ ಒಂದು ಆಲ್ಬಂ ತಯಾರಿಸಿರಿ.
- 1857ರ ಭಾರತದ ಪ್ರಥಮ ಸ್ವಾತಂತ್ರ್ಯ ಹೋರಾಟದ ಕೇಂದ್ರಗಳನ್ನು ಹಾಗೂ ನೇತೃತ್ವ ನೀಡಿದವರನ್ನು ಒಳಗೊಂಡ ಒಂದು ಸಂಚಿಕೆಯನ್ನು ತಯಾರಿಸಿರಿ.

ಅಧ್ಯಾಯ

05



# ಸಂಸ್ಕೃತಿ ಹಾಗೂ ರಾಷ್ಟ್ರೀಯತೆ

"ಭಾರತದ ವಿವಿಧತೆಯು ಮಹತ್ತರವಾದುದಾಗಿದೆ. ಅದು ಪ್ರತ್ಯಕ್ಷವಾಗಿ ನಮ್ಮೆದುರಿಗಿದೆ. ಅದು ಎಲ್ಲೆಡೆ ಎದ್ದು ಕಾಣುತ್ತಿದೆ. ನೋಡಲು ಯಾರಿಗೂ ನಿಷೇಧವಿಲ್ಲ...ರೂಪದಲ್ಲೂ ಆಕೃತಿಯಲ್ಲೂ ಆಹಾರ ಕ್ರಮದಲ್ಲೂ ವಸ್ತ್ರಧಾರಣೆಯಲ್ಲೂ ಅವರು ಭಿನ್ನರಾಗಿದ್ದಾರೆ. ಇನ್ನು ಭಾಷೆಯ ವಿಚಾರ ಹೇಳಬೇಕಾಗಿಲ್ಲವಲ್ಲವೆ.......ಬಂಗಾಳಿಯರು, ಮಹಾರಾಷ್ಟ್ರದವರು, ಗುಜರಾತಿಗಳು, ಪಂಜಾಬಿಗಳು, ಅಸ್ಸಾಮೀಯರು, ಕರ್ನಾಟಕದವರು, ಮಲಯಾಳಿಗಳು, ಪಠಾಣರು, ಕಾಶ್ಮೀರಿಗಳು, ರಜಪೂತರು, ಹಿಂದುಸ್ತಾನಿ ಭಾಷೆಯವರಾದ ಹೆಚ್ಚಿನ ಮಧ್ಯಭಾರತದವರು-ಇವರೆಲ್ಲರೂ ಅನೇಕ ಶತಮಾನಗಳಿಂದಲೂ ತಮ್ಮ ವಿಶೇಷವಾದ ವಿಭಿನ್ನ ಮತಗಳನ್ನು ಬೆಳೆಸಿ ಪೋಷಿಸಿರುವರು. ಹಲವು ಕತೆಗಳಲ್ಲಿಯೂ ದಾಖಲೆಗಳಲ್ಲಿಯೂ ಹೇಳಿರುವ ಅದೇ ಗುಣದೋಷಗಳು ಇಂದಿಗೂ ಅವರಲ್ಲಿವೆ. ಆದರೂ ಈ ಯುಗಯುಗಾಂತರಗಳಲ್ಲಿ ಅವರು ರಾಷ್ಟ್ರೀಯವಾಗಿ ಒಂದೇ ಪರಂಪರೆಯಲ್ಲಿ ಮಾನಸಿಕವಾಗಿಯೂ ಧಾರ್ಮಿಕವಾಗಿಯೂ ಉಳಿದರು. ಸತ್ವಪೂರ್ಣವಾದ ಯಾವುದೋ ಒಂದು ಚೈತನ್ಯವೂ ಈ ಪರಂಪರೆಯಲ್ಲಿತ್ತು. ಜೀವನವನ್ನು ಜೀವನದ ಸಮಸ್ಯೆಗಳಿಗೆ ಸಂಬಂಧಿಸಿ ಕೈಗೊಂಡ ನಿರ್ಧಾರಗಳಲ್ಲೂ ಜೀವನರೀತಿಗಳಲ್ಲೂ ಅದು ಪ್ರತಿಫಲಿಸಲ್ಪಟ್ಟಿತು. ನನಗೆ ಸಂಬಂಧಿಸಿದಂತೆ ಭಾರತದ ಏಕತೆಯು ಇನ್ನು ಮುಂದೆ ಬುದ್ಧಿವಂತಿಕೆಯ ಸಂಕಲ್ಪ ಮಾತ್ರವಲ್ಲ, ನಾನು ಆವೇಶದಿಂದ ತಲೆಬಾಗುವಂತೆ ಮಾಡಿದ ಭಾವನಾತ್ಮಕವಾದ ಒಂದು ಅನುಭವವಾಗಿದೆ. ಆ ಏಕತೆಯು ಯಾವುದೇ ಒಂದು ರಾಷ್ಟ್ರೀಯ ವಿಭಜನೆಗೂ ಆಸಕ್ತಿಗೂ ಮಹಾನಾಶಕ್ಕೂ ಶರಣಾಗಲು ಸಾಧ್ಯವಾಗದ ರೀತಿಯಲ್ಲಿ ಬಲಿಷ್ಠವಾಗಿ ಬೆಸೆಯಲ್ಪಟ್ಟಿದೆ."

ಇಂಡ್ಯಯೆ ಕಂಡೆತ್ತಲ್-ಜವಾಹರ್‌ಲಾಲ್ ನೆಹರು
ಮಲಯಾಳ ಅನುವಾದ: ಸಿ.ಎಚ್. ಕುಂಞಪ್ಪ.

ಭಾರತದಲ್ಲಿ ನೆಲೆನಿಂತಿರುವ ವಿವಿಧತೆಯಲ್ಲಿನ ಏಕತೆಯ ಕುರಿತು ನೆಹರೂರವರ ಈ ಮೇಲಿನ ಸಾಲುಗಳು ತಿಳಿಸುತ್ತವೆ. ಈ ಏಕತೆಯು ಭಾರತದ ರಾಷ್ಟ್ರೀಯ ಏಕತೆಯ ಅಡಿಪಾಯವಾಗಿದೆ. ಭಾರತದ ರಾಷ್ಟ್ರೀಯತೆಯು ರೂಪುಗೊಳ್ಳಲು ಹಲವಾರು ಘಟಕಗಳು ಕಾರಣವಾಗಿವೆ. ಜಾತಿ-ಮತ-

ವರ್ಗ - ಪ್ರಾದೇಶಿಕ ವ್ಯತ್ಯಾಸಗಳಿಗೆ ಮಿಗಿಲಾಗಿ ಒಂದು ರಾಷ್ಟ್ರದ ಜನರ ಭಾವನಾತ್ಮಕ ಏಕತೆಯೇ ರಾಷ್ಟ್ರೀಯತೆಯಾಗಿದೆ. ವಿದೇಶೀಯರ ಆಡಳಿತವು ತಮ್ಮನ್ನು ಹೇಗೆಲ್ಲ ಶೋಷಣೆಗೀಡುಮಾಡುತ್ತದೆ ಎಂಬ ತಿಳುವಳಿಕೆಯು ರಾಷ್ಟ್ರೀಯತೆಯ ಬೆಳವಣಿಗೆಗೆ ಕಾರಣವಾಯಿತು. ಅಲ್ಲದೆ ರಾಷ್ಟ್ರೀಯ ಚಳುವಳಿಗೆ ಹೆಚ್ಚಿನ ಬಲವನ್ನು ನೀಡಿತು. ಬ್ರಿಟಿಷರು ಇಲ್ಲಿ ನಡೆಸಿದ ಆರ್ಥಿಕ ಶೋಷಣೆಯು ಭಾರತೀಯರಲ್ಲಿ ಹೇಗೆ ರಾಷ್ಟ್ರೀಯ ಭಾವನೆಯನ್ನು ಬೆಳೆಸಿತು ಎಂಬುದನ್ನು ನಾವು ಹಿಂದಿನ ಪಾಠದಿಂದ ತಿಳಿದುಕೊಂಡೆವು. ಅದರೊಂದಿಗೆ ಸಾಮಾಜಿಕ-ಸಾಂಸ್ಕೃತಿಕ ಕ್ಷೇತ್ರಗಳಲ್ಲುಂಟಾದ ಹಲವಾರು ಬದಲಾವಣೆಗಳು ಭಾರತೀಯರ ರಾಷ್ಟ್ರೀಯ ಪ್ರಜ್ಞೆಯನ್ನು ಬಲಪಡಿಸಿತು. ಭಾರತದ ರಾಷ್ಟ್ರೀಯತೆಯನ್ನು ಹುಟ್ಟುಹಾಕಿದ ವಿವಿಧ ಸಾಮಾಜಿಕ - ಸಾಂಸ್ಕೃತಿಕ ಘಟಕಗಳನ್ನು ನಾವು ಈ ಅಧ್ಯಾಯದಲ್ಲಿ ಚರ್ಚಿಸಲಿದ್ದೇವೆ.

19ನೇ ಶತಮಾನದಲ್ಲಿ ಭಾರತದಲ್ಲಿ ಸಾಂಸ್ಕೃತಿಕ ಕ್ಷೇತ್ರದಲ್ಲಿ ಹಾಗೂ ಆಶಯಗಳಲ್ಲಿ ಎರಡು ರೀತಿಯ ಪ್ರತಿಭಟನೆಗಳು ಬೆಳೆದುಬಂದುವು.

1. ಭಾರತೀಯ ಸಮಾಜದಲ್ಲಿ ನೆಲೆನಿಂತಿದ್ದ ಅಸಮಾನತೆಗಳು, ಕೆಡುಕುಗಳು, ಹಾಗೂ ಹಕ್ಕುಗಳ ನಿಷೇಧಗಳಿಗೆ ಎದುರಾಗಿ.
2. ಭಾರತದಲ್ಲಿ ಆಧಿಪತ್ಯ ಸ್ಥಾಪಿಸಿದ್ದ ಸಾಮ್ರಾಜ್ಯಶಾಹಿ ಶೋಷಣೆಗೆ ಎದುರಾಗಿ


ಭಾರತೀಯರ ಸಾಂಸ್ಕೃತಿಕವೂ ಆಶಯಪರವೂ ಆದ ಪಾಲ್ಗೊಳ್ಳುವಿಕೆ ಹಾಗೂ ಪ್ರತಿಭಟನೆಗಳು ಸಾಮಾಜಿಕ ಜೀವನ, ದಿನಪತ್ರಿಕೆಗಳು, ವಿದ್ಯಾಭ್ಯಾಸ, ಸಾಹಿತ್ಯ, ಕಲೆ ಮೊದಲಾದ ವಿವಿಧ ವಲಯಗಳಲ್ಲಿ ಪ್ರಭಾವ ಬೀರಿದವು. ಈ ವಲಯಗಳಲ್ಲುಂಟಾದ ಬದಲಾವಣೆಗಳು ಭಾರತದ ರಾಷ್ಟ್ರೀಯ ಏಕತೆಗೆ ದಾರಿಮಾಡಿದುವು.

## ವಸಾಹತುಶಾಹಿ ಆಡಳಿತ ಹಾಗೂ ರಾಷ್ಟ್ರೀಯತೆ

ತಮ್ಮ ಆಡಳಿತವನ್ನು ಬಲಪಡಿಸಲು ಭಾರತೀಯರ ಜೀವನಕ್ರಮ ಹಾಗೂ ಸಂಸ್ಕೃತಿಯನ್ನು ಆಳವಾಗಿ ಅಧ್ಯಯನ ಮಾಡಬೇಕಾದುದು ಅತೀ ಅಗತ್ಯ ಎಂದು ಬ್ರಿಟಿಷರು ಮನಗಂಡರು. ಸಂಸ್ಕೃತ ಹಾಗೂ ಪರ್ಷಿಯಾ ಭಾಷೆಗಳಲ್ಲಿ ರಚಿಸಲ್ಪಟ್ಟ ಕೃತಿಗಳನ್ನು ಓದಿಯೂ ಅನುವಾದಗೊಳಿಸಿಯೂ ಅವರು ಭಾರತದ ಕುರಿತು ಮಾಹಿತಿಗಳನ್ನು ತಿಳಿದುಕೊಂಡರು. ಹೆಚ್ಚಿನ ಅಧ್ಯಯನಕ್ಕಾಗಿ ಬ್ರಿಟಿಷ್ ಅಧಿಕಾರಿಗಳಿಗೆ ತರಬೇತಿ ನೀಡಲು ಹಾಗೂ ಭಾರತದ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಮಧ್ಯಪ್ರವೇಶಿಸಲು ಅವರು ಕೆಲವು ಸಂಸ್ಥೆಗಳನ್ನು ಸ್ಥಾಪಿಸಿದರು. ಅವುಗಳಲ್ಲಿ ಕೆಲವನ್ನು ಪರಿಚಯಿಸಿಕೊಳ್ಳೋಣ.

| ಸಂಸ್ಥೆಗಳು | ಸ್ಥಾಪಕರು |
|---|---|
| ♦ ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್ | ♦ ವಿಲಿಯಂ ಜೋನ್ಸ್ |
| ♦ ಕಲ್ಕತ್ತ ಮದ್ರಸ | ♦ ವಾರನ್ ಹೇಸ್ಟಿಂಗ್ಸ್ |
| ♦ ಬನಾರಸ್ ಸಂಸ್ಕೃತ ಕಾಲೇಜು | ♦ ಜೋನಾಥನ್ ಡಂಕನ್ |

ಆದರೆ ಆ ಮೂಲಕ ಮಾತ್ರ ಭಾರತವನ್ನು ಸಂಪೂರ್ಣವಾಗಿ ತಿಳಿಯಲು ಸಾಧ್ಯವಿಲ್ಲವೆಂದು ಅವರು ಅರಿತರು. ವ್ಯಾಪಾರದ ಅಭಿವೃದ್ಧಿಗಾಗಿ ಭಾರತದ ಸಾಮಾಜಿಕ ಕ್ಷೇತ್ರದಲ್ಲಿ ಬ್ರಿಟನ್ ಇನ್ನಷ್ಟು ಹಸ್ತಕ್ಷೇಪ ನಡೆಸಬೇಕೆಂದು ಸ್ವತಂತ್ರ ವ್ಯಾಪಾರಕ್ಕಾಗಿ ವಾದಿಸುತ್ತಿದ್ದ ಚಿಂತಕರು ಅಭಿಪ್ರಾಯಪಟ್ಟರು. ಜನರ ಬೆಂಬಲವಿಲ್ಲದೆ ಪ್ರಬಲವಾದ ಸುಧಾರಣೆಗಳನ್ನು ಭಾರತದಲ್ಲಿ ಜಾರಿಗೊಳಿಸಲು ಸಾಧ್ಯವಿಲ್ಲವೆಂದು ಬ್ರಿಟಿಷರು ಅರಿತುಕೊಂಡರು. ಅನಂತರ ಅವರು ಒಂದು ವಿಭಾಗದ ಜನರ ಬೆಂಬಲವನ್ನು ಗಳಿಸಲು ಪ್ರಯತ್ನಿಸಿದರು. ಅದಕ್ಕಾಗಿ ಅವರು ಭಾರತದಲ್ಲಿ ಇಂಗ್ಲೀಷ್ ವಿದ್ಯಾಭ್ಯಾಸವನ್ನು ಜಾರಿಗೊಳಿಸಿದರು.


ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್- ಒಂದು ಚಿತ್ರ

> ರಕ್ತದಲ್ಲೂ ಬಣ್ಣದಲ್ಲೂ ಭಾರತೀಯರಾಗಿದ್ದು ಅಭಿರುಚಿಯಲ್ಲೂ ಅಭಿಪ್ರಾಯದಲ್ಲೂ ಧಾರ್ಮಿಕತೆಯಲ್ಲೂ ಬುದ್ಧಿಯಲ್ಲೂ ಇಂಗ್ಲೀಷರನ್ನು ಹೋಲುವ ವರ್ಗವನ್ನು ಸೃಷ್ಟಿಸುವುದೇ
> - ಮೆಕಾಲೆ ಪ್ರಭು

ಇದು 1835ರಲ್ಲಿ ಭಾರತದಲ್ಲಿ ಇಂಗ್ಲೀಷ್ ವಿದ್ಯಾಭ್ಯಾಸವನ್ನು ಜಾರಿಗೊಳಿಸುವ ಸಂದರ್ಭದಲ್ಲಿ ಮೆಕಾಲೆಯು ಹೇಳಿದ ಮಾತುಗಳಾಗಿವೆ. ಇದರಿಂದ ಭಾರತದಲ್ಲಿ ಇಂಗ್ಲೀಷ್ ವಿದ್ಯಾಭ್ಯಾಸವನ್ನು ಜಾರಿಗೊಳಿಸಿದುದರ ಉದ್ದೇಶಗಳು ಯಾವುವೆಲ್ಲ ಎಂದು ಕಂಡುಹಿಡಿಯಬಹುದೆ?

- ಇಂಗ್ಲೀಷರ ಜೀವನಕ್ರಮದಲ್ಲಿ ಆಸಕ್ತಿಯುಳ್ಳ ಒಂದು ತಲೆಮಾರನ್ನು ಸೃಷ್ಟಿಸುವುದು.
- 
- 

19ನೇ ಶತಮಾನದಲ್ಲಿ ಇಂಗ್ಲೀಷ್ ಸಂಸ್ಕೃತಿಯೂ ಆಶಯಗಳೂ ಭಾರತೀಯ ಸಮಾಜಕ್ಕೆ ನುಸುಳಿಕೊಂಡಾಗ ಅವುಗಳನ್ನು ನಿಯಂತ್ರಿಸ ಬೇಕಾದುದು ಅನಿವಾರ್ಯ ಎಂದು ಒಂದು ವಿಭಾಗದ ಭಾರತೀಯರು ನಿರ್ಧರಿಸಿದರು. ಈ ರೀತಿ ಚಿಂತಿಸಿದವರಲ್ಲಿ ಹೆಚ್ಚಿನವರೂ ಇಂಗ್ಲೀಷ್ ವಿದ್ಯಾಭ್ಯಾಸವನ್ನು ಪಡೆದವರೂ ಆ ಮೂಲಕ ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಉಚಿತಾನುಚಿತ ಚಿಂತನೆ, ಸಮಾನ ನ್ಯಾಯ, ವೈಜ್ಞಾನಿಕ ಪ್ರಜ್ಞೆ, ಸಮಾಜವಾದ, ನಾಗರಿಕ ಹಕ್ಕುಗಳು ಎಂಬಿವುಗಳ ಕುರಿತು ತಿಳುವಳಿಕೆ ಹೊಂದಿದವರೂ ಆಗಿದ್ದರು. ಅವರು ಭಾರತದಲ್ಲಿ ನೆಲೆನಿಂತಿದ್ದ ಸಾಮಾಜಿಕ ಆಚಾರಗಳು ಹಾಗೂ ಅನುಷ್ಠಾನಗಳನ್ನು ಪರಿಷ್ಕರಿಸಲು ಮತ್ತು ಅವುಗಳ ಸಹಾಯದಿಂದ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವವನ್ನು ನಿಯಂತ್ರಿಸಲು ಪ್ರಯತ್ನಿಸಿದರು. ಅದಕ್ಕಾಗಿ ಅವರು ಭಾರತೀಯ ಸಮಾಜ, ಭಾಷೆ, ಕಲೆ, ಸಾಹಿತ್ಯ ಮೊದಲಾದುವುಗಳನ್ನು ನವೀಕರಿಸಿದರು. ಅದು ಭಾರತೀಯ ಸಮಾಜದಲ್ಲಿ ನೆಲೆನಿಂತಿದ್ದ ಅಸಮಾನತೆ ಹಾಗೂ ಹಕ್ಕುಗಳ ನಿಷೇಧಗಳ ವಿರುದ್ಧ ಪ್ರತಿಭಟಿಸಲು ಮತ್ತು ಆ ಮೂಲಕ ಭಾರತೀಯರಲ್ಲಿ ನಾವೆಲ್ಲ ಒಂದೇ ಎಂಬ ಭಾವನೆಯನ್ನು ಮೂಡಿಸಲು ಸಹಾಯಕವಾಯಿತು.

### ವೈಜ್ಞಾನಿಕ ಸಂಸ್ಥೆಗಳು

19ನೇ ಶತಮಾನದಲ್ಲಿ ಭಾರತದಲ್ಲಿ ವೈಜ್ಞಾನಿಕ ಗ್ರಂಥಗಳನ್ನು ಅನುವಾದ ಮಾಡಲೂ ವೈಜ್ಞಾನಿಕ ಪ್ರಜ್ಞೆಯನ್ನು ಪ್ರಚಾರ ಮಾಡಲೂ ಚರ್ಚೆನಡೆಸಲೂ ಹಲವಾರು ವೈಜ್ಞಾನಿಕ ಸಂಸ್ಥೆಗಳನ್ನು ಭಾರತದಲ್ಲಿ ಸ್ಥಾಪಿಸಲಾಯಿತು.

- ಯುರೋಪಿನ ವೈಜ್ಞಾನಿಕ ಗ್ರಂಥಗಳನ್ನು ಅನುವಾದಗೊಳಿಸಲಿರುವ ಸೊಸೈಟಿ - ಕಲ್ಕತ್ತ - 1825
- ಸಾರ್ವಜನಿಕ ಮಾಹಿತಿಗಳನ್ನು ಗಳಿಸಿಕೊಳ್ಳಲಿರುವ ಸೊಸೈಟಿ -ಕಲ್ಕತ್ತ- 1838
- ಮಹೇಂದ್ರಲಾಲ್ ಸರಕಾರವು ಸ್ಥಾಪಿಸಿದ ಇಂಡಿಯನ್ ಅಸೋಸಿಯೇಶನ್ - ಬಂಗಾಳ-1876
- ಬನಾರಸ್ ಸಂವಾದ ಕ್ಲಬ್ - ಬನಾರಸ್ - 1861
- ಸರ್ ಸಯ್ಯದ್ ಅಹಮದ್ ಖಾನ್ ಸ್ಥಾಪಿಸಿದ ಅಲೀಗಢ ಸೈಂಟಿಫಿಕ್ ಸೊಸೈಟಿ- ಆಲಿಗಡ್-1864
- ಬಿಹಾರ ಸೈಂಟಿಫಿಕ್ ಸೊಸೈಟಿ - ಬಿಹಾರ- 1868

ಬ್ರಿಟಿಷರ ವಸಾಹತುಶಾಹಿ ಆಡಳಿತವು ಭಾರತದ ರಾಷ್ಟ್ರೀಯತೆಯ ಬೆಳವಣಿಗೆಗೆ ಕಾರಣವಾಯಿತೆ? ಅವಲೋಕಿಸಿರಿ.

## ಸಾಮಾಜಿಕ ಸುಧಾರಣೆ

ಭಾರತೀಯರಲ್ಲಿ ಬೆಳೆದು ಬಂದ ಸ್ವಾತಂತ್ರ್ಯದ ಚಿಂತನೆ, ಆಧುನೀಕರಣದಲ್ಲಿ ಆಸಕ್ತಿ, ಉಚಿತಾನುಚಿತ ಚಿಂತನೆಗಳು 19ನೇ ಶತಮಾನದಲ್ಲಿ ವಿವಿಧ ಸಾಮಾಜಿಕ ಸುಧಾರಣಾ ಸಂಘಟನೆಗಳ ಆವಿರ್ಭಾವಕ್ಕೆ ದಾರಿಮಾಡಿಕೊಟ್ಟವು. ಭಾರತದ ಸಾಮಾಜಿಕ ಸುಧಾರಣಾ ಸಂಘಟನೆಗಳಿಗೆ ಎರಡು ರೀತಿಯ ಉದ್ದೇಶಗಳಿದ್ದುವು.


- ಭಾರತೀಯ ಸಮಾಜದಲ್ಲಿ ನೆಲೆನಿಂತಿದ್ದ ವಿವಿಧ ಅನಾಚಾರಗಳನ್ನು ವಿರೋಧಿಸುವುದು.
- ಭೇದಭಾವವಿಲ್ಲದೆ ಎಲ್ಲರೂ ದಾರಿಯಲ್ಲಿ ನಡೆಯಲು, ಉಡುಪು ಧರಿಸಲು, ವಿದ್ಯಾಭ್ಯಾಸವನ್ನು ಪಡೆಯಲು ಅಗತ್ಯವಾದ ನಾಗರಿಕ ಹಕ್ಕುಗಳನ್ನು ಪಡೆಯುವುದು.

ಅಂದಿನ ಭಾರತದ ಸಾಮಾಜಿಕ-ಆರ್ಥಿಕ ರಚನೆಯು ಈ ಉದ್ದೇಶಗಳನ್ನು ಹೊಂದಲು ಯೋಗ್ಯವಾಗಿರಲಿಲ್ಲ. ಆದುದರಿಂದ ಭಾರತೀಯ ಸಮಾಜದಲ್ಲಿ ಆಮೂಲಾಗ್ರ ಬದಲಾವಣೆಯನ್ನು ಮಾಡಬೇಕೆಂಬುದು ಅಂದಿನ ಸಮಾಜ ಸುಧಾರಕರ ಗುರಿಯಾಗಿತ್ತು. ಅದಕ್ಕಾಗಿ ಅವರು ಮುಂದಿರಿಸಿದ ಬೇಡಿಕೆಗಳನ್ನು ಕೆಳಗೆ ಕೊಡಲಾಗಿದೆ.

- ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಬೇಕು.
- ಪ್ರತಿಯೊಬ್ಬರ ಹಕ್ಕುಗಳನ್ನು ಸಂರಕ್ಷಿಸಬೇಕು.
- ಮಹಿಳೆಯರ ಮೇಲಿನ ಭೇದಭಾವಗಳನ್ನು ಕೊನೆಗಾಣಿಸಬೇಕು.
- ಪ್ರತಿಯೊಬ್ಬರಿಗೂ ಶಿಕ್ಷಣವನ್ನು ನೀಡಬೇಕು.
- ವಿಧವಾ ವಿವಾಹವನ್ನು ಜಾರಿಗೊಳಿಸಬೇಕು.
- ಬಾಲ್ಯವಿವಾಹ, ಪುರೋಹಿತ ಮೇಧಾವಿತ್ವ ಎಂಬಿವುಗಳನ್ನು ಕೊನೆಗೊಳಿಸಬೇಕು.



ರಾಜಾರಾಮ್ ಮೋಹನ್ ರಾಯ್



ಈಶ್ವರಚಂದ್ರ ವಿದ್ಯಾಸಾಗರ್

ರಾಜಾರಾಮ್ ಮೋಹನ್‌ರಾಯ್‌ರವರು ಈ ರೀತಿಯಲ್ಲಿ ಭಾರತೀಯ ಸಮಾಜವನ್ನು ಆಧುನೀಕರಣಗೊಳಿಸಲು ವಾದಿಸಿದ ಮೊತ್ತಮೊದಲ ವ್ಯಕ್ತಿ ಆಗಿದ್ದಾರೆ. ಜಾತಿವ್ಯವಸ್ಥೆ ಹಾಗೂ ಸತಿಸಹಗಮನ ಎಂಬ ಅನಾಚಾರವನ್ನು ಬಲವಾಗಿ ವಿರೋಧಿಸಿದ ಇವರು ಬಂಗಾಳದಲ್ಲಿ 'ಬ್ರಹ್ಮಸಮಾಜ' ಎಂಬ ಸಂಘಟನೆಯನ್ನು ಆರಂಭಿಸಿದರು. ವಿವಿಧ ಜಾತಿಗಳಾಗಿ ವಿಭಜಿಸಲ್ಪಟ್ಟಿದ್ದ ಅಂದಿನ ಭಾರತೀಯ ಸಮಾಜದ ಸ್ಥಾನದಲ್ಲಿ ಏಕೈಕ ಭಾರತೀಯ ಸಮಾಜ ಎಂಬ ಆಶಯವನ್ನು ಪ್ರಚಾರಗೊಳಿಸಲು ಅವರು ಶ್ರಮಿಸಿದರು. ಇದು ಭಾರತೀಯರಲ್ಲಿ ದೇಶಪ್ರೇಮ ಬೆಳೆಯಲು ಕಾರಣವಾಯಿತು. ಹೀಗೆ ರಾಷ್ಟ್ರದ ಏಕತೆಯೂ ಕೂಡ ಸಮಾಜ ಸುಧಾರಣೆಯ ಉದ್ದೇಶವಾಗಿ ಬದಲಾಯಿತು. ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನವನ್ನು ಹೆಚ್ಚಿಸಲು ಅವರಿಗೆ ಆಸ್ತಿಯಲ್ಲಿ ಹಕ್ಕನ್ನು ನೀಡಬೇಕೆಂದು ಅವರು ಕರೆನೀಡಿದರು. ಇದರ ನಂತರ ಭಾರತದ ವಿವಿಧ ಭಾಗಗಳಲ್ಲಿ ಹಲವಾರು ಮಂದಿ ಸಮಾಜ ಸುಧಾರಣೆಗಾಗಿ ಪ್ರಯತ್ನಿಸಿದರು. ಬಂಗಾಳದಲ್ಲಿ ಈಶ್ವರಚಂದ್ರ ವಿದ್ಯಾಸಾಗರರು ವಿಧವೆಯರ ಪುನರ್ವಿವಾಹಕ್ಕಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಅವರ ಪರಿಶ್ರಮದ ಫಲವಾಗಿ 1856ರಲ್ಲಿ ಬ್ರಿಟಿಷ್ ಸರಕಾರವು ಹಿಂದೂ ವಿಧವಾ ಪುನರ್ವಿವಾಹ ಕಾಯಿದೆಯನ್ನು ಜಾರಿಗೊಳಿಸಿತು. ಮಹಿಳೆಯರ

ವಿದ್ಯಾಭ್ಯಾಸ ಪ್ರಗತಿಗಾಗಿ ಅವರು ವಿದ್ಯಾಲಯಗಳನ್ನು ಸ್ಥಾಪಿಸಿದರು. ಮಹಿಳಾ ಸಬಲೀಕರಣಕ್ಕಾಗಿ ಕೆಲವು ಸುಧಾರಣಾ ಸಂಘಟನೆಗಳು ಆ ಕಾಲದಲ್ಲಿ ರೂಪುಗೊಂಡವು. ವಿಧವೆಯರಿಗೆ ಶಿಕ್ಷಣವನ್ನು ನೀಡಲು ಪಂಡಿತ್ ರಮಾಬಾಯಿಯು ಬಾಂಬೆಯಲ್ಲಿ ಸ್ಥಾಪಿಸಿದ ಶಾರದಾ ಸದನವು ಇವುಗಳಲ್ಲಿ ಪ್ರಮುಖವಾದುದಾಗಿದೆ. ಆ ಕಾಲದಲ್ಲಿ ರೂಪುಗೊಂಡ ವಿವಿಧ ಸುಧಾರಣಾ ಸಂಘಟನೆಗಳು ಹಾಗೂ ಅದಕ್ಕೆ ನೇತೃತ್ವವನ್ನು ವಹಿಸಿದವರ ಕುರಿತು ಕೆಳಗಿನ ತಖ್ತೆಯಲ್ಲಿ ಕೊಡಲಾಗಿದೆ.


ಪಂಡಿತ್ ರಮಾಬಾಯಿ


| ಸುಧಾರಣಾ ಸಂಘಟನೆಗಳು | ಸುಧಾರಕರು | ಆಶಯಗಳು |
|---|---|---|
| ♦ ಆರ್ಯಸಮಾಜ | ♦ ಸ್ವಾಮಿ ದಯಾನಂದ ಸರಸ್ವತಿ | ♦ ವಿಗ್ರಹಾರಾಧನೆ, ಬಾಲ್ಯವಿವಾಹ ಎಂಬಿವುಗಳನ್ನು ವಿರೋಧಿಸಿತು. |
| ♦ ರಾಮಕೃಷ್ಣ ಮಿಶನ್ | ♦ ಸ್ವಾಮಿ ವಿವೇಕಾನಂದ | ♦ ಜಾತಿ ವ್ಯವಸ್ಥೆ, ಅನಾಚಾರ ಎಂಬಿವುಗಳನ್ನು ವಿರೋಧಿಸಿತು. ಸ್ವಾತಂತ್ರ್ಯ, ಸಮತ್ವ, ಸ್ವತಂತ್ರ ಚಿಂತನೆ ಎಂಬಿವುಗಳನ್ನು ಪ್ರೋತ್ಸಾಹಿಸಿತು. |
| ♦ ಅಲೀಗಢ | ♦ ಸರ್‌ಸಯ್ಯದ್ ಅಹಮದ್ ಖಾನ್ | ♦ ಭಾರತೀಯ ಮುಸ್ಲಿಮರ ಸಾಮಾಜಿಕ ಹಾಗೂ ಶೈಕ್ಷಣಿಕ ಪ್ರಗತಿಗಾಗಿ ಪ್ರಯತ್ನಿಸಿತು. |
| ♦ ಪ್ರಾರ್ಥನಾ ಸಮಾಜ | ♦ ಆತ್ಮಾರಾಮ ಪಾಂಡುರಂಗ | ♦ ಮಿಶ್ರಭೋಜನ, ಮಿಶ್ರವಿವಾಹ, ವಿಧವಾ ಪುನರ್ವಿವಾಹ, ಮಹಿಳೆಯರ ಹಾಗೂ ಹಿಂದುಳಿದ ಜನವಿಭಾಗದ ಉನ್ನತಿ ಮುಂತಾದವುಗಳಿಗೆ ಪ್ರಯತ್ನಿಸಿತು. |
| ♦ ಥಿಯೋಸೊಫಿಕಲ್ ಸೊಸೈಟಿ | ♦ ಅನಿಬೆಸಂಟ್ | ♦ ಹಿಂದೂಮತದ ಪುನರುತ್ಥಾನಕ್ಕಾಗಿ ಪ್ರಯತ್ನಿಸಿತು. |
| ♦ ಹಿತಕಾರಿಣಿ ಸಮಾಜ | ♦ ವೀರೇಶಲಿಂಗಂ | ♦ ವಿಧವಾ ಪುನರ್ವಿವಾಹ, ಮಹಿಳಾ ಶಿಕ್ಷಣ ಇತ್ಯಾದಿಗಳನ್ನು ಪ್ರಚಾರಮಾಡಿತು. |
| ♦ ಸತ್ಯಶೋಧಕ ಸಮಾಜ | ♦ ಜೋತಿಭಾ ಫುಲೆ | ♦ ಅನಾಚಾರ ಹಾಗೂ ಪುರೋಹಿತ ಮೇಧಾವಿತ್ವವನ್ನು ವಿರೋಧಿಸಿತು. ♦ ಹಿಂದುಳಿದ ಜನವಿಭಾಗಕ್ಕೋಸ್ಕರ ಶಾಲೆಗಳನ್ನು ಆರಂಭಿಸಿತು. |
| ♦ ಸ್ವಾಭಿಮಾನ | ♦ ಇ.ವಿ. ರಾಮಸ್ವಾಮಿ ನಾಯ್ಕರ್ | ♦ ಬ್ರಾಹ್ಮಣ ಮೇಧಾವಿತ್ವ ಹಾಗೂ ಜಾತಿವ್ಯವಸ್ಥೆಯನ್ನು ವಿರೋಧಿಸಿತು. |
| ♦ ಶ್ರೀನಾರಾಯಣ ಧರ್ಮ ಪರಿಪಾಲನಾ ಯೋಗಂ | ♦ ಶ್ರೀನಾರಾಯಣ ಗುರು | ♦ ಜಾತಿವ್ಯವಸ್ಥೆ ಹಾಗೂ ಅನಾಚಾರಗಳನ್ನು ವಿರೋಧಿಸಿತು. ♦ ಹಿಂದುಳಿದ ಜನವಿಭಾಗದ ಸಾಮಾಜಿಕ ಹಾಗೂ ಶೈಕ್ಷಣಿಕ ಪ್ರಗತಿಗಾಗಿ ಪ್ರಯತ್ನಿಸಿತು. |

K84BS9

ಸಮಾಜ ಸುಧಾರಕರ ಹಾಗೂ ಸುಧಾರಣಾ ಸಂಘಟನೆಗಳ ಕಾರ್ಯಚಟುವಟಿಕೆಯ ಫಲವಾಗಿ ಭಾರತದಲ್ಲಿ ನೆಲೆನಿಂತಿದ್ದ ಅನೇಕ ಅನಾಚಾರಗಳನ್ನು ಕಾನೂನುಬದ್ಧವಾಗಿ ನಿಷೇಧಿಸಲು ಬ್ರಿಟಿಷರು ನಿರ್ಬಂಧಿತರಾದರು. ಅವುಗಳು ಯಾವುವೆಲ್ಲ ಎಂದು ನೋಡುವ.

*ಭಾರತೀಯ ಸಮಾಜ ಸುಧಾರಕರ ಹಾಗೂ ಸಮಾಜ ಸುಧಾರಣಾ ಸಂಘಟನೆಗಳ ಪಟ್ಟಿತಯಾರಿಸಿ ಡಿಜಿಟಲ್ ಪೋಸ್ಟರ್ ರೂಪದಲ್ಲಿ ಮಂಡಿಸಿರಿ.*








**ಭಾರತದಲ್ಲಿ ಸುಧಾರಣ ಸಂಘಟನೆಗಳು ಮುಂದಿರಿಸಿದ ಆಶಯಗಳು ಭಾರತೀಯರಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸಲು ಕಾರಣವಾಯಿತು. ಕೆಳಗೆ ಕೊಟ್ಟಿರುವ ಸೂಚಕಗಳ ಆಧಾರದಲ್ಲಿ ಚರ್ಚಿಸಿರಿ.**


- ಜಾತಿವ್ಯವಸ್ಥೆಗೆ ವಿರೋಧ.
- ಸಮಾನ ಹಕ್ಕುಗಳಿಗಾಗಿ ವಾದ.
- ವಿದೇಶಿ ಸಂಸ್ಕೃತಿಯ ಹಾಗೂ ಚಿಂತನೆಗಳ ಪ್ರಭಾವಕ್ಕೆದುರಾಗಿ ಹೋರಾಟ.
- ಅನಾಚಾರಗಳ ವಿರೋಧ.
- ಶೈಕ್ಷಣಿಕ ಪ್ರಗತಿ.
- ಮಹಿಳಾ ಬೇಧಭಾವಕ್ಕೆದುರಾದ ನಿರ್ಧಾರ.

## ಪತ್ರಿಕೆಗಳು ರಾಷ್ಟ್ರವನ್ನು ಏಕೀಕರಿಸುತ್ತವೆ

"ಭಾರತೀಯ ಪೌರನಿಗೆ ಅವನ ಸ್ವಂತಿಕೆಯು ನಷ್ಟವಾಯಿತು. ಅವನ ಜೀವರಕ್ತವು ಬತ್ತಿ ಬರಡಾಯಿತು. ಅವನು ಅರೆಹೊಟ್ಟೆಯವನೂ ಅರ್ಧನಗ್ನನೂ ಆಗಿರುವನು. ರುಚಿಯಾದ ಯಾವುದೇ ಆಹಾರವೂ ಅವನಿಗೆ ಲಭಿಸುವುದಿಲ್ಲ. ಅವನ ಬಟ್ಟೆಬರೆಯು ಹರಿದು ಚಿಂದಿಯಾಗಿವೆ. ಅವನ ಸ್ಥಿತಿಯು ದಯನೀಯವಾಗಿದೆ"

ಇದು ಬಂಗಾಳದ ಆರಂಭಕಾಲದ ವಾರ್ತಾ ಪತ್ರಿಕೆಯಾದ "ಸುಲಭ್ ಸಮಾಚಾರ್" ದಲ್ಲಿ ಬಂದ ವಾರ್ತೆಯಾಗಿದೆ. ಬ್ರಿಟಿಷ್ ಆಡಳಿತದ ಪರಿಣಾಮದಿಂದಾಗಿ ಭಾರತೀಯರಿಗುಂಟಾದ ಸ್ಥಿತಿಯನ್ನು ಈ ವಾರ್ತೆಯು ಬೊಟ್ಟುಮಾಡುತ್ತದೆ. ಈ ರೀತಿಯ ಹಲವಾರು ಸಮಸ್ಯೆಗಳನ್ನು ಆ ಕಾಲದ ವಾರ್ತಾಪತ್ರಿಕೆಗಳು ಭಾರತೀಯರ ಗಮನಕ್ಕೆ ತಂದಿತು.

ರಾಷ್ಟ್ರೀಯ ಚಳುವಳಿಯ ಕಾಲದ ವಾರ್ತಾ ಪತ್ರಿಕೆಗಳು ಯಾವೆಲ್ಲಾ ವಿಚಾರಗಳನ್ನು ತಿಳಿಸುತ್ತವೆಯೆಂದು ನೋಡುವ.




ಭಾರತೀಯರು ಅನುಭವಿಸುತ್ತಿದ್ದ ಶೋಷಣೆ ಹಾಗೂ ಹಕ್ಕು ನಿಷೇಧಗಳ ಕುರಿತು ಜನರನ್ನು ಜಾಗೃತಗೊಳಿಸುವಲ್ಲಿ ಪತ್ರಿಕೆಗಳು ವಹಿಸಿದ ಪಾತ್ರವನ್ನು ವಿವರಿಸಿರಿ.





**ರಾಷ್ಟ್ರೀಯ ಚಳುವಳಿಯ ಕಾಲದ ಪ್ರಮುಖ ಪತ್ರಿಕೆಗಳು ಹಾಗೂ ಅದರ ನೇತೃತ್ವವನ್ನು ವಹಿಸಿದವರು**

| ಪತ್ರಿಕೆಗಳು | ನೇತಾರರು |
|---|---|
| ◆ ಹಿಂದು, ಸ್ವದೇಶಿ ಮಿತ್ರಂ | ◆ ಜಿ. ಸುಬ್ರಹ್ಮಣ್ಯ ಅಯ್ಯರ್ |
| ◆ ಅಮೃತ ಬಜಾರ್ ಪತ್ರಿಕೆ | ◆ ಶಶಿಕುಮಾರ್ ಘೋಷ್ |
| | ಮೋತಿಲಾಲ್ ಘೋಷ್ |
| ◆ ಬೋಂಬೆ ಸಮಾಚಾರ್ | ◆ ಫರ್‌ದುಜಿಕ್ ಮರ್ಸ್‌ಬಾನ್ |
| ◆ ಕೇಸರಿ, ಮರಾಠಾ | ◆ ಬಾಲಗಂಗಾಧರ ತಿಲಕ್ |
| ◆ ಬಂಗಾಳಿ | ◆ ಸುರೇಂದ್ರನಾಥ ಬ್ಯಾನರ್ಜಿ |
| ◆ ವಾಯ್ಸ್ ಆಫ್ ಇಂಡಿಯ | ◆ ದಾದಾಬಾಯಿ ನವರೋಜಿ |
| ◆ ಶ್ಯೋಂಪ್ರಕಾಶ್ | ◆ ಈಶ್ವರಚಂದ್ರ ವಿದ್ಯಾಸಾಗರ್ |
| ◆ ನ್ಯೂ ಇಂಡಿಯ, ಕೋಮನ್‌ವೀಲ್ | ◆ ಮಿಸೆಸ್ ಅನಿಬೆಸೆಂಟ್ |
| ◆ ಯಂಗ್ ಇಂಡಿಯ, ಹರಿಜನ್ | ◆ ಮಹಾತ್ಮಾಗಾಂಧಿ |
| ◆ ಅಲ್-ಹಿಲಾಲ್ | ◆ ಮೌಲಾನಾ ಅಬ್ದುಲ್ ಕಲಾಂ ಆಜಾದ್ |
| ◆ ವಂದೇಮಾತರಂ | ◆ ಲಾಲಾಲಜಪತ್ ರಾಯ್ |
| ◆ ನೇಶನ್ | ◆ ಗೋಪಾಲಕೃಷ್ಣ ಗೋಖಲೆ |



**ರಾಷ್ಟ್ರೀಯ ಚಳವಳಿಯ ಕಾಲದಲ್ಲಿ ಕನ್ನಡ ಹಾಗೂ ಮಲೆಯಾಳ ಭಾಷೆಯಲ್ಲಿ ಪ್ರಕಟಗೊಂಡ ಪತ್ರಿಕೆಗಳ ಹೆಸರುಗಳನ್ನು ಕಂಡುಹಿಡಿದು ಪಟ್ಟಿ ತಯಾರಿಸಿರಿ.**

ಭಾರತದ ರಾಷ್ಟ್ರೀಯ ಚಳುವಳಿ ಹಾಗೂ ಅದರ ನೇತಾರರು ತಮ್ಮ ಆಶಯಗಳನ್ನು ಜನರಿಗೆ ತಲುಪಿಸಲು ಆಶ್ರಯಿಸಿದ ಪ್ರಧಾನ ಮಾರ್ಗವೇ ವಾರ್ತಾಪತ್ರಿಕೆಗಳಾಗಿವೆ. ಆ ಕಾಲದಲ್ಲಿ ಪತ್ರಿಕೆಗಳನ್ನು ಪ್ರಕಟಗೊಳಿಸುವುದು ಸಾಮಾಜಿಕ ಸೇವೆಯಾಗಿದೆ ಎಂದು ಅವರು ನಂಬಿದ್ದರು. ಅವುಗಳು ಬ್ರಿಟಿಷ್ ಸರಕಾರದ ಧೋರಣೆಗಳನ್ನು ವಿರೋಧಿಸಿ, ಬಲವಾಗಿ ಖಂಡಿಸಿದುವು. ರಾಜಾರಾಮ್ ಮೋಹನರಾಯ್ ರಾಷ್ಟ್ರೀಯ ದೃಷ್ಟಿಕೋನವನ್ನು ಹೊಂದಿದ ಪತ್ರಿಕೆಗಳ ಆರಂಭಕ್ಕೆ ನಾಂದಿ ಹಾಡಿದರು. ಅವರು ಬಂಗಾಳಿ ಭಾಷೆಯಲ್ಲಿ ಆರಂಭಿಸಿದ 'ಸಂವಾದ್ ಕೌಮುದಿ' ಪರ್ಷಿಯನ್ ಭಾಷೆಯಲ್ಲಿ ಪ್ರಕಟಿಸಿದ 'ಮೀರತ್ ಉಲ್ – ಅಕ್ಬರ್' ಎಂಬಿವುಗಳು ಸಾಮಾಜಿಕ ಸುಧಾರಣೆ, ರಾಷ್ಟ್ರೀಯತೆ, ಪ್ರಜಾಪ್ರಭುತ್ವ ಮೊದಲಾದ ಆಶಯಗಳಿಗೆ ಒತ್ತು ನೀಡಿದುವು. ಇದೇ ಉದ್ದೇಶಗಳೊಂದಿಗೆ ಹಲವಾರು ಪತ್ರಿಕೆಗಳನ್ನು ವಿವಿಧ ಭಾಷೆಗಳಲ್ಲಿ ಪ್ರಕಟಿಸಲಾಯಿತು. ಸಾಮಾಜಿಕ ಸುಧಾರಣಾ ಸಂಘಟನೆಗಳ ಹಾಗೂ ರಾಷ್ಟ್ರೀಯ ಚಳುವಳಿಯ ನೇತಾರರ ನೇತೃತ್ವದಲ್ಲಿ ಹೆಚ್ಚಿನ ಪತ್ರಿಕೆಗಳು ಪ್ರಕಟಗೊಂಡುವು.


ವಾರ್ತಾಪತ್ರಿಕೆಗಳ ಕೆಚ್ಚನ್ನು ಅರ್ಥೈಸಿದ ಬ್ರಿಟಿಷ್ ಸರಕಾರವು ಅವುಗಳನ್ನು ನಿಯಂತ್ರಿಸಲು ಹಲವಾರು ಕ್ರಮಗಳನ್ನು ಕೈಗೊಂಡಿತು. 1878ರಲ್ಲಿ ಲಿಟ್ಟನ್ ಪ್ರಭುವು ಜಾರಿಗೊಳಿಸಿದ ಪ್ರಾದೇಶಿಕ ಭಾಷಾಪತ್ರಿಕಾ ಕಾಯಿದೆ (Vernacular Press Act) ಯು ಅವುಗಳಲ್ಲಿ ಪ್ರಮುಖವಾದುದಾಗಿದೆ.

ಈ ಕಾಯಿದೆಯ ಮೂಲಕ ಪ್ರಾದೇಶಿಕ ಭಾಷೆಗಳಲ್ಲಿ ಪ್ರಕಟಗೊಳ್ಳುತ್ತಿದ್ದ ಪತ್ರಿಕೆಗಳಿಗೆ ಕಠಿಣವಾದ ನಿಯಂತ್ರಣಗಳನ್ನು ಏರ್ಪಡಿಸಿದರು. ಇದಕ್ಕೆ ಎದುರಾಗಿ ದಿಟ್ಟವಾದ ಹೋರಾಟವು ಆರಂಭಗೊಳ್ಳುವುದರೊಂದಿಗೆ ಸರಕಾರವು ಈ ಕಾಯಿದೆಯನ್ನು ಹಿಂತೆಗೆದುಕೊಂಡಿತು. ಪತ್ರಿಕೆಗಳನ್ನು ಓದುವುದು, ಅದರಲ್ಲಿರುವ ವಾರ್ತೆಗಳನ್ನು ಪ್ರಚಾರಮಾಡುವುದು, ಪತ್ರಿಕೆಗಳನ್ನು ಸಂರಕ್ಷಿಸುವುದು ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದ ಭಾಗವಾಗಿದೆಯೆಂದು ಆ ಕಾಲದ ಜನಸಾಮಾನ್ಯರು ನಂಬಿದ್ದರು.



**"ಭಾರತದಲ್ಲಿ ಸಮಾಜ ಸುಧಾರಣೆಯನ್ನು ಜಾರಿಗೊಳಿಸುವಲ್ಲಿ ಹಾಗೂ ರಾಷ್ಟ್ರೀಯ ಭಾವೈಕ್ಯವನ್ನು ಉಳಿಸುವಲ್ಲಿ ವಾರ್ತಾಪತ್ರಿಕೆಗಳು ವಹಿಸಿದ ಪಾತ್ರ" ಎಂಬ ವಿಷಯದ ಕುರಿತು ಪ್ರಬಂಧವನ್ನು ತಯಾರಿಸಿರಿ.**

## ರಾಷ್ಟ್ರಕ್ಕಾಗಿ ವಿದ್ಯಾಭ್ಯಾಸ




ಇದು ಶಿಕ್ಷಣದ ಮಹತ್ವ ಹಾಗೂ ಅಗತ್ಯದ ಕುರಿತು ವಿವಿಧ ಸಮಾಜ ಸುಧಾರಕರ ದೃಷ್ಟಿಕೋನವಾಗಿದೆ. ಶಿಕ್ಷಣದಿಂದ ನಮಗಿರುವ ಪ್ರಯೋಜನಗಳು ಯಾವುವು ಎಂದು ಕೆಳಗಿನವುಗಳನ್ನು ಪರಿಶೀಲಿಸಿ ಕಂಡುಹಿಡಿಯಿರಿ.

- ಸಮಾಜದಲ್ಲಿ ಬದಲಾವಣೆಗಳನ್ನು ತರಲು ಸಾಧ್ಯ
- ಒಗ್ಗಟ್ಟನ್ನು ನೆಲೆನಿಲ್ಲಿಸಲು ಸಾಧ್ಯ
- 



ಡೆಕ್ಕನ್ ಎಜ್ಯುಕೇಶನಲ್ ಸೊಸೈಟಿ ಸ್ಥಾಪಿಸಿದ ಫರ್ಗ್ಯುಸನ್ ಕಾಲೇಜು - ಪೂನಾ

ದೇಶಿ ವಿದ್ಯಾಲಯಗಳನ್ನು ಸ್ಥಾಪಿಸುವುದು ರಾಷ್ಟ್ರೀಯ ಭಾವನೆಗಳನ್ನು ಬೆಳೆಸಲಿರುವ ಪ್ರಧಾನ ಮಾರ್ಗ. ತನ್ಮೂಲಕ ಜಾತ್ಯತೀತ ಶಿಕ್ಷಣವನ್ನು ಎಲ್ಲ ವಿಭಾಗದವರಿಗೂ ನೀಡಲು ಸಾಧ್ಯವಾಯಿತು. 1884 ರಲ್ಲಿ ಜಿ.ಜಿ. ಅಗರ್‌ಕರ್, ಬಾಲಗಂಗಾಧರ ತಿಲಕ್, ಮಹಾದೇವ ಗೋವಿಂದ ರಾನಡೆ ಮುಂತಾದವರು ಒಟ್ಟಾಗಿ ಪೂನಾದಲ್ಲಿ ಸ್ಥಾಪಿಸಿದ ಡೆಕ್ಕನ್ ಎಜ್ಯುಕೇಷನಲ್ ಸೊಸೈಟಿಯು ಭಾರತದಲ್ಲಿ ರಾಷ್ಟ್ರೀಯ ದೃಷ್ಟಿಕೋನದಿಂದ ರೂಪುಗೊಂಡ ಶಿಕ್ಷಣ ಸಂಸ್ಥೆಗೆ ಉದಾಹರಣೆಯಾಗಿದೆ. ಭಾರತೀಯರ ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಪ್ರಗತಿಗೆ ಆಧುನಿಕ ವಿದ್ಯಾಭ್ಯಾಸವು ಅತಿ ಅಗತ್ಯವಾಗಿದೆಯೆಂದು ಈ ಸಂಸ್ಥೆಯ ಸ್ಥಾಪಕರು ಮನಗಂಡಿದ್ದರು.





ಡೆಕ್ಕನ್ ಎಜ್ಯುಕೇಷನಲ್ ಸೊಸೈಟಿಯ ಚಿಹ್ನೆ



ಡಿ.ಕೆ. ಕಾರ್ವೆಯವರ ಪ್ರತಿಮೆ

1905ರ ಬಂಗಾಳದ ವಿಭಜನೆಯ ನಂತರ ಆರಂಭಗೊಂಡ ಸ್ವದೇಶಿ ಚಳುವಳಿಯು ರಾಷ್ಟ್ರೀಯ ಶಿಕ್ಷಣದ ಅಭಿವೃದ್ಧಿಗಾಗಿ ಹಲವಾರು ವಿದ್ಯಾಲಯಗಳನ್ನು ಸ್ಥಾಪಿಸಿತು. ಡಿ.ಕೆ. ಕಾರ್ವೆಯವರು 1916ರಲ್ಲಿ ಮಹಾರಾಷ್ಟ್ರದಲ್ಲಿ ಭಾರತದ ಮೊತ್ತಮೊದಲ ಮಹಿಳಾ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದರು. ಮಹಿಳಾ ಸಬಲೀಕರಣಕ್ಕೆ ವಿದ್ಯಾಭ್ಯಾಸವು ಅನಿವಾರ್ಯ ಎಂಬ ದೃಷ್ಟಿಕೋನದೊಂದಿಗೆ ಈ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಯಿತು. ಅನಂತರ ಹಲವಾರು ವಿದ್ಯಾಲಯಗಳು ಭಾರತದ ವಿವಿಧ ಭಾಗಗಳಲ್ಲಿ ಸ್ಥಾಪಿಸಲ್ಪಟ್ಟವು. ಪಾಶ್ಚಾತ್ಯ ವಿದ್ಯಾಭ್ಯಾಸ ಹಾಗೂ ಸಾಮಾಜಿಕ ಅನಾಚಾರಗಳ ಮೇಲಿನ ವಿರೋಧ ಹಾಗೂ ಸ್ವದೇಶಿ ದೃಷ್ಟಿಕೋನಗಳು ಇವುಗಳ ಮುಖಮುದ್ರೆಗಳಾಗಿದ್ದವು.



ಗಾಂಧೀಜಿ ಹಾಗೂ ಠಾಗೋರರು- ವಿಶ್ವ ಭಾರತಿಯಲ್ಲಿ


ಬಂಗಾಳದಲ್ಲಿ ರವೀಂದ್ರನಾಥ ಠಾಗೋರರು ಸ್ಥಾಪಿಸಿದ ವಿಶ್ವಭಾರತಿ ವಿಶ್ವ ವಿದ್ಯಾಲಯುವು ರಾಷ್ಟ್ರಗಳ ನಡುವಿನ ಮೇರೆಗೂ ಹೊರತಾಗಿ ವಿಶ್ವ- ಭ್ರಾತೃತ್ವಕ್ಕೆ ಒತ್ತನ್ನು ನೀಡಿತು. ಈ ಸಂಸ್ಥೆಯ ಮೂಲಕ ಪಾಶ್ಚಾತ್ಯ-ಪೌರಾತ್ಯ ಸಂಸ್ಕೃತಿಗಳನ್ನು ಸಂಯೋಜಿಸಿದ ಶಿಕ್ಷಣ ರೀತಿಯನ್ನು ನೀಡಲು ಠಾಗೋರರು ಉದ್ದೇಶಿಸಿದ್ದರು.

ಭಾರತದ ರಾಷ್ಟ್ರೀಯ ಚಳವಳಿಯು ಗಾಂಧೀಜಿಯವರ ನೇತೃತ್ವದಲ್ಲಿ ಪ್ರಬಲ ಗೊಂಡಿದ್ದ ಕಾಲದಲ್ಲಿಯೇ ಮೌಲಾನಾ ಮುಹಮ್ಮದ್ ಆಲಿ, ಶೌಕತ್ ಆಲಿ, ಡಾ. ಜಾಕೀರ್ ಹುಸೇನ್, ಎಂ.ಎ. ಅನ್ಸಾರಿ ಮೊದಲಾದವರ ನೇತೃತ್ವದಲ್ಲಿ ಅಲಿಗಢದ ಜಾಮಿಯ ಮಿಲ್ಲೀಯ ಇಸ್ಲಾಮಿಯ ವಿದ್ಯಾಭ್ಯಾಸ ಕೇಂದ್ರವು ಸ್ಥಾಪಿತವಾಯಿತು. ಜಾತ್ಯತೀತ ವಿದ್ಯಾಭ್ಯಾಸವು ರಾಷ್ಟ್ರೀಯ ಚಳುವಳಿಯನ್ನು ಬಲಪಡಿಸಬಹುದೆಂಬ ದೃಷ್ಟಿಕೋನದ ಆಧಾರದಲ್ಲಿ ಇದನ್ನು ಸ್ಥಾಪಿಸಲಾಗಿದೆ.



ಜಾಮಿಯಾ ಮಿಲ್ಲಿಯಾ ಇಸ್ಲಾಮಿಯಾ


ಪಾಶ್ಚಾತ್ಯ ವಿದ್ಯಾಭ್ಯಾಸ ಹಾಗೂ ಕಲೆಗಳ ಪ್ರಭಾವವು ಭಾರತದ ಪರಂಪರಾಗತ ಕಲಾರೂಪಗಳ ನಾಶಕ್ಕೆ ಕಾರಣವಾಯಿತು. ಅನಂತರ ಅದನ್ನು ನಿಯಂತ್ರಿಸಲು ಹಾಗೂ ಪರಂಪರಾಗತ ಕಲಾರೂಪಗಳನ್ನು ಉಳಿಸಿ ಬೆಳೆಸಲು ಭಾರತದಲ್ಲಿ ಹಲವಾರು ಪ್ರಯತ್ನಗಳು ನಡೆದುವು. ಈ ಉದ್ದೇಶದೊಂದಿಗೆ ಮಹಾಕವಿ ವಳ್ಳತ್ತೋಳ್ ನಾರಾಯಣ ಮೆನೋನರು ತ್ರಿಶ್ಶೂರಿನಲ್ಲಿ ಕೇರಳ ಕಲಾಮಂಡಲವನ್ನು ಸ್ಥಾಪಿಸಿದರು.



ಕೇರಳ ಕಲಾಮಂಡಲಂ

1937ರಲ್ಲಿ ಮಹಾತ್ಮಾಗಾಂಧಿಯವರು ವಿಶೇಷ ರೀತಿಯ ಒಂದು ವಿದ್ಯಾಭ್ಯಾಸ ಯೋಜನೆಯನ್ನು ಮುಂದಿರಿಸಿದರು. ವಾರ್ಧಾ ವಿದ್ಯಾಭ್ಯಾಸ ಯೋಜನೆ ಎಂದು ಕರೆಯಲ್ಪಟ್ಟ ಇದರ ಉದ್ದೇಶವು ಉದ್ಯೋಗ ಆಧಾರಿತ ಶಿಕ್ಷಣವನ್ನು ನೀಡುವುದಾಗಿತ್ತು. ವಿದ್ಯಾರ್ಥಿಯಾಗಿರುವಾಗಲೇ ಕೆಲವು

ಕೆಲಸಗಳನ್ನು ಕಲಿತುಕೊಂಡರೆ ಅದು ಮುಂದಿನ ಜೀವನಕ್ಕೆ ಪ್ರಯೋಜನಕಾರಿಯಾದೀತೆಂದು ಅವರು ಭಾವಿಸಿದರು. ಈ ರೀತಿಯಲ್ಲಿ ಬೆಳೆದುಬಂದ ತಲೆಮಾರಿನವರ ಮೂಲಕ ಬ್ರಿಟಿಷರನ್ನು ಎದುರಿಸಬಹುದೆಂದು ಗಾಂಧೀಜಿಯವರು ಅಭಿಪ್ರಾಯಪಟ್ಟರು.



ವಾರ್ಧಾ ವಿದ್ಯಾಭ್ಯಾಸ ಸಮ್ಮೇಳನದಲ್ಲಿ - ಗಾಂಧೀಜಿ



## ನಯೀ ತಾಲೀಂ (Nai Talim)

ಉತ್ಪಾದನೆಗೆ ಆದ್ಯತೆಯಿರುವ ಯಾವುದಾದರೊಂದು ಉದ್ಯೋಗಕ್ಕೆ ಸಂಬಂಧಿಸಿದ ವಿದ್ಯಾಭ್ಯಾಸವನ್ನು ನೀಡಬೇಕೆಂದು ಗಾಂಧೀಜಿಯವರು ಸಲಹೆ ನೀಡಿದರು. ಎಂಟರಿಂದ ಹದಿನಾಲ್ಕು ವರ್ಷ ಪ್ರಾಯದವರೆಗೆ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ನೀಡಬೇಕು ಹಾಗೂ ಅಲ್ಲದೆ ಅದು ಮಾತೃಭಾಷೆಯಲ್ಲೇ ಆಗಿರಬೇಕೆಂದು ಅವರು ಹೇಳಿದರು. ಗಾಂಧೀಜಿಯವರ ಕೊಡುಗೆಯಾದ ಈ ಶಿಕ್ಷಣ ರೀತಿಯು ನಯೀ ತಾಲಿಂ (ನವೀನ ವಿದ್ಯಾಭ್ಯಾಸ) ಎಂದು ಕರೆಯಲ್ಪಡುತ್ತದೆ. ಇಂಡಿಯನ್ ನ್ಯಾಶನಲ್ ಕಾಂಗ್ರೆಸ್‌ನ 1937ರ ವಾರ್ಧಾ ಸಮ್ಮೇಳನವು ಈ ಯೋಜನೆಯ ಕುರಿತು ಅಧ್ಯಯನ ನಡೆಸಲು ಡಾ. ಜಾಕೀರ್ ಹುಸೇನ್‌ರವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ನೇಮಿಸಿತು.

ಭಾರತದ ರಾಷ್ಟ್ರೀಯತೆಯ ಬೆಳವಣಿಗೆಗೆ ಶಿಕ್ಷಣ ಕ್ಷೇತ್ರದ ಪ್ರಗತಿಯು ಹೇಗೆ ಸಹಾಯಕವಾಯಿತು?





**ರಾಷ್ಟ್ರೀಯ ವಿದ್ಯಾಭ್ಯಾಸವು ಮುಂದಿರಿಸಿದ ಕೆಲವು ಆಶಯಗಳನ್ನು ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ. ಈ ಆಶಯಗಳನ್ನು ಜಾರಿಗೊಳಿಸಲು ಪ್ರಯತ್ನಿಸಿದ ಸಂಸ್ಥೆಗಳಿಗೆ ಉದಾಹರಣೆಗಳನ್ನು ಪಾಠಭಾಗದಿಂದ ಕಂಡುಹಿಡಿಯಿರಿ.**

| ರಾಷ್ಟ್ರೀಯ ವಿದ್ಯಾಭ್ಯಾಸವು ಮುಂದಿರಿಸಿದ ಆಶಯಗಳು | ಉದಾಹರಣೆಗಳು |
|---|---|
| ♦ ಜಾತ್ಯತೀತತೆ | ♦ |
| ♦ ರಾಷ್ಟ್ರೀಯತೆ | ♦ |
| ♦ ಮಹಿಳಾ ಸಬಲೀಕರಣ | ♦ |
| ♦ ವಿಶ್ವಭ್ರಾತೃತ್ವ | ♦ |
| ♦ ಪರಂಪರಾಗತ ಕಲೆಗಳ ಪುನರುದ್ಧಾರ | ♦ |
| ♦ ವಿದೇಶೀ ಮೇಧಾವಿತ್ವ, ಜಾತಿ ವ್ಯವಸ್ಥೆ ಎಂಬಿವುಗಳ ವಿರೋಧ | ♦ |



ಬಂಕಿಮ್‌ಚಂದ್ರ ಚಟರ್ಜಿ

## ಸಾಹಿತ್ಯ ಮತ್ತು ರಾಷ್ಟ್ರೀಯತೆ

ಭಾರತೀಯ ಸಮಾಜದಲ್ಲಿ ನೆಲೆನಿಂತಿದ್ದ ಬ್ರಿಟಿಷರ ಆರ್ಥಿಕ ಶೋಷಣೆಗಳಿಗೆ ವಿರುದ್ಧವಾದ ಪ್ರತಿಭಟನೆಗಳು ಸಾಹಿತ್ಯದಲ್ಲೂ ಪ್ರತಿಫಲಿಸಿದುವು. ದೇಶದ ಮೂಲೆ ಮೂಲೆಗಳಲ್ಲೂ ಜನರು ಎದುರಿಸುತ್ತಿದ್ದ ಕಷ್ಟಕಾರ್ಪಣ್ಯಗಳನ್ನು, ಸಮಸ್ಯೆಗಳನ್ನು ಸಾಹಿತಿಗಳು ತಮ್ಮ ಕೃತಿಗಳಲ್ಲಿ ಬಿಂಬಿಸಿದರು. ಇದನ್ನು ಓದಿದ ಇತರ ಪ್ರದೇಶದ ಜನರಿಗೆ ಈ ಕಷ್ಟಗಳು ತಮ್ಮದೂ ಕೂಡ ಆಗಿವೆ ಎಂದು ಮನವರಿಕೆಯಾಯಿತು. ಭಾರತೀಯರು ಒಗ್ಗಟ್ಟಿನಿಂದ ವ್ಯವಸ್ಥೆಗೆ ಎದುರಾಗಿ ಪ್ರತಿಭಟಿಸಲು ಮುಂದೆ ಬಂದರು. ಕವನ, ಕತೆ, ನಾಟಕ, ಕಾದಂಬರಿ ಮುಂತಾದುವುಗಳ ಮೂಲಕ ಸಾಹಿತಿಗಳು ತಮ್ಮ ಅಸಹನೆಯನ್ನು ಜನರೊಂದಿಗೆ ಹಂಚಿಕೊಂಡರು. ಇದು ಜನರಲ್ಲಿ ಶೋಷಣೆಗಳ ವಿರುದ್ಧದ ಮನೋಭಾವ ಹಾಗೂ ಮಾತೃಭೂಮಿಯ ಮೇಲೆ ಸ್ನೇಹ ಬೆಳೆಯಲು ಸಹಾಯಕವಾಯಿತು. ತಾಯ್ನಾಡನ್ನು ಗೌರವಿಸಿಕೊಂಡು ಪ್ರಾದೇಶಿಕ ಭಾಷೆಗಳಲ್ಲಿ ರಚಿಸಲ್ಪಟ್ಟ ಕೃತಿಗಳು ನಿರಕ್ಷರಸ್ಥರಾದ ಜನರು ಹಾಗೂ ಅಕ್ಷರಸ್ಥ ಮೇಲ್ವರ್ಗದವರ ನಡುವಿನ ಅಂತರವನ್ನು ಕಡಿಮೆ ಮಾಡಿತು.


ದೀನ ಬಂಧುಮಿತ್ರ

ಶಿಶಿರಕುಮಾರ ಘೋಷ್, ಸತ್ಯೇಂದ್ರನಾಥ ಠಾಗೋರ್ ಮುಂತಾದವರ ನೇತೃತ್ವದಲ್ಲಿ ಪ್ರದರ್ಶಿಸಲ್ಪಟ್ಟ ನಾಟಕದ ಮೂಲಕ ಮೊತ್ತಮೊದಲು ಸಾರ್ವಜನಿಕ ವೇದಿಕೆಯಲ್ಲಿ ಭಾರತಮಾತೆ ಎಂಬ ಕಲ್ಪನೆಯು ಪ್ರತಿಬಿಂಬಿತವಾಯಿತು. ಅನಂತರ ಬಂಗಾಳಿ ಸಾಹಿತಿಯಾದ ಬಂಕಿಮ್‌ಚಂದ್ರ ಚಟರ್ಜಿಯವರು ಒಂದು ಪಾಶ್ಚಾತ್ಯ ಸಾಹಿತ್ಯ ರೂಪದಲ್ಲಿದ್ದ ಕಾದಂಬರಿಯನ್ನು ಭಾರತೀಯರ ಜೀವನದ ವಾಸ್ತವಿಕತೆಗಳನ್ನು ಬಿಂಬಿಸುವ ಮಾಧ್ಯಮವಾಗಿ ಬದಲಾಯಿಸಿದರು. ಬಂಗಾಳದ ಕೃಷಿಕರು ನಡೆಸಿದ ಸನ್ಯಾಸಿದಂಗೆಯನ್ನು ಆಧರಿಸಿ ರಚಿಸಿದ 'ಆನಂದಮಠ' ವು ಅವರು ರಚಿಸಿದ ಕಾದಂಬರಿಗಳಲ್ಲಿ ಅತ್ಯಂತ ಗಮನಾರ್ಹವಾದುದಾಗಿದೆ. ಈ ಕಾದಂಬರಿಯ ಮೂಲಕ ಬಂಗಾಳದ ಕೃಷಿಕರ ಸ್ಥಿತಿ, ಶ್ರೀಮಂತರ ಹಾಗೂ ಸಾಮಾನ್ಯಜನರ ನಡುವಿನ ವ್ಯತ್ಯಾಸಗಳನ್ನು ಭಾರತೀಯರೆಲ್ಲರೂ ಅರ್ಥೈಸಿಕೊಳ್ಳುವಂತೆ ಮಾಡಲು ಅವರಿಗೆ ಸಾಧ್ಯವಾಯಿತು. 'ವಂದೇ ಮಾತರಂ' ಎಂಬ ಗೀತೆಯನ್ನು ಈ ಕಾದಂಬರಿಯಿಂದ ಆಯ್ದುಕೊಳ್ಳಲಾಗಿದೆ.



ನೀಲ್ ದರ್ಪಣ್

ಬಂಗಾಳಿ ನಾಟಕ ರಚನೆಕಾರರಾದ ದೀನಬಂಧು ಮಿತ್ರ ರಚಿಸಿದ 'ನೀಲ್‌ದರ್ಪಣ್' ಎಂಬ ನಾಟಕವು ಬಂಗಾಳದ ನೀಲಕೃಷಿಕರು ಅನುಭವಿಸುತ್ತಿದ್ದ ಅತಿಯಾದ ಶೋಷಣೆಗಳನ್ನು ಮನಮುಟ್ಟುವಂತೆ ಚಿತ್ರಿಸಿತು. ನೂರಕ್ಕಿಂತಲೂ ಹೆಚ್ಚಿನ ವೇದಿಕೆಗಳಲ್ಲಿ ಪ್ರದರ್ಶಿಸಲ್ಪಟ್ಟ ಈ ನಾಟಕವನ್ನು ನೋಡಿದ ಜನರು ಅದರಿಂದ ಸ್ಫೂರ್ತಿಗೊಂಡರು. 'ನೀಲ್‌ದರ್ಪಣ್' ನಲ್ಲಿ ವಿವರಿಸಲ್ಪಟ್ಟ ಕೃಷಿಕರ ಸಮಸ್ಯೆಗಳನ್ನು ಸುರೇಂದ್ರನಾಥ ಬ್ಯಾನರ್ಜಿ ಸ್ಥಾಪಿಸಿದ ಇಂಡಿಯನ್ ಅಸೋಸಿಯೇಶನ್ ಎಂಬ ಆರಂಭಕಾಲದ ರಾಷ್ಟ್ರೀಯ ಸಂಘಟನೆಯು ಭಾರತದ ಮೂಲೆ ಮೂಲೆಗಳಲ್ಲಿ ಪ್ರಚಾರಮಾಡಿತು. ಭಾರತದ ವಿವಿಧ ಪ್ರದೇಶಗಳ ಕೃಷಿಕರ ದಂಗೆಗಳಿಗೆ ಈ ನಾಟಕವು ಪ್ರಚೋದನೆಯಾಯಿತು.

K8D7TH


‘ಸಾರೆ ಜಹಾಂಸೆ ಅಚ್ಚಾ, ಹಿಂದುಸ್ತಾನ್ ಹಮಾರಾ’ ಎಂಬ ಗೀತೆಯನ್ನು ರಚಿಸಿದ ಉರ್ದು ಕವಿಯಾದ ಅಲ್ಲಾಮಾ ಮುಹಮ್ಮದ್ ಇಕ್ಬಾಲ್ ತನ್ನ ಕವಿತೆಗಳ ಮೂಲಕ ಭಾರತದ ಪ್ರಾಕೃತಿಕ ಸೌಂದರ್ಯವನ್ನು ಹಾಗೂ ಜನತೆಯ ಒಗ್ಗಟ್ಟನ್ನು ಹಾಡಿಹೊಗಳಿದರು. ಭಾರತ ಎಂಬ ಅಖಂಡ ರಾಷ್ಟ್ರದ ಕುರಿತಾದ ಕಲ್ಪನೆಯು ಜನರಲ್ಲಿ ರೂಪುಗೊಳ್ಳುವಂತೆ ಮಾಡಲು ಇವರ ರಚನೆಗಳಿಗೆ ಸಾಧ್ಯವಾಯಿತು. ವಿವಿಧ ಭಾಷೆಗಳ ಹಲವು ಸಾಹಿತಿಗಳು ಜನರಲ್ಲಿ ರಾಷ್ಟ್ರಪ್ರೇಮ ಹಾಗೂ ರಾಷ್ಟ್ರಾಭಿಮಾನವನ್ನು ಬೆಳೆಸುವಂತೆ ಮಾಡುವ ಕೃತಿಗಳನ್ನು ರಚಿಸಿದರು.




ಮುಹಮ್ಮದ್ ಇಕ್ಬಾಲ್



**ವಿವಿಧ ಭಾಷೆಗಳಲ್ಲಿ ರಚಿಸಲ್ಪಟ್ಟ ಸಾಹಿತ್ಯಕೃತಿಗಳು ಭಾರತದ ರಾಷ್ಟ್ರೀಯತೆಯ ಆವಿರ್ಭಾವಕ್ಕೆ ಹೇಗೆ ದಾರಿಮಾಡಿಕೊಟ್ಟವು? ಚರ್ಚಿಸಿರಿ.**

| ಕೃತಿಗಳು | ಸಾಹಿತಿಗಳು | ಭಾಷೆ |
|---|---|---|
| ♦ ಗೋರ<br>♦ ಗೀತಾಂಜಲಿ | ♦ರವೀಂದ್ರನಾಥ ಠಾಗೋರ್<br> | ♦ ಬಂಗಾಳಿ |
| ♦ ಸೇವಾ ಸದನ್<br>♦ ಪ್ರೇಮಾಶ್ರಮ<br>♦ ರಂಗಭೂಮಿ<br>♦ ಗೋದಾನ್ | ♦ ಪ್ರೇಮ್‌ಚಂದ್<br> | ♦ ಹಿಂದಿ |
| ♦ ಪಾಂಚಾಲಿ ಶಪಥಂ<br>♦ ಕಳಿಪ್ಪಾಟ್ಟ್<br>♦ ಕಣ್ಣನ್ ಪಾಟ್ಟ್<br>♦ ಕುಯಿಲ್ ಪಾಟ್ಟ್ | ♦ ಸುಬ್ರಹ್ಮಣ್ಯ ಭಾರತಿ<br> | ♦ ತಮಿಳು |

| | | |
|---|---|---|
| ♦ ಹಯಾತ್–ಇ–ಸಾದಿ<br>♦ ಹಯಾತ್ –ಇ– ಜಮೀದ್ | ♦ ಅಲ್ತಾಫ್ ಹುಸೈನ್ ಹಾಲಿ  | ♦ ಉರ್ದು |
| ♦ ನಿಬಂದಮಾಲ | ♦ ವಿಷ್ಣುಕೃಷ್ಣ ಚಿಪ್ಳುಂಕರ್  | ♦ ಮರಾಠಿ |
| ♦ ಎಂಡೆ ಗುರುನಾಥನ್<br>♦ ಬಾಪೂಜಿ<br>♦ ಇಂಡಿಯಯುಡೆ ಕರಚ್ಚಿಲ್ | ♦ ವಳ್ಳತ್ತೋಳ್ ನಾರಾಯಣ ಮೆನೊನ್  | ♦ ಮಲಯಾಳ |


**ವರಿಗ ವರಿಗ ಸಹಜರೆ**



ಭಾರತದ ರಾಷ್ಟ್ರೀಯ ಆಂದೋಲನಕ್ಕೆ ನವಚೈತನ್ಯವನ್ನು ನೀಡಿದ ಹಲವಾರು ಕವನ ಹಾಗೂ ಗೀತೆಗಳು ಮಲಯಾಳ ಭಾಷೆಯಲ್ಲಿ ರಚಿಸಲ್ಪಟ್ಟಿವೆ. ಅಂಶಿ ನಾರಾಯಣ ಪಿಳ್ಳೆಯವರು ರಚಿಸಿದ 'ವರಿಗ ವರಿಗ ಸಹಜರೆ' ಎಂಬ ಗೀತೆಯು ಅವುಗಳಲ್ಲಿ ಪ್ರಮುಖವಾದುದಾಗಿದೆ. ಅದರ ಕೆಲವು ಸಾಲುಗಳು ಇಂತಿವೆ.

*ವರಿಗ ವರಿಗ ಸಹಜರೆ- ಸಹನ ಸಮರ ಸಮಯ ಮಾಯ್*
*ಕರಳುರಚ್ಚ್ ಕೈಗಳ್ ಕೋರ್ತ್ ಕಾಲ್ನಡಕ್ಕ್ಪೋಗನಾಂ*
*ಬ್ರಿಟ್ಟನ್ ವಿರಟ್ಟುವಿನ್-ಚಟ್ಟಮೊಕ್ಕೆ ಮಾಟ್ಟುವಿನ್*
*ದುಷ್ಟನೀತಿ ನಿಷ್ಟಪತ್ತಿಲೊಟ್ಟುಮೆ ನಿಲಟ್ಟಿಡಾಂ!*
*ವಿಜಯಮೆಂಗಿಲ್ ವಿಜಯವುಂ-ಮರಣಮೆಂಗಿಲ್ ಮರಣವುಂ*
*ದಯವಿಹೀನಮಖಿಲ ಜನವು ಮಾಗ್ರಹಿಚ್ಚಿರಿಜಣಂ.*

## ಕಲಾಕೃತಿಗಳಲ್ಲಿ ರಾಷ್ಟ್ರೀಯತೆ



ಭಾರತಮಾತೆ


ಇದು ಬಂಗಾಳಿ ಚಿತ್ರಕಾರನಾದ ಅಭನೀಂದ್ರನಾಥ ಠಾಗೋರರು ಸ್ವದೇಶಿ ಚಳವಳಿಯ ಕಾಲದಲ್ಲಿ ಚಿತ್ರಿಸಿದ ಜಲವರ್ಣ ಚಿತ್ರವಾಗಿದೆ. ಅವರು ಚಿತ್ರಿಸಿದುದು ಭಾರತೀಯರಿಗೆ ಆಹಾರ, ಬಟ್ಟೆಬರೆ, ಜ್ಞಾನ, ಎಂಬಿವುಗಳನ್ನು ನೀಡುವ ಭಾರತಮಾತೆಯ ಚಿತ್ರವಾಗಿದೆ. ಭಾರತೀಯರಲ್ಲಿ ದೇಶಪ್ರೇಮವನ್ನು ಬೆಳೆಸುವಲ್ಲಿ ಈ ಚಿತ್ರವು ನಿರ್ಣಾಯಕ ಪಾತ್ರವಹಿಸಿತು. ಅನಂತರ ಭಾರತಮಾತೆಯ ಹಲವು ರೂಪಗಳನ್ನು ಭಾರತದ ಭೂಪಟದಲ್ಲಿ ಚಿತ್ರಿಸಿದ ಚಿತ್ರಗಳು ಪ್ರಚಾರಗೊಂಡವು. ಭಾರತೀಯ ಚಿತ್ರಕಲೆಯನ್ನು ಪಾಶ್ಚಾತ್ಯರ ಪ್ರಭಾವದಿಂದ ಪಾರುಮಾಡಲು ಹಾಗೂ ಭಾರತೀಯ ಸಂಸ್ಕೃತಿಯಲ್ಲೂ ರಾಷ್ಟ್ರೀಯ ಪರಂಪರೆಯಲ್ಲೂ ನೆಲೆನಿಂತ ಪೌರಾತ್ಯ ಚಿತ್ರಕಲೆಯನ್ನು ಪ್ರೋತ್ಸಾಹಿಸಲು ಅವರು ಕಲ್ಕತ್ತಾದಲ್ಲಿ " ಇಂಡಿಯನ್ ಸೊಸೈಟಿ ಆಫ್ ಓರಿಯಂಟಲ್ ಆರ್ಟ್ಸ್" ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಮಲಯಾಳಿಯಾದ ರಾಜಾರವಿವರ್ಮ ಪಾಶ್ಚಾತ್ಯ ವಿಧಾನವನ್ನು ಉಪಯೋಗಿಸಿಕೊಂಡು ಭಾರತದ ಪುರಾಣಗಳ ಹಾಗೂ ಸಾಹಿತ್ಯ ಕೃತಿಗಳ ವಿವಿಧ ಸನ್ನಿವೇಶಗಳನ್ನು ಚಿತ್ರಿಸಿದರು. ನಂದಲಾಲ್ ಬೋಸರು ಭಾರತದ ಹೆಸರಾಂತ ಸಾಹಿತ್ಯಕೃತಿಗಳ ಹಾಗೂ ಇತಿಹಾಸದ ಘಟನೆಗಳ ಸಂದರ್ಭಗಳನ್ನು ತನ್ನ ಕಲಾಕೃತಿಗಳಿಗೆ ವಿಷಯವಾಗಿ ಆಯ್ದುಕೊಂಡರು. 'ಸತಿ' ಎಂಬುದು ಅವರು ರಚಿಸಿದ ಪ್ರಶಸ್ತವಾದ ಚಿತ್ರವಾಗಿದೆ. ಅದು ಭಾರತದಲ್ಲಿ ಆಚರಣೆಯಲ್ಲಿದ್ದ ಅನಾಚಾರಗಳಲ್ಲಿ ಒಂದಾದ 'ಸತಿ ಸಹಗಮನ' ಪದ್ಧತಿಯನ್ನು ಅನುಷ್ಠಾನಗೊಳಿಸುವ ಒಬ್ಬಳು ಮಹಿಳೆಯ ಚಿತ್ರವಾಗಿದೆ. ಎಲ್ಲರ ಮನಮುಟ್ಟುವ ಈ ಚಿತ್ರವು ಅಂತಹ ಅನಾಚಾರಗಳ ವಿರುದ್ಧದ ಮನೋಭಾವವನ್ನು ಭಾರತೀಯರಲ್ಲಿ ಬೆಳೆಸುವಲ್ಲಿ ಸಫಲವಾಯಿತು. ಅವರ 'ಗ್ರಾಮೀಣ ಚೆಂಡೆವಾದಕ' (Viilage Drummer) ಎಂಬ ಚಿತ್ರವು 1938ರಲ್ಲಿ ಹರಿಪುರದಲ್ಲಿ ನಡೆದ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ಸಿನ ಸಮ್ಮೇಳನದಲ್ಲಿ ಪ್ರದರ್ಶಿಸಲ್ಪಟ್ಟಿತಲ್ಲದೆ ಅದನ್ನು ಕಾಂಗ್ರೆಸ್ಸಿನ ಪೋಸ್ಟರಿಗಿರುವ ಚಿತ್ರವಾಗಿಯೂ ಆಯ್ಕೆಮಾಡಲಾಯಿತು. ಅಮೃತಾ ಶೇರ್‌ಗಿಲ್ ಅವರು ಗ್ರಾಮೀಣ ಭಾರತದ ಜೀವನ ಸಂಕಷ್ಟಗಳನ್ನು ನಸುಬಣ್ಣಗಳನ್ನುಪಯೋಗಿಸಿ ಚಿತ್ರಿಸಿದರು. ಭಾರತೀಯರ ಜೀವನವನ್ನೂ ಸಂಸ್ಕೃತಿಯನ್ನೂ ಚಿತ್ರಿಸಿದ ಇವರ ಚಿತ್ರಗಳು ಭಾರತೀಯರ ಮನಸ್ಸಿನಲ್ಲಿ ಅಖಂಡ ಭಾರತದ ಚಿತ್ರವನ್ನು ಚಿತ್ರಿಸಿತು.



ರಾಜಾರವಿವರ್ಮರ ಚಿತ್ರ- ಕಾಳಿದಾಸ ವಿರಚಿತ ಶಾಕುಂತಳದ ಒಂದು ದೃಶ್ಯ

**ಭಾರತದ ರಾಷ್ಟ್ರೀಯತೆಯ ಬೆಳವಣಿಗೆಯಲ್ಲಿ ಚಿತ್ರಗಾರರು ನಿರ್ಣಾಯಕ ಪಾತ್ರವಹಿಸಿದರು. ಹೇಳಿಕೆಯ ಆಧಾರದಲ್ಲಿ ಚರ್ಚಿಸಿರಿ.**





ಸತಿ- ನಂದಲಾಲ್ ಬೋಸ್‌ರವರ ಚಿತ್ರ



ಗ್ರಾಮೀಣ ಚೆಂಡೆ ವಾದಕಗಾರ- ನಂದಲಾಲ್ ಬೋಸ್‌ರವರ ಚಿತ್ರ

ಚಿತ್ರಗಳನ್ನು ಗಮನಿಸಿದಿರಲ್ಲವೇ. ಇದು ಭಾರತೀಯರಲ್ಲಿ ದೇಶಪ್ರೇಮವನ್ನು ಬೆಳೆಸಲು ಸಹಾಯಮಾಡುವ ರಾಷ್ಟ್ರೀಯ ಚಿಹ್ನೆಗಳಾಗಿವೆ. ಇದರೊಂದಿಗೆ ರವೀಂದ್ರನಾಥ ಠಾಗೋರರು ರಚಿಸಿದ ರಾಷ್ಟ್ರಗೀತೆಯೂ ರಾಷ್ಟ್ರೀಯತೆಯನ್ನು ಬೆಳೆಸಲು ಸಹಾಯಕವಾಯಿತು. ಸ್ವದೇಶಿ ಚಳುವಳಿಯ ಕಾಲದಲ್ಲಿ ತ್ರಿವರ್ಣಧ್ವಜವು ಮೊತ್ತಮೊದಲು ರೂಪುಗೊಂಡಿತು. ಈ ಧ್ವಜವು ಬ್ರಿಟಿಷ್ ಇಂಡಿಯಾದ ಎಂಟು ಪ್ರೊವಿನ್ಸ್‌ಗಳನ್ನು ಪ್ರತಿನಿಧೀಕರಿಸುವ ಎಂಟು ತಾವರೆಗಳ ಹಾಗೂ ಹಿಂದೂ-ಮುಸ್ಲಿಂ ಏಕತೆಯ ಪ್ರತೀಕವಾಗಿ ಒಂದು ಅರ್ಧ ಚಂದ್ರನನ್ನೂ ಒಳಗೊಂಡಿತ್ತು. ಚರಕದ ಚಿತ್ರವಿರುವ ರಾಷ್ಟ್ರಧ್ವಜಕ್ಕೆ ಗಾಂಧೀಜಿಯವರ ನೇತೃತ್ವದಲ್ಲಿ ರೂಪುನೀಡಲಾಯಿತು. ಧ್ವಜದಲ್ಲಿ ಚರಕವನ್ನು ಭಾರತೀಯರ ಸ್ವಾವಲಂಬನೆ ತತ್ವ ಹಾಗೂ ವಿದೇಶಿ ಅಧಿಪತ್ಯದ ವಿರುದ್ಧದ ಪ್ರತಿಭಟನೆಯ ಪ್ರತೀಕವಾಗಿ ಉಪಯೋಗಿಸಲಾಯಿತು. ಇಂದಿನ ತ್ರಿವರ್ಣಧ್ವಜವನ್ನು 1947ನೇ ಇಸವಿಯಲ್ಲಿ ಸ್ವೀಕರಿಸಲಾಯಿತು. ಸಾರಾನಾಥದಲ್ಲಿನ ಅಶೋಕಸ್ತಂಭದಿಂದ ಆಯ್ದ ರಾಷ್ಟ್ರೀಯ ಚಿಹ್ನೆಯ ಕುರಿತು ಹಿಂದಿನ ತರಗತಿಗಳಲ್ಲಿ ಕಲಿತಿರುವಿರಲ್ಲವೇ. ರಾಷ್ಟ್ರಗೀತೆಗಳು, ಕಲಾಕೃತಿಗಳು, ಚಿಹ್ನೆಗಳನ್ನು ಭಾರತದ ರಾಷ್ಟ್ರೀಯ ಆಂದೋಲನದ ಸಂದರ್ಭಗಳಲ್ಲಿ ಉಪಯೋಗಿಸಲಾಯಿತು. ಇದು ಭಾರತೀಯರಲ್ಲಿ ರಾಷ್ಟ್ರೀಯ ಭಾವನೆಯನ್ನು ಬೆಳೆಸುವಲ್ಲಿ ನಿರ್ಣಾಯಕ ಪಾತ್ರವಹಿಸಿತು.




ಗ್ರಾಮೀಣ ಜೀವನ- ಅಮೃತಾ ಶೇರ್‌ಗಿಲ್‌ರವರ ಚಿತ್ರ

ಭಾರತದ ರಾಷ್ಟ್ರೀಯತೆಯು ಆವಿರ್ಭವಿಸಿದುದು 19ನೆಯ ಶತಮಾನದಲ್ಲಾದರೂ ಸ್ವಾತಂತ್ರ್ಯಕ್ಕೋಸ್ಕರ ರಾಷ್ಟ್ರೀಯ ಆಂದೋಲನವು ಆರಂಭವಾಗುವುದಕ್ಕಿಂತ ತುಂಬಾ ಮೊದಲೇ ಭಾರತೀಯರು ಒಂದು ರಾಷ್ಟ್ರದ ಕುರಿತಾದ ಕಲ್ಪನೆಯನ್ನು ಮಾಡಿದ್ದರು. ತಮಗೆ ಪರಮಾಧಿಕಾರವು ಇರುವ ಸ್ವತಂತ್ರ ಭಾರತ ದೇಶವನ್ನು ಆಧುನೀಕರಣಗೊಳಿಸುವ ಕನಸನ್ನು ಕಂಡರು. ಸ್ವಾತಂತ್ರ್ಯವನ್ನೂ ಸಮಾನತೆಯನ್ನೂ ಪರಮಾಧಿಕಾರವನ್ನೂ ಪಡೆಯಲಿರುವ ಭಾರತೀಯರ ತೀವ್ರವಾದ ಆಗ್ರಹವು ಸಾಹಿತ್ಯ, ಕಲೆ, ವಿದ್ಯಾಭ್ಯಾಸ, ಪತ್ರಿಕಾ ಚಟುವಟಿಕೆ, ಸಾಮಾಜ ಸುಧಾರಣೆ ಎಂಬೀ ಕ್ಷೇತ್ರಗಳಲ್ಲಿ ಪ್ರತಿಫಲಿಸಿತು. ಇದು ಭಾರತದ ರಾಷ್ಟ್ರೀಯತೆಗೆ ಸ್ಫೂರ್ತಿ ನೀಡಿತು.

ರಾಷ್ಟ್ರೀಯತೆಯನ್ನು ಬೆಳೆಸುವಲ್ಲಿ ಸಹಾಯಕವಾದ ಕಲಾಸೃಷ್ಟಿಗಳು ದೇಶೀಯ ಚಿಹ್ನೆಗಳು, ವ್ಯಕ್ತಿಗಳು ಸೇರಿದ ಡಿಜಿಟಲ್ ಆಲ್‌ಬಂ ತಯಾರಿಸಿರಿ.



K8M3VJ



ರಾಷ್ಟ್ರಧ್ವಜ ಹಾಗೂ ರಾಷ್ಟ್ರೀಯ ಚಿಹ್ನೆ

### ಮೇಡಂ ಕಾಮ ಮತ್ತು ತ್ರಿವರ್ಣಧ್ವಜ

*ಮೇಡಂ ಭಿಕ್ಕಾಜಿ ಕಾಮ ಭಾರತದ ಸ್ವಾತಂತ್ರ ಚಳುವಳಿಗೆ ನೇತೃತ್ವ ನೀಡಿದ ಧೀರ ವನಿತೆಯಾಗಿದ್ದಾಳೆ. ಅಂತಾರಾಷ್ಟ್ರೀಯ ವೇದಿಕೆಯೊಂದರಲ್ಲಿ ಭಾರತದ ತ್ರಿವರ್ಣಧ್ವಜವನ್ನು ಹಾರಿಸಿದ ಮೊತ್ತಮೊದಲ ವನಿತೆಯಾಗಿದ್ದಾಳೆ. 1907ರಲ್ಲಿ ಜರ್ಮನಿಯ ಸ್ಟಡ್‌ಗರ್ಟ್‌ನಲ್ಲಿ ನಡೆದ ದ್ವಿತೀಯ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಇವರು ತ್ರಿವರ್ಣಧ್ವಜವನ್ನು ಹಾರಿಸಿದರು.*

**"ಭಾರತದ ರಾಷ್ಟ್ರೀಯತೆಯ ರೂಪೀಕರಣದ ಮೇಲೆ ಪ್ರಭಾವ ಬೀರಿದ ಘಟಕಗಳು" ಎಂಬ ವಿಷಯದ ಆಧಾರದಲ್ಲಿ ಒಂದು ಪ್ರಬಂಧವನ್ನು ತಯಾರಿಸಿರಿ.**

**ಸಂಸ್ಕೃತಿ ಮತ್ತು ರಾಷ್ಟ್ರೀಯತೆ**

| ಸಮಾಜ ಸುಧಾರಣಾ ಸಂಘಟನೆಗಳು/ ಚಳುವಳಿಗಳು | ಪತ್ರಿಕೆಗಳು | ವಿದ್ಯಾಭ್ಯಾಸ | ಸಾಹಿತ್ಯ | ಕಲೆ |
|---|---|---|---|---|
| ಭಾರತೀಯ ಸಮಾಜದಲ್ಲಿ ನೆಲೆನಿಂತಿದ್ದ ಅನಾಚಾರಗಳು ಹಾಗೂ ಮೂಢನಂಬಿಕೆಗಳನ್ನು ವಿರೋಧಿಸಿತು. ಭಾರತದ ಆಧುನೀಕರಣಕ್ಕೋಸ್ಕರ ಪ್ರಯತ್ನಿಸಿತು. | ಬ್ರಿಟಿಷ್ ಆಡಳಿತದ ಶೋಷಣೆ ಮಾಡುವ ಸ್ವಭಾವಗಳನ್ನು ಭಾರತಾದಾದ್ಯಂತ ಪ್ರಚಾರಗೊಳಿಸಿತು. | ವಿದೇಶಿ ಆಡಳಿತವನ್ನು ಎದುರಿಸಲು ಸ್ವದೇಶಿ ವಿದ್ಯಾಭ್ಯಾಸ ಪದ್ಧತಿಗೆ ರೂಪ ನೀಡಿತು. | ವಿವಿಧ ವಲಯಗಳಲ್ಲಿ ಭಾರತೀಯರು ಅನುಭವಿಸಿದ ಸಮಸ್ಯೆಗಳ ಆಧಾರದಲ್ಲಿ ದೇಶಪ್ರೇಮವನ್ನು ಬಿತ್ತುವ ಕೃತಿಗಳನ್ನು ರಚಿಸಿದರು. | ಭಾರತೀಯ ಸಮಾಜದ ಅವಸ್ಥೆಯನ್ನು ಚಿತ್ರಿಸಿದರು. ಅಖಂಡ ಭಾರತದ ಚಿತ್ರಗಳನ್ನು ರಚಿಸಿದರು. |

## ಮೌಲ್ಯನಿರ್ಣಯ ಮಾಡುವ

- ಭಾರತದ ರಾಷ್ಟ್ರೀಯತೆಯು ಬ್ರಿಟಿಷ್ ಆಡಳಿತಕ್ಕೆದುರಾದ ಪ್ರತಿಕ್ರಿಯೆ ಹಾಗೂ ಪ್ರತಿಭಟನೆಯಾಗಿತ್ತು. ಸಮರ್ಥಿಸಿರಿ.
- ಒಂದು ರಾಷ್ಟ್ರದ ಜನತೆಯಲ್ಲಿ ಒಗ್ಗಟ್ಟನ್ನು ಬೆಳೆಸುವಲ್ಲಿ ಪತ್ರಿಕೆಗಳಿಗೆ ಪ್ರಧಾನ ಪಾತ್ರವಿದೆ. ಭಾರತದ ಸನ್ನಿವೇಶಗಳ ಆಧಾರದಲ್ಲಿ ಈ ಪ್ರಸ್ತಾವನೆಯ ಮಹತ್ವವನ್ನು ಪರಿಶೀಲಿಸಿರಿ.
- ಭಾರತದ ರಾಷ್ಟ್ರೀಯತೆಯನ್ನು ರೂಪೀಕರಿಸುವಲ್ಲಿ ವಿದ್ಯಾಭ್ಯಾಸ ರಂಗದಲ್ಲಿ ಉಂಟಾದ ಬದಲಾವಣೆಗಳು ವಹಿಸಿದ ಪಾತ್ರದ ಕುರಿತು ಅವಲೋಕಿಸಿರಿ.

- ಸಾಮಾಜಿಕ ಸುಧಾರಣೆಯು ರಾಷ್ಟ್ರದ ಏಕತೆಗೆ ಅನಿವಾರ್ಯವಾಗಿದೆಯೇ ಎಂದು ಪರಿಶೀಲಿಸಿರಿ.
- ಕೆಳಗೆ ಕೊಟಟ್ಟಿರುವವುಗಳಲ್ಲಿ "ಎ" ವಿಭಾಗದ ಪರಸ್ಪರ ಸಂಬಂಧವನ್ನು ತಿಳಿದುಕೊಂಡು ಅದೇ ರೀತಿಯಲ್ಲಿ "ಬಿ" ವಿಭಾಗವನ್ನು ಪೂರ್ತಿಗೊಳಿಸಿರಿ.

i. ಎ) ವಳ್ಳತ್ತೋಲ್ ನಾರಾಯಣ ಮೆನೊನ್: ಮಲೆಯಾಳ
   ಬಿ) ಅಲ್ತಾಫ್ ಹುಸೈನ್ ಹಾಲಿ : ......................................

ii. ಎ) ಭಾರತಮಾತಾ : ಅಭನೀಂದ್ರನಾಥ ಠಾಗೋರ್
   ಬಿ) ಸತಿ : ......................................

iii. ಎ) ಆನಂದಮಠ : ಕಾದಂಬರಿ
   ಬಿ) ನೀಲ್‌ದರ್ಪಣ್ : ......................................

iv. ಎ) ಆರ್ಯಸಮಾಜ : ಸ್ವಾಮಿ ದಯಾನಂದ ಸರಸ್ವತಿ
   ಬಿ) ರಾಮಕೃಷ್ಣ ಮಿಶನ್ : ......................................



## ಮುಂದುವರಿದ ಚಟುವಟಿಕೆಗಳು

- ಭಾರತದ ರಾಷ್ಟ್ರೀಯ ಒಗ್ಗಟ್ಟಿಗೆ ಸಹಾಯಕವಾದ ಪತ್ರಿಕೆಗಳು, ಸಾಹಿತ್ಯಕೃತಿಗಳು ಹಾಗೂ ಚಿತ್ರಗಳನ್ನು ಸಂಗ್ರಹಿಸಿ ಒಂದು ಪುಸ್ತಕವನ್ನು ತಯಾರಿಸಿರಿ.
- ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸುವ ಮಲಯಾಳ/ಕನ್ನಡದ ಕವಿತೆಗಳನ್ನು ಸಂಗ್ರಹಿಸಿ ಸಂಚಿಕೆ ತಯಾರಿಸಿರಿ.




ಅಧ್ಯಾಯ

06

# ಹೋರಾಟ ಮತ್ತು ಸ್ವಾತಂತ್ರ್ಯ

## ನೀಲಕ್ಕೆ ತೆರಿಗೆ

*"ಚಂಪಾರನ್ ಎಂಬ ಹೆಸರೋ ಆ ಪ್ರದೇಶವು ಭಾರತದಲ್ಲಿ ಎಲ್ಲಿದೆಯೆಂದೋ ನೀಲ ಕೃಷಿ ಮಾಡುವ ತೋಟಗಳ ಕುರಿತೋ ನನಗೆ ಯಾವುದೇ ಅರಿವು ಇರಲಿಲ್ಲ. ನೀಲದ ದೊಡ್ಡ ಗೋಣಿಯ ಕಟ್ಟುಗಳನ್ನು ನಾನು ಕಂಡಿರುವೆನಾದರೂ ಚಂಪಾರನ್‌ನ ಸಾಧಾರಣ ಕೃಷಿಕರು ತುಂಬಾ ಕಷ್ಟಗಳನ್ನು ಅನುಭವಿಸಿ ನೀಲವನ್ನು ಉತ್ಪಾದಿಸುತ್ತಿದ್ದರೆಂಬ ವಾಸ್ತವಿಕತೆಯು ನನಗೆ ತಿಳಿದಿರಲಿಲ್ಲ. ನನ್ನ ನಿರ್ದೇಶನದ ಪ್ರಕಾರ ರಾಜ್‌ಕುಮಾರ್ ಶುಕ್ಲಾ ಎಂಬ ಸಾಮಾನ್ಯ ನೀಲ ಕೃಷಿಕನು ನೀಲ ಕೃಷಿಕರ ಸಂಕಷ್ಟಗಳನ್ನು ಕೊನೆಗೊಳಿಸುವ ದೌತ್ಯದ ಅಂಗವಾಗಿ 1916ರಲ್ಲಿ ಲಕ್ನೋದಲ್ಲಿ ನನ್ನ ಬಳಿಗೆ ಬಂದನು. ನನ್ನ ನಿರ್ದೇಶನದ ಪ್ರಕಾರ 1916ರ ಲಾಹೋರ್ ಕಾಂಗ್ರೆಸ್ ಸಮ್ಮೇಳನದಲ್ಲಿ ಬ್ರಿಜ್ ಬಾಬು ಕಿಶೋರ್ ಪ್ರಸಾದ್ ಎಂಬವರು ನೀಲ ಕೃಷಿಕರಿಗೆ ಸಹಾನುಭೂತಿಯನ್ನು ವ್ಯಕ್ತಪಡಿಸುವ ಕರಡು ಪ್ರತಿಯನ್ನು ಸಭೆಯಲ್ಲಿ ಮಂಡಿಸಿದರಲ್ಲದೆ ಅದು ಒಕ್ಕೊರಲಿನಿಂದ ಮಂಜೂರಾಯಿತು. ಕಾನ್ಪುರ ಹಾಗೂ ಆಶ್ರಮದಲ್ಲಿ ರಾಜ್‌ಕುಮಾರ್ ನನ್ನನ್ನು ಹಿಂಬಾಲಿಸಿದನು. ಕೊನೆಗೆ ನನ್ನ ಕಲ್ಕತ್ತಾ ಸಂದರ್ಶನದ ಸಂದರ್ಭದಲ್ಲಿ ಚಂಪಾರನ್‌ಗೆ ನಾನು ತಲುಪುವೆನು ಎಂಬ ಮಾತನ್ನು ನೀಡಿದೆನು."*



*ನನ್ನ ಸತ್ಯಾನ್ವೇಷಣೆ -*

*ಮಹಾತ್ಮಾ ಗಾಂಧಿ*

ಇದು ಬಿಹಾರದ ಚಂಪಾರನ್‌ನಲ್ಲಿ 1917ರಲ್ಲಿ ನಡೆದ ನೀಲ ಕೃಷಿಕರ ಹೋರಾಟದಲ್ಲಿ ಭಾಗವಹಿಸಲು ಕಾರಣವಾದ ಸನ್ನಿವೇಶವನ್ನು ಗಾಂಧೀಜಿಯು ತಮ್ಮ ಆತ್ಮಕಥೆಯಲ್ಲಿ ವಿವರಿಸಿದ್ದಾಗಿದೆ.

ಚಂಪಾರನ್‌ನ ನೀಲ ಕೃಷಿಕರ ಸಮಸ್ಯೆಗಳಲ್ಲಿ ಮಧ್ಯಪ್ರವೇಶಿಸುತ್ತಾ ಗಾಂಧೀಜಿಯು ಭಾರತದಲ್ಲಿ ಸಾರ್ವಜನಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಆರಂಭಿಸಿದರು. ಅತ್ಯಂತ ಬೇಗನೆ ಭಾರತದ ಜನಸಾಮಾನ್ಯರ ವಿಶ್ವಾಸವನ್ನೂ ಮನ್ನಣೆಯನ್ನೂ ಪಡೆಯಲು ಅವರಿಗೆ ಸಾಧ್ಯವಾಯಿತು. ಇದಕ್ಕೆ ಕಾರಣಗಳೇನಾಗಿರಬಹುದೆಂಬುದನ್ನು ತಿಳಿಯುವ.

- ದಕ್ಷಿಣ ಆಫ್ರಿಕದಲ್ಲಿ ಗಾಂಧೀಜಿಯು ನಡೆಸಿದ ಹೋರಾಟಗಳು.
- ಸಾಧಾರಣ ಜನರಂತಿರುವ ಜೀವನರೀತಿ (ಆಹಾರ, ವಸ್ತ್ರ, ಭಾಷೆ)
- ಅಹಿಂಸಾತ್ಮಕವಾದ ಹೋರಾಟದ ರೀತಿಗಳು
- ತಮ್ಮ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿರುವ ಸಂರಕ್ಷಕನಾಗಿ ಗಾಂಧೀಜಿಯನ್ನು ಜನರು ಕಂಡರು.


### ಗಾಂಧೀಜಿ ಮತ್ತು ದಕ್ಷಿಣ ಆಫ್ರಿಕ

ದಾದಾ ಅಬ್ದುಲ್ಲ ಎಂಬ ಗುಜರಾತಿ ವ್ಯಾಪಾರಿಯ ಕೇಸುಗಳನ್ನು ವಾದಿಸಲು ಗಾಂಧೀಜಿಯವರು ದಕ್ಷಿಣ ಆಫ್ರಿಕಾಕ್ಕೆ ಹೋಗಿದ್ದರು. ದರ್ಬಾನಿನಿಂದ ಪ್ರಿಟೋರಿಯಾಕ್ಕಿರುವ ರೈಲು ಪ್ರಯಾಣದಲ್ಲಿ ಓರ್ವ ಭಾರತೀಯನಾಗಿದ್ದುದರಿಂದ ಬಿಳಿಯರೊಂದಿಗೆ ಪ್ರಥಮ ದರ್ಜೆಯಲ್ಲಿ ಪ್ರಯಾಣಿಸಲು ಅವಕಾಶವಿಲ್ಲವೆಂದು ಹೇಳಿ ಅವರನ್ನು ರೈಲಿನಿಂದ ಕೆಳಗಿಳಿಸಿದರು. ಸ್ವಲ್ಪ ಸಮಯದಲ್ಲೇ ದಕ್ಷಿಣ ಆಫ್ರಿಕಾದಲ್ಲಿರುವ ಭಾರತೀಯರು ಅನುಭವಿಸುವ ವರ್ಣಭೇದದ ತೀವ್ರತೆಯು ಅವರಿಗೆ ಅರ್ಥವಾಯಿತು. ಅಲ್ಲಿದ್ದ ಇಪ್ಪತ್ತೊಂದು ವರ್ಷಗಳಷ್ಟು ಕಾಲವೂ ದಕ್ಷಿಣ ಆಫ್ರಿಕಾದ ಬಿಳಿಯರಲ್ಲದವರ ಸಮಸ್ಯೆಗಳನ್ನು ಪರಿಹರಿಸಲು ಅವರು ಪ್ರಯತ್ನಿಸಿದರು.

## ಗಾಂಧೀಜಿಯ ಆರಂಭಕಾಲದ ಹೋರಾಟಗಳು

ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂತಿರುಗಿ ಬಂದ ಗಾಂಧೀಜಿಯು ಪಾಲ್ಗೊಂಡ ಕೆಲವು ಪ್ರಾದೇಶಿಕ ಹೋರಾಟಗಳನ್ನು ಕೆಳಗೆ ನೀಡಲಾಗಿದೆ.

| ಹೋರಾಟ | ಪ್ರದೇಶ | ವರ್ಷ |
|---|---|---|
| ♦ ಚಂಪಾರನ್‌ನ ನೀಲ ಕೃಷಿಕರ ಹೋರಾಟ | ♦ ಬಿಹಾರ | ♦ 1917 |
| ♦ ಅಹಮ್ಮದಾಬಾದಿನ ಬಟ್ಟೆಗಿರಣಿ ಹೋರಾಟ | ♦ ಗುಜರಾತ್ | ♦ 1918 |
| ♦ ಖೇಡಾದಲ್ಲಿನ ಕೃಷಿಕರ ಹೋರಾಟ | ♦ ಗುಜರಾತ್ | ♦ 1918 |


ಗಾಂಧೀಜಿ ಜನರ ಜೊತೆ ಮಾತನಾಡುತ್ತಿರುವುದು

ಚಂಪಾರನ್‌ನ ನೀಲ ಕೃಷಿಕರ ಸಮಸ್ಯೆಯಲ್ಲಿ ಮಧ್ಯಪ್ರವೇಶಿಸಿದ ಗಾಂಧೀಜಿಯು ನಿಯಮ ಉಲ್ಲಂಘನೆ, ಶಾಂತಿಯುತ ಚಳುವಳಿ ಮುಂತಾದ ಹೋರಾಟದ ವಿಧಾನಗಳನ್ನು ಸ್ವೀಕರಿಸಿದರು. ಗಾಂಧೀಜಿಯ ಮಧ್ಯಪ್ರವೇಶವು ನೀಲ ಕೃಷಿಕರಿಗೆ ಅನುಕೂಲಕರವಾದ ನಿಯಮ ಜಾರಿಗೆ ತರಲು ಅಧಿಕಾರಿಗಳನ್ನು ನಿರ್ಬಂಧಿಸಿತು. ಹೋರಾಟದ ಬಳಿಕ ಗಾಂಧೀಜಿ ಚಂಪಾರನ್‌ನ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿದರು. ಪ್ರಾಥಮಿಕ ಶಾಲೆಗಳನ್ನು ಆರಂಭಿಸುವುದರೊಂದಿಗೆ ಶುಚೀಕರಣದ ಕಾರ್ಯಗಳಲ್ಲಿ ಮತ್ತು ವೈದ್ಯಕೀಯ ಸಹಾಯ ಚಟುವಟಿಕೆಗಳಲ್ಲಿ ಅವರನ್ನು ತೊಡಗಿಸಿಕೊಂಡರು.

ಪ್ಲೇಗ್ ಬೋನಸ್‌ಗೆ ಸಂಬಂಧಿಸಿದ 1918ರ ಅಹಮ್ಮದಾಬಾದಿನ ಬಟ್ಟೆಗಿರಣಿಯ ಹೋರಾಟದಲ್ಲೂ ಚಂಪಾರನ್‌ನ ಹೋರಾಟ ರೀತಿಗಳನ್ನು ಅವರು ಸ್ವೀಕರಿಸಿದರು. ಗಾಂಧೀಜಿಯ ಉಪವಾಸದಿಂದಾಗಿ ಅಧಿಕಾರಿಗಳು ಸಂಬಳ ಹೆಚ್ಚಿಸಲು ಸಮ್ಮತಿಸುವುದರೊಂದಿಗೆ ಹೋರಾಟವು ಕೊನೆಗೊಂಡಿತು.

ಬರಗಾಲ ಮತ್ತು ಕೃಷಿನಾಶಗಳ ಕಾರಣದಿಂದಾಗಿ ಸಂಕಷ್ಟಕ್ಕೀಡಾದ ಖೇಡಾದ ಕೃಷಿಕರಿಂದ ತೆರಿಗೆ ವಸೂಲಿ ಮಾಡಲು ತೀರ್ಮಾನಿಸಿದ (1918) ಅಧಿಕಾರಿಗಳ ಧೋರಣೆಗಳಿಗೆದುರಾಗಿ

ಗಾಂಧೀಜಿ ತೆರಿಗೆ ನಿಷೇಧ ಸತ್ಯಾಗ್ರಹವನ್ನು ಹೋರಾಟದ ಆಯುಧವಾಗಿ ಉಪಯೋಗಿಸಿದರು. ಅದರ ಫಲವಾಗಿ ಸರಕಾರವು ತೆರಿಗೆ ವಿನಾಯಿತಿ ನೀಡಲು ತಯಾರಾಯಿತು. ಸತ್ಯಾಗ್ರಹದಿಂದಲೂ ಅಹಿಂಸೆಯಿಂದಲೂ ಕೂಡಿದ ಮೊದಲ ಹೋರಾಟಗಳು ಗಾಂಧೀಜಿಯನ್ನು ಜನರೆಲ್ಲರ ನಾಯಕನನ್ನಾಗಿ ಮಾಡಿತು.



ಗಾಂಧೀಜಿಯ ಆರಂಭಕಾಲದ ಹೋರಾಟ, ಪ್ರವೇಶ, ವರ್ಷ, ಹೋರಾಟದ ಕಾರಣ ಎಂಬವುಗಳನ್ನು ಸೇರಿಸಿ ಪಟ್ಟಿ ಮಾಡಿರಿ.

ಗಾಂಧೀಜಿ ಭಾರತದಲ್ಲಿ ನಡೆಸಿದ ಆರಂಭಕಾಲದ ಹೋರಾಟಗಳ ಪರಿಣಾಮಗಳೇನಾಗಿರಬಹುದೆಂದು ನೋಡೋಣ.

- ಗಾಂಧೀಜಿಯ ಹೋರಾಟದ ವಿಧಾನಗಳು ಮತ್ತು ಆಶಯಗಳನ್ನು ತಿಳಿಯುವ ಅವಕಾಶ ಜನ ಸಾಮಾನ್ಯರಿಗೆ ದೊರೆಯಿತು.
- ವಿದ್ಯಾವಂತರಾದ ಜನರ ಮಧ್ಯೆ ಮಾತ್ರ ಸೀಮಿತವಾಗಿದ್ದ ದೇಶೀಯ ಹೋರಾಟದೆಡೆಗೆ ಜನಸಾಮಾನ್ಯರು ಆಕರ್ಷಿತರಾದರು.
- ಪಟ್ಟಣಗಳಿಗೆ ಮಾತ್ರ ಸೀಮಿತವಾಗಿದ್ದ ದೇಶೀಯ ಹೋರಾಟಗಳು ಗ್ರಾಮ ಪ್ರದೇಶಗಳಲ್ಲಿಯೂ ಪ್ರಬಲವಾದವು.
- ಎಲ್ಲಾ ವಿಭಾಗದ ಜನರಿಗೂ ಒಪ್ಪಿಗೆಯಾಗುವಂತಹ ದೇಶೀಯ ನಾಯಕನಾಗಿ ಗಾಂಧೀಜಿ ಬದಲಾದರು.

ಗಾಂಧೀಜಿಯ ಹೋರಾಟದ ವಿಧಾನಗಳು ಭಾರತೀಯರ ನಾಯಕನನ್ನಾಗಿ ಅವರನ್ನು ಬದಲಿಸಿದ್ದು ಹೇಗೆ?



### ಪ್ಲೇಗ್ ಬೋನಸ್

1917ರಲ್ಲಿ ಅಹಮ್ಮದಾಬಾದಿನಲ್ಲಿ ಶೀಘ್ರವಾಗಿ ಹರಡಿದ ಪ್ಲೇಗ್ ರೋಗದಿಂದ ಅಲ್ಲಿನ ಜನಸಂಖ್ಯೆಯ ಸುಮಾರು 10% ದಷ್ಟು ಮಂದಿಯು ಸಾವಿಗೀಡಾದರು. ಈ ಕಾಲದಲ್ಲಿ ಕಾರ್ಮಿಕರಿಗೆ ಅವರ ಸಂಬಳದ 80% ದವರೆಗೆ ಬೋನಸ್ ಆಗಿ ನೀಡಲಾಗುತ್ತಿತ್ತು. ರೋಗ ಭೀತಿಯಿಂದಾಗಿ ಕಾರ್ಮಿಕರು ಕೆಲಸ ಬಿಟ್ಟು ಹೋಗದಿರಲು ಏರ್ಪಡಿಸಿದ ಈ ವ್ಯವಸ್ಥೆಯು ಪ್ರಥಮ ಜಾಗತಿಕ ಯುದ್ಧದಿಂದಾಗಿ ಉಂಟಾದ ಬೆಲೆಯೇರಿಕೆಯನ್ನು ಎದುರಿಸಲು ಕಾರ್ಮಿಕರಿಗೆ ಸಹಾಯಕವಾಯಿತು. ರೋಗಭೀತಿ ಮುಗಿದೊಡನೆ ಈ ಸೌಲಭ್ಯವನ್ನು ಹಿಂತೆಗೆದದ್ದು ಕಾರ್ಮಿಕರನ್ನು ಹೋರಾಟಕ್ಕೆ ಪ್ರೇರೇಪಿಸಿತು.

### ಗಾಂಧೀಜಿ ಚಲನಚಿತ್ರದಲ್ಲಿ

ರಿಚರ್ಡ್ ಅಟ್ಟನ್‌ಬರೋ ನಿರ್ದೇಶನದಲ್ಲಿ ನಿರ್ಮಾಣ ಮಾಡಿದ ಎಂಟು ಆಸ್ಕರ್ ಪ್ರಶಸ್ತಿಗಳನ್ನು ಗಳಿಸಿದ 'ಗಾಂಧಿ' ಎಂಬ ಚಲನಚಿತ್ರವು ಭಾರತದ ಸ್ವಾತಂತ್ರ್ಯ ಹೋರಾಟದ ಚರಿತ್ರೆಯಲ್ಲಿ ಗಾಂಧೀಜಿಯ ಕಾಲದ ದೃಶ್ಯ ಆವಿಷ್ಕಾರವಾಗಿದೆ. ಶ್ಯಾಮ್ ಬೆನಗಲ್‌ರವರ 'ಮೇಕಿಂಗ್ ಆಫ್ ಮಹಾತ್ಮ' ದಲ್ಲಿ ಗಾಂಧೀಜಿಯ ದಕ್ಷಿಣ ಆಫ್ರಿಕಾದ ಜೀವನದ ಅನುಭವಗಳನ್ನು ಚಿತ್ರೀಕರಿಸಲಾಗಿದೆ. ಇವುಗಳಲ್ಲದೆ ಅನೇಕ ಚಲನಚಿತ್ರಗಳೂ ಸಾಕ್ಷ್ಯಚಿತ್ರಗಳೂ ಗಾಂಧೀಜಿಗೆ ಸಂಬಂಧಿಸಿದಂತೆ ತಯಾರಿಸಲ್ಪಟ್ಟಿವೆ.

ಗಾಂಧೀಜಿಯ ಆರಂಭಕಾಲದ ಹೋರಾಟಗಳು ಹಾಗೂ ಜೀವನ ಶೈಲಿಗಳನ್ನು ಆಧರಿಸಿ ಒಂದು ಡೋಕ್ಯುಮೆಂಟರಿ ತಯಾರಿಸಿರಿ.


## ರಾಷ್ಟ್ರೀಯ ಹೋರಾಟದತ್ತ

K8VYX7

ಭಾರತದ ವಿವಿಧ ಪ್ರಾದೇಶಿಕ ಹೋರಾಟಗಳಲ್ಲಿ ಭಾಗವಹಿಸಿ ಗಳಿಸಿದ ಜ್ಞಾನ, ಅನುಭವಗಳೊಂದಿಗೆ ಗಾಂಧೀಜಿಯು ಭಾರತದ ರಾಷ್ಟ್ರೀಯ ಹೋರಾಟಗಳತ್ತ ಧಾವಿಸಿದರು. ಇದು ತೀವ್ರವಾದ ಚಟುವಟಿಕೆಗಳನ್ನು ತಡೆಯುವ ಹೆಸರಿನಲ್ಲಿ ನಾಗರಿಕ ಹಕ್ಕುಗಳ ಮೇಲೆ ನಿಯಂತ್ರಣವೇರ್ಪಡಿಸುವುದಕ್ಕಾಗಿ 1919ರಲ್ಲಿ ಬ್ರಿಟಿಷ್ ಪಾರ್ಲಿಮೆಂಟು ಮಂಜೂರು ಮಾಡಿದ ನಿಯಮವಾಗಿದೆ.

### ಜಲಿಯನ್ ವಾಲಾಬಾಗ್ ಸಾಮೂಹಿಕ ಕಗ್ಗೊಲೆ

ರೌಲಟ್ ನಿಯಮಕ್ಕೆ ವಿರುದ್ಧವಾದ ಹೋರಾಟಕ್ಕೆ ಪಂಜಾಬ್‌ನಲ್ಲಿ ನೇತೃತ್ವ ವಹಿಸಿದ ಸೈಫುದ್ದೀನ್ ಕಿಚ್ಲು ಮತ್ತು ಸತ್ಯಪಾಲ್ ಎಂಬವರನ್ನು ಬಂಧಿಸಿದುದಕ್ಕಾಗಿ ಪ್ರತಿಭಟನೆ ನಡೆಸಲು 1919 ಎಪ್ರಿಲ್ 13ರಂದು ಜನರು ಅಮೃತಸರದ ಜಲಿಯನ್‌ವಾಲಾಬಾಗ್‌ನಲ್ಲಿ ಒಟ್ಟು ಸೇರಿದ್ದರು. ಅಮೃತಸರ ಪಟ್ಟಣದ ನಿಯಂತ್ರಣವನ್ನು ಈ ಸಂದರ್ಭದಲ್ಲಿ ಸೈನ್ಯವು ವಹಿಸಿಕೊಂಡಿತ್ತು. ಸೈನ್ಯದ ನೇತಾರನಾದ ಜನರಲ್ ಡಯರ್ ತನ್ನ ಆಜ್ಞೆಯನ್ನು ಉಲ್ಲಂಘಿಸಿದರು ಎಂಬ ವ್ಯಾಖ್ಯಾನದೊಂದಿಗೆ ಯಾವುದೇ ಮುನ್ಸೂಚನೆ ನೀಡದೆ ಮೂರು ಭಾಗಗಳಲ್ಲಿಯೂ ಕಟ್ಟಡಗಳಿಂದಾವೃತವಾಗಿದ್ದ ಮೈದಾನದ ಪ್ರವೇಶ ದ್ವಾರದಲ್ಲಿ ಸೈನ್ಯವನ್ನು ನಿಲ್ಲಿಸಿ, ನಿರಾಯುಧರಾದ ಜನರಿಗೆದುರಾಗಿ ಗುಂಡು ಹಾರಿಸಲು ಆಜ್ಞೆ ನೀಡಿದನು. ಹತ್ತು ನಿಮಿಷಗಳ ಕಾಲ ಮುಂದುವರಿದ ಗುಂಡಿನ ಮಳೆಯಲ್ಲಿ 379 ಜನರು ಮಡಿದರು ಎಂಬುದು ಔದ್ಯೋಗಿಕ ಲೆಕ್ಕವಾಗಿತ್ತು. ಆದರೂ ಮರಣ ಸಂಖ್ಯೆ ಇದರ ಎರಡು ಪಟ್ಟಾಗಿತ್ತು.



THE AMRITSAR MASSACRE.

'Darkest Stain on British Rule.'

GREAT SENSATION IN ENGLAND.

Dismissal and Impeachment of Gen. Dyer and Sir Michael Demanded.

(ASSOCIATED PRESS.)

BOMBAY, Dec. 24.

The *Bombay Chronicle* publishes a cable from Mr. B. G. Horniman which *inter alia* says :—

The *Westminster Gazette* says :—The amazing narrative recalls the early German occupation of Belgium and the Peterloo massacre. General Dyer must be recalled and dealt with in such a way that the Amritsar massacre is solemnly repudiated by the Imperial Government. If he is not condemned by the nation he will be condemned by the world.

The *Star* says :—It is the darkest stain on British rule in India and asks how shall we redeem our humanity.

Eight large Labour meetings in Glasgow demand the dismissal and impeachment of General Dyer and Sir Micheal O'Dwyer. Scottish Liberals are also taking action.



ಜಲಿಯನ್‌ವಾಲಾಬಾಗ್‌ನ ಸಾಮೂಹಿಕ ಕಗ್ಗೊಲೆ - ಚಿತ್ರಕಾರನ ಕಲ್ಪನೆಯಲ್ಲಿ

ಭಾರತದಾದ್ಯಂತ ಶಕ್ತಿಯುತವಾದ ಪ್ರತಿಭಟನೆಗಳು ಹುಟ್ಟಿಕೊಳ್ಳಲು ಜಲಿಯನ್‌ವಾಲಾಬಾಗ್ ಘಟನೆಯು ಕಾರಣವಾಯಿತು. "ಪ್ಲಾಸಿಯುದ್ಧವು ಬ್ರಿಟಿಷ್ ಆಡಳಿತಕ್ಕೆ ಅಡಿಪಾಯ ಹಾಕಿದರೆ ಜಲಿಯನ್‌ವಾಲಾಬಾಗ್ ಘಟನೆಯು ಬ್ರಿಟಿಷ್ ಆಡಳಿತದ ಅಡಿಪಾಯವನ್ನು ಅಲುಗಾಡಿಸಿತು" ಎಂದು ಜಲಿಯನ್ ವಾಲಾಬಾಗ್ ಘಟನೆಯ ಕುರಿತು ಗಾಂಧೀಜಿ ಪ್ರತಿಕ್ರಿಯಿಸಿದರು.




**ಜಲಿಯನ್‌ವಾಲಾಬಾಗ್ ದುರಂತವು ಭಾರತದ ರಾಷ್ಟ್ರೀಯ ಚಳುವಳಿಗಳ ಮೇಲೆ ಹೇಗೆ ಪ್ರಭಾವ ಬೀರಿತು? - ಚರ್ಚಿಸಿರಿ.**

## ಅಸಹಕಾರ ಚಳವಳಿ ಮತ್ತು ಖಿಲಾಫತ್ ಚಳವಳಿ

ಅಸಹಕಾರ ಚಳವಳಿಯು ಗಾಂಧೀಜಿಯ ನೇತೃತ್ವದಲ್ಲಿ ಇಂಡಿಯನ್ ನೇಶನಲ್ ಕಾಂಗ್ರೆಸ್ ನಡೆಸಿದ ಪ್ರಥಮ ರಾಷ್ಟ್ರೀಯ ಪ್ರತಿಭಟನೆಯಾಗಿತ್ತು . ರೌಲಟ್ ಆಕ್ಟ್‌ನ ವಿರುದ್ಧ ಚಳವಳಿ ನಡೆಸಿದ ಆತ್ಮವಿಶ್ವಾಸವು ಬ್ರಿಟಿಷ್ ಆಡಳಿತದ ವಿರುದ್ಧ ಅಸಹಕಾರವನ್ನು ಘೋಷಿಸಲು ಗಾಂಧೀಜಿಯನ್ನು ಪ್ರೇರೇಪಿಸಿತು. ಅಸಹಕಾರ ಚಳವಳಿಯ ವಿಶೇಷತೆಗಳು ಯಾವುವೆಂದು ಪರಿಶೋಧಿಸಿರಿ.

ಭಾರತದ ಜನರು ಗಾಂಧೀಜಿಯ ಕರೆಯನ್ನು ಸ್ವೀಕರಿಸಿದುದಕ್ಕೆ ಕೆಲವು ಉದಾಹರಣೆಗಳು:




- ಔಧ್‌ನ ಕೃಷಿಕರು ತೆರಿಗೆ ಪಾವತಿಸಲು ನಿರಾಕರಿಸಿದರು.
- ಉತ್ತರ ಆಂಧ್ರದ ಗಿರಿಜನರು ಅರಣ್ಯನಿಯಮವನ್ನು ಉಲ್ಲಂಘಿಸಿ ಅರಣ್ಯದೊಳಗೆ ಪ್ರವೇಶಿಸಿ ಕಾಡುತ್ಪತ್ತಿಯನ್ನು ಸಂಗ್ರಹಿಸಿದರು.
- ಉತ್ತರ ಪ್ರದೇಶದ ಕೃಷಿಕರು ವಸಾಹತಿನ ಉದ್ಯೋಗಿಗಳ ಹೊರೆಗಳನ್ನು ಹೊರಲು ನಿರಾಕರಿಸಿದರು.
- ಕಾರ್ಮಿಕರು ಮುಷ್ಕರ ಹೂಡಿದರು.
- ವಕೀಲರು ಕೋರ್ಟಿಗೆ ಹೋಗಲು ಒಪ್ಪಲಿಲ್ಲ.
- ವಿದ್ಯಾರ್ಥಿಗಳು ಬ್ರಿಟಿಷ್ ಸರಕಾರದ ಶಾಲಾ ಕಾಲೇಜುಗಳನ್ನು ತ್ಯಜಿಸಿದರು.
- ಸ್ತ್ರೀಯರು ಸೇರಿದಂತೆ ಎಲ್ಲಾ ಜನರು ವಿದೇಶಿ ವಸ್ತ್ರಗಳನ್ನು ಸಾರ್ವಜನಿಕ ರಸ್ತೆಗಳ ಮಧ್ಯೆ ರಾಶಿ ಹಾಕಿ ಸುಟ್ಟರು.


ಗಾಂಧೀಜಿಯ ಚರಕ–
ಸಬರ್‌ಮತಿ ಆಶ್ರಮದ ಸಂಗ್ರಹದಿಂದ

ಬಹಿಷ್ಕಾರಗಳ ಜೊತೆಗೆ ವಸ್ತುಗಳನ್ನು ಉತ್ಪಾದಿಸಲು (Constructive programme) ಗಾಂಧೀಜಿ ಆಹ್ವಾನ ನೀಡಿದರು. ಇದರ ಅಂಗವಾಗಿ ಜನರು ಸ್ವದೇಶೀ ಉತ್ಪನ್ನಗಳನ್ನು ಉತ್ಪಾದಿಸಿ, ಚರಕದಿಂದ ನೂಲು ತಯಾರಿಸಿ, ಖಾದಿ ವಸ್ತ್ರಗಳನ್ನು ಉತ್ಪಾದಿಸಿ, ರಾಷ್ಟ್ರೀಯ ವಿದ್ಯಾಲಯಗಳನ್ನು ಆರಂಭಿಸಿ, ಹಿಂದಿ ಭಾಷೆಯನ್ನು ಪ್ರಚಾರ ಮಾಡಿ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. ಅಸ್ಪೃಶ್ಯತಾ ನಿವಾರಣಾ ಕಾರ್ಯವೂ ಇದರ ಭಾಗವಾಗಿತ್ತು. ಕಾಶಿ ವಿದ್ಯಾಪೀಠ, ಗುಜರಾತ್ ವಿದ್ಯಾಪೀಠ, ಜಾಮಿಯಾ ಮಿಲ್ಲಿಯ ಇತ್ಯಾದಿಗಳು ಆಕಾಲದಲ್ಲಿ ಸ್ಥಾಪಿಸಲಾದ ದೇಶೀಯ ವಿದ್ಯಾಲಯಗಳಿಗೆ ಉದಾಹರಣೆಗಳಾಗಿವೆ. ಇಂಗ್ಲೀಷ್ ಶಾಲೆಗಳನ್ನು ಬಹಿಷ್ಕರಿಸಿದ ವಿದ್ಯಾರ್ಥಿಗಳು ದೇಶೀಯ ವಿದ್ಯಾಭ್ಯಾಸದೆಡೆಗೆ ಆಕರ್ಷಿತರಾದರು.

ಅಸಹಕಾರ ಚಳವಳಿ ನಡೆಯುತ್ತಿದ್ದ ಅದೇ ಸಂದರ್ಭದಲ್ಲಿ ಭಾರತದ ಖಿಲಾಫತ್ ನೇತಾರರಾದ ಮೌಲಾನ ಮಹಮ್ಮದ್ ಆಲಿ ಮತ್ತು ಮೌಲಾನ ಶೌಕತ್ ಆಲಿ ಯ ನೇತೃತ್ವದಲ್ಲಿ ಖಿಲಾಫತ್ ಚಳವಳಿ ಪ್ರಬಲಗೊಂಡಿತು. ಖಿಲಾಫತ್ ಚಳವಳಿಯು ಭಾರತದ ದೇಶೀಯ ಚಳವಳಿಯೊಂದಿಗೆ ಸೇರಿದಾಗ ಸ್ವಾತಂತ್ರ್ಯ ಹೋರಾಟದಲ್ಲಿ ಮುಸಲ್ಮಾನರನ್ನು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ಗಾಂಧೀಜಿಗೆ


ಆಲಿ ಸಹೋದರರು ಮುಹಮ್ಮದ್ ಆಲಿ
ಶೌಕತ್ ಆಲಿ

ಸಾಧ್ಯವಾಯಿತು. ಗಾಂಧೀಜಿ ಖಿಲಾಫತ್ ನೇತಾರರೊಂದಿಗೆ ಭಾರತದಾದ್ಯಂತ ಸಂಚರಿಸಿ ತನ್ನ ಆಶಯಗಳನ್ನು ವ್ಯಕ್ತಪಡಿಸಿದರು. ಇದರಿಂದಾಗಿ:

- ಬ್ರಿಟಿಷ್ ವಿರುದ್ಧದ ಭಾವನೆಯು ಭಾರತದ ಮೂಲೆಮೂಲೆಗಳಿಗೂ ತಲುಪಿತು.
- ಹಿಂದು - ಮುಸ್ಲಿಂ ಏಕತೆ ಬಲಗೊಂಡಿತು.



**ಖಿಲಾಫತ್ ಚಳವಳಿ**

ಒಂದನೇ ಜಾಗತಿಕ ಯುದ್ಧದ ಬಳಿಕ ತುರ್ಕಿಯ ಆಡಳಿತಾಧಿಕಾರಿಯೂ ಜಾಗತಿಕ ಮುಸಲ್ಮಾನರ ಆತ್ಮೀಯ ನೇತಾರನೂ ಆಗಿದ್ದ ಖಲೀಫನ ಅಧಿಕಾರಗಳನ್ನು ನಿಯಂತ್ರಣದಲ್ಲಿಡುವ ಬ್ರಿಟನ್‌ನ ಪ್ರಯತ್ನಕ್ಕೆದುರಾಗಿ ಪ್ರಪಂಚದ ವಿವಿಧ ಕಡೆಗಳಲ್ಲಿ ಆರಂಭವಾದ ಚಳವಳಿಯೇ ಖಿಲಾಫತ್ ಚಳವಳಿ.

ಗಾಂಧೀಜಿ ಖಿಲಾಫತ್ ಚಳವಳಿಯನ್ನು ಪ್ರೋತ್ಸಾಹಿಸಲು ಕಾರಣವಾದ ಸನ್ನಿವೇಶಗಳನ್ನು ವಿಶದೀಕರಿಸಿರಿ.




ಉತ್ತರಪ್ರದೇಶದ ಚೌರಿಚೌರಾ ಎಂಬ ಗ್ರಾಮದಲ್ಲಿ ಜನರಿಗೆದುರಾಗಿ ಪೋಲೀಸರು ಗುಂಡುಹಾರಿಸಿದರು. ಇದರಿಂದ ರೋಷಗೊಂಡ ಜನರು ಪೋಲೀಸ್ ಠಾಣೆಯನ್ನು ಆಕ್ರಮಿಸಿ ಬೆಂಕಿಯಿಟ್ಟರು. ಇಪ್ಪತ್ತೆರಡು ಮಂದಿ ಪೋಲೀಸರು ಮರಣಹೊಂದಿದ ಈ ಘಟನೆಯು ಗಾಂಧೀಜಿಗೆ ವೇದನೆಯನ್ನುಂಟುಮಾಡಿತು. ಅಸಹಕಾರ ಚಳವಳಿಯನ್ನು ನಿಲ್ಲಿಸಲು ಗಾಂಧೀಜಿ ಆಹ್ವಾನವಿತ್ತರು.

## ಪೂರ್ಣ ಸ್ವರಾಜ್ಯ ಮತ್ತು ನಾಗರಿಕ ನಿಯಮ ಉಲ್ಲಂಘನೆ

ಜವಾಹರ್‌ಲಾಲ್ ನೆಹರೂರವರ ಅಧ್ಯಕ್ಷತೆಯಲ್ಲಿ 1929ರಲ್ಲಿ ಲಾಹೋರಿನಲ್ಲಿ ನಡೆದ ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಸಮ್ಮೇಳನವು ಭಾರತದ ಸ್ವಾತಂತ್ರ್ಯ ಹೋರಾಟದ ಪ್ರಧಾನ ತಿರುವಾಗಿತ್ತು. ಈ ಸಮ್ಮೇಳನದಲ್ಲಿ ಕೆಳಗೆ ಹೇಳಿದ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

- ಭಾರತದ ಸ್ವಾತಂತ್ರ್ಯ ಹೋರಾಟದ ಅಂತಿಮ ಗುರಿ ಪೂರ್ಣಸ್ವರಾಜ್ (ಸಂಪೂರ್ಣ ಸ್ವಾತಂತ್ರ್ಯ) ಆಗಿದೆಯೆಂದು ಈ ಸಮ್ಮೇಳನವು ಘೋಷಿಸಿತು.
- ಗಾಂಧೀಜಿಯ ನೇತೃತ್ವದಲ್ಲಿ ನಾಗರಿಕ ನಿಯಮ ಉಲ್ಲಂಘನೆಯನ್ನು ಆರಂಭಿಸಲು ತೀರ್ಮಾನಿಸಲಾಯಿತು.



ಗಾಂಧೀಜಿ ಉಪ್ಪಿನ ನಿಯಮವನ್ನು ಉಲ್ಲಂಘಿಸುತ್ತಿರುವುದು - ಚಿತ್ರಕಾರನ ಕಲ್ಪನೆಯಲ್ಲಿ

ಬ್ರಿಟಿಷರು ಜಾರಿಗೊಳಿಸಿದ ನಾಗರಿಕ ನಿಯಮಗಳನ್ನು ಉಲ್ಲಂಘಿಸುವುದು ಈ ಚಳುವಳಿಗಳ ಉದ್ದೇಶವಾಗಿತ್ತು. ಈ ಹೋರಾಟದ ಅಂಗವಾಗಿ ಗಾಂಧೀಜಿ ಮುಂದಿಟ್ಟ ಬೇಡಿಕೆಗಳನ್ನು ಕೆಳಗೆ ನೀಡಲಾಗಿದೆ.

**ಗಾಂಧೀಜಿ ಮುಂದಿರಿಸಿದ ಬೇಡಿಕೆಗಳು**

- ಉಪ್ಪಿನ ತೆರಿಗೆಯನ್ನು ತೆಗೆದು ಹಾಕುವುದು.
- ಕೃಷಿಕರಿಗೆ ಶೇಕಡಾ 50ರಷ್ಟು ತೆರಿಗೆ ವಿನಾಯಿತಿ ನೀಡುವುದು.
- ವಿದೇಶಿ ವಸ್ತ್ರಗಳ ಆಮದು ತೆರಿಗೆಯನ್ನು ಹೆಚ್ಚಿಸುವುದು.
- ಜೈಲಿನಲ್ಲಿರುವ ರಾಜಕೀಯ ಕೈದಿಗಳನ್ನು ಬಂಧ ಮುಕ್ತಗೊಳಿಸುವುದು.
- ಸೈನಿಕರ ಖರ್ಚು ಹಾಗೂ ಉನ್ನತ ಉದ್ಯೋಗಸ್ಥರ ಸಂಬಳವನ್ನು ಕಡಿಮೆಗೊಳಿಸುವುದು.
- ಭಾರತೀಯರ ಬಗ್ಗೆ ನಿಗಾವಹಿಸಲು ನಿಯೋಜಿಸಲ್ಪಟ್ಟ ಗುಪ್ತಚರ ವಿಭಾಗವನ್ನು ರದ್ದುಪಡಿಸುವುದು.
- ಕರಾವಳಿಯಲ್ಲಿ ಹಡಗು ಸಂಚಾರ ವ್ಯವಸ್ಥೆಯನ್ನು ಆರಂಭಿಸುವುದು.
- ಸಂಪೂರ್ಣ ಮದ್ಯ ನಿಷೇಧವನ್ನು ಜಾರಿಗೆ ತರುವುದು.



**ಭಾರತವು ಸ್ವಾತಂತ್ರ್ಯ ಪಡೆಯುವಲ್ಲಿ ಗಾಂಧೀಜಿ ಮುಂದಿರಿಸಿದ ಬೇಡಿಕೆಗಳು ಎಷ್ಟರಮಟ್ಟಿಗೆ ಸೂಕ್ತವಾಗಿದ್ದುವು? ಚರ್ಚಿಸಿರಿ.**

ಉಪ್ಪು ಎಂಬುದನ್ನು ಹೋರಾಟದ ಆಯುಧವಾಗಿ ಆಯ್ಕೆಮಾಡಲು ಗಾಂಧೀಜಿಯನ್ನು ಪ್ರೇರೇಪಿಸಿದ ಘಟಕಗಳು ಯಾವುವು ಎಂಬುದನ್ನು ಪರಿಶೀಲಿಸೋಣ.

- ಬ್ರಿಟಿಷ್ ಸರಕಾರದ ತೆರಿಗೆ ಆದಾಯದಲ್ಲಿ ಐದರಲ್ಲಿ ಎರಡು ಭಾಗವೂ ಉಪ್ಪಿನ ಮೇಲೆ ಹೊರಿಸುವ ತೆರಿಗೆಯಾಗಿತ್ತು.
- ಬಡವರಿಗೆ ಈ ತೆರಿಗೆಯು ಹೊರಲಾರದ ಭಾರವಾಗಿತ್ತು.
- ಭಾರತೀಯ ಕಿರು ಉಪ್ಪು ಉತ್ಪಾದನಾ ಘಟಕಗಳಿಗೆ ನಿಷೇಧ ಹೇರಲಾಯಿತು.
- ಉಪ್ಪಿನ ಬೆಲೆಯನ್ನು ಮೂರು ಪಟ್ಟು ಹೆಚ್ಚಿಸಲಾಯಿತು.
- ಇದು ಜನಸಾಮಾನ್ಯರನ್ನು ಎಚ್ಚರಿಸಲು ಸಹಾಯಕವಾದ ಒಂದು ಘೋಷಣೆಯಾಗಿತ್ತು.


*ಗಾಂಧೀಜಿ ಲಂಡನ್‌ನಲ್ಲಿ*

ಉಪ್ಪಿನ ತೆರಿಗೆಯನ್ನು ತೆಗೆದು ಹಾಕಬೇಕೆಂದು ನಿಯಮ ಉಲ್ಲಂಘನೆ ಹೋರಾಟದ ಶಕ್ತಿಯನ್ನು ವಿವರಿಸುತ್ತಾ ಅವರು ಹೀಗೆ ಹೇಳಿದರು:

> *"ಏಳು ಲಕ್ಷ ಗ್ರಾಮಗಳಿಂದ ಹತ್ತು ಜನರ ಹಾಗೆ ಉಪ್ಪು ಉತ್ಪಾದಿಸಲು ಆರಂಭಿಸಿದರೆ ಈ ಸರಕಾರಕ್ಕೆ ಏನು ಮಾಡಲು ಸಾಧ್ಯ? ನಿಮಗೆ ಊಹಿಸಲು ಸಾಧ್ಯವಾದಲ್ಲಿ ಅತ್ಯಂತ ನೀಚನಾದ ಸ್ವೇಚ್ಛಾಧಿಕಾರಿಯೂ ಶಾಂತಿಯುತರಾಗಿ ನಿಯಮವನ್ನು ಉಲ್ಲಂಘಿಸುವ ಜನರನ್ನು ಫಿರಂಗಿಯಿಂದ ಎದುರಿಸಲು ಧೈರ್ಯ ತೋರಿಸಲಾರನು. ನೀವು ಸ್ವಲ್ಪ ಸ್ವಯಂ ಬದಲಾಗಲು ತಯಾರಾದರೆ ನಮಗೆ ಈ ಸರಕಾರವನ್ನು ಅತೀ ಕಡಿಮೆ ಸಮಯದಲ್ಲಿ ಶಕ್ತಿಗುಂದುವಂತೆ ಮಾಡಲು ಸಾಧ್ಯವೆಂದು ನಾನು ನಿಮಗೆ ಭರವಸೆ ನೀಡುತ್ತೇನೆ".*
>
> *ಗಾಂಧೀಜಿ*

KDH94X



**ದುಂಡುಮೇಜಿನ ಪರಿಷತ್ತು**

ಭಾರತದಲ್ಲಿ ಜಾರಿಗೊಳಿಸಬೇಕಾದ ಆಡಳಿತ ಸುಧಾರಣೆಗಳ ಕುರಿತು ಚರ್ಚಿಸಲು ಬ್ರಿಟಿಷ್ ಸರಕಾರವು ಲಂಡನ್‌ನ ಜೇಮ್ಸ್ ಪ್ಯಾಲೇಸ್‌ನಲ್ಲಿ 1930, 1931, 1932 ಎಂಬೀ ವರ್ಷಗಳಲ್ಲಿ ಮೂರು ದುಂಡು ಮೇಜಿನ ಪರಿಷತ್ತುಗಳನ್ನು ಕರೆಯಿತು. ಎರಡನೇ ದುಂಡು ಮೇಜಿನ ಪರಿಷತ್ತಿನಲ್ಲಿ ಇಂಡಿಯನ್ ನೇಶನಲ್ ಕಾಂಗ್ರೆಸನ್ನು ಪ್ರತಿನಿಧೀಕರಿಸಿ ಗಾಂಧೀಜಿಯು ಭಾಗವಹಿಸಿದರು.


ಸರೋಜಿನಿ ನಾಯ್ಡು

ಗಾಂಧೀಜಿಯ ಆಹ್ವಾನವನ್ನು ಸ್ವೀಕರಿಸಿದ ಜನರು ಭಾರತದ ವಿವಿಧ ಭಾಗಗಳಲ್ಲಿ ಉಪ್ಪುತಯಾರಿಸಿ ನಿಯಮ ಉಲ್ಲಂಘನಾ ಚಳುವಳಿಯಲ್ಲಿ ಪಾಲ್ಗೊಂಡರು. ಕೇರಳದ ಪಯ್ಯನ್ನೂರು, ತಮಿಳುನಾಡಿನ ವೇದಾರಣ್ಯ, ಮಹಾರಾಷ್ಟ್ರದ ಬೋಂಬೆ, ಬಂಗಾಳದ ನವಖಾಲಿ ಮತ್ತು ವಾಯುವ್ಯ ಭಾಗದ ಗಡಿಪ್ರದೇಶಗಳು ನಿಯಮ ಉಲ್ಲಂಘನಾ ಚಳುವಳಿಯ ಪ್ರಧಾನ ಕೇಂದ್ರಗಳಾಗಿದ್ದುವು. ಈ ಭಾಗಗಳಲ್ಲಿ ಚಳವಳಿಯ ಸ್ವಯಂಸೇವಕರು ಉಪ್ಪು ತಯಾರಿಸಿ ಜನರಿಗೆ ವಿತರಣೆ ಮಾಡಿ, ರಾಷ್ಟ್ರಧ್ವಜವನ್ನು ಹಾರಿಸಿ, ಬ್ರಿಟಿಷರ ವಿರುದ್ಧ ಘೋಷಣೆಗಳನ್ನು ಮೊಳಗಿಸಿದರು. ಗುಜರಾತಿನ ಧರಾಸನ ಉಪ್ಪು ನಿರ್ಮಾಣ ಘಟಕಕ್ಕೆ ಸರೋಜಿನಿ ನಾಯ್ಡುರವರ ನೇತೃತ್ವದಲ್ಲಿ ಹೊರಟ ಸತ್ಯಾಗ್ರಹಿಗಳನ್ನು ತುಂಬಾ ನಿಷ್ಠುರವಾದ ರೀತಿಯಲ್ಲಿ ಬ್ರಿಟಿಷ್ ಪೋಲೀಸರು ದಮನಿಸಿದರು.

ಉಪ್ಪು ಸತ್ಯಾಗ್ರಹದಲ್ಲಿ ಭಾಗವಹಿಸಿದ ಕಾರಣ ಬ್ರಿಟಿಷ್ ಸರಕಾರವು ಗಾಂಧೀಜಿಯನ್ನು ಬಂಧಿಸಿತು. ಈ ಹೋರಾಟವನ್ನು ಬ್ರಿಟಿಷರು ಕ್ರೂರವಾಗಿ ದಮನಿಸಿದರು.

"ರಾಷ್ಟ್ರೀಯ ಹೋರಾಟವನ್ನು ಬಲಪಡಿಸುವಲ್ಲಿ ಉಪ್ಪು ಸತ್ಯಾಗ್ರಹವು ಪ್ರಧಾನ ಪಾತ್ರವಹಿಸಿದೆ." ಈ ಹೇಳಿಕೆಯನ್ನು ಸಮರ್ಥಿಸಿರಿ.



## ಬ್ರಿಟಿಷರೇ ಭಾರತ ಬಿಟ್ಟು ತೊಲಗಿರಿ

*"ಇದೋ ಒಂದು ಮಂತ್ರ, ಒಂದು ಕಿರು ಮಂತ್ರ ನಾನು ನಿಮಗೆ ಹೇಳಿಕೊಡುತ್ತೇನೆ. ನಿಮ್ಮ ಒಂದೊಂದು ಉಸಿರಿನಲ್ಲೂ ಅದು ಹೊರಹೊಮ್ಮುತ್ತಿರಲಿ, 'ಮಾಡು ಇಲ್ಲವೇ ಮಡಿ' ಎಂಬುದೇ ಈ ಮಂತ್ರ. ನಾವೆಲ್ಲ ಒಂದಾದರೆ ಭಾರತವನ್ನು ಸ್ವತಂತ್ರಗೊಳಿಸಬಹುದು. ಅಲ್ಲದಿದ್ದರೆ ಈ ಪ್ರಯತ್ನದಲ್ಲಿ ಮಡಿಯುವುದು ಖಂಡಿತ. ನಾವು ನಮ್ಮ ಗುಲಾಮತನವನ್ನು ಮುಂದುವರಿಸುವುದನ್ನು ಕಾಣಲು ಜೀವಿಸಲಾರೆವು".*

*ಗಾಂಧೀಜಿ*

KDR56K

ಇವು 1942 ಅಗೋಸ್ತು 8ರಂದು ಬೋಂಬೆಯಲ್ಲಿ ನಡೆದ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಗಾಂಧೀಜಿ ಜನರಲ್ಲಿ ಹೇಳಿದ ಮಾತುಗಳಾಗಿವೆ. ಇದು ಗಾಂಧೀಜಿಯ ನೇತೃತ್ವದಲ್ಲಿ ಇಂಡಿಯನ್ ನೇಶನಲ್ ಕಾಂಗ್ರೆಸ್ ನಡೆಸಿದ ಕೊನೆಯ ಜನಪರ ಹೋರಾಟವಾದ ಕ್ವಿಟ್ ಇಂಡಿಯಾ ಹೋರಾಟಕ್ಕೆ ನೀಡಿದ ಆಹ್ವಾನವಾಗಿದೆ.

ಕ್ವಿಟ್ ಇಂಡಿಯಾ ಚಳುವಳಿಯು ನಾಗರಿಕ ಉಪ್ಪು ಉಲ್ಲಂಘನಾ ಹೋರಾಟದಂತೆ ಪ್ರಸಿದ್ಧವಾದ ಮತ್ತೊಂದು ಹೋರಾಟವಾಗಿತ್ತು. ಎಲ್ಲ ಅಧಿಕಾರಗಳನ್ನೂ ಭಾರತಕ್ಕೆ ಹಸ್ತಾಂತರಿಸಿ ಭಾರತವನ್ನು ಬಿಟ್ಟು ಹೋಗಲು ಬ್ರಿಟಿಷರನ್ನು ನಿರ್ಬಂಧಿಸುವ ಅಹಿಂಸಾ ಮಾರ್ಗದಿಂದ ಕೂಡಿದ ಒಂದು ಹೋರಾಟವನ್ನು ಇಂಡಿಯನ್ ನೇಶನಲ್ ಕಾಂಗ್ರೆಸ್ ಮುಂದಿಟ್ಟಿತು. ಕ್ವಿಟ್ ಇಂಡಿಯಾ ಚಳವಳಿಗೆ ಕಾರಣವಾದ ಕೆಲವು ಘಟಕಗಳನ್ನು ಪರಿಶೀಲಿಸೋಣ.



*ಮೌಲಾನ ಅಬ್ದುಲ್‌ಕಲಾಂ ಆಜಾದ್, ಜೆ.ಬಿ. ಕೃಪಲಾನಿ ಎಂಬವರೊಂದಿಗೆ ಗಾಂಧೀಜಿ ಕ್ವಿಟ್ ಇಂಡಿಯಾ ಸಮ್ಮೇಳನದ ವೇದಿಕೆಯಲ್ಲಿ*

- ಭಾರತದಲ್ಲಿ ನಿಜವಾದ ಸಂವಿಧಾನಾತ್ಮಕ ಸುಧಾರಣೆಗಳನ್ನು ಜಾರಿಗೆ ತರಲು ಬ್ರಿಟನ್ ತೋರಿಸಿದ ವಿಮುಖತೆ.
- ಬೆಲೆಯೇರಿಕೆ ಮತ್ತು ಕ್ಷಾಮಗಳಿಂದಾಗಿ ಜನರಲ್ಲುಂಟಾದ ಅತೃಪ್ತಿ.
- ಎರಡನೇ ಜಾಗತಿಕ ಯುದ್ಧದಲ್ಲಿ ಬ್ರಿಟನ್ ಸೋಲನ್ನನುಭವಿಸಬಹುದೆಂಬ ಭಾವನೆ.

ಈ ಹೋರಾಟದ ಅಂಗವಾಗಿ ಗಾಂಧೀಜಿ ಜನರಿಗೆ ನೀಡಿದ ಸಲಹೆಗಳು:

- ದೇಶೀಯ ರಾಜರು ತಮ್ಮ ಪ್ರಜೆಗಳ ಪರಮಾಧಿಕಾರವನ್ನು ಅಂಗೀಕರಿಸಬೇಕು.
- ಕೃಷಿಕರು ಭೂ ತೆರಿಗೆ ಕೊಡಬಾರದು.
- ಸರಕಾರಿ ಉದ್ಯೋಗಿಗಳು ರಾಜಿನಾಮೆ ನೀಡದೆ ಕಾಂಗ್ರೆಸ್‌ನೊಂದಿಗಿರುವ ಸಂಬಂಧವನ್ನು ಬಹಿರಂಗಪಡಿಸಬೇಕು.
- ಸೈನಿಕರು ತಮ್ಮ ಸ್ಥಾನಗಳನ್ನು ತ್ಯಜಿಸದೆ ತಮ್ಮದೇ ಜನರ ವಿರುದ್ಧ ಗುಂಡುಹಾರಿಸಲು ಅಸಮ್ಮತಿಸುವುದು.
- ಸ್ವಾತಂತ್ರ್ಯ ಸಿಗುವವರೆಗೆ ಸಹಿಸಲು ಸಾಧ್ಯವಿದ್ದರೆ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ತೊರೆಯಬೇಕು.

*ಭಾರತದಲ್ಲಿ ಗಾಂಧೀಜಿ ನಡೆಸಿದ ವಿವಿಧ ಹೋರಾಟಗಳ ಚಿತ್ರಗಳನ್ನು ಸೇರಿಸಿಕೊಂಡು ಡಿಜಿಟಲ್ ಆಲ್ಬಂ ತಯಾರಿಸಿರಿ.*



- ♦ **ಕ್ವಿಟ್ ಇಂಡಿಯಾ ಚಳವಳಿಯು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಧಾನ ತಿರುವಾಗಿತ್ತು ಚರ್ಚಿಸಿರಿ.**
- ♦ **"ಗಾಂಧೀಜಿ ಮತ್ತು ಭಾರತದ ಸ್ವಾತಂತ್ರ್ಯ ಹೋರಾಟ" ಎಂಬ ವಿಷಯವನ್ನು ಆಧಾರವಾಗಿರಿಸಿ ರಸಪ್ರಶ್ನೆ ತಯಾರಿಸಿರಿ.**



ಗಾಂಧೀಜಿಯನ್ನೂ ಒಳಗೊಂಡಂತೆ ನೇತಾರರನ್ನು ಬಂಧಿಸಿದ ಬ್ರಿಟಿಷ್ ಸರಕಾರವು ಪ್ರತಿಭಟನೆಗಳನ್ನು ಅತ್ಯಂತ ಕ್ರೂರವಾಗಿ ದಮನಿಸಿತು. ಕೋಪೋದ್ರಿಕ್ತರಾದ ಜನರು ಅನೇಕ ಭಾಗಗಳಲ್ಲಿ ಸರಕಾರಿ ಕಟ್ಟಡಗಳನ್ನೂ ವಿದ್ಯುತ್ ತಂತಿಗಳನ್ನೂ ಸಾರಿಗೆ ಸಂಪರ್ಕವನ್ನೂ ಹಾನಿಗೊಳಿಸಿದರು. 1942ರ ಅಂತಿಮ ವೇಳೆಗೆ ಭಾರತದಾದ್ಯಂತ ಹೋರಾಟಗಳು ತೀವ್ರಸ್ವರೂಪವನ್ನು ಪಡೆದುವು. ಕ್ವಿಟ್ ಇಂಡಿಯಾ ಚಳವಳಿಯು ಸ್ವಾತಂತ್ರ್ಯಗಳಿಸಲಿರುವ ಭಾರತೀಯರ ಮನಸ್ಸಿನ ದೃಢನಿಶ್ಚಯವನ್ನು ಸೂಚಿಸುತ್ತದೆ.

## ವಿಭಿನ್ನ ಹಾದಿಗಳು

> *"ಜನಸಾಮಾನ್ಯರ ಬ್ರಿಟಿಷ್ ವಿರೋಧಿ ಮನೋಭಾವವು ಅದರ ಪರಾಕಾಷ್ಠೆಯನ್ನು ತಲುಪಿರುವಾಗ ಚಳವಳಿಯನ್ನು ಹಿಂತೆಗೆದುಕೊಳ್ಳುವ ಕಹಳೆ ಹೊರಡಿಸುವುದು ದೇಶೀಯ ದುರಂತಕ್ಕೆ ಸಮಾನವಲ್ಲದೆ ಮತ್ತೇನೂ ಅಲ್ಲ. ಮಹಾತ್ಮಾಜಿಯವರ ಪ್ರಧಾನ ಸಹವರ್ತಿಗಳಾದ ದೇಶಬಂಧು ಸಿ.ಆರ್. ದಾಸ್, ಮೋತಿಲಾಲ್ ನೆಹರು, ಲಾಲಾಲಜಪತ್ ರಾಯ್ ಮತ್ತು ನಾನು ಜೈಲಿನಲ್ಲಿದ್ದುಕೊಂಡು ಜನರ ಪ್ರತಿಭಟನೆಯನ್ನು ಬೆಂಬಲಿಸಿದೆವು. ಮಹಾತ್ಮಗಾಂಧಿಯ ಈ ನಿರ್ಧಾರದಿಂದ ದುಃಖತಪ್ತರಾದ ಮತ್ತು ರೋಷಗೊಂಡ ದೇಶಬಂಧುವನ್ನು ನಾನು ಜೈಲಿನಲ್ಲಿ ಕಂಡೆನು"*
>
> *ಸುಭಾಷ್‌ಚಂದ್ರ ಬೋಸ್*


ಚಂದ್ರಶೇಖರ ಆಜಾದ್


ಭಗತ್‌ಸಿಂಗ್


ಸುಖ್‌ದೇವ್


ರಾಜ್‌ಗುರು

ಇವು ಚೌರಿಚೌರಾ ಘಟನೆಯಿಂದಾಗಿ ಗಾಂಧೀಜಿ ಅಸಹಕಾರ ಚಳವಳಿಯನ್ನು ಹಿಂತೆಗೆದುದರ ವಿರುದ್ಧವಾಗಿರುವ ಸುಭಾಷ್‌ಚಂದ್ರ ಬೋಸರ ಮಾತುಗಳಾಗಿವೆ. ಈ ರೀತಿಯಲ್ಲಿ ಗಾಂಧೀಜಿಯ ಹೋರಾಟ ರೀತಿ ಹಾಗೂ ಆಶಯಗಳಿಂದ ವಿಭಿನ್ನವಾದ ದೃಷ್ಟಿಕೋನಗಳಿದ್ದ ಹೋರಾಟಗಳು ಮತ್ತು ವ್ಯಕ್ತಿಗಳು ಭಾರತದ ರಾಷ್ಟ್ರೀಯ ಹೋರಾಟದಲ್ಲಿ ನಿರ್ಣಾಯಕ ಪಾತ್ರವಹಿಸಿದ್ದರು. ಅವರ ಉದ್ದೇಶವೂ ಭಾರತದ ಸ್ವಾತಂತ್ರ್ಯವೇ ಆಗಿತ್ತು.

ಗಾಂಧೀಜಿಯ ಹೋರಾಟ ರೀತಿಯನ್ನೆದುರಿಸಿದ ಸಿ.ಆರ್. ದಾಸ್, ಮೋತಿಲಾಲ್ ನೆಹರು ಎಂಬವರು 1923ರಲ್ಲಿ ಸ್ವರಾಜ್ ಪಕ್ಷವನ್ನು ರೂಪಿಸಿದರು. ನಿಯಮನಿರ್ಮಾಣ ಸಭೆಗಳನ್ನು ನಾವು ಬಹಿಷ್ಕರಿಸುವುದರ ಬದಲಾಗಿ ಹೋರಾಟವು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ವೇದಿಕೆಗಳಾಗಬೇಕೆಂದು ಅವರು ಹೇಳಿದರು. ಮಾತ್ರವಲ್ಲದೆ ನಿಯಮ ನಿರ್ಮಾಣ ಸಭೆಗಳಿಗೂ ಸ್ಪರ್ಧಿಸಿದರು. ಕ್ರಮೇಣ ಗಾಂಧೀಜಿಯ ಹೋರಾಟದ ವಿಧಾನಗಳ ಬಗ್ಗೆ ಇರುವ ಅಸಮಾಧಾನವನ್ನು ಹೆಚ್ಚು ಶಕ್ತಿಯುತವಾಗಿ ವ್ಯಕ್ತಪಡಿಸಲು ಆರಂಭಿಸಿದರು.

ಪಂಜಾಬು, ರಾಜಸ್ಥಾನ, ಉತ್ತರಪ್ರದೇಶ, ಬಿಹಾರಗಳಲ್ಲಿನ ಕ್ರಾಂತಿಕಾರಿಗಳು ದೆಹಲಿಯಲ್ಲಿ 1928ರಲ್ಲಿ 'ಹಿಂದೂಸ್ಥಾನ್ ಸೋಶಿಯಲಿಸ್ಟ್ ರಿಪಬ್ಲಿಕನ್ ಅಸೋಸಿಯೇಶನ್' ಎಂಬ ಸಂಘಟನೆಯನ್ನು ರೂಪಿಸಿದರು. ಭಗತ್‌ಸಿಂಗ್, ಚಂದ್ರಶೇಖರ್ ಆಜಾದ್, ರಾಜ್‌ಗುರು, ಸುಖ್‌ದೇವ್ ಮುಂತಾದವರು ಇದಕ್ಕೆ ನೇತೃತ್ವ ವಹಿಸಿದರು. ಆಯುಧಸಹಿತವಾದ ಆಂದೋಲನಗಳಿಗೆ ನೇತೃತ್ವ ವಹಿಸಿದ ಇವರು 'ರಿಪಬ್ಲಿಕನ್ ಆರ್ಮಿ' ಎಂಬ ಸೇನಾ ವಿಭಾಗವನ್ನು ಆರಂಭಿಸಿದರು.


The Tribune.

VOL. LI. NO. 70 LAHORE, WEDNESDAY, MARCH 25, 1931. Price One Anna

BHAGAT SINGH, RAJGURU AND SUKHDEV EXECUTED.

NO "LAST INTERVIEW" WITH RELATIONS.

Shouts Emerge From Jail.

DEAD BODIES SECRETLY DISPOSED OF

Removed to Distant Place.

ಭಗತ್‌ಸಿಂಗ್ ಮತ್ತು ಜೊತೆಗಾರರು ವಧಿಸಲ್ಪಟ್ಟ ವಾರ್ತೆಗಳಿರುವ ಪತ್ರಿಕೆ

ವಸಾಹತು ಶಾಹಿಗಳ ಅಧಿಕಾರವನ್ನು ಬುಡಮೇಲು ಮಾಡುವುದು, ಭಾರತದಲ್ಲಿ ಗಣರಾಜ್ಯವನ್ನು ಸ್ಥಾಪಿಸುವುದು, ಆಯುಧ ಸಹಿತ ಹೇರಾಟವನ್ನು ಸಂಘಟಿಸುವುದು ಇವರ ಉದ್ದೇಶವಾಗಿತ್ತು. ದೇಶೀಯ ನೇತಾರರಲ್ಲಿ ಒಬ್ಬರಾಗಿದ್ದ ಲಾಲಾ ಲಜಪತ್ ರಾಯ್‌ಯವರನ್ನು ಮರಣದೆಡೆಗೆ ಕೊಂಡೊಯ್ದ ಲಾಠಿ ಚಾರ್ಜಿಗೆ ವಿರುದ್ಧವಾಗಿ ಸೇಂಡರ್ಸ್ ಎಂಬ ಪೋಲೀಸನನ್ನು ರಾಜ್‌ಗುರು, ಭಗತ್‌ಸಿಂಗ್, ಸುಖ್‌ದೇವ್ ಎಂಬವರು ಸೇರಿ

ಲಾಹೋರಿನಲ್ಲಿ ಗುಂಡಿಟ್ಟು ಕೊಂದರು. ನಾಗರಿಕ ಹಕ್ಕುಗಳನ್ನು ನಿಯಂತ್ರಿಸುವ ಕ್ರೂರ ನಿಯಮಗಳನ್ನು ಜಾರಿಗೊಳಿಸುವುದನ್ನು ವಿರೋಧಿಸಿ ಭಗತ್‌ಸಿಂಗ್, ಬದುಕೇಶ್ವರ್ ದತ್ತ್ ಮೊದಲಾದವರು ಒಟ್ಟು ಸೇರಿ ಸೆಂಟ್ರಲ್ ಲೆಜಿಸ್ಲೇಟಿವ್ ಅಸೆಂಬ್ಲಿಗೆ ಬಾಂಬೆಸೆದರು.ಈ ಕಾರಣಕ್ಕೆ ಅವರನ್ನು ಬಂಧಿಸಲಾಯಿತು. 1931 ಮಾರ್ಚ್ 23ರಂದು ಭಗತ್‌ಸಿಂಗ್, ಸುಖ್‌ದೇವ್ ಮತ್ತು ರಾಜ್‌ಗುರುವನ್ನು ಬ್ರಿಟಿಷ್ ಸರಕಾರವು ನೇಣಿಗೇರಿಸಿತು.

### ಭಗತ್‌ಸಿಂಗ್ ಬದುಕೇಶ್ವರ್ ದತ್ತ್‌ಗೆ ಕಳುಹಿಸಿದ ಪತ್ರ

ಪ್ರಿಯ ಆತ್ಮಮಿತ್ರನೇ,

**ಕೇಸಿನ ತೀರ್ಪು ಘೋಷಿಸಲ್ಪಟ್ಟದೆ.. ಸಾಮ್ರಾಜ್ಯಶಾಹಿತ್ವವು ನನಗೆ ನೇಣುಗಂಬವನ್ನು ವಿಧಿಸಿದೆ. ಈ ಕತ್ತಲೆಯ ಬಂಧನದಲ್ಲಿ ಇತರ ಬಂಧಿಗಳ ಜೊತೆಗೆ ನಾನೂ ನೇಣಿಗೇರಲು ಕಾಯುತ್ತಿದ್ದೇನೆ. ಒಂದು ವೇಳೆ ಹೋರಾಟಗಾರರೆಲ್ಲರ ಪ್ರಾರ್ಥನೆ ಈ ನೇಣುಗಂಬದಿಂದ ರಕ್ಷಿಸಲ್ಪಡಬೇಕು ಎಂದಾಗಿದ್ದರೂ ನಾನು ಈ ವಿಷಯದಲ್ಲಿ ಸ್ವಲ್ಪ ಭಿನ್ನ. ನನ್ನ ದೇಶಕ್ಕಾಗಿ ನಾನು ಜೀವತ್ಯಾಗ ಮಾಡುವ ಒಂದು ಸುದಿನಕ್ಕಾಗಿ ಕಾಯುತ್ತಿದ್ದೇನೆ.**

**ಅತ್ಯಂತ ಸಂತೋಷದಿಂದ ನಾನು ನೇಣುಗಂಬವನ್ನೇರುತ್ತೇನೆ. ಧೀರ ದೇಶಾಭಿಮಾನಿಗಳು ದೇಶಕ್ಕಾಗಿ ಹೇಗೆ ಪ್ರಾಣತ್ಯಾಗ ಮಾಡುತ್ತಾರೆಂಬುದನ್ನು ನಾನು ಲೋಕಕ್ಕೆ ತೋರಿಸಿಕೊಡುತ್ತೇನೆ. ನನಗೆ ನೇಣು ಶಿಕ್ಷೆಯನ್ನು ನೀಡಿದ್ದಾರೆ. ಆದರೆ ನಿಮಗೆ ನನ್ನಿಂದ ತುಂಬಾ ಭಿನ್ನವಾಗಿ ಜೀವನಾದ್ಯಂತ ಸೆರೆಮನೆಯಲ್ಲಿರುವ ಶಿಕ್ಷೆ ದೊರೆತಿದೆ. ಆದರೂ ನೀವು ಜೀವಿಸುವಿರಿ. ಕ್ರಾಂತಿಗಾರರು ಅವರ ಆದರ್ಶಕ್ಕಾಗಿ ಮರಣವನ್ನೆದುರಿಸಲೂ ಸಿದ್ಧ ಮಾತ್ರವಲ್ಲ, ಯಾವ ಆಪತ್ಕಾಲವನ್ನೂ ತಲೆಯೆತ್ತಿ ನಿಂತು ಎದುರಿಸಲು ತಯಾರು ಎಂಬುದನ್ನು ನೀವು ಲೋಕಕ್ಕೆ ಹೇಳಿಕೊಡಬೇಕು. ಸಾವು ಎಂಬುದು ಲೌಕಿಕ ಕಷ್ಟಗಳಿಂದ ಓಡಿ ಹೋಗಲಿರುವ ಒಂದು ದಾರಿಯಾಗಬಾರದು. ನೇಣುಗಂಬದಿಂದ ರಕ್ಷಿಸಲ್ಪಟ್ಟ ಕ್ರಾಂತಿಕಾರಿಗಳು ಜೀವಿಸಿದ್ದರೂ ನೇಣುಗಂಬಕ್ಕೇರಲು ಅವರು ಉತ್ಸುಕರಾಗಿದ್ದಾರೆ ಮಾತ್ರವಲ್ಲ ಕಠಿಣವಾದ ರಾತ್ರಿಗಳಲ್ಲಿ ಜೈಲು ಗೋಡೆಗಳ ಮಧ್ಯೆ ಮಲಗಿ ಅತೀ ಕ್ರೂರವಾದ ಪೀಡನೆಗಳನ್ನು ಸಹಿಸುವರೆಂದೂ ಲೋಕಕ್ಕೆ ತಿಳಿಸಿಬಿಡುವೆವು.**

ಸೆಂಟ್ರಲ್ ಜೈಲ್
1930 ನವೆಂಬರ್

ನಿಮ್ಮ ಭಗತ್‌ಸಿಂಗ್

ಭಾರತದ ಸ್ವಾತಂತ್ರ್ಯಕ್ಕಾಗಿ ರೂಪುಗೊಂಡ ಕೆಲವು ಕ್ರಾಂತಿಕಾರಿ ಸಂಘಟನೆಗಳು ಹಾಗೂ ಅವುಗಳ ನೇತಾರರನ್ನು ಕೆಳಗೆ ನೀಡಲಾಗಿದೆ.

ಅಭಿನವ ಭಾರತ ಸೊಸೈಟಿ
**ವಿ.ಡಿ. ಸಾವರ್ಕರ್**

ಅನುಶೀಲನ್ ಸಮಿತಿ
**ಬರೀಂದರ್ ಕುಮಾರ್ ಘೋಷ್, ಪುಲಿನ್ ಬಿಹಾರಿ ದಾಸ್**

ಗದ್ದರ್ ಪಾರ್ಟಿ
**ಲಾಲಾ ಹರ್‌ದಯಾಳ್**

ಇಂಡಿಯನ್ ರಿಪಬ್ಲಿಕನ್ ಆರ್ಮಿ
**ಸೂರ್ಯಸೇನ್**

ರಷ್ಯಾದ ಕ್ರಾಂತಿಯ ಪ್ರಚೋದನೆಯಿಂದ 1930ರಲ್ಲಿ ಸಮಾಜವಾದಿ ಆಶಯಗಳು ಭಾರತದಲ್ಲಿ ಪ್ರಚಾರವಾಗಲು ಆರಂಭವಾದುವು. ಈ ಆಶಯಗಳು ಕಾಂಗ್ರೆಸ್ಸಿನ ಒಂದು ವಿಭಾಗದವರನ್ನು ಪ್ರೇರೇಪಿಸಿದುವು. ಜವಾಹರ್‌ಲಾಲ್ ನೆಹರು, ಸುಭಾಶ್ಚಂದ್ರ ಬೋಸ್, ಜಯಪ್ರಕಾಶ್ ನಾರಾಯಣ್, ಅರುಣಾ ಆಸಫಲಿ ಎಂಬವರು ಸೇರಿ ಕಾಂಗ್ರೆಸ್ ಪಕ್ಷದೊಳಗೆ ಕಾಂಗ್ರೆಸ್ ಸೋಶಿಯಲಿಸ್ಟ್ ವಿಭಾಗಕ್ಕೆ ನೇತೃತ್ವ ನೀಡಿದರು. 1934ರಲ್ಲಿ ಬೊಂಬಯಲ್ಲಿ ನಡೆದ ಸಮ್ಮೇಳನದಲ್ಲಿ ಜಯಪ್ರಕಾಶ್ ನಾರಾಯಣ್‌ರವರ ನೇತೃತ್ವದಲ್ಲಿ ಕಾಂಗ್ರೆಸ್ ಸೋಶಿಯಲಿಸ್ಟ್ ಪಾರ್ಟಿಯು ರೂಪುಗೊಂಡಿತು. ಕ್ವಿಟ್ ಇಂಡಿಯಾ ಚಳವಳಿಯ ಕಾಲದಲ್ಲಿ ಕಾಂಗ್ರೆಸ್ ಸೋಶಿಯಲಿಸ್ಟ್ ಪಾರ್ಟಿಯ ಕಾರ್ಯಕರ್ತರು ಹೆಚ್ಚು ಸಕ್ರಿಯರಾಗಿದ್ದರು. ಗಾಂಧೀಜಿಯೂ ಸೇರಿದಂತೆ ಕಾಂಗ್ರೆಸ್ಸಿನ ಹಿರಿಯ ನೇತಾರರೆಲ್ಲರೂ ಬಂಧಿಸಲ್ಪಟ್ಟಾಗ ಜಯಪ್ರಕಾಶ್ ನಾರಾಯಣ್, ಅರುಣಾ ಆಸಫಲಿ ಮುಂತಾದವರಾಗಿದ್ದರು ಭೂಗತವಾಗಿದ್ದುಕೊಂಡು ಚಳವಳಿಗೆ ಪ್ರಬಲ ಬೆಂಬಲ ನೀಡಿದವರು.



*ಅರುಣಾ ಆಸಫಲಿಯನ್ನು ಗೌರವಿಸಿ ಭಾರತ ಸರಕಾರ ಹೊರಡಿಸಿದ ಅಂಚೆ ಚೀಟಿ*



ಜಯಪ್ರಕಾಶ್ ನಾರಾಯಣ್

ಸುಭಾಸ್‌ಚಂದ್ರ ಬೋಸ್‌ರು ಗಾಂಧೀಜಿಯ ಹೋರಾಟ ರೀತಿಗಳ ಬಗ್ಗೆ ಹಲವು ಸಂದರ್ಭಗಳಲ್ಲಿ ಅಸಮಾಧಾನವನ್ನು ವ್ಯಕ್ತಪಡಿಸಿದವರಾಗಿದ್ದರು. ಕಾಂಗ್ರೆಸ್ಸನ್ನು ತ್ಯಜಿಸಿದ ಅವರು "ಫಾರ್ವರ್ಡ್ ಬ್ಲಾಕ್" ಎಂಬ ರಾಷ್ಟ್ರೀಯ ಪಕ್ಷಕ್ಕೆ ರೂಪು ನೀಡಿದರು. ಆನಂತರ ಭಾರತದ ಸ್ವಾತಂತ್ರ್ಯಕ್ಕಾಗಿ ರಾಸ್ ಬಿಹಾರಿ ಬೋಸ್ ರೂಪೀಕರಿಸಿದ 'ಇಂಡಿಯನ್ ನೇಶನಲ್ ಆರ್ಮಿ' (INA) ಯ ನೇತೃತ್ವವನ್ನು ಅವರು ವಹಿಸಿಕೊಂಡರು. ಸಿಂಗಾಪುರದಲ್ಲಿ ಸ್ವತಂತ್ರ ಭಾರತಕ್ಕಾಗಿ ಒಂದು ತಾತ್ಕಾಲಿಕ ಸರಕಾರವು ಅವರ ನೇತೃತ್ವದಲ್ಲಿ ರೂಪುಗೊಂಡಿತು. ಬ್ರಿಟಿಷರನ್ನು ಭಾರತೀಯ ನೆಲದಿಂದ ಹೊಡೆದೋಡಿಸಲು ಹೋರಾಟ ನಡೆಸಬೇಕೆಂಬುದು ತಾತ್ಕಾಲಿಕ ಸರಕಾರದ ಪ್ರಧಾನ ಜವಾಬ್ದಾರಿಯಾಗಿತ್ತು. ಇಂಡಿಯನ್ ನೇಶನಲ್ ಆರ್ಮಿಯ ಮಹಿಳಾ ವಿಭಾಗವಾಗಿ ಝಾನ್ಸಿ ರಾಣಿ ರೆಜಿಮೆಂಟನ್ನು ರೂಪಿಸಲಾಯಿತು. ಮಲೆಯಾಳಿಯಾದ ಕ್ಯಾಪ್ಟನ್ ಲಕ್ಷ್ಮಿಯು ಇದರ ಜವಾಬ್ದಾರಿಯನ್ನು ವಹಿಸಿಕೊಂಡರು. ಜಪಾನಿನ ಸಹಾಯದೊಂದಿಗೆ ಸುಭಾಶ್ಚಂದ್ರ ಬೋಸ್‌ರ ನೇತೃತ್ವದಲ್ಲಿ ಇಂಡಿಯನ್ ನೇಶನಲ್ ಆರ್ಮಿಯನ್ನು ಭಾರತದ ವಾಯುವ್ಯ ತೀರ ಪ್ರದೇಶದವರೆಗೆ ತಲುಪಿಸಿದುದಲ್ಲದೆ ಇಂಫಾಲಿನಲ್ಲಿ ರಾಷ್ಟ್ರಧ್ವಜವನ್ನು ಹಾರಿಸಿದರು.



ಸಿಂಗಾಪುರವನ್ನು ಕೇಂದ್ರವನ್ನಾಗಿರಿಸಿ ಸುಭಾಸ್‌ಚಂದ್ರ ಬೋಸ್ ಮತ್ತು ಮಂತ್ರಿಸಭಾ ಸದಸ್ಯರು.

**ಭಾರತದ ಸ್ವಾತಂತ್ರ್ಯಕ್ಕಾಗಿ ಗಾಂಧೀಜಿಯ ಹೋರಾಟ ರೀತಿಗಳಿಂದ ಭಿನ್ನವಾಗಿ ರೂಪುಗೊಂಡ ಸಂಘಟನೆಗಳನ್ನು ಮತ್ತು ಅವುಗಳ ಆಶಯಗಳನ್ನು ಸೇರಿಸಿ ಒಂದು ಸೆಮಿನಾರನ್ನು ಆಯೋಜಿಸಿರಿ.**

**ವಾಂಚಿ ಅಯ್ಯರ್**

ವಾಂಚಿ ಅಯ್ಯರ್ ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ದಕ್ಷಿಣ ಭಾರತದ ಮೊದಲ ಹುತಾತ್ಮರಾಗಿದ್ದಾರೆ. ಪ್ರಸಿದ್ಧ ಹೋರಾಟಗಳನ್ನು ನಿಷ್ಠುರವಾಗಿ ದಮನಿಸಿದ ತಿರುನಲ್ವೇಲಿಯ ಜಿಲ್ಲಾಧಿಕಾರಿಯಾಗಿದ್ದ ರಾಬರ್ಟ್ ವಿಲಿಯಂ ಡೆಸ್ಕಾರ್ಟ್ ಆಶಾರನ್ನು 1911 ಜುಲೈ 17ರಂದು ತಮಿಳುನಾಡಿನ ಮಣಿಯಾಟ್ಟಿ ರೈಲು ನಿಲ್ದಾಣದಲ್ಲಿ ಗುಂಡುಹಾರಿಸಿ ಕೊಂದರು. ಬ್ರಿಟಿಷರಿಗೆ ಶರಣಾಗದ ಅವರು ಆ ಪ್ಲಾಟ್‌ಫಾರ್ಮ್‌ನಲ್ಲೇ ಆತ್ಮಹತ್ಯೆ ಮಾಡಿಕೊಂಡರು. ವಾಂಚಿ ಅಯ್ಯರ್‌ರ ಚಟುವಟಿಕೆಯ ಕುರಿತು ಮೇಡಂಕಾಮ ತನ್ನ ವಂದೇಮಾತರಂನಲ್ಲಿ ಹೀಗೆ ಬರೆದರು: "ವಾಂಚಿ ಹಾರಿಸಿದ ಮದ್ದು ಗುಂಡುಗಳು ಶತಮಾನಗಳಿಂದ ಗುಲಾಮರಾಗಿದ್ದ ಒಂದು ದೇಶವನ್ನು ಗಾಢ ನಿದ್ರೆಯಿಂದ ಬಡಿದೆಬ್ಬಿಸಿತು".

## ಕಾರ್ಮಿಕ-ಕೃಷಿಕರ ಚಳುವಳಿಗಳು

ರಷ್ಯಾದ ಕ್ರಾಂತಿಯ ಬಳಿಕ ಸಮಾಜವಾದಿ ಆಶಯಗಳ ಪ್ರಭಾವದಿಂದ ಭಾರತದಲ್ಲಿ ಕಾರ್ಮಿಕ ಸಂಘಟನೆಗಳು ರೂಪುಗೊಂಡವು. ಈ ಕೆಳಗಿನವುಗಳು ಭಾರತದಲ್ಲಿ ರೂಪುಗೊಂಡ ಆರಂಭಕಾಲದ ಕಾರ್ಮಿಕ ಸಂಘಟನೆಗಳಾಗಿವೆ.

- ಅಹಮ್ಮದಾಬಾದ್ ಟೆಕ್ಸ್‌ಟೈಲ್ ಅಸೋಸಿಯೇಶನ್
- ಮದ್ರಾಸ್ ಲೇಬರ್ ಯೂನಿಯನ್

1920ರಲ್ಲಿ ಎನ್. ಎಂ. ಜೋಷಿ, ಲಾಲಾಲಜಪತ್ ರಾಯ್ ಮೊದಲಾದವರ ನೇತೃತ್ವದಲ್ಲಿ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ (AITUC) ರೂಪುಗೊಂಡಿತು.

ಈ ಸಂಘಟನೆಯ ಮೂರು ಪ್ರಧಾನ ಉದ್ದೇಶಗಳೆಂದರೆ,

- ಕಾರ್ಮಿಕ ವರ್ಗವೆಂಬ ನೆಲೆಯಲ್ಲಿ ಸಂಘಟಿತರಾಗಿ ಕಾರ್ಯವೆಸಗುವುದು.
- ಭಾರತೀಯ ಕಾರ್ಮಿಕ ವರ್ಗವು ಇತರ ದೇಶಗಳ ಕಾರ್ಮಿಕ ವರ್ಗಗಳೊಂದಿಗೆ ಸೇರಿ ಕಾರ್ಯವೆಸಗುವುದು.
- ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯ ಭಾಗವಹಿಸುವಿಕೆ.

ಬ್ರಿಟಿಷರ ತೆರಿಗೆ ನಿಯಮಗಳು, ಜಮೀನ್ದಾರರಿಂದ ಶೋಷಣೆ, ಕೃಷಿ ಉತ್ಪನ್ನಗಳ ಬೆಲೆ ಕುಸಿತ ಇತ್ಯಾದಿಗಳು ಕೃಷಿಕರೊಳಗಿನ ಪರಸ್ಪರ ಒಗ್ಗಟ್ಟಿನ ಆವಶ್ಯಕತೆಯನ್ನು ಮನದಟ್ಟುಮಾಡಿತು. ಇದು ಕೃಷಿಕ ಸಂಘಟನೆಗಳು ರೂಪುಗೊಳ್ಳಲು ಕಾರಣವಾಯಿತು. ಎನ್.ಜಿ. ರಂಗ ಸೇರಿದಂತೆ ಕೃಷಿಕ ನಾಯಕರ ಪರಿಶ್ರಮದ ಫಲವಾಗಿ ಲಾಹೋರ್‌ನಲ್ಲಿ ಅಖಿಲ ಭಾರತ ಕಿಸಾನ್ ಕಾಂಗ್ರೆಸ್ ಸ್ಥಾಪನೆಯಾಯಿತು. ಮುಂದೆ ಇದುವೇ ಅಖಿಲ ಭಾರತ ಕಿಸಾನ್ ಸಭಾ ಎಂಬ ಹೆಸರು ಪಡೆಯಿತು. ಬಾಂಬೆಯ ಅಖಿಲ ಭಾರತ ಕಿಸಾನ್ ಸಮಿತಿ ಸಮ್ಮೇಳನದಲ್ಲಿ ಕೃಷಿಕರ ಆವಶ್ಯಕತೆಗಳನ್ನೊಳಗೊಂಡು ಒಂದು ಕಿಸಾನ್ ಪ್ರಣಾಳಿಕೆಗೆ ರೂಪುನೀಡಿದರು. ಇದರಲ್ಲಿ ಒಳಗೊಂಡಿರುವ ಕೆಲವು ಅವಶ್ಯಕತೆಗಳು.

- ಭೂತೆರಿಗೆ ಮತ್ತು ಗೇಣಿಯನ್ನು 50% ಕಡಿತಗೊಳಿಸುವುದು.
- ಸಾಲಗಳನ್ನು ಮನ್ನಾ ಮಾಡುವುದು.
- ಫ್ಯೂಡಲ್ ತೆರಿಗೆಗಳನ್ನು ರದ್ದುಗೊಳಿಸುವುದು.
- ಕೃಷಿ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಖಾತರಿಪಡಿಸುವುದು.
- ಕೃಷಿಕರ ಸಂಘಟನೆಗಳಿಗೆ ಅಂಗೀಕಾರ ನೀಡುವುದು.

ಕೃಷಿಕರ ಮತ್ತು ಕಾರ್ಮಿಕರ ಒಗ್ಗಟ್ಟು ಮತ್ತು ಪ್ರತಿಭಟನೆಗಳು ಭಾರತೀಯರಲ್ಲಿ ರಾಷ್ಟ್ರೀಯತೆಯನ್ನು ಬಡಿದೆಬ್ಬಿಸಿದವು. ಬ್ರಿಟಿಷರ ಸಾಮ್ರಾಜ್ಯಶಾಹಿ ನೀತಿಗಳನ್ನು ಹಾಗೂ ಭಾರತದಲ್ಲಿದ್ದ ಫ್ಯೂಡಲ್ ವ್ಯವಸ್ಥೆಯನ್ನು ಏಕಪ್ರಕಾರವಾಗಿ ಎದುರಿಸಿದ ಕಾರ್ಮಿಕರ ಮತ್ತು ಕೃಷಿಕರ ದೃಷ್ಟಿಕೋನಗಳು ಭಾರತದ ವಿವಿಧ ಪ್ರದೇಶಗಳಲ್ಲಿ ದಂಗೆಗಳಿಗೆ ಮತ್ತು ಹೋರಾಟಗಳಿಗೆ ದಾರಿಮಾಡಿಕೊಟ್ಟವು.


| ಹೋರಾಟಗಳು | ಘಟನಾ ಸ್ಥಳಗಳು |
|---|---|
| ◆ ತೇಭಾಗ ಹೋರಾಟ | ◆ ಬಂಗಾಳ |
| ◆ ತೆಲಂಗಾಣ ಹೋರಾಟ | ◆ ಆಂಧ್ರಪ್ರದೇಶ |
| ◆ ನಾವಿಕ ದಂಗೆ | ◆ ಬೋಂಬೆ |

ಭಾರತದ ರಾಷ್ಟ್ರೀಯ ಹೋರಾಟದಲ್ಲಿ ಕಾರ್ಮಿಕರು ಮತ್ತು ಕೃಷಿಕರು ವಹಿಸಿದ ಪಾತ್ರವನ್ನು ವಿಶದೀಕರಿಸಿರಿ.



## ಸ್ವಾತಂತ್ರ್ಯದತ್ತ

**ಗಡಿನಾಡ ಗಾಂಧಿ**



ದ್ವಿರಾಷ್ಟ್ರ ವಾದವನ್ನೂ ಭಾರತದ ವಿಭಜನೆಯನ್ನೂ ಶಕ್ತವಾಗಿ ಎದುರಿಸಿದ ನೇತಾರನಾಗಿದ್ದರು ಖಾನ್ ಅಬ್ದುಲ್ ಗಫೂರ್ ಖಾನ್. ಭಾರತದ ವಾಯುವ್ಯ ಭಾಗದ ತೀರಪ್ರದೇಶಗಳಲ್ಲಿ ಅನೇಕ ಹೋರಾಟಗಳಿಗೆ ನೇತೃತ್ವ ನೀಡಿದ ಅವರು ಭಾರತದ ವಿಭಜನೆಯ ಬಗ್ಗೆ ಅತೀವ ದುಃಖಿತರಾದರು. ಹಿಂದೂ – ಮುಸ್ಲಿಂ ಏಕತೆಗಾಗಿ ದುಡಿದ ಅವರು 'ಗಡಿನಾಡ ಗಾಂಧಿ' ಎಂದು ಕರೆಯಲ್ಪಟ್ಟರು. ಭಾರತ ಸರಕಾರದ ಅತ್ಯುನ್ನತ ಗೌರವ ಪ್ರಶಸ್ತಿಯಾದ 'ಭಾರತ ರತ್ನ' ವನ್ನು ನೀಡಿ ರಾಷ್ಟ್ರ ಅವರನ್ನು ಗೌರವಿಸಿತು.

ಎರಡನೇ ಜಾಗತಿಕ ಯುದ್ಧವು ಪ್ರಪಂಚದಾದ್ಯಂತ ಸಾಮ್ರಾಜ್ಯಶಾಹಿತ್ವದ ಅಳಿವಿಗೆ ಕಾರಣವಾಯಿತು. ಬ್ರಿಟನ್ ಆರ್ಥಿಕವಾಗಿ ದುರ್ಬಲವಾಯಿತು. ಇದರಿಂದಾಗಿ ವಸಾಹತುಗಳನ್ನು ಉಳಿಸಿಕೊಳ್ಳಲು ಕಷ್ಟವಾಯಿತು. ಏಷ್ಯಾದಲ್ಲಿ ಮತ್ತು ಆಫ್ರಿಕಾದಲ್ಲಿ ಸ್ವಾತಂತ್ರ್ಯ ಹೋರಾಟಗಳು ಬಲಗೊಂಡವು. ಪ್ರಪಂಚದ ಬಲಿಷ್ಠ ಶಕ್ತಿಗಳಾಗಿ ಬೆಳೆದು ಬಂದ ಅಮೆರಿಕಾ, ಸೋವಿಯತ್ ಯೂನಿಯನ್‌ಗಳು ವಸಾಹತುಶಾಹಿತ್ವಕ್ಕೆದುರಾಗಿ ಧ್ವನಿಯೆತ್ತಿದುದು ಭಾರತಕ್ಕೆ ಸ್ವಾತಂತ್ರ್ಯವನ್ನು ನೀಡಲು ಬ್ರಿಟನನ್ನು ನಿರ್ಬಂಧಿಸಿತು. ಭಾರತಕ್ಕೆ ಸಹಾನುಭೂತಿ ತೋರಿಸಿದ್ದ ಕ್ಲೆಮೆಂಟ್ ಆಟ್ಲಿಯ ನೇತೃತ್ವದ ಲೇಬರ್ ಪಕ್ಷವು ಬ್ರಿಟನ್‌ನಲ್ಲಿ ಅಧಿಕಾರಕ್ಕೆ ಬಂದುದು ಭಾರತವು ಸ್ವಾತಂತ್ರ್ಯ ಗಳಿಸುವುದಕ್ಕೆ ಸಹಕಾರಿಯಾಯಿತು. ಆದರೆ ಮೊಹಮ್ಮದ್ ಆಲಿ ಜಿನ್ನಾರ ನೇತೃತ್ವದಲ್ಲಿ ಆಲ್ ಇಂಡಿಯಾಲೀಗ್ ಪಾಕಿಸ್ತಾನ ಎಂಬ ಪ್ರತ್ಯೇಕ ದೇಶ ಬೇಕೆಂಬ ಬೇಡಿಕೆಯಿಟ್ಟಿತು. ಈ ಸಮಸ್ಯೆಯನ್ನು ಪರಿಹರಿಸಿ ಸ್ವಾತಂತ್ರ್ಯ ನೀಡಲು ಬೇಕಾದ ಚಟುವಟಿಕೆಗಳಿಗಾಗಿ ಮೌಂಟ್ ಬ್ಯಾಟನ್ ಪ್ರಭುವನ್ನು ಭಾರತದ ವೈಸರಾಯಿಯಾಗಿ ನೇಮಿಸಿದರು. ಭಾರತವನ್ನು ವಿಭಜಿಸದೆ ಅಧಿಕಾರದ ಹಸ್ತಾಂತರ ಸಾಧ್ಯವಿಲ್ಲವೆಂದು ವಾದಿಸಿದ ಮೌಂಟ್ ಬ್ಯಾಟನ್, ಅದಕ್ಕಾಗಿ 'ಮೌಂಟ್ ಬ್ಯಾಟನ್ ಸೂತ್ರ' ವನ್ನು ತಯಾರಿಸಿದನು. ಅದರಂತೆ,



ಜವಹರಲಾಲ್ ನೆಹರು ಕೆಂಪುಕೋಟೆಯಲ್ಲಿ ಭಾಷಣಗೈಯುತ್ತಿರುವುದು.

- ಮುಸಲ್ಮಾನರು ಬಹುಸಂಖ್ಯಾತರಾಗಿರುವ ಪ್ರದೇಶದಲ್ಲಿ ಅವರು ಬಯಸುವುದಾದರೆ ಒಂದು ಪ್ರತ್ಯೇಕ ದೇಶಕ್ಕೆ ಅನುಮತಿ ನೀಡಬೇಕಾಗುವುದು.
- ಪಂಜಾಬು ಮತ್ತು ಬಂಗಾಳಗಳನ್ನು ಎರಡಾಗಿ ವಿಭಜಿಸಬೇಕು.
- ವಾಯುವ್ಯದ ಗಡಿರಾಜ್ಯವನ್ನು ಪಾಕಿಸ್ತಾನಕ್ಕೆ ಸೇರಿಸಬೇಕೋ ಬೇಡವೋ ಎಂದು ತೀರ್ಮಾನಿಸಲು ಜನಾಭಿಪ್ರಾಯವನ್ನು ತೆಗೆದುಕೊಳ್ಳಬೇಕು.
- ಬಂಗಾಳದ ಮತ್ತು ಪಂಜಾಬಿನ ಹಿಂದೂ – ಮುಸ್ಲಿಂ ರಾಜ್ಯಗಳ ಗಡಿಯನ್ನು ತೀರ್ಮಾನಿಸಲು ಕಮಿಷನನ್ನು ನೇಮಿಸಬೇಕು.


ಕಾಂಗ್ರೆಸ್ ಮತ್ತು ಆಲ್ ಇಂಡಿಯಾ ಲೀಗ್ ಈ ಸೂತ್ರವನ್ನು ಅಂಗೀಕರಿಸಿತು. ಆದರೆ ಖಾನ್ ಅಬ್ದುಲ್ ಗಫರ್ ಖಾನ್‌ರಂತಹ ದೇಶಪ್ರೇಮಿಗಳು ಇದನ್ನು ವಿರೋಧಿಸಿದರು. 1947 ಜುಲೈಯಲ್ಲಿ ಬ್ರಿಟಿಷ್ ಪಾರ್ಲಿಮೆಂಟು ಭಾರತ ಸ್ವಾತಂತ್ರ್ಯ ನಿಯಮವು (Indian Independance Act) ವನ್ನು ಜಾರಿಗೊಳಿಸಿತು. ಭಾರತ ಮತ್ತು ಪಾಕಿಸ್ತಾನ

*ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ನೇತಾರರ ಮತ್ತು ಸಂಘಟನೆಗಳ ಮಾಹಿತಿಗಳನ್ನು ಸೇರಿಸಿ ಒಂದು ಪ್ರೊಜೆಕ್ಟ್ ತಯಾರಿಸಿರಿ.*



ಎಂಬೆರಡು ಸ್ವತಂತ್ರ ದೇಶಗಳು ರೂಪುಗೊಂಡವು. ಸ್ವತಂತ್ರ ಭಾರತದ ಮೊದಲ ಪ್ರಧಾನಮಂತ್ರಿಯಾಗಿ ಜವಹರ್‌ಲಾಲ್ ನೆಹರು ಪ್ರತಿಜ್ಞಾ ಸ್ವೀಕಾರ ಮಾಡಿ ಅಧಿಕಾರಕ್ಕೆ ಬಂದರು.

ಭಾರತದ ಸ್ವಾತಂತ್ರ್ಯ ಹೋರಾಟವು ಒಂದು ಪ್ರಸಿದ್ಧ ರಾಷ್ಟ್ರೀಯ ಹೋರಾಟವಾಗಿ ಬದಲಾದುದು ಹೇಗೆಂದು ನಾವು ಚರ್ಚಿಸಿದೆವು. ಗಾಂಧೀಜಿಯವರ ಆಶಯಗಳು ಮತ್ತು ಹೋರಾಟದ ವಿಧಾನವು ಇದರಲ್ಲಿ ಪ್ರಧಾನ ಪಾತ್ರ ವಹಿಸಿದುವು. ಗಾಂಧೀಜಿಯ ಹೋರಾಟ ರೀತಿಯಿಂದ ಭಿನ್ನವಾದ ಹೋರಾಟ ರೀತಿಗಳಿಗೂ ಈ ಕಾಲವು ಸಾಕ್ಷಿಯಾಯಿತು. ಈ ರೀತಿಯಲ್ಲಿ ವಿಭಿನ್ನ ಮಾರ್ಗಗಳಿಂದ ಶಕ್ತಿಯುತವಾದ ರಾಷ್ಟ್ರೀಯ ಹೋರಾಟಗಳ ಫಲವಾಗಿ 1947 ಅಗೋಸ್ತು 15ರಂದು ಭಾರತ ಸ್ವತಂತ್ರಗೊಂಡಿತು.




## ಮೌಲ್ಯನಿರ್ಣಯ ಮಾಡುವ

- ಭಾರತಕ್ಕೆ ಹಿಂದಿರುಗಿದ ಬಳಿಕ ಗಾಂಧೀಜಿ ಭಾಗವಹಿಸಿದ ಪ್ರಾದೇಶಿಕ ಹೋರಾಟಗಳು ಯಾವುವು?
- ಖೇಡಾ ಕೃಷಿಕ ಹೋರಾಟದಲ್ಲಿ ಉಪಯೋಗಿಸಿದ ಹೋರಾಟದ ವಿಧಾನ ಯಾವುದು?
- ಗಾಂಧೀಜಿಯ ಆರಂಭ ಕಾಲದ ಹೋರಾಟಗಳ ಪರಿಣಾಮಗಳನ್ನು ವಿಶ್ಲೇಷಿಸಿರಿ.

- ತೀವ್ರವಾದಿ ಹೋರಾಟಗಳನ್ನು ತಡೆಯುವ ಹೆಸರಿನಲ್ಲಿ ಬ್ರಿಟಿಷರು ಜಾರಿಗೊಳಿಸಿದ ನಿಯಮಗಳು ಯಾವುವು?
- ಜಲಿಯನ್‌ವಾಲಾಬಾಗ್ ಘಟನೆಯ ಬಗ್ಗೆ ಟಿಪ್ಪಣಿ ತಯಾರಿಸಿರಿ.
- ಗಾಂಧೀಜಿಯ ನೇತೃತ್ವದಲ್ಲಿ ನಡೆದ ಅಸಹಕಾರ ಚಳವಳಿಯ ಪರಿಣಾಮಗಳನ್ನು ಪಟ್ಟಿ ಮಾಡಿರಿ.
- ಅಸಹಕಾರ ಚಳವಳಿಯನ್ನು ನಿಲ್ಲಿಸುವಂತೆ ಗಾಂಧೀಜಿಯನ್ನು ಪ್ರೇರೇಪಿಸಿದ ಘಟನೆಗಳು ಯಾವುವು?
- ಭಾರತದ ಸ್ವಾತಂತ್ರ್ಯ ಹೋರಾಟದ ಅಂತಿಮ ಗುರಿ ಪೂರ್ಣ ಸ್ವರಾಜ್ಯವಾಗಿದೆಯೆಂದು ಘೋಷಿಸಿದ ಕಾಂಗ್ರೆಸ್ ಸಮ್ಮೇಳನ ಯಾವುದು?
- ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ನಾಗರಿಕ ನಿಯಮೋಲ್ಲಂಘನದ ಪ್ರಾಧಾನ್ಯದ ಬಗ್ಗೆ ಒಂದು ಸೆಮಿನಾರ್ ಪೇಪರನ್ನು ತಯಾರಿಸಿರಿ.
- ಕ್ವಿಟ್ ಇಂಡಿಯಾ ಚಳವಳಿಯ ಕುರಿತು ಒಂದು ಚರ್ಚಾಗೋಷ್ಠಿ ಏರ್ಪಡಿಸಿರಿ.

## ಮುಂದುವರಿದ ಚಟುವಟಿಕೆಗಳು

- ಗಾಂಧೀಜಿಯವರ ದಕ್ಷಿಣ ಆಫ್ರಿಕಾದ ಜೀವನದ ಕುರಿತು ಲಘು ಟಿಪ್ಪಣಿ ತಯಾರಿಸಿರಿ.
- ಗಾಂಧೀಜಿಯ ಸ್ಮರಣಾರ್ಥ ಭಾರತ ಸರಕಾರವು ಹೊರಡಿಸಿದ ವಿವಿಧ ಅಂಚೆ ಚೀಟಿಗಳು, ವಿದೇಶಗಳು ಹೊರಡಿಸಿದ ಅಂಚೆ ಚೀಟಿಗಳು, ಅವುಗಳ ಚಿತ್ರಗಳು ಮುಂತಾದವುಗಳನ್ನು ಒಳಪಡಿಸಿಕೊಂಡು ಐ.ಸಿ.ಟಿ. ಸಾಧ್ಯತೆಗಳ ಸಹಾಯದಿಂದ ಒಂದು ಡಿಜಿಟಲ್ ಆಲ್ಬಂ ತಯಾರಿಸಿರಿ.


K E R A L A
N
Kasaragod
KASARAGOD
KARNATAKA
KANNUR
Kannur
WAYANAD
Kalpetta
KOZHIKODE
Kozhikode
MALAPPURAM
Malappuram
TAMIL NADU
PALAKKAD
Palakkad
Thrissur
THRISSUR
ERNAKULAM
Ernakulam
IDUKKI
Painavu
KOTTAYAM
Kottayam
Alappuzha
PATHANAMTHITTA
ALAPPUZHA
Pathanamthitta
KOLLAM
Kollam
THIRUVANANTHAPURAM
Thiruvananthapuram
LEGEND
State Boundary
District Boundary
State Capital
District Headquarters
Map not to Scale

# I N D I A

## States and Union Territories



# ASIA MAP



ARCTIC OCEAN
PACIFIC OCEAN
INDIAN OCEAN
ASIA
RUSSIA
KAZAKHSTAN
MONGOLIA
CHINA
INDIA
INDONESIA
MALAYSIA
JAPAN
NORTH KOREA
SOUTH KOREA
PHILIPPINES
VIETNAM
LAOS
THAILAND
CAMBODIA
MYANMAR
BANGLADESH
BHUTAN
NEPAL
SRI LANKA
MALDIVES
PAKISTAN
AFGHANISTAN
IRAN
IRAQ
SAUDI ARABIA
YEMEN
OMAN
U.A.E.
QATAR
BAHRAIN
KUWAIT
JORDAN
SYRIA
LEBANON
ISRAEL
TURKEY
TURKMENISTAN
UZBEKISTAN
TAJIKISTAN
KYRGYZSTAN
TAIWAN
BRUNEI
SINGAPORE
ARABIAN SEA
BAY OF BENGAL
SOUTH CHINA SEA
EAST CHINA SEA
SEA OF JAPAN
SEA OF OKHOTSK
BERING SEA
LAPTEV SEA
KARA SEA
BARENTS SEA
CASPIAN SEA
BLACK SEA
RED SEA
MEDITERRANEAN SEA
NORWEGIAN SEA
BEIJING
TOKYO
DELHI
MOSCOW
ISLAMABAD
KABUL
TEHRAN
DHAKA
KATMANDU
THIMPHU
COLOMBO
MALE
BANGKOK
HA NOI
VIENTIANE
PHNOM PENH
MANILA
KUALA LUMPUR
JAKARTA
ULAANBAATAR
ASTANA (AKMOLA)
TASHKENT
BISHKEK (FRUNZE)
DUSHANBE
ASHGABAT
BAGHDAD
RIYADH
MUSCAT
SEOUL
PYONGYANG
Tropic of Cancer
Equator
Arctic Circle
Map not to Scale

## ಟಿಪ್ಪಣಿ

# ಟಿಪ್ಪಣಿ

## ಟಿಪ್ಪಣಿ

# ಟಿಪ್ಪಣಿ

# ಭಾರತದ ಸಂವಿಧಾನ

## ಭಾಗ IV ಕ

## ಕರ್ತವ್ಯಗಳು

**51ಕ. ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

*(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು, ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;*

*(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.*

*(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.*

*(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.*

*(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.*

*(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.*

*(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.*

*(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.*

*(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.*

*(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.*

*(ಟ) ಆರು ಮತ್ತು ಹದಿನಾಲ್ಕು ವರ್ಷಗಳ ನಡುವಣ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.*

## ಐತಿಹಾಸಿಕ ಪರಂಪರೆಗಳನ್ನು ರಕ್ಷಿಸಿರಿ...

ವೈವಿಧ್ಯಪೂರ್ಣ ಹಾಗೂ ಸಂಪದ್ಭರಿತವಾದ ಪರಂಪರೆಯು ನಮ್ಮ ದೇಶಕ್ಕಿದೆ. ಈ ಪರಂಪರೆಯನ್ನು ಬಿಂಬಿಸುವ ಐತಿಹಾಸಿಕ ಸ್ಮಾರಕಗಳು, ವಸ್ತುಗಳು, ಸ್ಥಳಗಳು ಇತ್ಯಾದಿಗಳನ್ನು ಮೂಲರೂಪದಲ್ಲೇ ಸಂರಕ್ಷಿಸಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಿದೆ. ಮಹತ್ತರವಾದ ಐತಿಹಾಸಿಕ ಪರಂಪರೆ ಮತ್ತು ಸ್ಮಾರಕಗಳನ್ನು ಮುಂದಿನ ತಲೆಮಾರಿನವರಿಗೆ ವರ್ಗಾಯಿಸಬೇಕಾದುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

### ಐತಿಹಾಸಿಕ ಪರಂಪರೆಯನ್ನು ರಕ್ಷಿಸಲು ನಾವು ಮಾಡಬಹುದಾದವುಗಳು

- ಕಲಿಕಾ ಚಟುವಟಿಕೆಯ ಅಂಗವಾಗಿ ಚಾರಿತ್ರಿಕ ಸ್ಮಾರಕಗಳು, ವಸ್ತುಸಂಗ್ರಹಾಲಯಗಳು, ರಕ್ಷಿತ ಪ್ರದೇಶಗಳನ್ನು ಸಂದರ್ಶಿಸುವುದು.
- ಇವುಗಳ ಕುರಿತಾದ ಚಿತ್ರಗಳು, ಮಾಹಿತಿಗಳು, ಇತರ ವಿವರಣೆಗಳು ಮೊದಲಾದುವುಗಳನ್ನು ಸಂಗ್ರಹಿಸುವುದು ಹಾಗೂ ಅವುಗಳ ಪ್ರದರ್ಶನ, ಚರ್ಚೆ ಇತ್ಯಾದಿಗಳನ್ನು ಏರ್ಪಡಿಸುವುದು.
- ಪರಂಪರೆಯ ಸಂರಕ್ಷಣೆಯ ಕುರಿತು ಇತರರಲ್ಲಿ ಪ್ರಜ್ಞೆಯನ್ನು ಮೂಡಿಸುವ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದು.
- ನಾಡಿನ ಪರಂಪರೆಯ ಸಂರಕ್ಷಣೆಯನ್ನು ಶಾಲೆಯಿಂದಲೂ ಮಾಡಬಹುದು. ಅಲ್ಲದೆ ನಿಮ್ಮ ಶಾಲೆ ಹಾಗೂ ಪ್ರದೇಶದ ಚರಿತ್ರೆಯನ್ನು ಬರೆದು ಜಾಗ್ರತೆಯಿಂದಿರಿಸಬಹುದು.
- ಶಾಲೆಯಲ್ಲೊಂದು ಐತಿಹಾಸಿಕ ಪರಂಪರೆಯ ವಸ್ತುಸಂಗ್ರಹಾಲಯ ಮತ್ತು ಸಮಾಜವಿಜ್ಞಾನ ಪ್ರಯೋಗಾಲಯವನ್ನು ಸಜ್ಜೀಕರಿಸಬಹುದು.
- ಚಾರಿತ್ರಿಕ ಸ್ಮಾರಕಗಳು ಮತ್ತು ಸ್ಥಳಗಳನ್ನು ದುರುಪಯೋಗ ಮಾಡುವುದು ಗಮನಕ್ಕೆ ಬಂದಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಬೇಕು.

### ಮಾಡಬಾರದವುಗಳು

- ಚಾರಿತ್ರಿಕ ಸ್ಮಾರಕಗಳನ್ನು ಮತ್ತು ಅವುಗಳ ಮೂಲಗಳನ್ನು ವಿಕೃತಿಗೊಳಿಸುವುದು, ಅವುಗಳ ಮೇಲೆ ಚಿತ್ರಗಳನ್ನು ರಚಿಸುವುದು, ಬರೆಯುವುದು, ಪೋಸ್ಟರ್ ಹಚ್ಚುವುದು ಇತ್ಯಾದಿಗಳನ್ನು ಮಾಡಬಾರದು.
- ಚಾರಿತ್ರಿಕ ಸ್ಮಾರಕ ಹಾಗೂ ಸ್ಥಳಗಳನ್ನು ಅತಿಕ್ರಮಿಸಿ ಸ್ವಾಧೀನಪಡಿಸಲು ಪ್ರಯತ್ನಿಸಬಾರದು.
- ಐತಿಹಾಸಿಕ ವಸ್ತುಗಳು, ಸ್ಮಾರಕಗಳು, ಸ್ಥಳಗಳ ಅಸ್ತಿತ್ವಕ್ಕೆ ತೊಂದರೆಯಾಗುವಂತಹ ಯಾವುದೇ ಕಾರ್ಯವನ್ನು ಮಾಡಬಾರದು.

ಸಂಪದ್ಭರಿತವಾದ ಐತಿಹಾಸಿಕ ಪರಂಪರೆಯನ್ನು
ರಕ್ಷಿಸಿರಿ...ಮುಂದಿನ ತಲೆಮಾರಿಗೆ ಅವುಗಳನ್ನು
ವರ್ಗಾಯಿಸಿರಿ...